ಪುಸ್ತಕ ಪ್ರಪಂಚ

ಸಂಪುಟ ೫೧ ಜೂನ್ ೨೦೦೧ ಸಂಚಿಕೆ ೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೪

ಪುಸ್ತಕ ಪ್ರಪಂಚ

ಮಾಸಿಕ

ಪರಿವಿಡಿ

ಮುಖಚಿತ್ರ : ಕಬೀರದಾಸ

PUSTAKA PRAPANCHA: Monthly

Published and printed by Karnataka State Adult Education Council,Mysore-6,
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಅಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

೧. ಜ್ಯೋತಿಷ್ಯ-ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ

ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ;
ರಾಶಿಕೂಟಗಣಸಂಬಂಧವುಂಟೆಂದು ಹೇಳಿರಯ್ಯ;
ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯ;
ನಾಳಿನ ದಿನ ಕಂದಿನ ದಿನ ಲೇಸೆಂದು ಹೇಳಿರಯ್ಯ;
ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯ!

ಎಂದು ಹೇಳಿದವರು ಹನ್ನೆರಡನೆಯ ಶತಮಾನದ ಕ್ರಾಂತಿಯ ಹರಿಕಾರ, ಮಹಾವಿಚಾರವಾದಿ, ಭಕ್ತಿಭಂಡಾರಿ ಬಸವೇಶ್ವರರು. ಜ್ಯೋತಿಷ್ಯವನ್ನು ನಂಬಬಾರದೆಂಬುದು ಮೇಲಣ ವಚನದ ಸಾರ.

ಇಪ್ಪತ್ತನೆಯ ಶತಮಾನದ ಮಹಾಕವಿ ಶ್ರೀ ನೆಹರೂ ಅವರ ವೈಜ್ಞಾನಿಕ ದೃಷ್ಟಿ ಮತ್ತು ವಿಚಾರ ಬುದ್ಧಿಯ ಬಗ್ಗೆ ಬರೆಯುತ್ತ ಜ್ಯೋತಿಷ್ಯದ ಬಗ್ಗೆ ಏನು ಹೇಳುತ್ತಾರೆ, ಕೇಳಿ...'ಪುರೋಹಿತರ ಪಾದತೊಳೆದು ನೀರು ಕುಡಿಯಲಿಲ್ಲ, ಪೂಜಾರಿಗಳಿಗೆ ಅಡ್ಡ ಬೀಳಲಿಲ್ಲ, ಅಡ್ಡ ಪಲ್ಲಕ್ಕಿಯ ಜಗದ್ಗುರುಗಳಿಗೆ ಕೈಮುಗಿದು ಮಾಲೆಹಾಕಲಿಲ್ಲ, ರಾಹುಕಾಲ ಗುಳಿಕ ಕಾಲ ನೋಡಲಿಲ್ಲ, ನಿಮಿತ್ತ ನೋಡಿಸಲಿಲ್ಲ, ಪಂಚಾಂಗ ತೆರೆಯಲಿಲ್ಲ, ಜ್ಯೋತಿಷ್ಯ ನಂಬಲಿಲ್ಲ, ಗ್ರಹಣಕಾಲದಲ್ಲಿ ತಂಬಟೆ ಬಡಿದು ಸೂರ್ಯನನ್ನು ರಾಹುವಿನಿಂದ ಪಾರುಮಾಡುವ ಭಾರತೀಯ ಡಾನ್ ಕ್ವಿಕ್ಸೋಟು ಆಗಲಿಲ್ಲ-ಇತ್ಯಾದಿಗಳಿಗಾಗಿ ಅವರನ್ನು (ನೆಹ್ರೂ) ನಾಸ್ತಿಕ ಎಂದರೆ-ಅವರಂತಹ ನಾಸ್ತಿಕರೊಡನೆ ನರಕವೂ ಲೇಸು; ಮೂಢ ಮತಾಚಾರದ ಯಾವಾತನೊ ಒಬ್ಬ ಪೂರ್ಣಾನಂದ, ಭ್ರಾಂತ ಜೋತಿಷಿ ಯಾವಾತನೊ ಒಬ್ಬ ರಾಮಣ್ಣ, ಮತ್ತಾರೊ ಒಬ್ಬ ಮಠಾಧಿಪತಿ ಸೀನಣ್ಣ ಮುಂತಾದವರು ಇರುವ ಸ್ವರ್ಗವೂ ಹೇಸು! ಎಂದು ಹೇಳಬೇಕಾಗುತ್ತದೆ .'(ಷಷ್ಟಿನಮನ, ಪು 252) ನೆಹರೂ ಎಂದೂ ಜ್ಯೋತಿಷ್ಯವನ್ನು ನಂಬಲಿಲ್ಲವೆಂದು ಕುವೆಂಪು ಸ್ಪಷ್ಟಪಡಿಸಿದ್ದಾರೆ.

ಅವರೇ ರಚಿಸಿರುವ 'ಮೌಢ್ಯಮೇಧ'ದ ಸಂದೇಶವಾದರೂ ಏನು?

ಎತ್ತಿ ಸುತ್ತಿಕ್ಕರಸು ಏಸೆ ಹೋಮ ಕುಂಡಕ್ಕೆ
ಅಷ್ಟಗ್ರಹ ಕೂಟ ದೋಷ ಪರಿಹಾರಕ್ಕೆ!
ಓ ಬೆಪ್ಪ,
ತುಪ್ಪವನು ಬೆಂಕಿಗೆಸೆಯಲು ಶಮನವಾಗುವೊಡೆ ಗ್ರಹದ ಪೀಡೆ
ಪುಷ್ಪನಪ್ಪಾ ಪುರೋಹಿತನನಾಹುತಿ ಮಾಡೆ
ಮತ್ತಪ್ಪು ಪರಿಹಾರ ದೊರೆಯದೇನ್ ಕೇಡೆ?

ಪುರೋಹಿತ ಜೋಯಿಸರು ಹೊಟ್ಟೆತುಂಬಿಕೊಳ್ಳಲು ಹಾಕಿಕೊಂಡಿರುವ ಯೋಜನೆಯೇ ಜ್ಯೋತಿಷ್ಯ ಎಂಬುದು ಈ ಕವಿತೆಯ ತಿರುಳು. ಇನ್ನೂ ಹಲವು ಕಡೆಗಳಲ್ಲಿ, ತಮ್ಮ ಕಾದಂಬರಿಗಳಲ್ಲಿ ಜ್ಯೋತಿಷ್ಯವೆಂಬುದು ಬರಿಯ ಮೌಢ್ಯವೆಂದು, ಅದು ವೈಚಾರಿಕತೆ ವೈಜ್ಞಾನಿಕ ಮನೋಧರ್ಮವನ್ನು ಮುಚ್ಚುವ ಪಾಚಿ ಅಥವಾ ಕಳೆಯೆಂದು ಅವರು ಸ್ಪಷ್ಟಪಡಿಸಿದ್ದಾರೆ.

ಕನ್ನಡದಲ್ಲಿ ಆಧುನಿಕ ವಿಜ್ಞಾನ ಭಾಷೆಯನ್ನು ನಿರ್ಮಿಸಿದವರೂ ಸ್ವಯಂ ವಿಜ್ಞಾನಿಗಳೂ ಆದ ಶ್ರೀ ಜಿ.ಟಿ.ನಾರಾಯಣರಾಯರು, ಜ್ಯೋತಿಷ್ಯ ವಿಜ್ಞಾನದ ವೇಷವನ್ನು ತೊಟ್ಟಿರುವ ಖೋಟಾ ವಿಜ್ಞಾನವೆಂದು, ನೊಬೆಲ್‌ಪ್ರಶಸ್ತಿ ವಿಜೇತ ಎಸ್.ಚಂದ್ರಶೇಖರ್ ಮೊದಲುಗೊಂಡು ಜಗತ್ತಿನ 186 ಮಂದಿ ವಿಜ್ಞಾನಿಗಳು ಜ್ಯೋತಿಷ್ಯ ಬುದ್ಧಿಹೀನ ಸೂಕರಮಾರ್ಜನ ಪ್ರಾಯವಾದದ್ದೆಂದು 1975 ರಲ್ಲಿಯೇ ಹೇಳಿಕೆ ನೀಡಿದ್ದರೆಂದು, ಮನುಷ್ಯ ತನ್ನ ಭವಿಷ್ಯದ ಶಿಲ್ಪಿಯಾದ್ದರಿಂದ, ಗ್ರಹನಕ್ಷತ್ರಗಳ ಪ್ರಭಾವಕ್ಕೂ ಅದಕ್ಕೂ ಸಂಬಂಧವಿಲ್ಲವೆಂಬುದು ಅವರ

ಹೇಳಿಕೆಯ ಸಾರಾಂಶವೆಂದು ವಿಶದಪಡಿಸಿದ್ದಾರೆ. ರಾಶಿಮಂಡಲ, ನಕ್ಷತ್ರ ಪುಂಜಗಳಿಗೆ ಭೌತಿಕ ಅಸ್ತಿತ್ವವಿಲ್ಲ; ಹುಟ್ಟಿದ ಮಕ್ಕಳ ಭವಿಷ್ಯವನ್ನು ಜ್ಯೋತಿಷಿಗಳಿಗೆ ತಿಳಿಸುವ ಒಂಬತ್ತು ಗ್ರಹಗಳ ಪೈಕಿ ಸೂರ್ಯ ನಕ್ಷತ್ರವೇ ಹೊರತು ಗ್ರಹವಲ್ಲ, ರಾಹು ಕೇತುಗಳೆಂಬ ಗ್ರಹಗಳೇ ಇಲ್ಲ, ಯುರೇನಸ್, ಶುಕ್ರ ಮತ್ತು ಪ್ಲೂಟೋಗಳಿಗೆ ಜ್ಯೋತಿಷ್ಯದಲ್ಲಿ ಸ್ಥಾನವಿಲ್ಲ; ಜ್ಯೋತಿಷ್ಯ ಹೇಳುವಂತೆ ಗ್ರಹಗಳು ಸೂರ್ಯನ ಸುತ್ತ ಸುತ್ತುತ್ತವೆಯೆ ಹೊರತು ಭೂಮಿಯ ಸುತ್ತ ಅಲ್ಲವೆಂದು ನಾರಾಯಣರಾಯರು ವಾದಿಸಿದ್ದಾರೆ(ದಿ ಹಿಂದು, 2.4.2001).

ಸಿ.ವಿ.ರಾಮನ್ ಜ್ಯೋತಿಷ್ಯವನ್ನು ನಂಬುತ್ತಿದ್ದರೆಂದು ಬಿ.ವಿ.ರಾಮನ್ ಅವರ ಮಗಳು ಹೇಳುತ್ತಾರೆ. ರಾಮನ್ ಅವರ ನಿಕಟ ಬಂಧುವೂ, ಅವರ ಜೀವನ ಚರಿತ್ರಕಾರರೂ, ಸ್ವಯಂವಿಜ್ಞಾನಿಗಳೂ ಆದ ರಾಮಶೇಷನ್ ರಾಮನ್ ಬಗೆಗಿನ ನಿಜಾಂಶವನ್ನು ಹೊರಗೆಡಹಿದ್ದಾರೆ. ರಾಮಶೇಷನ್ ಅವರ ಅಭಿಪ್ರಾಯ ಸರಿಯಲ್ಲವೆಂದು ಬಿ.ವಿ.ರಾಮನ್ ಅವರ ಮಗಳು ಹಠ ಹಿಡಿದಿದ್ದಾರೆ. ಪ್ರತಿಯೊಬ್ಬರಿಗೂ ತಂತಮ್ಮ ವೃತ್ತಿಯೇ ಮೆಚ್ಚು; ತಂತಮ್ಮ ಅಭಿಪ್ರಾಯವೇ ಸರಿ.ಕುಡಿತ ಆರೋಗ್ಯಕರವೆಂದು ಹೆಂಡದ ದೊರೆಗಳು ವಾದಿಸುತ್ತಾರೆ ;ಬೀಡಿ ಸುತ್ತುವವರೂ ಅಷ್ಟೇ. ತೀರಿಕೊಂಡಿರುವ ತಂದೆಯ ಪರವಾಗಿ ವಕಾಲತ್ತು ವಹಿಸುವುದು ಮಗಳ ಧರ್ಮವಷ್ಟೇ, ಆ ಬಗ್ಗೆ ಸರ್ವರ ಸಹಾನುಭೂತಿ ಅವಶ್ಯ.

ನೂರಾರು ಮಂದಿ ವಿಜ್ಞಾನಿಗಳು ೧೯.೪.೨೦೦೧ನೆಯ ದಿನಾಂಕದ ದಿ ಹಿಂದೂ ಪತ್ರಿಕೆಗೊಂದು ಹೇಳಿಕೆ ನೀಡಿ, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಅಧ್ಯಕ್ಷರಿಗೆ ವಿಜ್ಞಾನ ಮತ್ತು ಅವಿಜ್ಞಾನಗಳ ನಡುವಣ ವ್ಯತ್ಯಾಸ ಗೊತ್ತಿಲ್ಲವೆಂದೂ, ಅವರು ಕೂಡಲೇ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದ್ದಾರೆ. ಯುಜಿಸಿ ಅಧ್ಯಕ್ಷರು ವೃತ್ತಿವೈದ್ಯರೆಂದು ಕೇಳಿದ್ದೇನೆ. ಬೆನಾರಿಸ್ ವಿಶ್ವವಿದ್ಯಾನಿಲಯದ ಕುಲಪತಿಸ್ಥಾನದಿಂದ ಅವಧಿಗೆ ಮುಂಚೆಯೇ ನಿರ್ಗಮನ ಹೊಂದಿದರೆಂಬ ಸುದ್ದಿಯೂ ಇದೆ. ಅದೂ ಇರಲಿ, ಮಾನವಸಂಪನ್ಮೂಲ ಸಚಿವರಾದ ಡಾ.ಮುರಳಿ ಮನೋಹರ ಜೋಷಿಯವರು ಭೌತವಿಜ್ಞಾನದ ಪ್ರಾಧ್ಯಾಪಕರಾಗಿದ್ದೂ, ಜ್ಯೋತಿಷ್ಯವನ್ನು ವಿಜ್ಞಾನ ದರ್ಜೆಗೇರಿಸಿದ ಹಿಂದಿರುವ ಹಿಕಮತ್ತೇನಿರಬಹುದೆಂದು ಸಂದೇಹಪಡುವಂತಾಗಿದೆ. ಜ್ಯೋತಿಷಿಗೂ ಜೋಷಿಗೂ ಸಂಬಂಧವಿರಬೇಕಲ್ಲವೆ? ದೀರ್ಘಕಾಲ ರಾಜಕೀಯದಲ್ಲಿದ್ದುದರಿಂದ ವಿಜ್ಞಾನ ಸಂಪೂರ್ಣವಾಗಿ ಅವರಿಗೆ ಮರೆತು ಹೋಗಿರಬೇಕು.

ಯುಜಿಸಿ ಅಧ್ಯಕ್ಷರಿಗೆ ಲೋಕ ವ್ಯವಹಾರ ಜ್ಞಾನವೂ ಇಲ್ಲವೆಂಬ ಸಂಗತಿ ಇತ್ತೀಚೆಗೆ ಗೊತ್ತಾಗಿದೆ. ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿ ಸ್ಥಾನವನ್ನು ಭರ್ತಿಮಾಡಲು ಅನ್ವೇಷಣಾಸಮಿತಿ ರಚನೆಯಾಗುವುದುಂಟಷ್ಟೆ. ಆ ಸಮಿತಿಗೆ ಯುಜಿಸಿ ಅಧ್ಯಕ್ಷರೂ ಒಂದು ಹೆಸರು ಸೂಚಿಸುತ್ತಾರೆ. ಯಾವ ಕಾರಣಕ್ಕೊ ಕಾಣೆ, ಅವರು ವಿಶ್ವವಿದ್ಯಾನಿಲಯದ ಕರಡು ತಿದ್ದುವ ಅಥವಾ ಅತ್ಯಂತ ಕಿರಿಯ ಭಾಷಾಂತರಕಾರನ ಹೆಸರನ್ನು ಕಳಿಸುತ್ತಾರೆ. ಕುಲಪತಿ ಹುದ್ದೆಗೆ ಹೆಸರು ಸೂಚಿಸುವವರು ಕೊನೆಯಪಕ್ಷ ಅಷ್ಟೇ ಯೋಗ್ಯತೆಯುಳ್ಳವರಾಗಿರಬೇಕೆಂಬ ಸಾಮಾನ್ಯ ಜ್ಞಾನವೂ ಅವರಿಗಿಲ್ಲ. ಬರಬರುತ್ತ ಬಂಧುತ್ವದ , ರಾಜಕೀಯ ಮೂಲದ ಆಧಾರದ ಮೇಲೆ ಅಧಿಕಾರ ಗಿಟ್ಟಿಸಿಕೊಳ್ಳುತ್ತಿರುವ ಕಾರಣದಿಂದ ಯುಜಿಸಿ ಅಧೋಗತಿಗಿಳಿದಿದೆಯೆಂಬುದು ಸುಸ್ಪಷ್ಟ.

ದೇಶದ ವಿಶ್ವವಿದ್ಯಾನಿಲಯಗಳ ಸ್ವಾಯತ್ತತೆಯನ್ನು ಸ್ಥಾನಮಾನಗಳನ್ನು ಹಾಗೂ ಶಿಕ್ಷಣದ ಮಟ್ಟವನ್ನು ಕಾಯ್ದುಕೊಳ್ಳಬೇಕಾದ್ದು ಯುಜಿಸಿಯ ಧ್ಯೇಯವಾಗಿರಬೇಕು. ಕೊಠಾರಿಯರ ನಂತರ ಬಂದ ಯಾವ ಮಹಾನುಭಾವರಿಗೂ ಆ ಬಗ್ಗೆ ಕಾಳಜಿಯಿಲ್ಲದಿರುವುದು ಖೇದದ ವಿಷಯವಾಗಿದೆ.

ಇತ್ತೀಚೆಗೆ ಯುಜಿಸಿ ಯೋಗ್ಯತಾ ನಿರ್ಣಯ ಸಮಿತಿಗಳನ್ನು ನೇಮಿಸುತ್ತಿದೆ ನಿಜ. ಸಮಿತಿ ವಿಶ್ವವಿದ್ಯಾನಿಲಯಳಿಗೆ ಭೇಟಿ ನೀಡಿದಾಗ , ಕುಲಪತಿಗಳು ಎಷ್ಟರಮಟ್ಟಿಗೆ ಶಾಖೋಪಚಾರ ನಡಸಿದರೆಂಬುದರ ಮೇಲೆ ಪ್ರಮಾಣಪತ್ರದ ವರ್ಗ ಅಥವಾ ಅಂತಸ್ತು ನಿರ್ಣಯವಾಗುತ್ತದೆ. ವಿಶ್ವವಿದ್ಯಾನಿಲಯದ ಅತಿಥಿಗೃಹಗಳಿರುವಾಗ ಸಮಿತಿಯ ಸದಸ್ಯರು ಪಂಚತಾರಾ ಹೋಟಲುಗಳಿಗೇಕೆ ಹೋಗಬೇಕು? ಎಲ್ಲಿಂದಲೋ ವಿಹಾರಾರ್ಥಿಗಳಂತೆ ಬಂದವರಿಗೆ ಒಂದು ದಿನದಲ್ಲಿ ವಿಶ್ವವಿದ್ಯಾನಿಲಯದ ಕಾರುಬಾರುಗಳು ಅರ್ಥವಾಗುತ್ತವೆಯೆ? ಯೋಗ್ಯತಾ ನಿರ್ಣಯದ ಕ್ರಮ ಬರಿಯ ದೊಂಬರಾಟವಾಗಿದೆ, ಅಥವಾ ಕಣ್ಣೊರಸುವ ಆಟವಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗದು.

ಸಾವಿರಾರು ವರ್ಷಗಳಿಂದ ಶೇಕಡ ತೊಂಬತ್ತೊಂಬತ್ತು ಭಾಗದ ಜನರನ್ನು ಅಜ್ಞಾನಾಂಧಕಾರದಲ್ಲಿ, ಮೌಢ್ಯದ ನರಕದಲ್ಲಿಟ್ಟು, ಕೆಲವರು ಮಾತ್ರವೇ ಬೊಜ್ಜು ಬೆಳೆಸಲವಕಾಶಕೊಟ್ಟು, ದೇಶವನ್ನು ಪರಕೀಯರಿಗೆ ಮಾರಿದ ಗೊಡ್ಡು ಶಾಸ್ತ್ರಗಳಿಗೆ ಈ ವಿಜ್ಞಾನಯುಗದಲ್ಲಿ ಪುರಸ್ಕಾರ ನೀಡುವುದು ಅಕ್ಷಮ್ಯ ಅಪರಾಧ. ದೇಶವನ್ನು ಅಧೋಗತಿಗಿಳಿಸಿದ ಜ್ಯೋತಿಷ್ಯವನ್ನು ಸ್ನಾತಕೋತ್ತರ ಅಧ್ಯಯನ ವಿಷಯವನ್ನಾಗಿ ರೂಪಿಸುತ್ತಿರುವ ಹವಣಿನ ಹಿಂದಿರುವ ಸಂಚನ್ನು ಶೂದ್ರರು ಮತ್ತು ಹಿಂದುಳಿದವರು ಅರ್ಥಮಾಡಿಕೊಂಡರೆ ಲೇಸು.ಇಂಥ ಗೊಡ್ಡು ಮಡ್ಡಿ ಶಾಸ್ತ್ರಗಳು ದುರ್ಬಲ ಮನಸ್ಸಿನ ಅಪಾಯಕಾರೀ ಪ್ರಕ್ರಿಯೆಗಳೆಂದು ಆರೋಗ ಮನಸ್ಸಿನ ವಿವೇಕಿಗಳು ತಿಳಿಯಬೇಕಾಗಿದೆ.

ಒಂದು ಪಕ್ಷ ಜ್ಯೋತಿಷ್ಯವನ್ನು ವಿಶ್ವವಿದ್ಯಾನಿಲಯದೊಳಗೆ ಹುಗಿಸಬೇಕೆಂಬ ಚಲವಿರುವುದಾದರೆ, ಜಾನಪದ ಇಲಾಖೆಯೊಳಗೆ ಅದಕ್ಕೆ ಪ್ರವೇಶ ನೀಡಬಹುದು. ಅದೊಂದು ಜಾನಪದ ವಿಜ್ಞಾನವೆಂಬುದು ನಿಜ. ಅದನ್ನು ಖಂಡಿತವಾಗಿಯೂ ಜಾನಪದ ಇಲಾಖೆಗೆ ಲಗತ್ತಿಸಿ, ಪಂಚಾಂಗಕರ್ತರನ್ನು ಪ್ರಾಧ್ಯಾಪಕರನ್ನಾಗಿ ನೇಮಿಸಿ, ಕೇಸರಿ ಪತಾಕೆಯನ್ನು ಹಾರಿಸುವುದು ಸರ್ವಸೂಕ್ತವಲ್ಲವೆ?

ಜ್ಯೋತಿಷ್ಯ ವಿರೋಧಿಯೂ, ವಿಚಾರವಾದಿಯೂ ಆದ ಶ್ರೀ ಕುವೆಂಪು ಹೆಸರಿನ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಜ್ಯೋತಿಷ್ಯಕ್ಕೆ ಸ್ಥಾನ ಕಲ್ಪಿಸಲು ಏರ್ಪಾಡು ನಡೆದಿದೆಯಂತೆ. ಈ ಸುದ್ದಿ ನಿಜವಾದರೆ, ಮಹಾಕವಿಗೆ, ಸತ್ಯಕ್ಕೆ ಅಪಚಾರವೆಸಗಿದಂತೆಯೇ ಸರಿ. ದ್ರೋಹವೆಸಗಿದಂತೆಯೇ ಸರಿ ಇಂಥ ಅಪಚಾರ ದ್ರೋಹಗಳಿಗೆ ಕಾರಣರಾದ ಕುಲಪತಿ ಮೊದಲು ಅಲ್ಲಿಂದ ಕಂಬಿಕಿತ್ತರೊಳ್ಳೆಯದು

ಭೂಮಿಯ ಜನ್ಮ ದಿನಾಚರಣೆ

ಪರಿಸರ ಮಾಲಿನ್ಯದಿಂದ ಜಗತ್ತು ಅಪಾಯಮುಖಿಯಾಗುತ್ತಿದೆಯೆಂದು ಭಾವಿಸಿದ ಅಮೆರಿಕೆಯ ಸೆನೆಟರ್ ಗೇಲಾರ್ಡ್‌ನೆಲ್ಸನ್ ೧೯೬೯ರಲ್ಲೊಂದು ದಿನ ೨೨.೪.೧೯೭೦ ರಿಂದ ಮೊದಲುಗೊಂಡು ಪ್ರತಿವರ್ಷ ಭೂದಿನವನ್ನಾಚರಿಸಬೇಕೆಂದು ತನ್ನ ನಾಡಿನ ಜನರಿಗೆ

ಕರೆಕೊಡುತ್ತಾನೆ. ಅಮೆರಿಕದ ಜನರಿಗೆ ಮಾತ್ರವಲ್ಲ, ಜಗತ್ತಿನ ಎಲ್ಲ ಜನರಿಗೆ ಆ ಕರೆ ಕೇಳಿಸುತ್ತದೆ. ಮಾನವ ಮೊದಲುಗೊಂಡು ಸಕಲ ಜೀವಜಂತುಗಳಿಗೆ ಆಶ್ರಯಾಧಾರವಾಗಿರುವ ರಕ್ಷೆಯಾಗಿರುವ ಭೂಮಿಯ ವಾತಾವರಣವನ್ನು ಶೋಷಿಸಿದರೆ, ಕಲುಷಿತಗೊಳಿಸಿದರೆ ಮಾನವ ತನ್ನ ಸಮಾಧಿಯನ್ನು ತಾನೇ ತೋಡಿಕೊಂಡಂತಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಈಗಾಗಲೇ ಅನೇಕ ಪ್ರಾಣಿಕುಟುಂಬಗಳು ನಾಶವಾಗಿರುವ ಸಂಗತಿಯಿಂದ ಮನುಷ್ಯ ಜಾಗೃತಗೊಂಡಿಲ್ಲ ಸೃಷ್ಟಿಯ ಸಸ್ಯಜೀವಿಗಳನ್ನೊಳಗೊಂಡಂತೆ, ಎಲ್ಲ ಜೀವಿಗಳೂ ಪರಸ್ಪರಾವಲಂಬಿಗಳು; ಒಂದು ಜೀವಿ ಮತ್ತೊಂದು ಜೀವಿಗೆ ಋಣಿ. ನಾವು ಕುಡಿಯುವ ನೀರು, ಸೇವಿಸುವ ಗಾಳಿ, ತಿನ್ನುವ ಆಹಾರ, ಬಳಸುವ ಔಷಧಿ, ಕೈಗಾರಿಕೆಗಳಿಗೆ ಕಚ್ಚಾಮಾಲು, ಮಾರಕಾಸ್ತ್ರಗಳಿಗೆ ಬೇಕಾದ ಮೂಲದ್ರವ್ಯ ಎಲ್ಲವೂ ನಿಸರ್ಗದಿಂದಲೇ ಬರಬೇಕು . ಮನುಷ್ಯ ಹರಡುವ ಕಸವನ್ನು ಹಾಗೂ ಕೊಳಕನ್ನು ಶುದ್ಧಿಮಾಡಿ, ರಸವನ್ನು ಸೃಷ್ಟಿಸುವ ಕೆಲಸವೂ ನಿಸರ್ಗದ್ದೇ. ನಿಸರ್ಗದ ಶುದ್ಧೀಕರಣ ಸಾಮರ್ಥ್ಯಕ್ಕೂ ಒಂದುಮಿತಿ ಇದೆ, ಮನುಷ್ಯನ ಜೀರ್ಣಶಕ್ತಿಗೆ ಮಿತಿ ಇರುವಂತೆ. ಒಂದು ಮರಕಡಿದು ಎರಡು ಮರನೆಟ್ಟರೆ ನಿಸರ್ಗ ವಾತಾವರಣದ ಸಮತೋಲನವನ್ನು ಕಾಪಾಡುತ್ತದೆ.

ಮನುಷ್ಯ ಉಸಿರಿನ ಮೂಲಕ ಬಿಡುವ ಇಂಗಾಲವನ್ನು ಮರಗಳು ಆಹಾರೋತ್ಪಾದನೆಗಾಗಿ ಬಳಸಿಕೊಳ್ಳುತ್ತವೆ. ಆದರೆ ಯಂತ್ರಗಳು ಕಾರುವ ಎಲ್ಲ ಕಲ್ಮಷಗಳನ್ನು ಈಗಿರುವ ನಿಸರ್ಗ ಜೀರ್ಣಿಸಿಕೊಳ್ಳಲಾರದು. ಆದ್ದರಿಂದಲೇ ಓಜೋನ್ ಪದರದಲ್ಲಿ ಕಂಡಿಗಳು ಕಾಣಿಸಿಕೊಳ್ಳುತ್ತಿವೆ. ಅದರಿಂದಾಗಿ ಭೂಮಿಯ ಮೇಲಣ ಶಾಖ ದಿನದಿಂದ ದಿನಕ್ಕೆ ಅಧಿಕವಾಗುತ್ತಿದೆ ಮನುಷ್ಯನ ನೈಸರ್ಗಿಕ ಶೋಷಣೆಯಿಂದ ಭೂಕಂಪವೇ ಮೊದಲಾದ ಉತ್ಪಾತಗಳೂ ಸಂಭವಿಸುತ್ತವೆ.

ಭೂಮಿಯ ಜನ್ಮದಿನಾಚರಣೆ ಅಮೆರಿಕೆಯಲ್ಲಿ ಪ್ರಾರಂಭವಾದ ನಂತರ, ಸುಮಾರು ೧೮೦ ರಾಷ್ಟ್ರಗಳಲ್ಲಿ ಅದನ್ನು ಆಚರಿಸುವ ಪರಿಪಾಠ ನಡೆದಿದೆ. ಆ ದಿನದಂದು ಪರಿಸರ ಸಪ್ತಾಹ, ವನ್ಯಜೀವಿ ಸಂರಕ್ಷಣೆ, ಅರಣ್ಯ ವಿಸ್ತರಣೆ, ವಾಯುಶಬ್ದಾದಿ ಮಾಲಿನ್ಯ ನಿರೋಧಗಳ ಬಗೆಗೆ ಕಾರ್ಯ ಕ್ರಮಗಳನ್ನು ರೂಪಿಸಿಕೊಳ್ಳಲಾಗುತ್ತದೆ. ದುರ್ದೈವವೇನೆಂದರೆ ಅಭಿವೃದ್ಧಿಶೀಲ ರಾಷ್ಟಗಳಲ್ಲಿ ಸಾಮಾನ್ಯರಿರಲಿ, ವಿದ್ಯಾವಂತರೆ ಎಲ್ಲ ಬಗೆಯ ಮಾಲಿನ್ಯಗಳನ್ನು ದಿನ ಬೆಳಗಾದರೆ ಹರಡುತ್ತಾರೆ.

ಇಂಡಿಯಾದಲ್ಲಿ ಭೂಮಿಪೂಜೆ ನಿನ್ನೆ ಮೊನ್ನೆಯದಲ್ಲ. ಅದು ಇಲ್ಲಿಯ ರೈತರಲ್ಲಿ ಅನಾದಿಕಾಲದಿಂದ ನಡೆದು ಬಂದಿದೆ. ಭೂಮಿ ಅವರ ಪಾಲಿಗೆ ಸಕಲ ರಕ್ಷಣೆಯನ್ನು ನೀಡುವ ತಾಯಿ. ತಮ್ಮ ಉಳಿವಿಗೆ ಬೇಕಾದ ಅನ್ನ ನೀರು ಗಾಳಿ ಎಲ್ಲವೂ ಅವಳಿಂದ ಪ್ರಾಪ್ತವಾಗುತ್ತವೆಂಬ ಸತ್ಯ ಸಾವಿರಾರು ವರ್ಷಗಳಿಂದ ಅವನಿಗೆ ಗೊತ್ತು.

ಏಳುತಾಲೆ ಎದ್ದು ಯಾರ್‍ಯಾರ ನೆನೆಯಾಲಿ
ಎಳ್ಳುಜೀರಿಗೆ ಬೆಳೆಯೋಳಾ ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನು

ಭೂದೇವಿ ಕಾಮಧೇನು ಕಲ್ಪವೃಕ್ಷ ಚಿಂತಾಮಣಿ. ಮನುಷ್ಯನ ಬದುಕಿಗೆ ಬೇಕಾದ ಸಕಲ ಪದಾರ್ಥಗಳೂ ಅವಳಲ್ಲಿ ಯಥೇಚ್ಛವಾಗಿವೆ. ಪ್ರಾತಿನಿಧಿಕವಾಗಿ ಎಳ್ಳು ಜೀರಿಗೆಗಳನ್ನು ನೆನೆಯುತ್ತಾರೆ. ಕಾರಣ ಅವು ಪುಷ್ಟಿದಾಯಕವಾದ ಆರೋಗ್ಯಕರವಾದ ಧಾನ್ಯಗಳು. ಆ ತಾಯಿಯಿಂದವರು ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಂಡರೇ ಹೊರತು, ಅವಳನ್ನು ಶೋಷಿಸಲಿಲ್ಲ. ಒಂದು ಮರ

ಕಡಿದರೆ ಎರಡು ಮರ ನೆಡುತ್ತಿದ್ದುದುಂಟು, ಕಡಿಯುವ ಮುನ್ನ ಅದಕ್ಕೆ ಪೂಜೆ ಮಾಡುತ್ತಿದ್ದುದುಂಟು. ಹೊಲಗದ್ದೆಗಳಲ್ಲಿ ಬೆಳೆಬಂದಾಗ ಪೂಜೆ ಸಲ್ಲಿಸುತ್ತಾರೆ. ಸುಗ್ಗಿ ಕುಣಿತ ಭೂದೇವಿ ಗರ್ಭಿಸುವ ಸೇವೆ. ಸಾಲ ಕೊಡುವಾಗ, ತೆಗೆದುಕೊಳ್ಳುವಾಗ ಮರವೇ ಸಾಕ್ಷಿ. ಹೊನ್ನಾರು ಕಟ್ಟಿದ ಸಮಯದಲ್ಲಿ, ಮನೆಕಟ್ಟುವ ಪೂರ್ವದಲ್ಲಿ ಭೂಮಿಪೂಜೆ ಕಡ್ಡಾಯ.

ನೀರನ್ನು ಗಂಗಾಮಾತೆಯೆಂದು ಪೂಜಿಸುವುದುಂಟು. ಪ್ರಾತಃಕಾಲದ ಪ್ರಾರ್ಥನೆಯಲ್ಲಿ ಗಂಗಾ ಯಮುನಾ, ಗೋದಾವರೀ, ಬ್ರಹ್ಮಪುತ್ರ, ಕಪಿಲಾ, ಕಾವೇರಿ, ಕೃಷ್ಣೆಯರ ಸ್ತುತಿಯೂ ಉಂಟು. ಆದರೆ ಅದೇ ನೀರನ್ನು ಈಗಿನ ಜನ ಕೊಳಕುಗೊಳಿಸುತ್ತಾರೆ. ರಸ್ತೆಗಳೋ, ಗುಂಡಿಗಳು. ಮೂತ್ರದಿಂದ ಮೊದಲುಗೊಂಡು ಎಲ್ಲ ವಿಧದ ಕಶ್ಮಲಗಳು ತಿಪ್ಪೆಗೊಳ್ಳುತ್ತವೆ. ಪರಿಸರವನ್ನು ಸರಿಯಾಗಿ ಕಾಪಾಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬ ಮಾನವನಿಗೂ ಸೇರಿದ್ದು.

ಕಾರ್ಖಾನೆ ಯಂತ್ರಗಳ ಕಶ್ಮಲವಮನದಿಂದ ಧ್ರುವ ಪ್ರದೇಶಗಳ ಹಿಮಟೋಪಿಗಳು ಕರಗುತ್ತಿವೆ. ಸಾಗರಗಳ ನೀರಿನ ಮಟ್ಟ ಒಂದೇ ಸಮನೆ ಏರುತ್ತಿದೆ; ಪ್ರವಾಹ ಕ್ಷಾಮಗಳು ಅಧಿಕವಾಗುತ್ತಿವೆ; ಕ್ರಿಮಿಕೀಟ ಪಕ್ಷಿ ಮತ್ಸ್ಯಗಳ, ಸಸ್ಯವರ್ಗದ ಚರ್ಯೆಸ್ವರೂಪಗಳಲ್ಲಿ ವ್ಯತ್ಯಾಸ ಗೋಚರಿಸುತ್ತವೆ; ಜಾಗತಿಕ ಹವಾಮಾನವೇ ಬದಲಾಗುತ್ತಿದೆ.

ಕಾರ್ಖಾನೆಗಳ ಹೊಗೆಯನ್ನು, ವಾತಾವರಣದ ಶಾಖವನ್ನು ನಿಯಂತ್ರಿಸಬೇಕೆನ್ನುವ ಕ್ಯೋಟೋ ಒಪ್ಪಂದವನ್ನು ಗೌರವಿಸುವುದಿಲ್ಲವೆಂಬ ಅಮೆರಿಕಾ ಅಧ್ಯಕ್ಷ ಜಾರ್ಜ್‌ಬುಷ್‌ನ ಏಕಪಕ್ಷೀಯ ನಿರ್ಧಾರ ಕ್ರೂರವಾದದ್ದು, ಹೇಯವಾದದ್ದು. ಜಗತ್ತಿನ ಜನಸಂಖ್ಯೆಯಲ್ಲಿ ಶೇಕಡ ನಾಲ್ಕರಷ್ಟಿರುವ ಅಮೆರಿಕ ಜಾಗತಿಕ ಮಾಲಿನ್ಯದಲ್ಲಿ ಶೇಕಡ ೨೫ರಷ್ಟನ್ನು ಕಾರುತ್ತದೆ. ಅವರ ಸಚಿವ ಸಂಪುಟದಲ್ಲಿರುವ ಬೃಹತ್ ಕೈಗಾರಿಕಾ ಸಾರ್ವಭೌಮರ ಒತ್ತಾಯದಿಂದಾಗಿ ಅಧ್ಯಕ್ಷರು ತೃತೀಯ ಪ್ರಪಂಚಕ್ಕೆ ಸವಾಲಾಗಿರುವ ಈ ನಿರ್ಧಾರವನ್ನು ಪ್ರಕಟಿಸಿದ್ದಾರೆ. ತಾನೆಷ್ಟು ಪ್ರಮಾಣದಲ್ಲಾದರೂ ಜಗತ್ತನ್ನು ಮಲಿನಗೊಳಿಸಬಹುದು, ಇದೆ ತಾನೆ ಅಭಿವೃದ್ಧಿ ಮುಖವಾಗಿರುವ ರಾಷ್ಟ್ರಗಳು ಮಾತ್ರ ಮಾಲಿನ್ಯಕಾರಿಗಳಾದ ಕಾರ್ಖಾನೆಗಳನ್ನು ಸ್ಥಾಪಿಸಬಾರದೆಂಬುದು ಅಧ್ಯಕ್ಷರ ಅಮಾನವೀಯ ನಿರ್ಧಾರ. ಇಂಥ ಪರಿಸ್ಥಿತಿಯಲ್ಲಿ ಅಮೆರಿಕೆಯ ನೆಲ್ಸನ್ ಅವರ ಭೂದಿನಾಚರಣೆಯ ಘೋಷಣೆ ಬೂಟಾಟಿಕೆಯಿಂದ ಕೂಡಿದ್ದೆಂದೇ ಹೇಳಬೇಕು.

ಹಿಂದುಳಿದ ರಾಷ್ಟ್ರಗಳನ್ನು ಅದೇ ಸ್ಥಿತಿಯಲ್ಲಿರಿಸಲೆಂದೇ, ವಸಾಹತುಷಾಹಿಯನ್ನು ಪರೋಕ್ಷವಾಗಿ ಮುಂದುವರಿಸಲೆಂದೇ ಮುಂದುವರಿದ ರಾಷ್ಟ್ರಗಳು ಜಾಗತೀಕರಣದಂಥ ಹೊಸ ವಿಧಾನಗಳನ್ನು ಕಂಡುಹಿಡಿಯುತ್ತಾರೆ. ಬಡ ರಾಷ್ಟ್ರಗಳ ಸುಲಿಗೆ ಜಾಗತೀಕರಣದ ಗುರಿಯೇ ಹೊರತು, ಉದಾರಸಹಾಯದ ಮೂಲಕ ಅವುಗಳನ್ನು ತಮ್ಮೆತ್ತರಕ್ಕೆತ್ತಿಕೊಳ್ಳುವುದಲ್ಲ.

ಇಡೀ ಜಗತ್ತು ಅಪಾಯದ ಅಂಚನ್ನು ಸೇರಿದರೂ ಸರಿಯೆ, ತಮ್ಮ ದೇಶದ ಆರ್ಥಿಕ ಪ್ರಗತಿಗಾಗಿ, ಕಾರ್ಮಿಕರ ಕ್ಷೇಮಕ್ಕಾಗಿ, ತಾನು ಏನು ಮಾಡಲೂ ಸಿದ್ಧ ಎನ್ನುವ ಅಧ್ಯಕ್ಷರ ನಡವಳಿ(ದಿ ಹಿಂದೂ, ತೆರೆದ ಪುಟ, ೨೪.೪.೨೦೦೧) ಜಾಗತಿಕ ದೃಷ್ಟಿಯಿಂದ ಮೆಚ್ಚುವಂಥದಲ್ಲ.

ಸರ್ವವ್ಯಾಪೀ ಲಂಚಾಸುರೀ

ಡಾ.ಎಚ್.ಸುದರ್ಶನ್ ಅವರ ನೇತೃತ್ವದಲ್ಲಿ ನೇಮಕಗೊಂಡಿದ್ದ ಆರೋಗ್ಯ ಇಲಾಖೆಯ ಕಾರ್ಯಪಡೆಯ ವರದಿ ನಿಜಕ್ಕೂ ಚಿಂತಾಜನಕವಾಗಿದೆ. ನೇಮಕ, ಬಡ್ತಿ, ವರ್ಗಾವಣೆಯೇ

ಮೊದಲಾದ ಪ್ರಕ್ರಿಯೆಗಳಲ್ಲಿ ಭ್ರಷ್ಟಾಚಾರ ಲಂಗು ಲಗಾಮಿಲ್ಲದೆ ನಡೆಯುತ್ತಿರುವುದರಿಂದ, ಇಲಾಖೆಯ ಸೇವೆ ಅಧೋಗತಿಗಿಳಿದಿದೆಯೆಂದು ವರದಿ ಸ್ಪಷ್ಟಪಡಿಸಿದೆ. ವಿದ್ಯಾರ್ಥಿಗಳು ಪ್ರವೇಶಕ್ಕೆ ಮಾತ್ರವಲ್ಲ, ತೇರ್ಗಡೆಗೂ ಹಣ ಕಕ್ಕ ಬೇಕಾಗಿದೆ. ವೈದ್ಯರ ವ್ಯಾಪಾರೀ ಮನೋಭಾವ ಹಾಗೂ ಹಣದ ದಾಹದಿಂದಾಗಿ, ವೃತ್ತಿ ಮೌಲ್ಯಕ್ಕೆ ಗ್ರಹಣ ಹಿಡಿದಿದೆ. ಆರೋಗ್ಯಸೇವಾ ಹಾಗೂ ಔಷಧಿಗಳ ಬೆಲೆ ಗಗನಕ್ಕೇರಿರುವಾಗ, ಅವು ಸಾಮಾನ್ಯ ಜನಕ್ಕೆಟಕುತ್ತಿಲ್ಲವೆಂದು ವರದಿ ತಿಳಿಸಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳನ್ನು ಮಾತಾಡಿಸುವವರೇ ಇಲ್ಲ. ಹೆರಿಗೆ ಬೇನೆಯಿಂದ ನರಳುತ್ತಿದ್ದರೂ, ಕೇಳಿದಷ್ಟು ಹಣ ಕೊಡುವ ತನಕ ವೈದ್ಯ ಆಕೆಯ ಕಡೆಗೆ ನಿಗಾ ವಹಿಸುವುದಿಲ್ಲ. ಮೂರು ದಿನ ಕಾದು ಸಾಕಾಗಿ, ವೈದ್ಯರ ಕೃಪಾದೃಷ್ಟಿ ತನ್ನ ಕಡೆಗೆ ಬೀಳದಿದ್ದಾಗ, ನಾನಿದ್ದ ಖಾಸಗಿ ಆಸ್ಪತ್ರೆಗೆ ರೋಗಿಯೊಬ್ಬ ಬಂದದ್ದನ್ನು ನಾನೇ ನೋಡಿದ್ದೇನೆ ; ಕ್ಯಾತನಹಳ್ಳಿ ರಾಮಣ್ಣನವರೂ ಸಾಕ್ಷಿ.

ಭ್ರಷ್ಟಾಚಾರ ಈ ಇಲಾಖೆಗೆ ಮಾತ್ರ ಸೀಮಿತಗೊಂಡಿಲ್ಲ. ಶಿಕ್ಷಣ ಇಲಾಖೆ, ಕಾನೂನು ಇಲಾಖೆ, ವಿಶ್ವವಿದ್ಯಾನಿಲಯಗಳು ಮೊದಲುಗೊಂಡು ಎಲ್ಲ ಇಲಾಖೆಗಳಿಗೂ ಕ್ಯಾನ್ಸರ್‌ನಂತೆ ಹಬ್ಬುತ್ತಿದೆ. ಶಿಕ್ಷಣ ಇಲಾಖೆಗೂ ಒಂದು ಕಾರ್ಯಪಡೆ ನೇಮಕಗೊಂಡಿತ್ತು. ಆ ಕಾರ್ಯ ಪಡೆಯ ವರದಿ ನನ್ನ ಕಣ್ಣಿಗೆ ಬಿದ್ದಿಲ್ಲ. ನಾನು ನಡಸುತ್ತಿರುವ ಶಾಲೆಗಳಲ್ಲಿಯೇ ಶಿಸ್ತು ಕಾಪಾಡಲು ಸಾಧ್ಯವಾಗಿಲ್ಲ. ಅದಕ್ಕೆ ಶಿಕ್ಷಣ ಇಲಾಖೆಯ ಅಸಹಕಾರವೇ ಕಾರಣ. ಇಲಾಖೆ ಯಾವಾಗಲೂ ತಪ್ಪಿತಸ್ಥರ ಹಿತಾಸಕ್ತಿಯನ್ನು ರಕ್ಷಿಸಲೆಂದೇ ಅಸ್ತಿತ್ವದಲ್ಲಿರುವಂತೆ ತೋರುತ್ತದೆ. ಆ ಪಕ್ಷಪಾತಕ್ಕೆ ಕಾರಣವೇನಿರಬಹುದು? ನಾಡಿನ ಪ್ರಾಮಾಣಿಕ ವ್ಯಕ್ತಿಗಳು ಆಲೋಚಿಸಬೇಕಾಗಿದೆ.

ವಿಶ್ವವಿದ್ಯಾನಿಲಯಗಳು ಖಜಾನೆಗೆ ಕಳಿಸುವ ಬಿಲ್ಲುಗಳಿಗೆ ಮನ್ನಣೆ ದೊರೆಯಬೇಕಾದರೆ, ದುಡ್ಡು ಬಿಚ್ಚಬೇಕಂತೆ. ಕುಲಪತಿಗಳೊಬ್ಬರು ನಿಸ್ಸಹಾಯಕರಂತೆ ಸಂಕಟದಿಂದ ಈ ವಿಷಯವನ್ನು ನನಗೆ ತಿಳಿಸಿದರು. ಇದಕ್ಕಿಂತ ಕ್ರೂರತರವಾದ ಭ್ರಷ್ಟಾಚಾರ ಜಗತ್ತಿನಲ್ಲುಂಟೆ? ಏಡ್ಸ್‌ಗಿಂತಲೂ ಪ್ರಖರತಮವಾದ ರೋಗವೆಂದರೆ ಭ್ರಷ್ಟಾಚಾರ. ರಾಜಕೀಯ ಪಕ್ಷಗಳು, ಮಠ ಆಶ್ರಮಗಳು, ಸರ್ಕಾರ ಹಾಗೂ ಉನ್ನತ ಸ್ಥಾನಗಳು ಭ್ರಷ್ಟಾಚಾರದಿಂದ ಮುಕ್ತಗೊಂಡಾಗ ಮಾತ್ರ ಭ್ರಷ್ಟಾಚಾರ ನಿರ್ಮೂಲನ ಸಾಧ್ಯ. ಭ್ರಷ್ಟಾಚಾರಿಗಳನ್ನು ತಮ್ಮ ಗಡಿಯೊಳಗೆ ಸೇರಿಸಿಕೊಳ್ಳುವ ಮಠಗಳಿಗೂ ಅಪಪ್ರಥೆ ತಪ್ಪದು. ಕಾನೂನಿನಿಂದ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಲಾಗದು. ಇಡೀ ಸಮಾಜ ಭ್ರಷ್ಟಾಚಾರಿಗಳಿಗೆ ಬಹಿಷ್ಕಾರ ಹಾಕಿದಾಗ ಮಾತ್ರ ಅದರ ನಿರ್ಮೂಲನ ಸಾಧ್ಯ.

ಸ್ವಾತಂತ್ರ್ಯೋತ್ತರ ಭಾರತದ ಆಗುಹೋಗುಗಳ ಮೇಲೆ ನಿರಂಕುಶಮತಿಯ ಕ್ಷಕಿರಣ ಹಾಯಿಸಿದಾಗ, ಅನೀತಿ, ಅನಾಚಾರ, ಭ್ರಷ್ಟಾಚಾರಗಳು ಅದರ ಇಡೀ ದೇಹವನ್ನು ತುಂಬಿಕೊಂಡಿವೆ ಯೆಂಬುದು ಸ್ಪಷ್ಟವಾಗುತ್ತದೆ. ಭ್ರಷ್ಟತನ ಸ್ವಾತಂತ್ರ್ಯದ, ಪ್ರಜಾಪ್ರಭುತ್ವದ ಲಕ್ಷಣವಿರಬಹುದೆ ಎಂಬ ಅನುಮಾನವೂ ತೋಚುತ್ತದೆ.

ಆಂಗ್ಲರ ಕಾಲದಲ್ಲಿ ಭ್ರಷ್ಟಾಚಾರವಿರಲಿಲ್ಲವೆಂದು ಹೇಳುವಂತಿಲ್ಲ. ಬಿಳಿಯ ಅಧಿಕಾರಿಗಳೇ ಲಂಚ ರುಷುವತ್ತುಗಳನ್ನು ಪಡೆಯುವಲ್ಲಿ ಹಿಂಜರಿಯುತ್ತಿರಲಿಲ್ಲ. ರಾಬರ್ಟ್‌ಕ್ಲೈವ್‌ನೇ ಹೇಳಿದ್ದುಂಟು, 'ಯುದ್ಧವೊಂದು ಮಕ್ಕಳಾಟ, ಆದರೆ ಲಂಚಕೋರ ಅಧಿಕಾರಿಗಳನ್ನು ತಹಬಂದಿಗೆ ತರುವುದು ಸಾಮಾನ್ಯ ಸಂಗತಿಯಲ್ಲ ಎಂದು. ಆಗಿಂದಾಗಿನ ವರ್ಗಾವಣೆಯೂ ಪ್ರಯೋಜನ ವಾಗುತ್ತಿರಲಿಲ್ಲ. ವರ್ಗಾವಣೆಯಿಂದ ಬರಿದಾದ ಹಳೆಯ ಕಾಡಿನ ಸಂಗ ತಪ್ಪಿ, ಸಮೃದ್ಧವಾದ ಹೊಸ ಮೇಹುಗಾಡು ಅವರಿಗೆ ದೊರೆತಂತಾಗುತ್ತಿತ್ತು. ಅಲ್ಲೊಬ್ಬ ಇಲ್ಲೊಬ್ಬ ಪ್ರಾಮಾಣಿಕ ಮಂತ್ರಿ ಹಾಗೂ ಉನ್ನತಾಧಿಕಾರಿ ಇದ್ದಿರಬಹುದಾದರೂ, ಬಹುತೇಕ ಮಂದಿ ಮಂತ್ರಿಗಳು ಮತ್ತು

ಅಧಿಕಾರಿಗಳು ಹಾಗೂ ರಾಜಕೀಯ ಪಕ್ಷಗಳು ಭ್ರಷ್ಟಾಚಾರದಲ್ಲಿ ಮುಳುಗಿರಲಾಗಿ, ಸಾರ್ವಜನಿಕ ಜೀವನವೆಲ್ಲ ಹೊಲಸಲಾಗಿದೆ. ನಿಸ್ಪೃಹರಾರು ಎನ್ನುವುದನ್ನು ಸಾವಿರ ಬಲ್ಬುಗಳ ಬೆಳಕಿನಲ್ಲಿ ಹುಡುಕಬೇಕಾಗಿದೆ.

ಹಿಡಿಮಂದಿ ಟೀಕಾಕಾರರ ಕಣ್ಣೊರಸುವ ಸಲುವಾಗಿ ಸಂತಾನಂ-ವೋರಾ ಸಮಿತಿಗಳನ್ನು ನೇಮಿಸಲಾಗುತ್ತದೆ. ಆ ಸಮಿತಿಗಳ ವರದಿಗಳು ದೂಳಿಡಿದ ಕತ್ತಲೆಯ ಮೂಲೆಯಲ್ಲಿ ಮರೆಯಾಗುತ್ತವೆ. ಸರ್ಕಾರದ ಅಧೀನದಲ್ಲಿರುವ ಕೇಂದ್ರ ಜಾಗೃತ ಆಯೋಗ ಅಥವಾ ಕೇಂದ್ರ ಸಂಶೋಧನಾ ಮಂಡಲಿಗಳ ಹಣೆ ಬರಹವೂ ಅಷ್ಟೇ. ರಷ್ಯಾದಲ್ಲಿ ಕಮ್ಯೂನಿಸ್ಟರ ಪ್ರಾಬಲ್ಯವಿದ್ದಾಗ, ಭ್ರಷ್ಟಾಚಾರದ ತನಿಖೆಯ ಜವಾಬ್ದಾರಿಯನ್ನು ಸಮಾಜ ವಿಜ್ಞಾನ ಸಂಸ್ಥೆಗೊಪ್ಪಿಸಲಾಯಿತಂತೆ. ಮಾಸ್ಕೊ ಹತ್ತಿರದೊಂದು ನಗರದಲ್ಲಿಯೇ ಭ್ರಷ್ಟಾಚಾರ ತಾಂಡವವಾಡುತ್ತಿತ್ತೆಂದು ಆ ಸಂಸ್ಥೆ ವರದಿ ಸಲ್ಲಿಸಿತಂತೆ. ಸರ್ಕಾರ ಆ ಸಮಾಜ ವಿಜ್ಞಾನ ಸಂಸ್ಥೆಯನ್ನು ರದ್ದುಗೊಳಿಸಿದ್ದೇ ಆ ವರದಿಯ ಫಲಶ್ರುತಿ. ಈ ಕತೆಯನ್ನು ರಷ್ಯನ್ ಪ್ರಾಧ್ಯಾಪಕನೊಬ್ಬ ಗಾಲ್‌ಬ್ರೈತ್ ಮಹನೀಯರಿಗೆ ಹೇಳಿದನಂತೆ (ದಿ ಹಿಂದೂ ೧೭.೪.೨೦೦೧ನೆಯ ದಿನಾಂಕದ ಪುರವಣಿ) ಕಮ್ಯೂನಿಸ್ಟ್ ರಾಜ್ಯದಲ್ಲಿಯೇ ಇಂಥ ಪರಿಸ್ಥಿತಿಯಿರುವುದಾದರೆ, ಪ್ರಜಾಪ್ರಭುತ್ವದ ವ್ಯವಸ್ಥೆಗಳಿರುವ ರಾಷ್ಟ್ರಗಳನ್ನು ಕೇಳುವಂತೆಯೇ ಇಲ್ಲ.

ರಾಜಕೀಯ ನಾಯಕರಿಗೂ ಅಧೋಲೋಕದ ಅಪರಾಧಿಗಳಿಗೂ ನಿಕಟ ಸಂಪರ್ಕವಿದೆಯೆಂದು ವೋರಾ ವರದಿ ತಿಳಿಸುತ್ತದೆ. ಆ ವರದಿಯ ಗತಿ ಏನಾಯ್ತು? ಭ್ರಷ್ಟಾಚಾರ ಲೋಕವ್ಯಾಪೀ ದೃಶ್ಯವೆಂದು ಇಂದಿರಾಗಾಂಧಿಯವರು ಘೋಷಿಸಿದ್ದುಂಟು. ಭ್ರಷ್ಟಾಚಾರ ದೇಶದ ಅಂತಃಶಕ್ತಿಯನ್ನು ಹೀರಿಕೊಳ್ಳುವ ಕೆಟ್ಟರೋಗ. ಹಿಂದೆ ಬಾಹ್ಯಶತ್ರುಗಳು ಧಾಳಿಮಾಡುವ ಮೊದಲೇ ಅಂತಃಶತ್ರುಗಳು ಭರತಖಂಡವನ್ನು ದುರ್ಬಲಗೊಳಿಸಿದ್ದವೆಂಬುದಂತು ನಿಜ. ಈಗಲೂ ಅದೇ ಪರಿಸ್ಥಿತಿಯಿದೆ. ಮೂರ್‍ನಾಲ್ಕು ದಶಕಗಳ ಹಿಂದೆ ನೆಹ್ರೂ, ಪಟೇಲರು, ರಾಜಾಜಿ, ರಾಜೇಂದ್ರ ಪ್ರಸಾದ್, ಜಯಪ್ರಕಾಶ್ ನಾರಾಯಣ್, ಸಿದ್ಧವ್ವನಹಳ್ಳಿ ನಿಜಲಿಂಗಪ್ಪ, ಕಾಮರಾಜ್, ಹನುಮಂತಯ್ಯ, ಅಂಬೇಡ್ಕರ್, ನಂಬೂದರಿಪಾಡ್‌ರಂಥ ದೊಡ್ಡವರ ಆದರ್ಶ ವ್ಯಕ್ತಿತ್ವ ಜ್ಯೋತಿಯ ಪ್ರಭಾವದಿಂದಾಗಿ ಭ್ರಷ್ಟಾಚಾರ ಪಿಶಾಚಿ ಕತ್ತಲೆಯ ಮರೆಯಲ್ಲಿ ಕುಣಿಯುತ್ತಿತ್ತು. ಈಗಂತು ಅದು ಹಗಲ ಬಯಲಿನ ನಗ್ನ ತಾಂಡವದಲ್ಲಿ ತೊಡಗಿದೆ. ಪ್ರಧಾನಿಗಳು, ಮಂತ್ರಿಗಳು, ಉನ್ನತಾಧಿಕಾರಿಗಳು, ರಾಜಕೀಯ ನಾಯಕರು ಕೋರ್ಟುಗಳಲ್ಲಿ ಅಪರಾಧಿಕಟ್ಟೆಯಲ್ಲಿ ನಿಂತಾಗ, ನ್ಯಾಯಾಧೀಶರ ನಡೆವಳಿಗಳೂ ಸಂಶಯಾಸ್ಪದವಾಗಿರುವಾಗ, ಸಂಸತ್ ಮತ್ತು ಶಾಸನ ಸಭೆಗಳು ನಾಚಿಕೆಯಿಲ್ಲದ ಕದನರಂಗಗಳಾಗಿರುವಾಗ ಈ ದೇಶದಲ್ಲಿ ಶುದ್ಧಬದ್ಧ ಪ್ರಜಾಪ್ರಭುತ್ವವಿದೆಯೇ ಎಂದು ಚಿಂತಿಸುವಂತಾಗಿದೆ. ಜವಾಬ್ದಾರಿತನ ಪ್ರಜಾಪ್ರಭುತ್ವದ ಲಕ್ಷಣವಾಗಿದೆ. ಚುನಾವಣೆಯಲ್ಲಿ ಗೆದ್ದ ನಂತರ ಎಲ್ಲರೂ ಬೇಜವಾಬ್ದಾರರಾಗುತ್ತಾರೆ. ಮುಷ್ಕರ , ಧರಣಿ, ಸತ್ಯಾಗ್ರಹ, ಕೊನೆಗೆ ಕ್ರಾಂತಿಯಿಂದಲಾದರೂ ಅಮಲೇರಿರುವ ಸಲಗಗಳನ್ನು ನಿಯಂತ್ರಿಸಬೇಕಾಗುತ್ತದೆ. ಅವುಗಳನ್ನು ನಿಯಂತ್ರಿಸುವ ವಿದ್ಯಾಬುದ್ಧಿ ಸ್ಥೈರ್ಯಧೈರ್ಯಗಳು ಪ್ರಜಾಸಮುದಾಯದಲ್ಲಿ ಉಕ್ಕಲೆಂದು ಭಾರತಾಂಬೆಯನ್ನು ಸರ್ವರೂ ಪ್ರಾರ್ಥಿಸಬೇಕಾಗಿದೆ.

ದೇಜಗೌ

ಸ್ಮರಣೆ

ಕಬೀರದಾಸ

ಅಧ್ಯಾತ್ಮ ಸಾಧಕ : ಸಮಾಜ ಚಿಂತಕ

ಡಾ. ತಿಪ್ಪೇಸ್ವಾಮಿ
ಪ್ರಾಧ್ಯಾಪಕ, ಹಿಂದೀ ವಿಭಾಗ
ಮಾನಸಗಂಗೋತ್ರಿ, ಮೈಸೂರು

ಭಾರತೀಯ ಸಂತ ಪರಂಪರೆಯ ಉತ್ಕೃಷ್ಟ ಪ್ರತಿಭೆಯಾಗಿರುವ ಮಹಾತ್ಮ ಕಬೀರದಾಸ ಹಿಂದೀ ಸಾಹಿತ್ಯ ತನ್ನ ಸಾವಿರ ವರ್ಷಗಳ ಇತಿಹಾಸದಲ್ಲಿ ಕಂಡ ಮಹಾನ್ ಚಿಂತಕ, ದಾರ್ಶನಿಕ, ಭಕ್ತ, ಅನುಭಾವಿ, ಸಮಾಜ ಸುಧಾರಕ ಮತ್ತು ಕವಿ. ತನ್ನ ಕಾಲದ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳ ಎಲ್ಲ ವಿಷಮತೆ ಮತ್ತು ಅಸಾಂಗತ್ಯಗಳ ವಿರುದ್ಧ ದನಿ ಎತ್ತಿದ ಹಿಂದಿಯ ಮೊದಲ ಬಂಡಾಯಗಾರ. ಜಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಯಲ್ಲಿನ ಅರ್ಥಹೀನ ಮೌಲ್ಯಗಳನ್ನು ವೈಚಾರಿಕ ನಿಕಷಕ್ಕೆ ಒಳಪಡಿಸಿ ಹೊರ ಆಚಾರಗಳ ಮೂಲಕ ತಮ್ಮ ಶ್ರೇಷ್ಠತೆಯನ್ನು ಪ್ರತಿಷ್ಠಾಪಿಸಲು ತವಕಿಸುತ್ತಿದ್ದ ಉಚ್ಚವರ್ಗದ ಸಮಾಜದ ಪೊಳ್ಳುಗಳನ್ನು ಅವರವರ ಮುಂದೆಯೇ ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ಪ್ರಶ್ನಿಸಿದ ಬೆಂಕಿಯುಂಡೆ ಕಬೀರ್. ಹೌದು, ಒಂದೆಡೆ ಕಬೀರ್ ಬೆಂಕಿಯ ಉಂಡೆ, ಇನ್ನೊಂದೆಡೆ ಅತ್ಯಂತ ಮೃದು ಮಧುರ ವ್ಯಕ್ತಿತ್ವದ ಮಾನವತಾವಾದಿ. ಮಾನವೀಯ ಅಂತಃಕರಣ ಮತ್ತು ಉದಾತ್ತ ಚಿಂತನೆ ಕಬೀರ್‌ನ ವ್ಯಕ್ತಿತ್ವದ ಎರಡು ಕಣ್ಣುಗಳು. ಕಣ್ಣುಗಳು ಎರಡಾದರೂ ದೃಷ್ಟಿ ಒಂದೇ. ಸಮಾಜ ಬದಲಾಗಬೇಕು, ಮನುಷ್ಯ ಬದಲಾಗಬೇಕು, ಸಂಕುಚಿತ ಮನೋಭಾವದ ಸಂಕೋಲೆಗಳು ಕಡಿದು ಹೋಗಿ ಮಾನವನ ಮನಸ್ಸು ಮುಕ್ತಾಕಾಶದಲ್ಲಿ ವಿಹರಿಸಬೇಕೆಂಬುದೇ ಕಬೀರನ ಮಹತ್ವದ ಅಭೀಪ್ಸೆಯಾಗಿತ್ತು. ಈ ಮನೋಭೀಪ್ಸೆಯನ್ನು ಈಡೇರಿಸಿಕೊಳ್ಳಲು ಬದುಕಿನುದ್ದಕ್ಕೂ ಸಂಘರ್ಷಿಸಿದ ಸಿಂಹ ಕಬೀರ್. ಕಬೀರ್ ಒಂದುಕಡೆ 'ನಾನು ಪುಸ್ತಕಗಳಲ್ಲಿರುವುದನ್ನಲ್ಲ, ಕಣ್ಣಾರೆ ಕಂಡಿದ್ದನ್ನು ಹೇಳುತ್ತೇನೆ' ಎಂದಿದ್ದಾನೆ. ಈ ಮಾತು ಅಕ್ಷರಶಃ ಸತ್ಯ. ಏಕೆಂದರೆ ಕಬೀರ್-ಸಾಹಿತ್ಯ ಶಾಸ್ತ್ರಾಧಾರಿತ ಸಾಹಿತ್ಯವಲ್ಲ, ಅನುಭವಾಧಾರಿತ ಸಾಹಿತ್ಯ. ಈ ಕಾರಣದಿಂದಾಗಿಯೇ ಕಬೀರನ ಚಿಂತನೆ ಅಂದಿನ ಯುಗಕ್ಕೆ ಪ್ರಾಸಂಗಿಕವಾಗಿದ್ದಂತೆ ಈ ಯುಗಕ್ಕೂ ಯಾವುದೇ ಯುಗಕ್ಕೂ ಪ್ರಾಸಂಗಿಕ.

ಕಬೀರನ ಹುಟ್ಟು, ಜಾತಿ, ತಂದೆ, ತಾಯಿ, ಕುಟುಂಬ, ಮೃತ್ಯು ಇತ್ಯಾದಿಗಳ ಬಗೆಗೆ ಇಂದಿಗೂ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಕಬೀರನ ಹುಟ್ಟಿಗೆ ಸಂಬಂಧಿಸಿದಂತೆ ರಾಮಾನಂದರಿಂದ ಆಶೀರ್ವದಿಸಲ್ಪಟ್ಟ ಓರ್ವ ವಿಧವೆ ಬ್ರಾಹ್ಮಣಿಯ ಗರ್ಭದಿಂದ ಆತ ಹುಟ್ಟಿದನೆಂದೂ ಆಕೆ ಲೋಕಾಪವಾದಕ್ಕೆ ಹೆದರಿ ಆ ಮಗುವನ್ನು ಲಹರ್‌ತಾರಾ ಕೆರೆಯ ದಂಡೆಯಲ್ಲಿಟ್ಟು ಹೋದಳೆಂದೂ, ನೇಯ್ಗೆ ಜಾತಿಯ ನೀರೂ ಮತ್ತು ನೀಮಾ ಎಂಬ ದಂಪತಿಗಳಿಗೆ ಆ ಮಗು ಸಿಕ್ಕಿ ಅವರು ಅದನ್ನು ತೆಗೆದುಕೊಂಡು ಹೋಗಿ ಸಾಕಿ ಸಲಹಿದರೆಂಬ ಒಂದು ಜನಶ್ರುತಿಯಿದೆ. ಇನ್ನೊಂದು ಜನಶ್ರುತಿಯಂತೆ ಓರ್ವ ಅವಿವಾಹಿತ ಕನ್ಯೆಯಲ್ಲಿ ಕಬೀರ್ ಹುಟ್ಟಿದನೆಂದು ಹೇಳಲಾಗುತ್ತದೆ. ಡಾ. ಶ್ಯಾಂಸುಂದರ್‌ದಾಸ್ ಎಂಬ ಪ್ರಖ್ಯಾತ

★ ಕಬೀರದಾಸರ ಆರುನೂರ ಮೂರನೆಯ ಜಯಂತಿಯ ಸಂದರ್ಭದ ವಿಶೇಷ ಲೇಖನ

ವಿದ್ವಾಂಸರು ಕಬೀರ್ ವಿಧವೆಯ ಗರ್ಭದಿಂದ ಜನಿಸಿರಬಹುದೆಂಬ ವಾದವನ್ನು ತಳ್ಳಿಹಾಕುವುದಿಲ್ಲ. ಆದರೆ ರಾಮಾನಂದರ ಆಶೀರ್ವಾದದ ಕಲ್ಪನೆಯನ್ನು ನಿರಾಕರಿಸುತ್ತಾರೆ. ಕಬೀರ್ ಪಂಥೀಯರು ಕಬೀರನನ್ನು ಸ್ತ್ರೀಯೋನಿ ಸಂಜಾತ ಎಂದು ಒಪ್ಪದೆ ದೈವಸಂಜಾತ ಎಂದು ಹೇಳಿ ಆ ಪರಮಾತ್ಮನೇ ಒಂದು ಮಗುವನ್ನು ಲೋಕಕಲ್ಯಾಣಕ್ಕಾಗಿ ಲಹರ್‌ತಾರಾ ಕೆರೆಯ ದಂಡೆಯ ಮೇಲಿಟ್ಟಿದ್ದ ಎಂದು ನಂಬುತ್ತಾರೆ.

ಕಬೀರ್ ಹುಟ್ಟಿದ ವರ್ಷದ ಬಗೆಗೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿದ್ದು, ಬಹಳ ಜನ ವಿದ್ವಾಂಸರು ಕಬೀರ್ ಸಂವತ್ ೧೪೫೫ ಅಂದರೆ ೧೩೯೮ನೇ ಇಸವಿಯಲ್ಲಿ ಜನಿಸಿದನೆಂದು ಅಭಿಪ್ರಾಯ ಪಟ್ಟಿದ್ದಾರೆ. ಕಬೀರನ ಹೆಸರಿನ ಬಗೆಗೆ ಅಂಥ ವಾದ-ವಿವಾದಗಳಿಲ್ಲ . ಕಬೀರ್ ತನ್ನ ಎಲ್ಲ ರಚನೆಗಳಲ್ಲಿ ಇದೇ ಹೆಸರನ್ನು ಉಪಯೋಗಿಸಿದ್ದಾನೆ. ಕಬೀರ್ ಅಂದರೆ ಮಹಾತ್ಮ ಎಂದರ್ಥ.

ಕಬೀರ್ ಯಾವ ಊರಿನವನು ಎಂಬುದರ ಬಗೆಗೂ ಜಿಜ್ಞಾಸೆಯಿದೆ. ಕಾಶಿ, ಮಗಹರ್ ಮತ್ತು ಬೆಲ್‌ಹರಾ ಈತನ ಜನ್ಮಸ್ಥಾನವಿರಬಹುದು ಎಂಬ ವಾದಗಳಿವೆ. ಕಬೀರನ ಬರಹಗಳಲ್ಲಿ ಮಗಹರ್ ಮತ್ತು ಕಾಶಿಯ ಉಲ್ಲೇಖ ಮತ್ತೆ ಮತ್ತೆ ಬರುತ್ತದೆ. ಕಬೀರ್ ಮಗಹರ್‌ನಲ್ಲಿ ಜನ್ಮತಾಳಿರಬಹುದು. ಆಮೇಲೆ ಕಾಶಿಗೆ ಬಂದು ನೆಲಸಿದ್ದಿರಬಹುದು. ಈತನ ಮೃತ್ಯು ಮಗಹರ್‌ನಲ್ಲಾಯಿತು ಎಂಬುದರ ಬಗ್ಗೆ ಒಮ್ಮತದ ಅಭಿಪ್ರಾಯವಿದೆ. ಏಕೆಂದರೆ ಮಗಹರ್‌ನಲ್ಲಿ ಸಾವನ್ನಪ್ಪಿದರೆ ನರಕ ಪ್ರಾಪ್ತಿಯಾಗುವುದೆಂಬ ಬಹುಜನರ ನಂಬಿಕೆಗೆ ಸವಾಲೆಸೆಯುವಂತೆ ತನ್ನ ದೇಹತ್ಯಾಗ ಮಾಡಲು ಕಬೀರ್ ಆ ಊರನ್ನೇ ಆರಿಸಿಕೊಂಡನು. ಸಾವಿನ ಸಮಯದಲ್ಲೂ ಅವನ ಬಂಡಾಯ ಪ್ರವೃತ್ತಿ ಜಾಗೃತವಾಗಿತ್ತು. 'ಸಾವಿಗೆ ಕಾಶಿಯಾದರೇನು, ಮಗಹರ್ ಆದರೇನು, ರಾಮ ನನ್ನ ಹೃದಯದಲ್ಲಿದ್ದಾನೆ. ನಾನು ಕಾಶಿಯಲ್ಲಿ ಸತ್ತರೆ ಮಾತ್ರ ಸ್ವರ್ಗಕ್ಕೆ ಹೋಗುತ್ತೇನೆ ಎಂಬುದಾದರೆ ಇದರಲ್ಲಿ ರಾಮನ ಕೃಪೆ ಏನು ಬಂತು? ನಾನು ಮಗಹರ್‌ನಲ್ಲೇ ಸಾಯುತ್ತೇನೆ. ರಾಮ ಸರ್ವಶಕ್ತವಂತ ಹಾಗೂ ದಯಾಮಯಿಯಾದರೆ ನನಗೆ ಅಲ್ಲಿಯೇ ಸ್ವರ್ಗ ಕೊಡಲಿ' ಎಂದು ಕಬೀರ್ ದಿಟ್ಟವಾಗಿ ನುಡಿದನು.

ಕಬೀರ್ ಯಾವ ಜಾತಿಯವನು ಎಂಬ ಬಗೆಗೂ ವಾದವಿವಾದಗಳಿವೆ. ಆತ 'ಕೋರಿ' ಅಥವಾ 'ಕೌಲಿ' ಎಂದು ಕರೆಯಲಾಗುವ ಹಿಂದೂ ನೇಯ್ಗೆಯವನೆ ಅಥವಾ ಮುಸಲ್ಮಾನ ನೇಯ್ಗೆಯವನೆ ಎಂಬುದು ಚರ್ಚೆಯ ವಿಷಯವಾಗಿದೆ. 'ಜುಲಾಹ' ಮತ್ತು 'ಕೋರಿ' ಎಂಬ ಶಬ್ದಗಳು ಈತನ ಸಾಹಿತ್ಯದಲ್ಲಿ ಪ್ರಯೋಗಗೊಂಡಿವೆ. ಡಾ. ಹಜಾರಿ ಪ್ರಸಾದ್ ದ್ವಿವೇದಿಯವರು 'ಕಬೀರ್ ಹಿಂದೂವೂ ಅಲ್ಲದ ಮುಸಲ್ಮಾನನೂ ಅಲ್ಲದೆ 'ಜುಗಿ' ಎಂಬ ಜಾತಿಗೆ ಸೇರಿದವನಾಗಿದ್ದು ಇದರ ಸಂಬಂಧ ನಾಥಪಂಥೀಯ ಯೋಗಿಗಳೊಂದಿಗಿದೆ. ಮುಸಲ್ಮಾನರ ಆಕ್ರಮಣನಂತರ ಈ ಜಾತಿ ಇಸ್ಲಾಂ ಧರ್ಮಕ್ಕೆ ಪರಿವರ್ತನೆಗೊಂಡಿತು. ಹೀಗೆ ಪರಿವರ್ತನೆಗೊಂಡ 'ಜುಗೀ' ಜಾತಿಗೆ ಕಬೀರ್ ಸೇರಿದವನು ' ಎಂದು ಹೇಳುತ್ತಾರೆ. ಕಬೀರ್‌ನ ಜಾತಿಯನ್ನು ಕುರಿತಂತೆ ಭಿನ್ನಾಭಿಪ್ರಾಯಗಳಿದ್ದಾಗ್ಯೂ ವಿದ್ವಾಂಸರು ಅಭಿಪ್ರಾಯಪಡುವಂತೆ ಈತ ನೇಯ್ಗೆ ಜಾತಿಯವನಾಗಿದ್ದ. ಈತನ ತಂದೆ-ತಾಯಿ ನೀರೂ ಮತ್ತು ನೀಮಾ. ನೀಮಾ ಇಸ್ಲಾಂಗೆ ಮತಾಂತರಗೊಂಡ ಹಿಂದೂ ಮಹಿಳೆಯಿದ್ದಿರಬಹುದೆಂದು ಸಹ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಹೀಗೆ ವಾದ-ವಿವಾದಗಳೇನೇ ಇದ್ದರೂ ಕಬೀರ್ ಹಿಂದೂ ಮತ್ತು ಮುಸ್ಲಿಂ ಸಂಸ್ಕಾರ ಮತ್ತು ವಾತಾವರಣದ ಮಧ್ಯೆ

ಅರಳಿದ ಕಮಲ ಎಂದು ಹೇಳಬಹುದು.

ಕಬೀರ್ ಯೋಗಿ, ಸಂತನಾಗಿದ್ದರೂ ಗೃಹಸ್ಥಧರ್ಮವನ್ನು ನಿರಾಕರಿಸಲಿಲ್ಲ. ಆತ ವಿವಾಹಿತ, ಗೃಹಸ್ಥ. ಆತನಿಗೆ ಲೋಯಿ ಮತ್ತು ಧನಿಯಾ ಎಂಬ ಇಬ್ಬರು ಪತ್ನಿಯರಿದ್ದರೆಂದೂ ಕಮಾಲ್ ಮತ್ತು ಕವಿಹಾಲ್ ಎಂಬ ಗಂಡು ಮಕ್ಕಳು ಕಮಾಲಿ ಮತ್ತು ನಿಹಾತಿ ಎಂಬ ಇಬ್ಬರು ಹೆಣ್ಣುಮಕ್ಕಳು ಇದ್ದರೆಂದು ಹೇಳಲಾಗುತ್ತದೆ.

ಕಬೀರ್ ಕಾಯಕಯೋಗಿ, ನೇಯ್ಗೆ ಆತನ ಕಾಯಕ. ಕಬೀರ್ ಸಾಧು ಸಂತನಾಗಿದ್ದುದರಿಂದ ಸಹಜವಾಗಿಯೇ ಪರ್ಯಟನ-ಪ್ರವಾಸದಲ್ಲಿ ಆತನಿಗೆ ಅಭಿರುಚಿಯಿತ್ತು. ಆತ ಭಾರತದ ಬಹುಭಾಗಗಳಲ್ಲಿ ಪ್ರವಾಸ ಮಾಡಿದ್ದನೆಂದು ಹೇಳಲಾಗುತ್ತದೆ. ಆತ ಒಮ್ಮೆ ಹಜ್‌ಗೂ ಹೋಗಿದ್ದನೆಂದು ಭಾವಿಸಲಾಗಿದೆ. ಈ ಲೋಕ ಸಂಚಾರವೇ ಕಬೀರನ ವಿದ್ಯಾಶಾಲೆ, ಅನುಭವಗಳ ಸಂಚಯ ಪಾತ್ರೆ.

ಕಬೀರ್ ಓದು -ಬರಹ ಕಲಿತವನಾಗಿರಲಿಲ್ಲ. 'ಮಸಿ-ಕಾಗದವನ್ನು ನಾನು ಮುಟ್ಟಿದವನಲ್ಲ' ಎಂದು ವಿನಯ ಪೂರ್ವಕವಾಗಿ ಹೇಳಿಕೊಂಡಿದ್ದಾನೆ. ಆದರೆ ಆತ ಬಹುಶ್ರುತನಾಗಿದ್ದ. ಲೋಕದ ಶಾಲೆಯಲ್ಲಿ ಬಹಳಷ್ಟು ಕಲಿತ. ಗುರು-ಸಾಧು-ಸಂತರ ಸತ್ಸಂಗದಿಂದ ಶಾಸ್ತ್ರಗಳ ಮರ್ಮವನ್ನು ಅರಿತ ಮಹಾಜ್ಞಾನಿ ಕಬೀರ್.

ಕಬೀರ್ ದೀರ್ಘಾಯುಷಿಯಾಗಿದ್ದ. ೧೨೦ ವರ್ಷಗಳವರೆಗೆ ಆತ ಜೀವಿಸಿದ್ದನೆಂದು ಹೇಳಲಾಗಿದೆ. ೧೫೧೮ನೆಯ ಇಸವಿ ಆತನ ಮೃತ್ಯು ವರ್ಷವೆಂಬ ತೀರ್ಮಾನಕ್ಕೆ ವಿದ್ವಾಂಸರು ಬಂದಿದ್ದಾರೆ. ಇಷ್ಟು ದೀರ್ಘಾವಧಿಯ ಬದುಕಿನಲ್ಲಿ ಒಂದು ಶತಮಾನಕ್ಕೂ ಮಿಕ್ಕ ವರ್ಷಗಳ ಭಾರತೀಯ ಇತಿಹಾಸಕ್ಕೆ ಸಾಕ್ಷಿಯಾಗಿದ್ದುಕೊಂಡು ಇಲ್ಲಿನ ಸ್ಥಿತ್ಯಂತರಗಳನ್ನು ಕಂಡ ಶತಮಾನಪುರುಷ ಕಬೀರ್.

ಕಬೀರ್ ಶ್ರೇಷ್ಠ ದಾರ್ಶನಿಕ, ಆಧ್ಯಾತ್ಮ ಚಿಂತಕ. ಆತ್ಮ, ಪರಮಾತ್ಮ, ಜಗತ್ತು, ಮಾಯೆ ಮತ್ತು ಮೋಕ್ಷವನ್ನು ಕುರಿತಂತೆ ಉನ್ನತ ಚೇತನಗಳು ನಡೆಸುವ ಜಿಜ್ಞಾಸೆ ಮತ್ತು ಕಂಡುಕೊಳ್ಳುವ ಸತ್ಯವೇ ದರ್ಶನ. ದಾರ್ಶನಿಕವಾಗಿ ಕಬೀರ್ ಕಂಡುಕೊಂಡಿರುವ ಸತ್ಯಗಳು ಶಾಸ್ತ್ರಾಶ್ರಯಿಗಳಲ್ಲ ಅನುಭವಾಶ್ರಿತವಾದವುಗಳು. ಸ್ವಾನುಭೂತಿಯಿಂದ ರೂಪುಗೊಂಡವು.

ಕಬೀರನ ದೃಷ್ಟಿಯಲ್ಲಿ ಆತ್ಮ ಅಮರ, ಅವಿನಾಶಿ, ಅನಾದಿ, ಅನಂತ. ಅದು ಸಚ್ಚಿದಾನಂದ ರೂಪಿಯಾಗಿ ಸಕಲ ಜೀವರಾಶಿಗಳಲ್ಲಿ ಇರುವಂಥಾದ್ದು. ಶರೀರ ನಾಶಿ, ಆದರೆ ಆತ್ಮ ಸ್ಥಾಯಿ. ಆತ್ಮ ಪರಮಾತ್ಮನ ಅಂಶ. ಇವೆರಡರ ಮಧ್ಯದ ಸಂಬಂಧ ಸೂರ್ಯ ಮತ್ತು ಆತನ ಕಿರಣಗಳ ಮಧ್ಯೆ ಇರುವಂಥ ಸಂಬಂಧ. ಕಬೀರನ ಆತ್ಮ ಚಿಂತನೆ ಅದ್ವೈತ ಚಿಂತನೆಯಿಂದ ಕೂಡಿದೆ.

ಕಬೀರನ ಪರಮಾತ್ಮನನ್ನು ಕುರಿತ ಚಿಂತನೆ ಅತ್ಯಂತ ಸಂಕೀರ್ಣ ಸ್ವರೂಪದ್ದಾಗಿದೆ. ಒಂದೆಡೆ ಈ ಪರಮಾತ್ಮ ಮೂರ್ತ, ಇನ್ನೊಂದೆಡೆ ಅಮೂರ್ತ. ಈತ ಸಗುಣನೂ ಹೌದು, ನಿರ್ಗುಣನೂ ಹೌದು. ಸಗುಣ ರೂಪಿಯಾದ ಪರಮಾತ್ಮ ಮಹಾಕರುಣಾಮಯಿ. ಪ್ರೇಮದ ಸಾಕಾರ ಮೂರ್ತಿ ಮತ್ತು ವಾತ್ಸಲ್ಯಮಯಿ. ಈತ 'ಮೂರೂ ಲೋಕಗಳ ನೋವನ್ನು ಅರಿತಿರುವ 'ಶಕ್ತಿ'. ಸಗುಣದಲ್ಲಿ ದೇವ ದೊಡ್ಡವ ಮತ್ತು ಭಕ್ತ ಚಿಕ್ಕವ. ಸಗುಣನ ಅಪರಂಪಾರ ಶಕ್ತಿಯ ಮುಂದೆ ಭಕ್ತ ಮೂಕನಾಗಿ ಬಿಡುತ್ತಾನೆ. ಹೀಗೆ ಪರಮಾತ್ಮನ ಸಗುಣ ರೂಪದಲ್ಲಿ ಕಬೀರ್ ಲೀನನಾದಂತೆ ಕಂಡರೂ ಈತ ಪ್ರಮುಖವಾಗಿ ನಿರಾಕಾರ ಬ್ರಹ್ಮನ ಉಪಾಸಕ, ನಿರ್ಗುಣೋಪಾಸಕ. ಕಬೀರನ ಮನಸ್ಸು ಮತ್ತು ಮಸ್ತಿಷ್ಕ ನಿರ್ಗುಣ

ಪರತತ್ವದ ಉಪಾಸನೆಯಲ್ಲಿ ನಿಷ್ಠವಾಗಿವೆ. ಕಬೀರನ ಬ್ರಹ್ಮ/ಪರಮಾತ್ಮ ಘಟಘಟವಾಸಿ. ಅವನು ಪೂರ್ಣ, ಅಖಂಡ, ಸೀಮಾತೀತ, ರೂಪಾ ತೀತ, ನಿರ್ಗುಣ, ನಿರಂಜನ, ಅವಿನಾಶಿ. ಆತ ಅಪರಿಮಿತ ಶಕ್ತಿಯಿಂದೊಡಗೂಡಿದ್ದರೂ ಅವತಾರವನ್ನು ತಾಳದವ, ಶರೀರಿಯಾಗದವ. ಕಬೀರ್ ಪರಮಾತ್ಮನ ಈ ನಿರ್ಗುಣ ಸ್ವರೂಪವನ್ನು ಇನ್ನಿಲ್ಲದಂತೆ ವರ್ಣಿಸಿದ್ದಾನೆ. 'ಪರಮಾತ್ಮ, ನಿನ್ನ ಅನಂತ ತೇಜಸ್ಸು ಎಷ್ಟೆಂದರೆ ಸೂರ್ಯರನ್ನು ಸಾಲು ಸಾಲಾಗಿ ಇಟ್ಟಾಗ ಪ್ರಜ್ವಲಿಸುವ ಬೆಳಕಿನಂತೆ, 'ನೀನು ದೇಹವಿಲ್ಲದ ರೂಪಿನವನು, ರವಿ-ಶಶಿಯಿಲ್ಲದೆ ಬೆಳಕು ನೀಡುವವನು', 'ದೇಹವಿಲ್ಲದೆ ರೂಪ ಅವನದು' ಕಬೀರನ ದೃಷ್ಟಿಯಲ್ಲಿ ಪರಮಾತ್ಮ ಇಂದ್ರಿಯ ಗೋಚರನಲ್ಲ, ಅನುಭೂತಿಗೆ ಗೋಚರನಾಗುವವನು. ಈ ಪರಮಾತ್ಮ ಎಲ್ಲೆಲ್ಲೂ , ಎಲ್ಲರಲ್ಲೂ ಇದ್ದಾನೆ. ಆದರೆ ಕಾಣುವ ಕಣ್ಣುಗಳು ನಮ್ಮಲ್ಲಿಲ್ಲ ಅಷ್ಟೆ. ಕಬೀರ್ ಪರಮಾತ್ಮ ಒಬ್ಬ, ಇಬ್ಬರಲ್ಲ ಎಂದು ದೃಢವಾಗಿ ನಂಬಿದ್ದಾನೆ. 'ಇಬ್ಬರು ಜಗದೀಶರು ಎಲ್ಲಿಂದ ಬಂದರು, ಈ ಕಲ್ಪನೆ ಬಂದದ್ದಾದರೂ ಹೇಗೆ?' ಎಂದು ಪ್ರಶ್ನಿಸುತ್ತಲೇ 'ಬಹುದೇವೋಪಾಸಕರನ್ನು ವೇಶ್ಯಾಪುತ್ರರು' ಎಂದು ಕರೆಯಲೂ ಹಿಂಜರಿಯುವುದಿಲ್ಲ.

ಕಬೀರ್ ಜಗತ್ತನ್ನು ನಶ್ವರ, ಮಿಥ್ಯೆ, ಭ್ರಮಾತ್ಮಕ, ದುಃಖಮಯ, ಕ್ಷಣಭಂಗುರ ಎಂದಿದ್ದಾನೆ. ಜಗತ್ತಿಗೆ 'ಜೀವ' ಬಂದಿರುವುದು 'ಕರ್ಮ'ದ ವ್ಯಯಕ್ಕಾಗಿ . ಈ ಜಗತ್ತು ಎಷ್ಟು ಅಶಾಶ್ವತವೆಂದರೆ ಇದು 'ನೀರ ಮೇಲಣ ಗುಳ್ಳೆಯಿದ್ದಂತೆ.'

ಬ್ರಹ್ಮ ಜಿಜ್ಞಾಸೆಯಲ್ಲಿ ಹೆಚ್ಚು ಚರ್ಚೆಗೆ ಒಳಗಾಗಿರುವ ತತ್ವವೆಂದರೆ ಮಾಯೆ. ಕಬೀರ್ ತನ್ನ ಬ್ರಹ್ಮ ಜಿಜ್ಞಾಸೆಯಲ್ಲಿ ಮಾಯೆಯನ್ನು ನಿಂದಿಸಿದ್ದಾನೆ. ಏಕೆಂದರೆ ಜೀವ ಮತ್ತು ಪರಮಾತ್ಮನ ಮಧ್ಯೆ ಅಡ್ಡ ಇರುವುದೇ ಈ ಮಾಯೆ. ಈ ಮಾಯೆಯ ಬಂಧನದಲ್ಲಿರುವ ಜೀವ ಪರತತ್ವದ ಅರಿವನ್ನು ಎಂದೂ ಪಡೆದುಕೊಳ್ಳದು. ಕಬೀರ್ ಮಾಯೆಯನ್ನು ಸಗುಣ ಮತ್ತು ನಿರ್ಗುಣ ರೂಪದಲ್ಲಿ ನಿರೂಪಿಸಿದ್ದಾನೆ. ಮಹಾ ಸೂಕ್ಷ್ಮರೂಪಿಯಾದ ಮಾಯೆಯನ್ನು ಗೆದ್ದಾಗ, ಅದರಿಂದ ಮುಕ್ತಿ ಪಡೆದಾಗ ಮಾತ್ರ ಜೀವ ಸಿದ್ಧಾವಸ್ಥೆಯನ್ನು ತಲುಪಬಲ್ಲದು ಎಂಬುದು ಕಬೀರನ ಅಭಿಮತ.

ಜೀವದ ಅಂತಿಮ ಲಕ್ಷ್ಯವೇ ಮುಕ್ತಿ ಪ್ರಾಪ್ತಿಯಾಗಿದೆ. ಭವದಿಂದ, ಹುಟ್ಟುಸಾವು ಎಂಬ ಚಕ್ರದಿಂದ ಬಿಡುಗಡೆ ಹೊಂದುವುದೇ ಮುಕ್ತಿ. ಈ ಮುಕ್ತಿಯನ್ನು ಕಬೀರ್ 'ತರಾನಾ' ಎಂದಿದ್ದಾನೆ. ಕಬೀರ್ ಮುಕ್ತಿಯನ್ನು ಪಿಂಡ ಮುಕ್ತಿ ಮತ್ತು ಪರಮುಕ್ತಿ ಎಂದು ಎರಡು ಭಾಗವಾಗಿ ಮಾಡಿದ್ದಾನೆ. ಪಿಂಡಮುಕ್ತಿಗಿಂತಲೂ ಪರಮುಕ್ತಿ ಈತನ ಅಭೀಪ್ಸೆಯಾಗಿದೆ. ಏಕೆಂದರೆ ಪರಮುಕ್ತಿ ಬದುಕಿರುವಾಗಲೇ ಲಭ್ಯವಾಗುವಂಥಾದ್ದು. ಇದೇ ಜೀವನ್ಮುಕ್ತಾವಸ್ಥೆ. ಮುಕ್ತಿಯ ಆನಂದ ಇಲ್ಲಿ ದೊರೆಯುತ್ತದೆ.

ವ್ಯಾವಹಾರಿಕವಾಗಿಯೂ ಕಬೀರ್ ಮುಕ್ತಿಯನ್ನು ಸಜ್ಜನರ ಸಂಗದಲ್ಲಿ, ಸದಾಚಾರದಲ್ಲಿ ಕಂಡಿದ್ದಾನೆ. 'ಸಾಧುಗಳ ಸಂಗದಲ್ಲಿ ವೈಕುಂಠ ಇದೆ' ಎಂದು ಕಬೀರ್ ಅಭಿಪ್ರಾಯಪಟ್ಟಿದ್ದಾನೆ. ಮುಕ್ತಿಗೆ ಸಂಬಂಧಪಟ್ಟಂತೆ ಈ ಪರಿಕಲ್ಪನೆ ಅವನ ಸ್ವಾನುಭೂತಿಯ ಪರಿಪಾಕವಾಗಿದೆ.

ಕಬೀರ್ ಭಕ್ತಿ ಭಂಡಾರಿ, ಭಕ್ತಿ ಈತನ ತಾರಕ ಮಂತ್ರ, ಭಕ್ತಿ ಈತನ ಬದುಕಿನ ಸಾರಸರ್ವಸ್ವ . ಕಬೀರನ ದೃಷ್ಟಿಯಲ್ಲಿ ಭಕ್ತಿ ಒಂದು ವ್ಯಾಪಕ ಅನುಭೂತಿ. ಕಬೀರ್ ಸಕಲ ಚರಾಚರವನ್ನು ಪರಮಾತ್ಮನ ಪ್ರತಿರೂಪವೆಂದು ಭಾವಿಸಿ ಅವನನ್ನು ಸಾಕ್ಷಾತ್ಕರಿಸಿಕೊಳ್ಳಲು

ಪ್ರೇಮ ಮತ್ತು ಭಕ್ತಿಯನ್ನು ಆಶ್ರಯಿಸಿದ. ಭಕ್ತಿಗೆ ಶಾಸ್ತ್ರಬೇಕಿಲ್ಲ. ಪುಸ್ತಕಗಳನ್ನು ಓದಬೇಕಿಲ್ಲ, ತತ್ವಜ್ಞಾನಿಯಾಗಬೇಕಿಲ್ಲ, ಉನ್ನತ ಕುಲದಲ್ಲಿಯೇ ಹುಟ್ಟಬೇಕಿಲ್ಲ, ದೀಪಧೂಪಗಳನ್ನು ಹಚ್ಚಬೇಕಿಲ್ಲ. ಪ್ರೀತಿ-ಪ್ರೇಮ- ದಯೆ-ಮಾನವೀಯ ಅನುಕಂಪಗಳೆ ಭಕ್ತಿಯ ಪರಿಕರಗಳೆಂದು ಕಬೀರ್ ಪ್ರತಿಪಾದಿಸಿದ್ದಾನೆ. ಕಬೀರ್ ತನ್ನ ಭಕ್ತಿಯನ್ನು ನಾರದೀಯ ಭಕ್ತಿ ಎಂದು ಹೇಳಿಕೊಂಡಿದ್ದು ಇದು ಸಾರ್ವಕಾಲಿಕ ಹಾಗೂ ಸರ್ವಸುಲಭ ಭಕ್ತಿ ವಿಧಾನವಾಗಿದೆ. ಕಬೀರನ ಭಕ್ತಿ ವ್ಯಾವಹಾರಿಕವೂ ಭಾವುಕತೆಯಿಂದ ಕೂಡಿದ್ದೂ ಆಗಿದೆ. ಇಲ್ಲಿ ಹೊರಗಿನ ಆಚರಣೆಗಳಿಗಲ್ಲ, ಒಳಗಿನ ಆಚರಣೆಗಳಿಗೆ ಒತ್ತುಕೊಡಲಾಗಿದೆ. ಅಂತರಂಗ ಶುದ್ಧಿಗೆ, ಸತ್ಯಶುದ್ಧ ಆಚರಣೆಗಳಿಗೆ, ನಡೆ-ನುಡಿಗಳ ಸಾಮಂಜಸ್ಯಕ್ಕೆ ಆದ್ಯತೆ ನೀಡಲಾಗಿದೆ. ಕಬೀರನ ದೃಷ್ಟಿಯಲ್ಲಿ ಭಕ್ತಿ ಮಾಡುವುದು ಕಷ್ಟ-'ತಂತಿಯ ಮೇಲೆ ನಡೆದಷ್ಟು' ಕಷ್ಟ.

ಕಬೀರ್ ಪ್ರತಿಪಾದಿಸಿದ ಭಕ್ತಿ ನಿಷ್ಕಾಮವಾಗಿರಬೇಕೆಂದು ಹೇಳುತ್ತದೆ. ಏಕೆಂದರೆ ಕಾಮನೆ ಭಕ್ತಿಯನ್ನು ಕಲುಷಿತಗೊಳಿಸುತ್ತದೆ. ನಿಷ್ಕಾಮಭಕ್ತ ಬದುಕಿರುವಾಗಲೇ ಜೀವನ್ಮುಕ್ತಿಯನ್ನು ನೀಡುತ್ತದೆ. ಕಬೀರನ ಭಕ್ತಿ ಪದ್ಧತಿಯಲ್ಲಿ ಸದಾಚರಣೆಗೆ ಒತ್ತುಕೊಡಲಾಗಿದೆ. ಕಾಮಿನಿ-ಕಾಂಚನದಿಂದ ದೂರವಿರುವುದು, ಅಹಂಭಾವ ಮತ್ತು ದುರ್ಗುಣಗಳಿಂದ ದೂರವಿರುವುದು ಭಕ್ತನ ಕರ್ತವ್ಯವಾಗಿದೆ. ಸತ್ಯಾಚರಣೆ ಭಕ್ತನ ಹಣೆಯ ವಿಭೂತಿಯಿದ್ದಂತೆ. ಸತ್ಯಾಚರಣೆಯನ್ನು ಕಬೀರ್ ತಪಸ್ಸು ಹಾಗೂ ಮಿಥ್ಯಾಚರಣೆಯನ್ನು ಪಾಪ ಎಂದು ಕರೆದಿದ್ದಾನೆ. ಸತ್ಯದ ಬದುಕನ್ನು ನಡೆಸಿದಾಗ ಮಾತ್ರ 'ಭಗವಂತನಿಗೆ ಲೆಕ್ಕ ಒಪ್ಪಿಸುವುದು ಸುಲಭ' ಎಂದು ಕಬೀರ ಅಭಿಪ್ರಾಯಪಡುತ್ತಾನೆ.

ವಿನಯಭಾವ ಕಬೀರನ ಭಕ್ತಿಯ ಅಲಂಕಾರವಾಗಿದೆ. ಭಗವಂತನ ಮುಂದೆ ತನ್ನನ್ನು ಅಣುವೆಂದು ಪರಿಭಾವಿಸುವುದು, ಅವನು ದೇವ, ತಾನು ದೀನ ಎಂದು ಹೇಳಿಕೊಳ್ಳುವ ದೈನ್ಯ ಕಬೀರನ ವ್ಯಕ್ತಿತ್ವಕ್ಕೆ ಸಹಜವಾದ ವ್ಯವಹಾರವಾಗಿದೆ. ತನ್ನ ಒಂದು ವಚನದಲ್ಲಿ ಕಬೀರ್ 'ತನ್ನನ್ನು ರಾಮನ ನಾಯಿ, ಹೆಸರು ಮೋತಿ' ಎಂದು ಹೇಳಿಕೊಳ್ಳುವಷ್ಟು ವಿನಯವನ್ನು ತೋರಿದ್ದಾನೆ. ಕಬೀರನ ವಚನಗಳಲ್ಲಿ ಭಕ್ತಿಯ ವಿವಿಧ ಮುಖಗಳು ಅಭಿವ್ಯಕ್ತಗೊಂಡಿವೆ. ಅದರಲ್ಲೂ ವಿಶೇಷವಾಗಿ ದಾಸ್ಯಭಕ್ತಿ, ವಾತ್ಸಲ್ಯ ಭಕ್ತಿ ಹಾಗೂ ಮಾಧುರ್ಯ ಭಕ್ತಿ ಈತನ ಭಕ್ತಿಯ ಮೂರು ಮುಕುಟಗಳು. ಭಕ್ತಿಯನ್ನು ತನ್ನ ಸಾಧನೆಯ ಮೂಲ ಧನವನ್ನಾಗಿರಿಸಿಕೊಂಡಿರುವ ಕಬೀರ್ ಹಿಂದಿ ಸಾಹಿತ್ಯವಷ್ಟೇ ಅಲ್ಲ ಭಾರತೀಯ ಭಕ್ತಿ ಪರಂಪರೆ ಕಂಡ ಮಹೋನ್ನತ ಭಕ್ತಕವಿ.

ಕಬೀರ್ ತನ್ನ ಕಾಲದ ಶ್ರೇಷ್ಠ ಸಮಾಜ ಚಿಂತಕ, ಸುಧಾರಕ, ತಾನು ಬದುಕಿದ್ದ ಸಮಾಜದಲ್ಲಿನ ದೋಷಗಳನ್ನು ಕಂಡು ಕಿಡಿಕಾರಿದ ಕೋಪಿಷ್ಠ, ವರ್ಣಾಶ್ರಮದ ವಿಕೃತರೂಪ ಆ ಕಾಲದಲ್ಲಿ ಗರಿಗೆದರಿ ಕೊಂಡಿತ್ತು. ಹುಟ್ಟಿದ ಕುಲ , ಜಾತಿ ಮನುಷ್ಯನ ಶ್ರೇಷ್ಠತೆಯನ್ನು ನಿರ್ಧರಿಸುವ ಮಾನದಂಡ ವಾಗಿತ್ತು. ಕಬೀರ್ ಇದನ್ನು ಪ್ರಶ್ನಿಸಿದ. ಹುಟ್ಟಿನಿಂದ ಯಾರೂ ದೊಡ್ಡವರಲ್ಲ, ನಡೆ-ನುಡಿಯಿಂದ ಯಾರೂ ದೊಡ್ಡವರಾಗಬಲ್ಲರು ಎಂದ. ಕಬೀರ್ ಮನುಷ್ಯರನ್ನೆಲ್ಲ ಸಮಾನರು ಎಂದು ಪ್ರತಿಪಾದಿಸಿದ.

ಧರ್ಮ-ದೇವರುಗಳ-ಹೆಸರಿನಲ್ಲಿ ತಮ್ಮ-ತಮ್ಮ ಶ್ರೇಷ್ಠತೆಯನ್ನು ಪ್ರತಿಪಾದಿಸುತ್ತಿದ್ದ ಹಿಂದೂ ಹಾಗೂ ಇಸ್ಲಾಂ ಧರ್ಮಾಧಿಕಾರಿಗಳನ್ನು ಕಬೀರ್ ತರಾಟೆಗೆ ತೆಗೆದು

ಕೊಂಡಿದ್ದಾನೆ. ಮಂದಿರ -ಮಸೀದಿಗಳನ್ನು ವಿರೋಧಿಸಿ ಭಗವಂತ ಈ ಜಾಗಗಳಲ್ಲಿಲ್ಲ, ಹೃದಯ ಮಂದಿರಗಳಲ್ಲಿದ್ದಾನೆ. ದೇಹವೇ ಮೆಕ್ಕಾ, ದೇಹವೇ ದೇವಾಲಯವಾಗಿರುವಾಗ ಇಲ್ಲದ ದೇವರುಗಳನ್ನು ಹುಡುಕಿಕೊಂಡು ತೀರ್ಥಯಾತ್ರೆ ಮಾಡುವುದನ್ನು, ಜಪ,ತಪ ವಿಭೂತಿ,ರುದ್ರಾಕ್ಷಿ, ನಮಾಜು ಮುಂತಾದ ಆಚರಣೆಗಳನ್ನು ಕಬೀರ್ ತೀವ್ರವಾಗಿ ವಿರೋಧಿಸಿದ. ಜಾತಿ ಪದ್ಧತಿಯನ್ನು ಪ್ರಖರ ವಾಗಿ ಖಂಡಿಸಿದ ಕಬೀರ್ 'ಜಾತಿಯನ್ನು ಕೇಳದಿರಿ' ಎಂದ. ಜಾತಿಯಿಂದ ಯಾರೂ ದೊಡ್ಡವರಾಗುವುದಿಲ್ಲ ಎಂದು ನುಡಿದ. ಕಬೀರ್ ಶೋಷಣೆ, ಹಿಂಸೆ ಮತ್ತು ನೋವನ್ನು ಸಹಿಸದ ಜೀವಿಯಾಗಿದ್ದ. ಪ್ರಾಣಿ ಹಿಂಸೆಯಾಗುವುದನ್ನು ಕಂಡು ಕಬೀರನ ಹೃದಯ ತಲ್ಲಣಗೊಂಡಿತು, ಪ್ರಾಣಿ ಹಿಂಸೆ ಮಾಡುವ ಎರಡೂ ಧರ್ಮದವರನ್ನು ಕಬೀರ್ ಖಂಡಿಸಿದ್ದಾನೆ. ಕಬೀರನ ಸಾಮಾಜಿಕ ಚಿಂತನೆಯ ಮೂಲ ಸೆಲೆ ಅಂತಃಕರಣದಿಂದ ಕೂಡಿದ್ದು ಮಾನವೀಯತೆಯ ಚರಮೋತ್ಕರ್ಷವನ್ನು ಇಲ್ಲೆಲ್ಲ ಕಾಣಬಹುದಾಗಿದೆ.

ಕಬೀರ್ ಬಂಡವಾಳಾಧಾರಿತ ಸಮಾಜದ ಕೂಡಿಡುವ ಸಂಸ್ಕೃತಿಯ ವಿರುದ್ಧ ಎಚ್ಚರಿಸಿದ್ದಾನೆ.'ನೀನೂ ಉಣ್ಣು, ಬೇರೆಯವರಿಗೂ ಉಣ್ಣಲು ನೀಡು,' ಬಾಳುವ ಹಕ್ಕು ಎಲ್ಲರಿಗೂ ಇದೆ. ಕೂಡಿಟ್ಟ ಮಂದಿ ಕೆಲದಿನಗಳ ಮಟ್ಟಿಗೆ ಮೋಜು ಮಾಡಬಹುದು. ಆದರೆ ಆ ಮಂದಿ ಸತ್ತಾಗ ಕೂಡಿಟ್ಟ ಐಶ್ವರ್ಯ ಅವರ ಹಿಂದೆ ಹೋಗುವುದಿಲ್ಲವೆಂದು ಹೇಳುತ್ತ ಧನ ಸಂಗ್ರಹದ ಮಾಯೆಗೆ ಬೀಳುವುದನ್ನು ಸಮಾಜದಲ್ಲಿ ಶೋಷಣೆಗೆ ಹಾದಿ ಮಾಡಿಕೊಟ್ಟಂತೆ ಎಂದಿದ್ದಾನೆ.

ಕಬೀರನ ಸಾಹಿತ್ಯದ ಕೆಲವು ಮಾತುಗಳನ್ನು ಉದಹರಿಸಿ ತನ್ನನ್ನು 'ನಾರಿನಿಂದಕ' ಹಾಗೂ 'ಸ್ತ್ರೀ ವಿರೋಧಿ' ಎಂದು ಹೇಳುವುದು ಸಾಮಾನ್ಯವಾಗಿದೆ. ಆದರೆ ಇದು ಉಚಿತವಲ್ಲ. ಏಕೆಂದರೆ ಕಬೀರನಂಥ ಸಹೃದಯ ಕವಿ, ಮನುಕುಲವನ್ನೇ ಅನನ್ಯವಾಗಿ ಪ್ರೀತಿಸಿದ ಕರುಣಾಮಯಿ ನಾರಿಯನ್ನಲ್ಲ. ಪರನಾರಿಯರ ಸಂಗದಲ್ಲಿ ಸ್ವರ್ಗಸುಖವನ್ನು ಕಾಣಬಯಸುತ್ತಿದ್ದ ಅಂದಿನ ಸಾಮಂತವಾದಿ ಸಂಸ್ಕೃತಿಯ ಅಭಿನ್ನ ಭಾಗವಾದ ವಿಲಾಸಿ ಪುರುಷವರ್ಗವನ್ನು ಖಂಡಿಸಿದ್ದಾನೆ. ತನ್ನ ಒಂದು ವಚನದಲ್ಲಿ, 'ಪರಸ್ತ್ರೀಯರನ್ನು ಪ್ರೇಮಿಸಿದ ವ್ಯಕ್ತಿ ಹಾಗೂ ಕಳ್ಳತನದ ಸಂಪಾದನೆಯನ್ನು ಅನುಭವಿಸುವ ವ್ಯಕ್ತಿ ಕೆಲದಿನಗಳು ಮಾತ್ರ ಸಂತೋಷವಾಗಿರಬಲ್ಲ. ಆಮೇಲೆ ಸಂಪೂರ್ಣ ನಾಶವಾಗುತ್ತಾನೆ' ಎಂದು ನುಡಿದಿದ್ದಾನೆ. ಅಂತೆಯೇ ವಿಲಾಸ, ಐಹಿಕ ಸುಖದಲ್ಲಿ ಮಗ್ನಳಾಗಿರುವ ಹೆಣ್ಣುಗಳ ಮಾಯಾಜಾಲದ ಬಗೆಗೆ ಕಬೀರ್ ಟೀಕಾಸ್ತ್ರ ಬೀರಿದ್ದಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕಬೀರ್.. ನಾರಿಯ ಹಿರಿಮೆ ಮತ್ತು ಸಮರ್ಪಣ ಭಾವದ ಗೀತೆಗಳನ್ನು ಹಾಡಿದ್ದು ಇವನ್ನು ಗಣನೆಗೆ ತೆಗೆದುಕೊಳ್ಳದಿರುವುದರಿಂದಾಗಿ ಬಹಳ ಮಂದಿ ಕಬೀರನನ್ನು ನಾರಿ ವಿರೋಧಿ ಎಂದಿದ್ದಾರೆ.

ಕಬೀರ್ ಭಾರತೀಯ ಸಮಾಜ ಕಂಡ ಅಪರೂಪದ ಕ್ರಾಂತಿಕಾರಿ ಕವಿ. ಸಮಾಜದಲ್ಲಿನ ವಿಷಮತೆ ಮತ್ತು ಅಂತರಗಳನ್ನು ಅಳಿಸಿಹಾಕಲು ಟೊಂಕ ಕಟ್ಟಿನಿಂತ ಕೆಚ್ಚದೆಯ ಸುಧಾರಕ. 'ನಾನು ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಸಂತೆಯಲ್ಲಿ ನಿಂತಿದ್ದೇನೆ' ಎಂದು ಹೇಳಿಕೊಂಡಿದ್ದಾನೆ ಆತ. ಕಬೀರ್ ತಾತ್ವಿಕವಾಗಿ ನಿರ್ಗುಣೋಪಾಸಕನಾದರೂ ವ್ಯಾವಹಾರಿಕವಾಗಿ ಸಾಕಾರರೂಪಿಗಳಾಗಿರುವ ಮನುಷ್ಯರ ಸೇವೆ ಮಾಡುವುದೇ ಆತನ ಬದುಕಿನ ಧ್ಯೇಯವಾಗಿತ್ತು. 'ಸೇವೆಯಲ್ಲಿಹನು ಭಗವಂತ' ಎಂಬುದು ಆತನ ನಿಲುವಾಗಿತ್ತು. ಕಬೀರನ

ಕನಸಿನ ಸಮಾಜವೆಂದರೆ ವರ್ಗರಹಿತ ಜಾತಿಮುಕ್ತ ಸಮಾಜ, ವೈಚಾರಿಕತೆಯ ಮೇಲೆ ನಿಂತ ಸಮಾಜ. ಆಡಂಬರ ಬಾಹ್ಯಾಚಾರಗಳಿಂದ ಬಿಡುಗಡೆ ಹೊಂದಿ ಮುಕ್ತವಾದ ಮಾನವ ಪ್ರೀತಿಯ ಮೇಲೆ ನಿಂತ ಸಮಾಜ.

ಅನುಭಾವ ಕಬೀರನ ಸಾಧಕವ್ಯಕ್ತಿತ್ವದ ಬಹುಮುಖ್ಯ ರೂಪ. ಅಜ್ಞಾತ ಪರತತ್ವದ ಬಗೆಗಿನ ಆಕರ್ಷಣೆಯೇ ಅನುಭಾವ. ಆ ಶಕ್ತಿಯೊಂದಿಗೆ ರಾಗಾತ್ಮಕ ಸಂಬಂಧವನ್ನು ಸ್ಥಾಪಿಸಿಕೊಂಡು ಅದರ ಪ್ರೀತಿ-ಪ್ರೇಮವನ್ನು ಪಡೆದುಕೊಳ್ಳಬೇಕೆಂಬ ಆತ್ಮದ ಚಡಪಡಿಕೆಯೇ ಅನುಭಾವ. ಅನುಭಾವದ ಜಗತ್ತಿನಲ್ಲಿ ಹೃದಯದ ಭಾವನೆಗಳಿಗೆ ಪ್ರಾಧಾನ್ಯವೇ ಹೊರತು ತರ್ಕಕ್ಕೆ ಇಲ್ಲಿ ಕಿಂಚಿತ್ತೂ ಅವಕಾಶವಿಲ್ಲ.

ಕಬೀರನ ಅನುಭಾವ ಎರಡು ನೆಲೆಯಲ್ಲಿ ಕ್ರಮಿಸಿದೆ ಒಂದು- ಯೋಗಸಾಧನೆ, ಎರಡು- ಭಾವಸಾಧನೆ. ಯೋಗ ಸಾಧನೆಯಲ್ಲಿ ಚಿತ್ತ ಚಾಂಚಲ್ಯವನ್ನು ನಿಗ್ರಹಿಸುವುದರ ಮೂಲಕ ಜ್ಯೋತಿ ಸ್ವರೂಪಿಯಾದ ಪರಮಾತ್ಮನಲ್ಲಿ ಒಂದಾಗುವ ಕ್ರಿಯೆಯಿರುತ್ತದೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಧಾರಣ ಮುಂತಾದುವು ಯೋಗದ ಅಷ್ಟಾಂಗಗಳಾಗಿದ್ದು ಸಮಾಧಿಸ್ಥಿತಿ ಬ್ರಹ್ಮಾನುಭೂತಿಯ ಸ್ಥಿತಿಯಾಗಿದೆ. ಯೋಗದ ಪ್ರಕಾರ ಬ್ರಹ್ಮಾಂಡದಲ್ಲಿರುವುದೆಲ್ಲ ಪಿಂಡದಲ್ಲಿದೆ. ಪಿಂಡದಲ್ಲಿ ಬ್ರಹ್ಮಾಂಡದ ಲೀಲೆಗಳನ್ನು ಕಾಣುವುದು ಅನುಭಾವಿಯ ಲಕ್ಷ್ಯವಾಗಿರುತ್ತದೆ. ಕಬೀರ್ ಯೋಗಿಕ ರಹಸ್ಯಾನುಭೂತಿಯ ಪರಮ ಸಾಧಕನಾಗಿದ್ದಾನೆ.

ಕಬೀರನ ಭಾವಾತ್ಮಕ ಅನುಭಾವ ಮಾಧುರ್ಯ ಪ್ರೇಮದ ರಸಪಾಕ. ಇಲ್ಲಿ ಪ್ರೇಮದ ಉತ್ಕಟ ರೂಪವನ್ನು ಕಾಣಬಹುದಾಗಿದೆ. ಈ ಪ್ರೇಮದಲ್ಲಿ ಕೌತುಕತೆಯಿದೆ. ಜಿಜ್ಞಾಸೆಯಿದೆ. ವಿರಹವಿದೆ ಹಾಗೂ ಮಿಲನದ ಉಪಮಾತೀತ ಆನಂದವಿದೆ . ಕಬೀರ್ ತನ್ನ ನಿರ್ಗುಣ ಪರತತ್ವವನ್ನು ಅಲಖ್, ನಿರಂಜನ, ನಿರಾಕಾರ ಶಬ್ದಾತೀತ, ರೂಪಹೀನ ಎಂದೆಲ್ಲ ಹೇಳಿದರೂ. ಭಾವಾತ್ಮಕ ಅನುಭಾವ ಮಾರ್ಗದಲ್ಲಿ ಅದು ಸಾಕಾರತತ್ವ. ಇಲ್ಲಿ ಪರಮಾತ್ಮ ಪತಿ, ಸಾಧಕ ಸತಿ, ಈ ಸಾಧಕನಿಗೆ ತನ್ನ ಸಾಧನೆ ಮತ್ತು ಗುರುವಿನ ಮಾರ್ಗದರ್ಶನ ದಿಂದ ಪರಮಾತ್ಮನ ಪರಿಚಯವಾಗಿ ಅದು ಹಂತ ಹಂತವಾಗಿ ಐಕ್ಯದ ಸ್ಥಿತಿಯನ್ನು ತಲುಪುತ್ತದೆ. ಕಬೀರನ ಸಾಧನಾವಸ್ಥೆಯ ನಾಲ್ಕು ಸ್ಥಿತಿಗಳೆಂದರೆ ಪರಿಚಯ, ಜಿಜ್ಞಾಸೆ, ವಿರಹ ಮತ್ತು ಮಿಲನ. ಆರಂಭದ ದ್ವೈತ ಸ್ಥಿತಿ ಕೊನೆಯಲ್ಲಿ ಅದ್ವೈತ ಸ್ಥಿತಿಯನ್ನು ತಲುಪುವವರೆಗೂ ಸಾಧಕ(ಆತ್ಮ)ನ ಸ್ಥಿತಿಯ , ಆತನ ವಿರಹಮಯ ಬದುಕಿನ ಹೃದ್ಯವರ್ಣನೆ ಕಬೀರನ ಸಾಹಿತ್ಯದ ಮೇರುಭಾಗ. ಈ ಸ್ಥಿತಿಯ ಅನುಭವ ವರ್ಣನಾತೀತ. ಇಲ್ಲಿ ಮಾತುಗಳು ಮರೆಯಾಗಿ ದಿವ್ಯಾನುಭವದ ಅನಂತ ಸುಖದಲ್ಲಿ ಆತ್ಮ ಪರವಶವಾಗಿರುತ್ತದೆ. ಹೀಗೆ ಕಬೀರನ ಅನುಭಾವ ಸಾಧನೆ ಭಾರತೀಯ ಸಾಹಿತ್ಯದ ಒಂದು ಅಮೂಲ್ಯನಿಧಿ.

ಕಬೀರ್ ಹುಟ್ಟು ಕವಿ, ಹಿಂದಿಯ ಶ್ರೇಷ್ಠ ಕವಿ. ಕಾವ್ಯ ಇವನ ಬದುಕಿನ ಲಕ್ಷ್ಯವಾಗಿರಲಿಲ್ಲ. ಇವನ ಬದುಕೇ ಕಾವ್ಯವಾಯಿತು. ಕವಿಯಲ್ಲಿರಬೇಕಾದ ಕಲ್ಪನಾ ಚಾತುರ್ಯ, ಮೌಲಿಕ ಚಿಂತನೆ, ಸುತ್ತಲಪರಿಸರ ಮತ್ತು ಸಮಾಜಕ್ಕೆ ಸ್ಪಂದಿಸಬೇಕಾದಂಥ ಮಾನವೀಯ ದೃಷ್ಟಿ ಕಬೀರನಲ್ಲಿ ಜನ್ಮಜಾತವಾಗಿದ್ದುವು. ಭಾಷೆಗೆ ಸಂಬಂಧಿಸಿದಂತೆ ಕಬೀರನ ನಿಲುವು ಜನಪರವಾದುದಾಗಿದೆ. ಆಡುಭಾಷೆಯನ್ನು ಈತ ತನ್ನ ಅಭಿವ್ಯಕ್ತಿಗೆ ಆಯ್ಕೆ ಮಾಡಿಕೊಂಡ. ಇದೇ ಸಧುಕ್ಕಡಿ, ಸಾಧುಗಳ ಭಾಷೆ ಮಿಶ್ರಭಾಷೆ ತನ್ನ ಭಾಷೆಗೆ ಕಬೀರ್ ಅನನ್ಯವಾದ ಶಕ್ತಿ ಸಾಮರ್ಥ್ಯವನ್ನು ತುಂಬಿದ. ಭಾಷೆಯ ಮೇಲೆ

ಕಬೀರನಿಗೆ ಎಂಥ ಹಿಡಿತವಿತ್ತೆಂದರೆ ಹಜಾರಿ ಪ್ರಸಾದ್ ದ್ವಿವೇದಿಯವರು ಈತನನ್ನು 'ಭಾಷೆಯ ಡಿಕ್ಟೇಟರ್' ಎಂದು ಸರಿಯಾಗಿಯೇ ಕರೆದಿದ್ದಾರೆ. ಕಬೀರ್ ತನ್ನ ಅಭಿವ್ಯಕ್ತಿಗೆ ಶಬ್ದಗಳಿಗಾಗಿ, ನುಡಿಗಟ್ಟುಗಳಿಗಾಗಿ ಪ್ರತಿಮೆ-ರೂಪಕ-ಉಪಮೆಗಳಿಗಾಗಿ ತಡಕಾಡುವುದಿಲ್ಲ. ಅವೇ ಇವನತ್ತ ಧಾವಿಸಿ ಬರುತ್ತವೆ, ಸೂಕ್ತ ಸ್ಥಳಗಳಲ್ಲಿ ಪ್ರಯೋಗಗೊಳ್ಳುತ್ತವೆ. ಪ್ರಾಣಿ ಪಕ್ಷಿಗಳ ರೂಪಕಗಳಂತೂ ಕಬೀರ್ ಕಾವ್ಯದ ಜೀವಾಳವಾಗಿವೆ. ಹಿಂದಿಯ ಮೊದಲ ವ್ಯಂಗ್ಯಕಾರ ಕಬೀರ್, .

ಕಬೀರ್ ಮುಕ್ತಕ ಕವಿ, ಭೂಮ ಪ್ರತಿಭೆಯನ್ನು ಹೊಂದಿದ್ದರೂ ಇವನಾಗಲಿ ಅಥವಾ ಸಂತಪರಂಪರೆಯ ಯಾವಕವಿಯೇ ಆಗಲಿ ಮಹಾಕಾವ್ಯಗಳನ್ನು ರಚಿಸಲಿಲ್ಲ. ಅಷ್ಟು ಬಿಡುವೂ ಇವರಿಗಿರಲಿಲ್ಲ. ಕಬೀರ್ ತನ್ನ ಹೃದಯದ ಹಾಡನ್ನು, ಜಗದ ಪಾಡನ್ನು ಹಾಡುತ್ತ ಹೋದ. ಧರ್ಮದಾಸ ಎಂಬ ಶಿಷ್ಯ ಅವನ್ನು ಬರೆದುಕೊಳ್ಳುತ್ತಾ ಹೋದ. ಕಬೀರನ ವಾಣಿಯನ್ನು ಮೂರು ಭಾಗಗಳಲ್ಲಿ ವಿಭಜಿಸಲಾಗಿದೆ-- ಸಾಖಿ, ಸಬದ್ ಹಾಗೂ ರಮೈನಿ. ಕಬೀರನ ಸಾಖಿಗಳು ಹಿಂದಿಯಲ್ಲಿ ಬಹು ಪ್ರಸಿದ್ಧ. ಸಾಖೀ ಅಂದರೆ, ಸಾಕ್ಷಿ. ಆತ್ಮವನ್ನು ಸಾಕ್ಷಿಯಾಗಿಟ್ಟುಕೊಂಡು ಕಬೀರ್ ನುಡಿದಿರುವ ಈ ಸಾಕ್ಷೀ ವಚನಗಳು ಅವನ ಬದುಕಿನ ಯಾತ್ರೆಯಲ್ಲಿನ ಅನುಭವದ ಮೂಸೆಯಲ್ಲಿ ಮೂಡಿ ಬಂದಿರುವ ಮುತ್ತುಗಳು. 'ಸಬದ್' ಅಂದರೆ ಪದಗಳು. ನಾನಾಬಗೆಯ ಸಂಬೋಧನೆಗಳಿಂದ ಕೂಡಿದ ಈ ಪದಗಳು ಗೇಯಾತ್ಮಕವಾಗಿದ್ದು ತತ್ವಜ್ಞಾನವನ್ನು ಪ್ರಭಾವಕಾರಿಯಾಗಿ ಹೇಳಿವೆ. 'ರಮೈನಿ' ಎಂಬುದು ಕಬೀರನ ಇನ್ನೊಂದು ಶೈಲಿ. ದೋಹಾ ಚೌಪಾಈ ಛಂದಸ್ಸಿನಲ್ಲಿರುವ ಈ ರಮೈನಿಗಳಲ್ಲಿ ಕಬೀರನ ದಾರ್ಶನಿಕ ಚಿಂತನೆ ಅಭಿವ್ಯಕ್ತವಾಗಿದೆ. ಕಬೀರ್ ಬೆಡಗಿನ ವಚನಗಳನ್ನು ಹಾಡಿದ್ದು ಇವನ್ನು 'ಉಲಟ್ ಬಾಂಸಿ' ಎಂದು ಕರೆಯುತ್ತಾರೆ. ಹೀಗೆ ನಾನಾ ಶೈಲಿಯಲ್ಲಿ ಭಾಷೆಯನ್ನು ಸಮರ್ಥವಾಗಿ ಬಳಸಿದ ಕಬೀರ್ ಭಾಷೆಯ ಸೌಂದರ್ಯವನ್ನು ಇಮ್ಮಡಿ -ಮುಮ್ಮಡಿಗೊಳಿಸಿದ್ದಾನೆ.

ಕಬೀರನ ಸಾಹಿತ್ಯದ ಸಂಪರ್ಕಕ್ಕೆ ಬಂದವರು ಅವನಿಂದ ತೀವ್ರವಾಗಿ ಪ್ರಭಾವಿತರಾಗಿದ್ದಾರೆ. ರವೀಂದ್ರರು ಕಬೀರನ ಅನುಭಾವ ಗೀತೆಗಳಿಂದ ಎಷ್ಟರಮಟ್ಟಿಗೆ ಪ್ರಭಾವಿತರಾದರೆಂದರೆ ಸ್ವತಃ ಆತನ ನೂರು ಗೀತೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದರು. ಈ ಅನುವಾದಗಳ ಮೂಲಕ ಕಬೀರ್ ಸಾಹಿತ್ಯದ ಕಂಪು ದೇಶ ವಿದೇಶಗಳಲ್ಲಿ ಪಸರಿಸಿತು. ಗಾಂಧೀಜಿಯವರಿಗಂತೂ ಕಬೀರ್ ಆರಾಧ್ಯಮೂರ್ತಿ. ಕಬೀರನ ಸತ್ಯನಿಷ್ಠೆ, ಸದಾಚಾರ ಮತ್ತು ಸಾಮಾಜಿಕ ಚಿಂತನೆಗಳಿಂದ ಗಾಂಧೀಜಿ ಪ್ರಭಾವಿತರಾಗಿದ್ದರು.

ಕಬೀರ ಭಾರತೀಯ ಸಾಹಿತ್ಯ ಪರಂಪರೆಗೆ ಹಿಂದಿಯ ಮಹತ್ತರ ಕೊಡುಗೆ, ಮಾನವತೆಯ ಮಹಾನ್ ದೀಪ್ತಿ. ಅಧ್ಯಾತ್ಮ ಈತನ ಉಸಿರು. ಸರ್ವೋದಯ ಸಮಾಜದ ಸ್ಥಾಪನೆ ಈತನ ಗುರಿ, ಭಕ್ತಿ ಈತನ ಭಂಡಾರ. ಅನುಭಾವ ಈತನ ಅವಿನಾಭಾಗ. ಈ ಎಲ್ಲದರ ಮೂಲಕ ಲೋಕದ ಬದುಕಿಗೆ ತನ್ನ ಬದುಕನ್ನೇ ಸಂದೇಶವಾಗಿ ಕೊಟ್ಟ ಕಬೀರ್ ವಿಭೂತಿ ಪುರುಷ, ಪ್ರಾತಃಸ್ಮರಣೀಯ. ಕಬೀರನ ಬದುಕು ಶತಶತಮಾನಗಳವರೆಗೆ ಮನುಕುಲದ ಕಲ್ಯಾಣಕ್ಕೆ ನಿರಂತರ ಪ್ರೇರಣೆಯ ಸ್ರೋತ. ಕಬೀರ್ ಲೌಕಿಕ ಬದುಕಿನಲ್ಲಾಗಲಿ, ಅಧ್ಯಾತ್ಮ ಬದುಕಿನಲ್ಲಾಗಲಿ ನಿತ್ಯ ಸತ್ಯದ ಅನ್ವೇಷಕ. ಹೀಗಾಗಿ ಕಬೀರನ ಬದುಕು ಮತ್ತು ಸಾಹಿತ್ಯ ಅನವರತ ಪ್ರಾಸಂಗಿಕ.

ನಾನು ಸೂಳೆಯಾದೆ

ಡಾ. ಸ. ಜ. ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬಿ.ವಿ.ವಿ. ಸಂಘ, ಬಾಗಲಕೋಟೆ-೫೮೭ ೧೦೧

ಹುಟ್ಟಗರತಿಯು ಕಾಣಲಿಲ್ಲಾ ಕೊಟ್ಟಾದಿಯಲ್ಲಾ
ಹುಟ್ಟಗರತಿಯು ಕಾಣಲಿಲ್ಲಾ
ಹರೆಯದಾಗ ತಿಳಿಯಲಿಲ್ಲಾ ಹರದಾಡಿದೆಲ್ಲಾ
[illegible]ಕಮಾತಿ ಮೂಳನಾದೆಲ್ಲಾ ಹರಕಾದಿಯಲ್ಲಾ
ಗರತಿ ಲಕ್ಷಣ ಹೋದ ಮ್ಯಾಲಿನ್ನು ತಿರುಗಿ ಗರತ್ಯಾಗಬಹುದೇ?
ಇರಲಿ ನಿಮ್ಮಯ ಶಾಂತಿಗುಣವು ಸೂಳೆಗೆ ಗರತೆನ್ನಬಹುದೇ!
-ಶಿಶುನಾಳ ಶರೀಫರು

ನಾನು ಒಂದು ಗೌರವಸ್ಥ ಕುಟುಂಬದಲ್ಲಿ ಹುಟ್ಟಿದವಳು. ನನ್ನ ತಂದೆ ಎಲ್ಲರಿಂದಲೂ ಗೌರವಿಸಲ್ಪಡುತ್ತಿದ್ದರು. ನನ್ನ ತಾಯಿ ಕಲಿತವಳಲ್ಲ. ನೋಡಿದರೆ ಲಕ್ಷ್ಮಿಯನ್ನು ಕಂಡಂತೆ ಆಗುತ್ತಿತ್ತು. ಇಬ್ಬರು ಅಣ್ಣಂದಿರಿದ್ದರು. ಒಬ್ಬ ಅಕ್ಕ ಇದ್ದಳು. ನಾನು ಎಲ್ಲರಿಗಿಂತ ಕಿರಿಯವಳು. ನಮ್ಮದು ಬಡಕುಟುಂಬ. ತಂದೆಯ ದುಡಿತದ ಮೇಲೆ ಎಲ್ಲರದೂ ಹೊಟ್ಟೆ ತುಂಬ ಬೇಕಾಗಿತ್ತು. ಇಷ್ಟು ಬಡತನವಿದ್ದರೂ ತಂದೆ ನನ್ನ ತಾಯಿಯನ್ನು ಹೊಸ್ತಿಲ ದಾಟು ಎನ್ನುತ್ತಿರಲಿಲ್ಲ. ಬಂದ ಗಳಿಕೆಯಲ್ಲೆ ಮರ್ಯಾದೆಯಿಂದ ಉಣ್ಣುತ್ತಿದ್ದೆವು. ಸುಂದರ ತಾಯಿಯ ಮಕ್ಕಳಾದ ನಾವೂ ಸುಂದರಿಯರಾಗಿದ್ದೆವು.

ಅಕ್ಕ ಇನ್ನೂ ಚಿಕ್ಕವಳಿದ್ದಾಗ ಒಂದೂರಿನವರು ಆಕೆಯನ್ನು ಕಂಡು ಮೆಚ್ಚಿಕೊಂಡರು. ನೇರವಾಗಿ ಮನೆಗೆ ಬಂದು ತಂದೆ- ತಾಯಂದಿರನ್ನು ಮಾತಾಡಿಸಿ ಅಕ್ಕನನ್ನು ತಮ್ಮ ಮಗನಿಗೆ ಕೊಡಬೇಕೆಂದು ವಿನಂತಿಸಿದರು. ತಂದೆ ಒಪ್ಪಿಗೆ ಕೊಟ್ಟೇ ಬಿಟ್ಟರು. ಒಂದು ವಾರದಲ್ಲಿ ಅಕ್ಕನ ಮದುವೆ ಜರಗಿತು. ನಾನೂ ಅವಳ ಮದುವೆಗೂ ಹೋಗಿದ್ದೆ. ಆಕೆಯ ಗಂಡನ ಮನೆ ಶ್ರೀಮಂತರದು. ಅವರ ಮನೆ, ಅದರಲ್ಲಿಯ ವಸ್ತುಗಳನ್ನು ನೋಡಿ ನಾವೆಲ್ಲ ದಂಗಾಗಿ ಹೋದೆವು. ಆಗ ನನ್ನ ಅಕ್ಕ ಇನ್ನೂ ಋತುಮತಿಯಾಗಿದ್ದಿಲ್ಲ. ಗಂಡನ ಮನೆಯವರು ಆಕೆ ತಮ್ಮ ಮನೆಯಲ್ಲಿಯೇ ಬೆಳೆಯಬೇಕೆಂದು ತಿಳಿಸಿದರು. ಆಕೆಯ ರೊಟ್ಟಿ ತುಪ್ಪದಲ್ಲಿ ಜಾರಿ ಬಿದ್ದಂತಾಯಿತು. ಮದುವೆ ಮುಗಿಸಿ ಅಕ್ಕನನ್ನು ಅಲ್ಲಿಯೇ ಬಿಟ್ಟು ಮರಳಿ ಬಂದೆವು.

ಬಡತನ ನಮ್ಮನ್ನು ಸುತ್ತು ಹಾಕಿತ್ತು. ಕೆಲ ದಿನಗಳಾದ ಮೇಲೆ ನಮ್ಮ ದೂರದ ಸಂಬಂಧಿಕರ ಕಣ್ಣಿಗೆ ನಾನು ಬಿದ್ದೆ. ನನ್ನ ಚೆಲುವನ್ನು ಕಂಡು ಅವರೂ ಸಹ ನನ್ನನ್ನು ಮನೆಯ ಸೊಸೆಯನ್ನಾಗಿಸಿಕೊಳ್ಳಲು ಮುಂದೆ ಬಂದರು. ಆಗ ನನಗೆ ಅಂದಾಜು ೮ ವರ್ಷ. ಮದುವೆ ನಡೆದೆ ಹೋಯಿತು. ನಾನು ಇನ್ನೂ ಅಂಗಿ ತೊಟ್ಟು ಓಡಾಡುತ್ತಿದ್ದೆ. ಮದುವೆ ಎಂದರೆ ಹಬ್ಬ ಎಂದು ತಿಳಿದಿದ್ದೆ. ಗಂಡ ಎಂಬ ಪದದ ಅರ್ಥವೇ ಗುರುತಿರಲಿಲ್ಲ. ನನ್ನ ತಾಯಿ ನಾನು ದೊಡ್ಡವಳಾಗುವವರೆಗೆ ಆಕೆಯ ಹತ್ತಿರವೇ ಇರಬೇಕೆಂದು ವಿನಂತಿಸಿದಳು. ಬೀಗರು ಸೈ ಎಂದರು. ದಿನ ಹೋದದ್ದೇ ಗೊತ್ತಾಗಲಿಲ್ಲ. ಆಗಿನ ಕಾಲದಲ್ಲಿ ಸ್ತ್ರೀಯರು ಶಾಲೆಗೆ ಹೋಗುವುದು ಬಹಳ ಕಡಿಮೆ ಎಂದೇ ಹೇಳಬೇಕು. ಹೆಣ್ಣು ಮಕ್ಕಳು ಶಾಲೆಗೆ ಹೋಗುವುದು, ಅಪವಿತ್ರ ಎನ್ನುವ ಜನರಿದ್ದರು.

ಒಂದು ದಿನ ಆಡುತ್ತಿರುವಾಗ ನನ್ನ ಪರಕಾರ ಹಸಿಯಾಗಿತ್ತು. ನನಗೆ ಅದರ ಪರಿವೆಯೇ ಇರಲಿಲ್ಲ. ಒಬ್ಬರು ನೋಡಿ, ಪ್ರೀತಿ ಮಾಡಿ ಮನೆಗೆ ಕರೆದುಕೊಂಡು ಬಂದರು. ತಾಯಿಗೆ ತಿಳಿಸಿದರು. ನೋಡು ನಿನ್ನ ಮಗಳು

ವ್ಯೆ ನೆರೆದಿದ್ದಾಳೆ, ಎಂದರು. ತಾಯಿಗೆ ಸಂತೋಷ. ನನ್ನನ್ನು ಒಳಗೆ ಕರೆದುಕೊಂಡು ಹೋಗಿ ಹಳೆಯ ಪರಕಾರವನ್ನು ಬಿಚ್ಚಿ ಬೇರೆ ಪರಕಾರ ತೊಡಿಸಿದಳು. ಹಳೆಯ ಪರಕಾರದಲ್ಲಿ ರಕ್ತ ಕಂಡು ನಾನು ಅಳಲು ಪ್ರಾರಂಭಿಸಿದೆ. ಅವ್ವ ಹೇಳಿದಳು, "ಹುಚ್ಚಿ ಗಾಬರಿ ಆಗಬೇಡ ಇದು ಆದದ್ದು ಒಳ್ಳೆಯದು," ಸುಮ್ಮನಾದೆ.

ಕೆಲವು ದಿನಗಳಾದ ಮೇಲೆ ನಮ್ಮ ಮನೆಯಲ್ಲಿ ಒಂದು ಕಾರೆ ಮಾಡಿದರು. ನನ್ನನ್ನು ಶೃಂಗಾರಗೊಳಿಸಿ, ಹಾಡಿ, ಆರತಿ ಮಾಡಿದ್ದರು. ನನ್ನ ಗಂಡನ ಮನೆಯಿಂದ ಕೆಲವರು ಬಂದಿದ್ದರು. ನನಗೆ ಒಂದು ದಟ್ಟಿಯನ್ನು ಉಡಿಸಿದರು. ನನಗೋ ಖುಷಿ ಎಂದರೆ ಖುಷಿ. ಅಪ್ಪ ಒಂದು ವರ್ಷಕ್ಕೆ ಒಂದು ಪರಕಾರ ಹೊಲಿಸುತ್ತಿದ್ದ. ಅಂದು ಒಂದೇ ದಿನದಲ್ಲಿ ೩-೪ ಸೀರೆ ಉಡುಗೊರೆಯಾಗಿ ಬಂದುವು. ನಾನು ನನ್ನ ಗೆಳತಿಯರಿಗೆಲ್ಲ ಹೇಳಿದ್ದೇ ಹೇಳಿದ್ದು. ಈ ಸಂತೋಷ ಬಹಳ ದಿನ ಉಳಿಯಲಿಲ್ಲ. ನನ್ನ ಆಟ ಓಟ ನಿಂತು ಹೋದುವು. ನಿತ್ಯ ನಾನು ಊರೆಲ್ಲ ಅಡ್ಡಾಡಿ ಎಲ್ಲ ಸುದ್ದಿ ತರುತ್ತಿದ್ದೆ. ಅದೆಲ್ಲ ನಿಂತೇ ಹೋಯಿತು.

ಒಂದು ತಿಂಗಳಾದ ಮೇಲೆ ಒಳ್ಳೆಯ ದಿನವೆಂದು ಹೇಳಿದರು. ಗಂಡನ ಮನೆಯವರು ಬಂದು ನನ್ನನ್ನು ಕರೆದುಕೊಂಡು ನಡೆದರು. ನನಗೋ ಗಾಬರಿ. ಮದುವೆಯನ್ನು ಯಾಕಾದೆ ಎನಿಸಿತು. ಹಾಗೂ ಹೀಗೂ ಮಾಡಿ, ಒಳ್ಳೆಯ ಮಾತುಗಳನ್ನು ಹೇಳಿ ಗಂಡನ ಮನೆಗೆ ಹೊತ್ತು ಹಾಕಿದರು. ತಂದೆ ತಾಯಂದಿರು ಅತ್ತರು. ಬಹಳ ಅತ್ತರು. ನಾನೂ ಅತ್ತೆ. ನಿನ್ನ ಜೀವನ ಒಳ್ಳೆಯದಾಗುತ್ತದೆ. ನಿನ್ನ ಗಂಡನ ಮನೆಯವರು ಆಸ್ತಿವಂತರು. ನಿನ್ನ ಅಕ್ಕನಂತೆ ನಿನಗೂ ಶ್ರೀಮಂತ ಬೀಗರು ಎಂದು ಹೇಳಿದರು. ಅಂತೂ ಗಂಡನ ಮನೆಗೆ ಬಂದೆ.

ಮನೆಯಲ್ಲಿ ನನ್ನ ಅತ್ತೆ ಗಂಡ, ನಾವ ಇದ್ದರು. ನನ್ನನ್ನು ಗಂಡನ ಮನೆಗೆ ಕಳುಹಿಸಲು ನನ್ನ ಅಣ್ಣ ಬಂದಿದ್ದ. ಇನ್ನಿಬ್ಬರು ವಯಸ್ಸಿನ ಹೆಣ್ಣು ಮಕ್ಕಳಿದ್ದರು. ಅಂಜುತ್ತ ಅಂಜುತ್ತ ಮನೆಯೊಳಗೆ ಕಾಲಿಡುತ್ತಿದ್ದೆ. ನನ್ನ ಅತ್ತೆ ಕೇಳಿದರು, "ಏನೇನು ತಂದದೀಯವಾ ಗಂಡನ ಮನೆಗೆ ?"

ನನ್ನನ್ನು ಕಳುಹಿಸಲು ಬಂದ ಸ್ತ್ರೀಯರು ಹೇಳಿದರು. "ಅಲ್ಲವಾ ಹುಡುಗಿಯ ಅಪ್ಪ ಬಹಳ ಬಡವ ಅವರಿಗೆ ಏನೂ ಕೂಡಿಸುವುದು ಆಗುವುದಿಲ್ಲ. ಬಂಗಾರದಂಥ ಹುಡುಗಿ ಕೊಟ್ಟಾರು. ಚೆಂದಾಗಿ ಇಟಗೋ. ಈಗ ಮನಿಯೊಳಗ ಕಾಲು ಇಡಲಿಕ್ಕ ಹತ್ತೇತಿ ಹುಡುಗಿ ಈಗ ಹಿಂಗ ಮಾತಾಡಿದರೆ ಹೆಂಗ?"

"ಅವರ ಬಡತನಕ್ಕ ಬೆಂಕಿ ಹಚ್ಚಲಿ, ಕಡೀಕ ಅಳಿಯ ಮಗಳು ಮಲಗಲಿ ಎಂದು ಒಂದು ಗಾದಿನೂ ಕೊಡಬಾರದೇನು?" ಎಂದು ನನ್ನ ಅತ್ತೆ ಗದ್ದರಿಸಿದಳು.

ನಾನಂತೂ ಅರ್ಧ ಸತ್ತೇ ಹೋದೆ. ನಮ್ಮ ಮನೆಯಲ್ಲಿ ಎಲ್ಲರಿಗೂ ಒಂದು ಜಮಖಾನ ಹಾಸಿ ಅಲ್ಲಿಯೇ ಮಲಗುತ್ತಿದ್ದೆವು. ಈಗ ಒಬ್ಬೊಬ್ಬರಿಗೆ ಒಂದೊಂದು ಗಾದಿ ಅಂದರೆ ಎಷ್ಟು ಖರ್ಚು ಎಂದು ಯೋಚಿಸಿದೆ. ಬಂದವರಿಗೆಲ್ಲ ಊಟ ಮಾಡಿಸಿದರು. ನನಗೂ ಅವರೊಡನೆ ಊಟ, ಮಲಗಬೇಕೆನ್ನುವಷ್ಟರಲ್ಲಿ ನಾನು ದೇವರ ಮನೆಯಲ್ಲಿ ಮಲಗಬೇಕೆಂದು ಹೇಳಿದರು. ದೇವರ ಮನೆಗೆ ಹೋದೆ. ಅಲ್ಲಿ ಒಂದು ಪಲ್ಲಂಗ ಇತ್ತು. ಅದರ ಮೇಲೆ ಒಂದು ಗಾದಿ ಹಾಸಿದ್ದರು. ನಾನು ಅದರ ಮೇಲೆ ಮಲಗಬೇಕೋ ಅಥವಾ ನೆಲದ ಮೇಲೆ ಮಲಗಬೇಕೋ ತಿಳಿಯದಾಯಿತು. ಗೋಡೆಗೆ ಒರಗಿ ನೆಲದ ಮೇಲೆ ಕುಳಿತೆ. ಅಲ್ಲಿಯೇ ನಿದ್ರೆ ಹತ್ತಿತು.

ಕೆಲಸಮಯದ ಮೇಲೆ ಎಚ್ಚರವಾಯಿತು. ನನ್ನ ಗಂಡ ನನ್ನನ್ನು ಎಬ್ಬಿಸಹತ್ತಿದ. ಎದ್ದುನಿಂತೆ.

ಕೈಹಿಡಿದು ಕರೆದುಕೊಂಡು ಪಲ್ಲಂಗಕ್ಕೆ ಕರೆತಂದ. ನಾನು ನೋಡಲು ಬಹಳ ಸುಂದರವಾಗಿದ್ದೆ. ಗಂಡನು ನನ್ನನ್ನು ಪ್ರೀತಿ ಮಾಡುತ್ತ ಗಾದಿಯ ಮೇಲೆ ಮಲಗಿಸಿದ. ತನ್ನ ಕಾಮದ ಹುಚ್ಚನ್ನು ತಣಿಸಿಕೊಂಡ. ಗಾದಿಯ ಮೇಲೆ ತೆಕ್ಕೆಯಲ್ಲಿಟ್ಟುಕೊಂಡು ನಿದ್ದೆ ಹೋದ ನಾನೂ ಮಲಗಿದೆ.

ಮರುದಿನ ಕಳಿಸಲು ಬಂದವರೆಲ್ಲ ಮರಳಿದರು. ಮತ್ತೆ ರಾತ್ರಿಯಾಯಿತು. ಮಲಗುವ ವೇಳೆ ಬಂದಿತು. ನನ್ನ ಗಂಡ ನನ್ನ ಸುತ್ತಲೂ ಓಡಾಡುತ್ತಿದ್ದ. ಅಷ್ಟರಲ್ಲಿ ಅತ್ತೆಯವರ ಧ್ವನಿ ಕೇಳಿತು. ಅವರು ಮಗನಿಗೆ ಜೋರಿನಿಂದ ಹೇಳಿದರು, ''ನೋಡು ಮಗನ, ನಿನ್ನ ಹೆಂಡತಿಯ ಅಪ್ಪ ನಿನಗೆ ಮಲಗಲು ಗಾದಿ ಕೊಟ್ಟಿಲ್ಲ. ಕಾರಣ ನಿನ್ನ ಹೆಂಡತಿಯನ್ನು ನೆಲದ ಮೇಲೆ ಮಲಗಿಸು. ನೀನು ಮಾತ್ರ ಪಲ್ಲಂಗದ ಮೇಲೆ ಮಲಗು''.

ನನಗೋ ವಿಚಿತ್ರ ಎನಿಸಿತು. ನಮ್ಮ ಬಡತನ ಎಂಥ ತೊಂದರೆ ತರುತ್ತಿದೆ ಎಂಬುದು ತಿಳಿಯಿತು. ಗಂಡನು ದೇವರ ಮನೆಗೆ ಬಂದ ಬಾಗಿಲು ಮುಂದೆ ಮಾಡಿದ. ನನ್ನನ್ನು ತನ್ನ ತೆಕ್ಕೆಯಲ್ಲಿ ಹಿಡಿದುಕೊಂಡು ಸುಖವನ್ನುಂಡ ಅನಂತರ ಒಂದು ತಟ್ಟನ್ನು ನೆಲದ ಮೇಲೆ ಚೆಲ್ಲಿ ''ನೀನು , ಅಲ್ಲಿಯೇ ಮಲಗು '' ಎಂದ. ನಾನು ಅಳುತ್ತ ತಟ್ಟಿನ ಮೇಲೆ ಏನೂ ಹೊದೆಯುವದು ಇಲ್ಲದೆ ಮಲಗಿದೆ. ಹೀಗೆಯೇ ಒಂದು ತಿಂಗಳ ಕಳೆದೆ. ನನ್ನನ್ನು ಕರೆದುಕೊಂಡು ಹೋಗಲು ಅಣ್ಣ ಬಂದ. ನನ್ನ ಅತ್ತೆ ಅವನಿಗೆ ಚುಚ್ಚಿ ಮಾತಾಡ ತೊಡಗಿದಳು '' ಎಂಥ ದರಿದ್ರರೊಡನೆ ನಮ್ಮ ಬೀಗತನವಾಯಿತು. ನನ್ನ ಮಗನಿಗೆ ಬೇಕಾದದನ್ನು ಕೊಟ್ಟು ಮದುವೆ ಮಾಡಿಕೊಡುತ್ತೇವೆ ಎನ್ನುವ ಜನರಿದ್ದರು. ಬಡವರ ಮಗಳು ಎಂದು ನಾವೇ ಮದುವೆ ಮಾಡಿಕೊಂಡೆವು. ನೀವು ಹಾಸಿಗೆ ಸಹ ಕೊಡಲಿಲ್ಲ. ಇನ್ನುಳಿದ ಸಾಮಾನು, ಒಡವೆ, ದೂರಿರಲಿ. ಈ ಸಲ ಆಕೆಯನ್ನು ಕರೆದುಕೊಂಡು ಹೋಗಿ ಮರಳಿ ಕಳಿಸಿವಾಗ ಹಾಸಿಗೆಯೊಂದಿಗೆ ಕಳಿಸಬೇಕು'' ಎಂದು ಗರ್ಜಿಸಿದಳು.

ನಾನು ಅಣ್ಣನ ಮುಂದೆ ಎಲ್ಲ ಹೇಳಿ ಅತ್ತು ಬಿಟ್ಟೆ. ನಸುಕಿನಲ್ಲಿ ನನ್ನ ಕೆಲಸ ಪ್ರಾರಂಭ. ಮನೆಯಲ್ಲಿ ಎಂಟು ದನಗಳು. ದನದ ದಡ್ಡಿಯನ್ನು ಸ್ವಚ್ಛ ಮಾಡುವುದು ದನಗಳಿಗೆ ಮೇವು ಹಾಕುವುದು, ನೀರಿಡುವುದು. ಮನೆಯ ಕಸ ಮುಸರಿ ಮಾಡುವುದು, ನೀರು ತರುವದು ಇವನ್ನೆಲ್ಲ ಮಾಡಿ ಮುಗಿಸುವಷ್ಟರಲ್ಲಿ ನನ್ನ ಹೊಟ್ಟೆ ಬಹಳ ಹಸಿಯುತ್ತಿತ್ತು. ಮನೆಯವರೆಲ್ಲ ದೊಡ್ಡ ಪಾತ್ರೆಯಲ್ಲಿ ಚಹಾ ಮಾಡುತ್ತಿದ್ದರು. ಎಲ್ಲರೂ ಒಂದೊಂದು ಗಂಗಾಳದ ತುಂಬ ಚಹಾ ಕುಡಿಯುತ್ತಿದ್ದರು. ನನಗೂ ಕೊಡುತ್ತಾರೆಂದು ಆಸೆಗಣ್ಣಿನಿಂದ ನೋಡುತ್ತ ಕೆಲಸ ಮಾಡುತ್ತಿದ್ದೆ. ನನ್ನ ಗಂಡನೂ ಚಹಾ ಕುಡಿಯುತ್ತಿದ್ದ. ನನಗೆ ಏನೂ ಉಳಿಸುತ್ತಿರಲಿಲ್ಲ. ತಡೆಯಲಾಗದೆ ಒಂದು ಸಲ ಅಳುತ್ತ ಕೇಳಿಬಿಟ್ಟೆ, ''ನನಗೂ ಒಂದೆರಡು ಗುಟುಕು ಚಹಾ ಕೊಡಿರೆಂದು'' ಅಂಗಲಾಚಿದೆ.

ಅತ್ತೆ ಹೇಳಿದರು, ''ನೀನು ಹಾಸಿಗೆ ತರುವವರೆಗೆ ಚಹಾ ಇಲ್ಲ''. ಹಾಸಿಗೆ ಕೊಡಿಸುವುದು ನನ್ನ ತಂದೆಯ ಕಾರ್ಯ. ಅವನೋ ಕಡು ಬಡವ. ತವರು ಮನೆಗೆ ಹೋದಾಗ ಹಾಸಿಗೆ ಕೊಡಿಸಿರಿ ನನ್ನನ್ನು ಕಾಡುತ್ತಾರೆಂದು ಹೇಳಲು ಬಾಯಿ ಬಿಡುತ್ತಿರಲಿಲ್ಲ. ಅವರ ಕಷ್ಟಗಳನ್ನು ನೋಡಿ ನಾನು ಏನೂ ಕೇಳುತ್ತಿರಲಿಲ್ಲ. ಒಂದೆರಡು ಸಲ ಬಂದು ಹೋಗುವಷ್ಟರಲ್ಲಿ ನಾನು ಗರ್ಭಿಣಿ ಆದೆ.

ಈಗ ಅತ್ತೆ ಮುಂಜಾನೆಯ ಎಲ್ಲ ಕೆಲಸ ಕಾರ್ಯಗಳನ್ನು ಮಾಡಿಸಿಕೊಂಡು ತಿನ್ನಲು, ಕುಡಿಯಲು ಏನನ್ನೂ ಕೊಡದೆ ದನ ಕಾಯಲು

ಹೊಲದ ಕಡೆಗೆ ಹೋಗಲು ಹೇಳುತ್ತಿದ್ದರು. ನನ್ನ ತೊಂದರೆಯನ್ನು ಯಾರ ಮುಂದೆಯೂ ಹೇಳಲು ಆಗುತ್ತಿರಲಿಲ್ಲ. ಹೊಟ್ಟೆ ನಿಂತ ಮೇಲೆ ಹಸಿವು ಎರಡು ಪಟ್ಟು ಹೆಚ್ಚಾಯಿತು. ನೋಡಲು ಸುಂದರವಾಗಿದ್ದರಿಂದ ರಾತ್ರಿಯೆಲ್ಲ ಗಂಡನ ಕಾಟ. ಮಲಗಲೂ ಬಿಡುತ್ತಿರಲಿಲ್ಲ. ಬೆಳಕಾದರೆ ಅತ್ತೆಯ ಕಾಟ. ದನ ಕಾಯಲು ಪ್ರಾರಂಭಿಸಿದ ಮೇಲೆ ಒಂದು ಲಾಭವಾಯಿತು. ಅದೆಂದರೆ ಗಿಡಗಂಟೆಗಳಲ್ಲಿ ಆದ ಕಾರೆ, ಬಾರಿ, ಹುಣಸೆ ಹಣ್ಣುಗಳನ್ನು ತಿನ್ನತೊಡಗಿದೆ. ಪುರುಷರು ಹತ್ತುವಂತೆ ಗಿಡಗಳನ್ನು ಸರಸರನೆ ಏರಲು ಕಲಿತೆ. ಗಿಡದ ತುದಿಗೆ ಹಣ್ಣಿದ್ದರೂ ಅದನ್ನು ಹರಿದು ತಿನ್ನಲು ಕಲಿತೆ. ನನ್ನ ಗತಿಯನ್ನು ಕಂಡ ಒಂದು ಮುದುಕಿ ಏನೆಂದು ಕೇಳಿದಳು. ಎಲ್ಲವನ್ನೂ ಹೇಳಿ ಜೋರಾಗಿ ಅತ್ತು ಬಿಟ್ಟೆ. ನನಗೆ ಇದನ್ನು ತಾಳಲು ಆಗುವುದಿಲ್ಲ. ಸಾಯಬೇಕೆಂದು ಹೇಳಿದೆ. ಮರುದಿನದಿಂದ ಮುದುಕಿ ಹೊಲದ ಕಡೆಗೆ ಬರುವಾಗ ರೊಟ್ಟಿ, ಪಲ್ಲೆ, ನುಚ್ಚು, ಕಟ್ಟಿಕೊಂಡು ಬಂದು ನನಗೆ ತಿನಿಸಲು ಪ್ರಾರಂಭಿಸಿದಳು. ಕೆಲದಿನ ಹಸಿವಿನಿಂದ ಕಂಗಾಲಾದ ನಾನು ಎಲ್ಲವನ್ನೂ ತಿಂದು ಬೆರಳು ಚೀಪುತ್ತ ನಿಲ್ಲುತ್ತಿದ್ದೆ.

ದನಗಳನ್ನು ಮರಳಿ ಮನೆಗೆ ಹೊಡೆದು ಕೊಂಡು ಹೋದ ಮೇಲೆ ಸ್ನಾನ ಮಾಡುತ್ತಿದ್ದೆ. ಮತ್ತೆ ಹೊಟ್ಟೆ ಹಸಿಯುತ್ತಿತ್ತು. ಮನೆಯಲ್ಲಿ ಅತ್ತೆ ಅಡುಗೆ ಮಾಡಿ ಎಲ್ಲರಿಗೂ ಬಡಿಸುತ್ತಿದ್ದರು. ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ ಎಲ್ಲರಿಗೂ ಇರುತ್ತಿತ್ತು. ನನಗೆ ಎರಡು ತಂಗಳ ರೊಟ್ಟಿ ತಂಗಳ ಪಲ್ಲೆ ಕೊಡುತ್ತಿದ್ದರು. ''ಹೊಟ್ಟೆ ಬಹಳ ಹಸಿದಿದೆ ಇನ್ನೊಂದು ರೊಟ್ಟಿ ಬೇಕೆಂದರೆ, ''ನಿಮ್ಮ ಅಪ್ಪನ ಆಸ್ತಿ ಇದೆ, ಕುಳಿತು ಉಣ್ಣುವಿಯಂತೆ, ಏನು ಕೆಲಸವಿದೆ?'' ಎಂದು ಅಬ್ಬರಿಸುತ್ತಿದ್ದರು.

ಕಣ್ಣು ಒರೆಸಿಕೊಂಡು ಮತ್ತೆ ಕೆಲಸಕ್ಕೆ ಹೋಗುತ್ತಿದ್ದೆ. ರಾತ್ರಿ ಮತ್ತೆ ಗಂಡನ ಜತೆ ಮಲಗಬೇಕು ಅವನಿಗೆ ಎಲ್ಲ ಹೇಳಿ ಅಳುತ್ತಿದ್ದೆ. ಅವನದು ಒಂದೇ ಮಾತು, ''ನಮ್ಮ ಅವ್ವ ಹೇಗೆ ಹೇಳುತ್ತಾಳೆ ಹಾಗೆ ನಡೆಯಬೇಕು. ಆಕೆಯ ವಿರುದ್ಧ ಮಾತಾಡಬೇಡ''.

ಒಂದು ಸಲ ವಿಚಿತ್ರ ಹೊಟ್ಟೆ ಹಸಿದಿದೆ, ಅಂದು ಸಂಜೆಯ ಊಟವನ್ನೇ ಕೊಟ್ಟಿರಲಿಲ್ಲ. ಎಲ್ಲವೂ ಮುಗಿದಿದೆ. ನಾಳೆ ಉಣ್ಣು ಎಂದು ಬೈದರು. ಅಳುತ್ತ ಮಲಗಿದ್ದೆ. ನಾನು ಮಲಗಿದ್ದ ತಟ್ಟಿನ ಕಡೆಗೆ ಗಂಡ ಬಂದು ಎಬ್ಬಿಸತೊಡಗಿದ. ಹೇಳಿದೆ, ''ಇಂದು ನನಗೆ ಊಟವನ್ನೇ ಕೊಟ್ಟಿಲ್ಲ. ಹೊಟ್ಟೆಯಲ್ಲಿ ಬೆಂಕಿ ಬಿದ್ದಂತೆ ಆಗಿದೆ. ಅಡುಗೆ ಮನೆಗೆ ಹೋಗಿ ನೀರು ಕುಡಿದಂತೆ ಮಾಡಿ ಏನಾದರೂ ತಿನ್ನಲು ತೆಗೆದುಕೊಂಡು ಬಾ''. ನನ್ನ ಗಂಡ ಹೇಳಿದ, ''ಅವ್ವಗ ಗೊತ್ತಾದರ ನನ್ನನ್ನೂ ಬೈಯುತ್ತಾಳೆ''.

ನನಗೆ ಅದನ್ನು ಕೇಳಿ ಮೈಯೆಲ್ಲ ಕೆಂಡವಾದಂತಾಯಿತು,'' ಹೋಗು ಹಾಗಾದರೆ ನಿಮ್ಮ ಅಪ್ಪನ ಜೊತೆ ಮಲಗು. ನನ್ನ ಜೊತೆ ಯಾಕೆ? '' ಎಂದೆ ಅದು ಅವನಿಗೆ ಹಿಡಿಸಲಿಲ್ಲ. ಸಿಟ್ಟಿಗೆದ್ದು ಹಗ್ಗವನ್ನು ತೆಗೆದುಕೊಂಡು ಹೊಡೆಯಹತ್ತಿದ. ಹಸಿವಿನಿಂದ ಅರ್ಧ ಸತ್ತಿದ್ದ ನಾನು ಹೊಡೆತ ತಿಂದು ಸತ್ತ ಹೆಣದಂತೆ ಬಿದ್ದು ಬಿಟ್ಟೆ. ಪತಿರಾಯ ತನ್ನ ಕಾಮದ ಅಮಲನ್ನು ನೆಲದ ಮೇಲೆ ಮಲಗಿಸಿ ತೀರಿಸಿಕೊಂಡು ಪಲ್ಲಂಗದ ಮೇಲೆ ಮಲಗಿದ. ಮರುದಿನ ಮತ್ತೆ ಕೆಲಸ, ಮನೆಯವರು ನನ್ನ ಮೈಮೇಲಿನ ಬಾರು ನೋಡಿ ನನ್ನನ್ನೆ ಹಳಿದರು. ದರಿದ್ರ ಹೆಣ್ಣು ಗಂಡನಿಗೆ ಸುಖ ಕೊಡಲು ಬಾರದು ಎಂದರು. ಹೊಟ್ಟೆಯಲ್ಲಿ ಬೆಳೆಯುತ್ತಿರುವ ಕೂಸು, ಇದೆಲ್ಲ ತೊಂದರೆ. ಒಂದು ಸಲ ಮನೆಯವರೆಲ್ಲ ಯಾವುದೋ ವಿಷಯದ ಮೇಲೆ ಚರ್ಚಿಸುತ್ತಿದ್ದರು. ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದೆ. ಹಾಲಿನ ಗಡಿಗೆಯ ಕಡೆಗೆ ಲಕ್ಷ್ಯ ಹೋಯಿತು. ಮೈಯಲ್ಲಿ ದೆವ್ವ ಬಡಿದಂತೆ

ಆಯಿತು. ನೇರವಾಗಿ ಗಡಿಗೆ ಎತ್ತಿ ಗಟಗಟನೆ ಹಾಲು ಕುಡಿದೆ. ಉಳಿದ ಹಾಲಿಗೆ ನೀರು ಕೂಡಿಸಿ ಮೊದಲಿನಷ್ಟೆ ಮಾಡಿ ನನ್ನ ಕೆಲಸದಲ್ಲಿ ತೊಡಗಿದೆ. ಅಂದಿನಿಂದ ಹಾಗೂ ಹೀಗೂ ಮಾಡಿ ಕದ್ದು ತಿನ್ನಲು ಪ್ರಾರಂಭಿಸಿದೆ. ಮನೆಯವರ ಬೈಗಳು ಹೊಡೆತ ಅವಮಾನ ಮುಂದುವರಿದುವು.

ಹಡೆಯುವ ದಿನ ಸಮೀಪಿಸಿದುವು. ನನ್ನನ್ನು ಚೊಚ್ಚಲ ಹೆರಿಗೆಗೆಂದು ತವರು ಮನೆಗೆ ಕಳುಹಿಸಿದರು. ಎಲ್ಲವನ್ನೂ ಈ ಸಲ ಹೇಳಿ ಅತ್ತು ಬಿಟ್ಟೆ. ಮನೆಯವರಿಗೆ ನನ್ನ ಮೇಲೆ ಕರುಣೆ ಬರಲೇ ಇಲ್ಲ. ಅದು ಅತ್ತೆಯ ಮನೆ ಎಂದು ಸುಮ್ಮನಾದರು. ಹೆರಿಗೆ ಆಯಿತು ಗಂಡು ಮಗು ಹುಟ್ಟಿತು. ಬಾಣಂತನ ನಡೆದಿತ್ತು. ಗಂಡನ ಮನೆಯವರು ಬಂದರು. ಮನೆಯಲ್ಲಿ ತೊಂದರೆ ಇದೆ ಎಂದು ಹೇಳಿ ಜೋರುಮಾಡಿ ಕರೆದು ಕೊಂಡು ಹೋದರು. ಈ ಸಲ ನನ್ನ ತಂದೆ ಸಾಲ ಮಾಡಿ ಒಂದು ಗಾದಿ, ಜಮಖಾನೆ ಚಾದರ ಕೊಡಿಸಿದರು. ನನ್ನ ಕಷ್ಟಗಳೆಲ್ಲ ಕಳೆದುವು ಎಂದೆ ಗಂಡನ ಮನೆಗೆ ಮಗನನ್ನು ಹೊತ್ತುಕೊಂಡು , ಗಾದಿ ತೆಗೆದುಕೊಂಡು ಹೋದೆ. ಅತ್ತೆ ಮೊಮ್ಮಗನನ್ನು ಕರೆದುಕೊಂಡು ಸಂತೋಷಪಟ್ಟಳು. ಅನಂತರ ಗಾದಿಯನ್ನು ನೋಡುವೆನೆಂದು ಬಿಚ್ಚಿಸಿದಳು. ಬಿಚ್ಚಿ ನೋಡಿ ಮತ್ತೆ ಕೆಂಡವಾದಳು. ''ಇದು ನನ್ನ ಮಗನಿಗೆ ಬಹಳ ಚಿಕ್ಕದು ಅವನೊಬ್ಬನಿಗೆ ಮಾತ್ರ ಸಾಕಾಗುವುದು'' ಎಂದಳು. ''ಗಂಡ , ನನ್ನ ಮಗ ಗಾದಿಯ ಮೇಲೆ, ನಾನು ಮತ್ತೆ ತಟ್ಟಿನ ಮೇಲೆ'' ಎಂದು ತೀರ್ಪುಕೊಟ್ಟಳು.

ಸಂಸಾರ ಮುಂದುವರಿಯಿತು. ಎರಡನೆಯ ಹೆರಿಗೆ ಆಯಿತು. ಮೊದಲನೆಯ ಹೆರಿಗೆಗೂ ಎರಡನೆಯ ಹೆರಿಗೆಗೂ ಕೇವಲ ಒಂದು ವರ್ಷದ ಅಂತರ. ಮೂರನೆಯ ಹೆರಿಗೆ ನಡೆಯಿತು. ಜೀವನದಲ್ಲಿ ಏನೂ ಬದಲಾವಣೆ ಇಲ್ಲ. ಅದೇ ಉಪವಾಸ, ಅದೇ ಬೈಗಳು, ಅದೇ ತಟ್ಟು ಹೆಚ್ಚಿನದೇನೆಂದರೆ ಮಕ್ಕಳಿಗೆ ಎದೆ ಹಾಲು ಕುಡಿಸುವುದು, ಜೀವನ ಬೇಜಾರಾಗಿತ್ತು ನಾನು ಒಬ್ಬಳೇ ದುಡಿದು ತಿನ್ನುವುದು ಒಳ್ಳೆಯದೆನಿಸುತ್ತಿತ್ತು. ಗಂಡನಿಗೆ ನಾನು ಪಕ್ಕಕ್ಕೆ ಮಲಗುವ ಸೂಳೆ, ಅತ್ತೆಗೆ ಕೆಲಸದ ತೊತ್ತು, ಮನೆಯವರಿಗೆ ಬೇಕಾದದ್ದನ್ನು ಅಡುಗೆ ಮಾಡುವ ಆಳು, ಮುದ್ದುಮಕ್ಕಳಿಗೆ ಹಾಲು ಹಿಂಡುವ ಆಕಳು, ನನಗೆ? ನನ್ನದು ನನ್ನವರು ಎಂಬುದು ಏನೇನೂ ಇದ್ದಿಲ್ಲ.

ಅಂದು ನನ್ನ ಮೊದಲನೆಯ ಮಗನ ಹುಟ್ಟು ಹಬ್ಬ. ಮನೆಯಲ್ಲಿ ಸಡಗರ. ಸಿಹಿ ಅಡುಗೆ ಮಾಡಿದರು ಎಲ್ಲರೂ ಉಂಡರು. ನನ್ನ ಗಂಡ ಬೇರೆ ಊರಿಂದ ಮರಳಿದ ಅವನಿಗೂ ತಾಟು ಹಚ್ಚಿದರು. ಮಧ್ಯಾಹ್ನ ಮೂರು ಗಂಟೆಯಾದರೂ ನನಗೆ ಚಹ ಇಲ್ಲ. ಊಟವಿಲ್ಲ, ಹೊಟ್ಟೆ ವಿಪರೀತ ಹಸಿದಿತ್ತು, ಗಂಡನು ನನ್ನನ್ನೂ ಏನೂ ಕೇಳದೇ ಊಟಕ್ಕೆ ಕುಳಿತನು ಅಡುಗೆ ಮುಗಿಯಿತು. ಏನೂ ಉಳಿದಿಲ್ಲ ಎನ್ನುವ ಹಂಚಿಕೆ ನನ್ನ ಅತ್ತೆಯದು ಅದು ನನಗೆ ಗೊತ್ತಾಯಿತು. ಹೆಚ್ಚಿನ ಅಡುಗೆಯನ್ನು ಮಗ್ಗುಲ ಮನೆಗಳಿಗೆ ಹಂಚಿಬಿಟ್ಟರು. ನನ್ನ ಮಗನ ಹುಟ್ಟು ಹಬ್ಬ, ನಾನು ಉಪವಾಸ. ಎಲ್ಲರೂ ಸಂತೋಷದಲ್ಲಿದ್ದರು. ಮೂರನೆಯ ಮಗ ಇನ್ನೂ ಮೊಲೆ ಉಣ್ಣುತ್ತಿತ್ತು. ಅದಕ್ಕೂ ನನ್ನಂತೆ ಹಸಿವು ಜಾಸ್ತಿ ಮೊಲೆ ಗೀರುತ್ತಿತ್ತು. ನಾನು ಅಳುತ್ತ ಕುಳಿತಿದ್ದೆ. ನನ್ನ ಗಂಡ ನನ್ನನ್ನು ನೋಡಿದ. ಆದರೆ ನೋಡದವನಂತೆ ನಟಿಸಿ ಊಟಕ್ಕೆ ಕುಳಿತು ಬಿಟ್ಟ. ನನಗೆ ಅವನನ್ನು ನೋಡಿ ಹೇಸಿಕೆ ಅನಿಸಿತು. ತಲೆ ತಿರುಗಿದಂತಾಯಿತು. ಕೋಪ ಮಿತಿ ಮೀರಿತು ಚೀರಿ ಬಿಟ್ಟೆ ''ನೀನೊಂದು ಗಂಡುಸಾಗಿದ್ದರೆ ಇಂದು ನನ್ನಂತೆ ಉಪವಾಸ ಮಾಡು ಮಗ ಹುಟ್ಟಲು ನಾವಿಬ್ಬರೂ ಕಾರಣ. ಅವ್ವ ಉಪವಾಸ ಮಾಡಿ ಅಪ್ಪ ಉಂಡರೆ ಸರಿ ಕಾಣದು. ನೀನು

ಬಾಯಿಯಲ್ಲಿ ಒಂದು ತುತ್ತು ಹಾಕಿದರೆ ದೇವರ ಆಣೆ. ನನ್ನನ್ನು ನೋಡಿಯೂ ನೋಡದಂತೆ ಕುಳಿತಿರುವೆ ನಿಮ್ಮ ಅವ್ವನಿಗೆ ಹೇಳು ನನಗೂ ಊಟ ಕೊಡಲಿ ಇಲ್ಲವಾದರೆ ಇಬ್ಬರೂ ಉಪವಾಸ ಮಾಡೋಣ''.

ಇದು ವಿಪರೀತವಾಯಿತು. ದೇವರ ಆಣೆ ಹಾಕಿದ್ದರಿಂದ ಗಂಡನಿಗೆ ಒಂದು ತುತ್ತನ್ನೂ ಬಾಯಿಯಲ್ಲಿ ಇಡಲು ಆಗುವುದಿಲ್ಲ. ಅತ್ತೆಗೂ ದಿಗಿಲು ಬಡಿದಂತಾಯಿತು. ಹಸಿದು ಬಂದ ಮಗನು ಊಟವಿಲ್ಲದೆ ಕೂಡ್ರಬೇಕಾಯಿತು. ಆಣೆ ತೆಗೆದು ಬಿಡು ಅವನು ಊಟ ಮಾಡಲಿ ಎಂದು ಚೀರಿದಳು. ನಾನು ಆಣೆ ತೆಗೆಯುವುದಿಲ್ಲ ಎಂದೆ. ಸಿಟ್ಟಿಗೆದ್ದ ಅವರಿಬ್ಬರೂ ಹಗ್ಗ ಬಡಿಗೆ ತಂದು ನನ್ನನ್ನು ಥಳಿಸಹತ್ತಿದರು. ಅತ್ತೆ ಚೀರಾಡಿದ ಅವರು ಹೊಡೆಯುವುದನ್ನು ಬಿಡಲಿಲ್ಲ. ''ನಾನು ಸತ್ತರೂ ಆಣೆ ತೆಗೆಯುವುದಿಲ್ಲ''ವೆಂದೆ. ನನ್ನ ಮಕ್ಕಳೂ ಅಳಹತ್ತಿದರು ಓಣಿಯ ಹೆಂಗಸರು ಚೀರಾಡುವ ಧ್ವನಿ ಕೇಳಿ ಬಂದರು. ಎಲ್ಲವನ್ನೂ ನೋಡಿದರು. ಅತ್ತೆಗೂ ಗಂಡನಿಗೂ ಬೈದು ಹೋದರು. ''ಸೊಸೆಯನ್ನು ಹೇಗೆ ಇಟ್ಟುಕೊಳ್ಳಬೇಕು ಎಂಬುದು ನನಗೆ ನೀವೇನು ಕಲಿಸಬೇಕಿಲ್ಲ'' ಎಂದು ನನ್ನ ಅತ್ತೆ ಅವರನ್ನು ಓಡಿಸಿದರು. ನನ್ನ ಸಂಗಡ ನಮ್ಮ ಮಾವನವರೂ ಅಳುತ್ತ ಕುಳಿತಿದ್ದರು. ಸಂಜೆ ಆದರೂ ''ನಾನು ಆಣೆ ತೆಗೆಯುವುದಿಲ್ಲ'' ಎಂದೆ.

ಕೊನೆಗೆ ನನ್ನನ್ನೂ ನನ್ನ ಮಕ್ಕಳನ್ನೂ ಮನೆ ಬಿಟ್ಟು ಹೊರ ಹಾಕಿದರು. ನಾನು ನನ್ನ ಮಕ್ಕಳನ್ನು ಕರೆದುಕೊಂಡು ಅಳುತ್ತ ರೇಲ್ವೆ ಸ್ಟೇಶನ್ನಿಗೆ ಬಂದೆ. ಅಲ್ಲಿ ಒಂದು ಟ್ರೇನು ಬಂದಿತು. ಅದನ್ನು ಹತ್ತಿ ತಾಯಿಯ ಮನೆಗೆ ಬಂದೆ. ಮಕ್ಕಳೂ ನಾನು ಊಟ ಮಾಡಿ ಮಲಗಿದೆವು. ಮನೆಯವರು ಸುಮ್ಮನಿದ್ದರು. ನನ್ನ ಅಣ್ಣ ಹೇಳಿದ, ''ನೀನು ತಪ್ಪು ಮಾಡಿದೆ. ಗಂಡನ ಮನೆ ಬಿಟ್ಟು ಬರಬಾರದಿತ್ತು'' ಉಳಿದವರು ಸುಮ್ಮನಿದ್ದರು ನಾನು ದುಃಖ ತಡೆಯಲಾರದೆ ಹೇಳಿದೆ. ''ಇನ್ನು ನನ್ನ ಗಂಡನ ಮನೆಗೆ ನಾನು ಹೋಗುವುದಿಲ್ಲ. ಇಲ್ಲಿಯೇ ಕೂಲಿಮಾಡಿ ಮಕ್ಕಳನ್ನು ಪೋಷಿಸುವೆ. ನನಗೆ ಕೇವಲ ರಾತ್ರಿ ಹೊತ್ತು ಮಲಗಲು ಒಂದು ಗೇಣು ಸ್ಥಳ ಕೊಟ್ಟರೆ ಸಾಕೆಂದೆ.''

ನನ್ನ ಬರವು ನನ್ನ ಅಣ್ಣಂದಿರ ಹೆಂಡರಿಗೆ ಸರಿಕಾಣಲಿಲ್ಲ. ಒಂದು ವಾರ ಕಳೆಯಿತು. ಗಂಡನ ಮನೆಯವರು ಬರಲಿಲ್ಲ. ತವರು ಮನೆಯವರು ಮಾತಾಡಲಿಲ್ಲ ಜೀವನವೇ ಬೇಡ ಅನಿಸಿತು.

ಒಮ್ಮೆ ನನ್ನ ತಾಯಿ ಎರಡು ರೊಟ್ಟಿ ಪಲ್ಲೆ ಹಚ್ಚಿ ತಿನ್ನಲು ಕೊಟ್ಟಳು ಅರ್ಧ ರೊಟ್ಟಿ ತಿಂದಿದ್ದೆ ನನ್ನೊಡನೆ ನನ್ನ ಮಗಳೂ ತಿನ್ನುತ್ತ ಕುಳಿತ್ತಿದ್ದಳು. ಅಷ್ಟರಲ್ಲಿ ಅಣ್ಣನ ಹೆಂಡತಿ ತನ್ನ ಮಗನ ಕಳುಹಿಸಿದಳು. ಆ ಹುಡುಗ ತಾಯಿ ಹೇಳಿದಂತೆ ಬಂದು ನನ್ನ ಕೈಯಲ್ಲಿದ್ದ ರೊಟ್ಟಿಯನ್ನು ಕಸಿದುಕೊಂಡು ಹೋದ. ಅಣ್ಣನ ಹೆಂಡತಿ ಹೇಳಿದಳು, ''ನಿನ್ನ ಗಂಡನ ಮನಿ ಜೋಳಾ ತಂದು ಇಡು, ಅನಂತರ ರೊಟ್ಟಿ ತಿನ್ನು ಇಲ್ಲಿ ಪುಕ್ಕಟ ತಿನ್ನಾಕ ಬಂದಿರುವೇನು? ಅಳುವುದನ್ನು ಬಿಟ್ಟು ನನಗೆ ಬೇರೆ ದಾರಿ ಇದ್ದಿಲ್ಲ ಜೀವದಿಂದ ಇರಲೇ ಬಾರದೆಂದು ನಿರ್ಣಯಿಸಿದೆ.

ನನ್ನ ಮೂವರು ಮಕ್ಕಳನ್ನು ನನ್ನ ತಾಯಿಗೆ ಕೊಟ್ಟು ಅವಳಿಗೆ ನಮಸ್ಕರಿಸಿದೆ. ''ನನಗೆ ತವರು ಮನೆಯೂ ಇಲ್ಲದಂತೆ ಆಯಿತು. ದೇವರ ಮನೆಯೊಂದೇ ಉಳಿದಿದೆ'' ಎಂದು ಹೇಳಿ ಹೊರಟು ಬಿಟ್ಟೆ. ತಾಯಿ ''ಬೇಡ ಬೇಡ'' ಎಂದು ಹೇಳಿದಳು. ಆದರೆ ನನ್ನ ದುಃಖಕ್ಕೆ ಅದೊಂದೇ ದಾರಿ ಎನಿಸಿತು. ನೇರವಾಗಿ ಬಸ್ ಸ್ಟಾಂಡಿಗೆ ಬಂದು ಒಂದು ಬಸ್ಸನ್ನು ಹತ್ತಿದೆ. ಆ ಬಸ್ಸು ನಾರಾಯಣಪುರ ಆಣೆಕಟ್ಟಿಗೆ ಹೊರಟಿತ್ತು ಊರು ಬಂದಿತು. ಬಸ್ಸು ಇಳಿದು ಒಂದು ಕಡೆ ನಿಂತು ಡ್ಯಾಮ್ ಯಾವ ಕಡೆಗೆ ಇದೆ ಕೇಳಿ ತಿಳಿದುಕೊಂಡೆ ಸಂಜೆ ಆದೊಡನೆ ಆ ಕಡೆ

ಹಜ್ಜೆ ಹಾಕಿದೆ ಯಾರೂ ಕಾಣಲಿಲ್ಲ. ಕಚ್ಚೆ ಹಾಕಿ ನೀರಿನಲ್ಲಿ ಜಗಿಯಲು ಸಿದ್ಧಳಾದೆ. ಅಷ್ಟರಲ್ಲಿ ಯಾರೋ ಬಂದು ನನ್ನನ್ನು ಹಿಡಿದರು. ಸಾಯಲು ಸಿದ್ಧಳಾದ ನನಗೆ ಗಾಬರಿ ಆಯಿತು. ಅವರು ಕೇಳಿದರು ಯಾರಮ್ಮಾ ನೀನು''?

''ನಾನು ಹೇಳಿದೆ ಜೀವನ ಬೇಸರವಾದ ಒಬ್ಬ ಹೆಣ್ಣುಮಗಳು. ಹೆಸರು ಗಿಸರು ಕೇಳಬೇಡಿರಿ''.

ಅವರು ಹೇಳಿದರು ''ನಾನು ಇಲ್ಲಿಯ ಇಂಜನಿಯರ್, ನಿನಗೆ ಸಾಯಲು ಬಿಡುವುದಿಲ್ಲ ಇಲ್ಲಿಯೇ ಕೆಲಸಕ್ಕೆ ತೆಗೆದುಕೊಳ್ಳುವೆ''.

''ನನಗೆ ಯಾರೂ ಇಲ್ಲಾ ನನ್ನನ್ನು ಸಾಯಲು ಬಿಡಿರಿ'' ಎಂದು ಅಳಹತ್ತಿದೆ ಅಷ್ಟರಲ್ಲಿ ಜನ ಕೂಡಿದರು ಮುಖ ಮುಚ್ಚಿಕೊಂಡು ಕುಳಿತೆ. ನನ್ನ ಹಣೆಬರಹಕ್ಕೆ ಸಾವೂ ಸಿಗವಲ್ಲದೆಂದು ದುಃಖಿಸಿದೆ. ಇಲ್ಲಿಯವರೆಗೆ ತುಣುಕು ರೊಟ್ಟಿ, ಚಮಚೆ ಚಹಾ ಎಂದು ಹಲಬುತ್ತಿದ್ದವಳಿಗೆ ಸಾವೂ ಸಿಗದಾಯಿತು. ನಿಂತವರೆಲ್ಲರೂ ಬೈಯುತ್ತಿದ್ದರು. ಬುದ್ಧಿ ಹೇಳಹತ್ತಿದರು. ಆದರೆ ಅವರು ಮಾತು ನನ್ನ ಕಿವಿಯೊಳಗೆ ಸೇರುತ್ತಲೇ ಇರಲಿಲ್ಲ. ''ಮಗಳೆ'' ಎಂಬ ನನ್ನ ತಾಯಿಯ ಧ್ವನಿ ಕಿವಿ ಸೇರಿತು ಕಣ್ಣು ತೆಗೆದು ನೋಡಿದೆ ನನ್ನ ತಾಯಿ ನನ್ನ ಮೂರು ಮಕ್ಕಳನ್ನು ಕರೆದುಕೊಂಡು ಬಂದಿದ್ದಳು. ನಾನು ಗಾಬರಿ ಆದೆ ನನ್ನ ದೊಡ್ಡ ಮಗ ಓಡುತ್ತ ಬಂದು ಅಪ್ಪಿಕೊಂಡ , ಉಳಿದೆರಡು ಮಕ್ಕಳೂ ಬಂದು ಮೇಲೆ ಬಿದ್ದುವು, ತಾಯಿ ಬಂದು ಅಳುತ್ತ ಕುಳಿತಳು. ನನ್ನ ದೊಡ್ಡಮಗ ಹೇಳಿದ, ''ಯವ್ವ ನೀ ಒಬ್ಬಳಯಾಕ ಸಾಯಿತಿ. ನಮ್ಮನ್ನು ಮೊದಲು ನೀರಿಗೆ ಒಗಿ. ಆಮೇಲೆ ನೀನೂ ಜಗಿ'' ಅಳಹತ್ತಿದ. ನಿಂತಿದ್ದ ಜನರಲ್ಲಿ ಕೆಲವರು ದುಃಖಿಸಿದರು ದೇವರನ್ನು ಬೈಯ್ದರು. ನನ್ನ ಮೂವರು ಮಕ್ಕಳನ್ನು ನೋಡಿ ಮರುಗಿದರು. ಕೊನೆಗೆ ಜೋರು ಮಾಡಿ ಬಸ್ ಸ್ಟಾಂಡಿಗೆ ಕರೆತಂದರು. ನಮ್ಮ ಊರಿನ ಟಿಕೆಟ್ಟು ತೆಗೆಸಿ ಬಸ್ಸಿನಲ್ಲಿ ಕೂಡ್ರಿಸಿ ಕಂಡಕ್ಟರನಿಗೆ ಹೇಳಿ ಹೋದರು.

ನನ್ನ ತಾಯಿ ನಮ್ಮನ್ನೆಲ್ಲ ಕರೆದು ಕೊಂಡು ಮನೆಗೆ ಬಂದಳು. ಅತ್ತು ಅತ್ತು ದಣಿದಿದ್ದೆವು. ಹಾಗೆಯೇ ಮಲಗಿದೆವು ಮರು ದಿನ ಎದ್ದು ಮುಖ ತೊಳೆಯುವದರಲ್ಲಿ ನನ್ನ ಅಣ್ಣ ಬಂದು ಬೈಯತೊಡಗಿದ, ''ನೀನು ನಿನ್ನ ಹೊಟ್ಟೆಗೆ ದುಡಿಯಬೇಕು, ಕೈಲಾದರೆ ಕೂಲಿ ನಾಲಿ ಮಾಡು, ಇಲ್ಲದೆ ಹೋದರೆ ಸೂಳಿತನ ಮಾಡು. ನಮಗೆ ನಿನ್ನ ಹಾಗೂ ಮಕ್ಕಳ ಹೊಟ್ಟೆಗೆ ಹಾಕುವದಾಗುವುದಿಲ್ಲ. ಇಲ್ಲವಾದರೆ ನಿನ್ನ ಗಂಡನ ಮನೆಗೆ ಹೋಗು''.

ನನಗಂತೂ ಜೀವನ ರೋಸಿ ಹೋಗಿತ್ತು ತವರು ಮನೆ-ಗಂಡನ ಮನೆಗಳ ಸುಖ ಸವಿದು ಹಳಸಿತ್ತು. ಅಣ್ಣನೇ ದಾರಿ ತೋರಿದಂತಾಯಿತು. ನೋಡಲು ನಾನು ಇನ್ನೂ ಸುಂದರವಾಗಿದ್ದೆ. ಹಗಲು ಅಷ್ಟಿಷ್ಟು ಸಿಂಗರಿಸಿಕೊಂಡು ಸೂಳೆಯರು ವಾಸಿಸುತ್ತಿದ್ದ ಪ್ರದೇಶಕ್ಕೆ ಹೋಗಿ ಬರಹತ್ತಿದೆ. ಒಂದೆರಡು ದಿನಗಳಲ್ಲಿ ಕೆಲವು ಸೂಳೆಯರ ಪರಿಚಯವಾಯಿತು. ಅವರೊಡನೆ ಮಾತನಾಡಿ ನನ್ನ ಇಂಗಿತ ತಿಳಿಸಿದೆ. ಒಂದು ದಿನ ಆ ಕೇರಿಯಿಂದ ಮರಳಿ ಮನೆಗೆ ಬರುತ್ತಿರುವಾಗ ಓರ್ವ ವ್ಯಕ್ತಿ ನನ್ನನ್ನು ಮಾತಾಡಿಸಿದ. ನಾನು ಹುಡಿಗೆ ಆಗಿದ್ದಾಗ ಆತ ನನ್ನನ್ನು ಒಲಿಸಿಕೊಳ್ಳಲು ಓಡಾಡುತ್ತಿದ್ದ. ಆಗ ನಾನು ನನ್ನ ಮನೆತನ ಮರ್ಯಾದೆಗಳ ಬಗ್ಗೆ ವಿಚಾರಿಸುತ್ತಿದ್ದೆ. ಈಗ ಅವನಿಗೆ ನನ್ನ ಪರಿಸ್ಥಿತಿಯ ಬಗ್ಗೆ ತಿಳಿದಿತ್ತು. ನಾನು ಅವನೊಡನೆ ಇರಲು ಸಿದ್ಧವಾಗುವೆನೆಂದು ಅವನು ಲೆಕ್ಕ ಹಾಕಿದ್ದ. ನೇರವಾಗಿ ಕೇಳಿ ಬಿಟ್ಟೆ, ''ನಾನು ಅವನೊಡನೆ ಇದ್ದರೆ ನನ್ನನ್ನು ಸಂಪೂರ್ಣವಾಗಿ ಜೋಪಾನ ಮಾಡುವನೋ ಇಲ್ಲವೋ'', ಅವನು ಒಪ್ಪಿದ. ತತ್‌ಕ್ಷಣವೇ ತನ್ನ ಸ್ಕೂಟರ ಮೇಲೆ ಕೂಡ್ರಿಸಿಕೊಂಡು ಅವನಿಗೆ ತಿಳಿದಿದ್ದ ಸೂಳೆಯ ಮನೆಗೆ ಹೋದ. ಆಕೆ

ನನ್ನನ್ನು ಆದರದಿಂದ ಕರೆದಳು. ಇಬ್ಬರಿಗೂ ಚಹ ಮಾಡಿಕೊಟ್ಟಳು ತಿನ್ನಲು ಮಿರ್ಚಿ ತರಿಸಿದಳು. ಮೂವರು ಮಾತಾಡುತ್ತ ಮಿರ್ಚಿ ತಿಂದು ಚಹ ಕುಡಿದೆವು. ಯಾರ ಅಂಜಿಕೆ ಇಲ್ಲದೆ, ಕಾಲು ಚಾಚಿ ಕುಳಿತು ನಾನು ಚಹಾ ಕುಡಿದದ್ದು ಅದೇ ಮೊದಲು. ಆಕೆ ಸ್ವಲ್ಪ ಹೊರಗೆ ಹೋಗಿ ಬರುವೆನೆಂದು ಹೇಳಿ ನನ್ನನ್ನು ತನ್ನ ಮಂಚದ ಮೇಲೆ ಕೂಡ್ರಲು ಹೇಳಿ ಹೋದಳು. ನನ್ನನ್ನು ಕರೆದುಕೊಂಡು ಬಂದವನು ಬಾಗಿಲು ಮುಚ್ಚಿದ. ಮಂಚದ ಮೇಲೆ ಅಂಜಿಕೆ ಇಲ್ಲದೆ ಕೂತದ್ದು ಅದೇ ಮೊದಲ ದಿನ.

ನಾವು ಆ ಮನೆಯ ಕದ ತೆರೆದಾಗ ಸಂಜೆ ೬ ಗಂಟೆ. ಮನೆಯಲ್ಲಿ ಸುಮಾರು ಐದು ಗಂಟೆ ಇದ್ದೆವು. ಮನೆಗೆ ಹೋಗುವಾಗ ಅವನು ಕೈತುಂಬ ನೋಟು ಕೊಟ್ಟ. ಪ್ರತಿ ದಿನ ಮಧ್ಯಾಹ್ನ ಬರಲು ಹೇಳಿದ ಆಗ ಮಕ್ಕಳೆಲ್ಲ ಶಾಲೆಗೆ ಹೋಗಿರುತ್ತಿದ್ದುವು. ಮನೆಯಲ್ಲಿ ಕೂಲಿ ಮಾಡುವೆನೆಂದು ಹೇಳಿ ಹೊರಡುತ್ತೇನೆ. ಸಂಜೆಯವರೆಗೆ ಅವನೊಡನೆ ಕಾಲ ಕಳೆದು ಮನೆಗೆ ಬರುತ್ತೇನೆ. ಅವನನ್ನು ಸಂಪೂರ್ಣವಾಗಿ ನಂಬಿರುವೆ. ಬೇರೆಯವರು ಕೇಳಿದರೂ ಬೇಡ ಅಂದಿರುವೆ. ಒಂದೇ ವ್ಯಕ್ತಿಗೆ ಸೆರಗು ಹಾಸಬೇಕೆಂದು ಓರ್ವ ಮುದಿ ಸೂಳೆ ಬುದ್ಧಿ ಹೇಳಿರುವಳು. ಕಾರಣ ನಿಯತ್ತಿನಿಂದ ಬದುಕಿರುವೆ ನಾನು ಸೂಳೆತನ ಮಾಡುತ್ತಿರುವೆನೆಂಬುದು ನನ್ನ ಅಣ್ಣನಿಗೆ ತಿಳಿದಿದೆ. ಮನೆಯವರಿಗೂ ಗೊತ್ತಾಗಿದೆ. ನನಗೇನೂ ಹೆದರಿಕೆ ಇಲ್ಲ. ಗರತಿ ಆಗಿದ್ದಾಗಿನಕಿಂತ ಈಗಿನ ಸುಖ ಒಳ್ಳೆಯದೆನಿಸಿದೆ. ಗರತಿ ಆಗಿ ಗೌರವ ಪಡೆಯಬೇಕು ಸೂಳೆಯಾಗಿ ಸುಖ ಉಣಬೇಕು ಎಂಬುದು ಒಂದು ಗಾದೆ. ಇದು ಸೂಳೆಯರ ಕೇರಿಯಲ್ಲಿ ಪದೆ ಪದೆ ಬಳಸಲ್ಪಡುವುದು.

ನಾನೇ ಸೂಳೆ ಆದೆನೋ? ಅಥವಾ ನನ್ನ ಮನೆಯವರೆಲ್ಲ ಕೂಡಿ ನನ್ನನ್ನು ಸೂಳೆತನಕ್ಕೆ ಇಳಿಸಿದರೋ?

ಈಗ ಬಟ್ಟೆ ಹೊಲಿಯಲು ಕಲಿತಿರುವೆ. ಒಂದು ಹೊಲಿಯುವ ಯಂತ್ರ ಖರೀದಿಸಿರುವೆ. ಅದರ ಗಳಿಕೆ ಚೆನ್ನಾಗಿದೆ. ಸೂಳೆತನ ಬೇಡ ಅನಿಸುತ್ತದೆ. ಗರತಿಯಾಗಿ ಉಳಿಯಬೇಕಿತ್ತು ಅನಿಸುತ್ತದೆ. ನನ್ನ ಗೆಳತಿಯರ ಬಾಳೂ ಹೆಚ್ಚು ಕಡಿಮೆ ಹೀಗೆ ಇದೆ. ಯಾರಾದರೊಬ್ಬರು ತಮ್ಮ ಬಾಳನ್ನು ನೆನೆಸಿಕೊಂಡು ದುಃಖಿಸತೊಡಗಿದರೆ ಉಳಿದವರೆಲ್ಲ ಸೇರಿ ಆಕೆಗೆ ಧೈರ್ಯ ಹೇಳುತ್ತೇವೆ. ನಮ್ಮ ಕೈಯಲ್ಲಿ ಏನೂ ಇಲ್ಲ. ಅದು ಸೆಟಿಗೆವ್ವ ಬರೆದದ್ದು. ನಾವು ಬೇಡವೆಂದರೂ ಅದನ್ನು ತಡೆಯಲಾಗುವುದಿಲ್ಲ ಎಂದು ಸಾಂತ್ವನ ಮಾಡಿ ಬಿಡುತ್ತೇವೆ. ಒಬ್ಬರಿಗೊಬ್ಬರು ಜೀವ ಕೊಡಲು ಸಹ ಹಿಂಜರಿಯುವುದಿಲ್ಲ. ಯಾರಿಗೇ ಇರಲಿ ಸಹಾಯ ಮಾಡುತ್ತೇವೆ ನಮ್ಮಲ್ಲಿಯ ರೊಟ್ಟಿಯನ್ನು ಹಂಚಿಕೊಂಡು ತಿನ್ನುತ್ತೇವೆ. ಇಟ್ಟು ಕೊಂಡವನು ಮಾಡಿಕೊಂಡವನಿಗಿಂತ ಮೇಲು ಅನಿಸುತ್ತದೆ. ಒಟ್ಟಿನಲ್ಲಿ ನಾನು ಸೂಳೆಯಾದೆ.

ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ
ಮನದ ಮುಂದಣ ಆಶೆಯೇ ಮಾಯೆಕಾಣಾ ಗುಹೇಶ್ವರ!

''ಹಾದರವ ಮಾಡಿದಾಕೆಗೆ ಮರಣದಂಡನೆಯೆ
ಶಿಕ್ಷೆ-- ಹಿಡಿಹೊಡೆ ಕಲ್ಲು!'' ಕೇಳಿತು ಶರೀರೋಕ್ತಿ;
''ಹಾದರವಿದೂರ ಬೀರಲಿ ಮೊದಲ ಕೂರ್ಗಣೆಯ?''
ಹಿಡಿದ ಕಲ್ಗಳು ಕೆಡೆದುವು ನೆಲಕ್ಕೆ ಅತ್ರಿಸೂನು

ನೀವು ಮಧುಮೇಹ ರೋಗಿಯೆ?

ಗೋಪಾಲ ಆಶ್ರಿತ
ಜವಾಹರ ನಗರ
ರಾಯಚೂರು

ಲಕ್ಷಾಂತರ ಭಾರತೀಯರಿಗೆ ತಮಗೆ ಈ ರೋಗವಿದೆಂದು ತಿಳಿದಿಲ್ಲ. ಆದ್ದರಿಂದ ಅದರ ಲಕ್ಷಣಗಳ ಬಗ್ಗೆ ಎಚ್ಚರದಿಂದಿರಬೇಕು.

ಸುರೇಶ ಮ್ಹಾತ್ರೆಗೆ ತನ್ನ ತೂಕ ಕಡಿಮೆಯಾಗುತ್ತಿರುವುದು, ತನಗೆ ಬಹಳ ದಣಿವಾಗುತ್ತಿರುವುದು ಮತ್ತು ತಾನು ಶೀಘ್ರ ಕೋಪಿಯಾಗುತ್ತಿರುವುದು ಅನೇಕ ಸಲ ಅನಿಸಿದರೂ ಬಹುಶಃ ಒತ್ತಡ ಮತ್ತು ೧೮ಗಂಟೆಯ ನಿರಂತರ ದುಡಿಮೆಯ ಸಮಸ್ಯೆಗಳೇ ಕಾರಣವೆಂದು ಅವನು ಕಡೆಗಣಿಸಿದನು. ಮುಂದೆ ಈ ಮುಂಬೈ ಡಾಕ್ಟರನಿಗೆ ಅತಿಯಾಗಿ ನೀರಡಿಕೆಯಾಗಹತ್ತಿತು. ಎಷ್ಟೋ ಗ್ಲಾಸು ನೀರು ಮತ್ತು ಹಣ್ಣಿನ ರಸ ಕುಡಿದು ದಾಹ ಇಂಗಿಸಿಕೊಳ್ಳ ಹತ್ತಿದನು. ಆದರೆ ಯಾವಾಗ ಅವನ ದೃಷ್ಟಿ ಮಂದವಾಗ ಹತ್ತಿತೋ, ಆಗ ಅವನು ಒಬ್ಬ ನೇತ್ರತಜ್ಞನನ್ನು ಭೇಟಿಯಾದನು.

ನೇತ್ರ ತಜ್ಞ ಪರೀಕ್ಷಿಸಿದಾಗ ಮ್ಹಾತ್ರೆಗೆ ಕಣ್ಣುಗಳಿಗೆ --ಮಧುಮೇಹದ ಕಾಯಿಲೆಯಿಂದ ಉಂಟಾಗುವ ಸುಧಾರಿಸಲಾಗದ ಅಕ್ಷಿಪಟಲ ಊನದಿಂದ ಬಹಳಷ್ಟು ಅಪಾಯವಾಗಿತ್ತು. ಲೇಸರ ಚಿಕಿತ್ಸೆ ಪಡೆದಾಗಲೂ ಮ್ಹಾತ್ರೆನ ಒಂದು ಕಣ್ಣು ದೃಷ್ಟಿ ಹೀನವಾಗಿ, ಇನ್ನೊಂದರ ಮೂಲಕ ಸ್ವಲ್ಪ ಮಾತ್ರ ನೋಡಲು ಸಾಧ್ಯವಾಗಿದೆ.

ಸುರೇಶ ಮ್ಹಾತ್ರೆನ ರೋಗ ನಿರ್ಣಯ ಮಾಡುವಲ್ಲಿ ಸಾಕಷ್ಟು ವಿಳಂಬವಾಗಿತ್ತು. ಅಕ್ಷಿಪಟಲ ಊನದಿಂದ ಕುರುಡರಾಗಿರುವ ಮಧುಮೇಹ ರೋಗಿಗಳಲ್ಲಿ ೭೫ % ಜನರು ದೃಷ್ಟಿ ಹೀನರಾಗಬೇಕಿಲ್ಲ. ''ರೋಗಿಗಳು ಮೊದಲೇ ಬಂದರೆ ನಾವು ಅವರ ಕಣ್ಣು ಮತ್ತು ಜೀವಗಳೆರಡನ್ನೂ ಉಳಿಸಲು ಸಾಧ್ಯ'' ವೆಂದು ಮುಂಬಯಿಯ ಜಸಲೋಕ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ Endocrinologist ಸಲಹೆಗಾರನಾಗಿರುವ ಡಾ. ಶೌಕತ ಸದಿಕೊಟ ಅಭಿಪ್ರಾಯ ಪಟ್ಟಿದ್ದಾರೆ.

ಭಾರತದ ೩.೩ ಮಿಲಿಯ ಮಧುಮೇಹ ರೋಗಿಗಳಲ್ಲಿ ೫೦% ಜನರಿಗೆ ತಮಗೆ ಮಧುಮೇಹ ರೋಗವಿದೆಂಬುದು ತಿಳಿದಿರುವದಿಲ್ಲವೆಂದು ತಜ್ಞರ ಅಭಿಪ್ರಾಯ. ಇನ್ನೂ ಹೇಳಬೇಕೆಂದರೆ, ಈ ರೋಗ ಸರ್ವಸಾಮಾನ್ಯವಾಗುತ್ತಲಿದೆಂದು ಮುಂಬಯಿಯ ಎಸ್.ಎಸ್. ರಹೇಜಾ ಆಸ್ಪತ್ರೆ ಮತ್ತು ಅಖಿಲ ಭಾರತ ಮಧುಮೇಹ ಸಂಸ್ಥೆಯಲ್ಲಿ ಗೌರವ ಮಧುಮೇಹರೋಗತಜ್ಞ ಆಗಿರುವ ಡಾ. ಪ್ರದೀಪ. ಜಿ. ತಲವಾಲ್ಕರ ಹೇಳಿದ್ದಾರೆ. ೨೦೨೫ರ ಸಮಯಕ್ಕೆ ಭಾರತದಲ್ಲಿ ೫೭ಮಿಲಿಯ ಮಧುಮೇಹ ರೋಗಿಗಳಿರುತ್ತಾರೆಂದು ವಿಶ್ವ ಆರೋಗ್ಯ ಸಂಸ್ಥೆ (WHO) ಯವರು ಭವಿಷ್ಯ ನುಡಿದಿದ್ದಾರೆ. ''ಆ ಸಮಯಕ್ಕೆ ವಿಶ್ವದ ಪ್ರತಿ ನಾಲ್ಕು ಮಧುಮೇಹ ರೋಗಿಗಳಲ್ಲಿ ಒಬ್ಬ ಭಾರತೀಯನಿರುತ್ತಾನೆ... ನಮ್ಮ ಆಸ್ಪತ್ರೆಗಳಲ್ಲಿ ಸುಮಾರು ೨೦% ಮಧುಮೇಹರೋಗಿಗಳಿರುತ್ತಾರೆ. ಈ ರೋಗದ ಚಿಕಿತ್ಸೆಗಾಗಿ ಎಷ್ಟು ಖರ್ಚು ಮಾಡಲಾಗುತ್ತದೆಂಬುದರ ಬಗ್ಗೆ ಅಂಕಿ ಅಂಶಗಳಿಲ್ಲವಾದರೂ, ಅದು ಬಹಳಷ್ಟಿರಬೇಕು'' ಎಂದು ಚೆನ್ನೈಯ ಮಧುಮೇಹ ಸಂಶೋಧನಾ ಗೌಪ್ಯತೆಯ ದೃಷ್ಟಿಯಿಂದ ಹೆಸರು ಬದಲಿಸಲಾಗಿದೆ. ಕೇಂದ್ರ ಮತ್ತು ಎಂವಿ. ಮಧುಮೇಹ ಆಸ್ಪತ್ರೆಯ ನಿರ್ದೇಶಕ ಡಾ. ಪಿ. ರಾಮಚಂದ್ರನ್ ಹೇಳಿರುವರು.

ರಕ್ತದಲ್ಲಿ ಗ್ಲುಕೋಸಿನ ಪ್ರಮಾಣ ಬಹಳ ಹೆಚ್ಚಾಯಿತೆಂದರೆ ಅದನ್ನು ಮಧುಮೇಹ ರೋಗದ ಸ್ಥಿತಿಯೆನ್ನುತ್ತಾರೆ. ಮದೋಜೀರಕ ಗ್ರಂಥಿಯಲ್ಲಿ ಸಿದ್ಧವಾಗಿರುವ ಇನ್ಸುಲಿನ್ ಎಂಬ ಹಾರ್ಮೋನ್ ರಕ್ತದಲ್ಲಿನ ಗ್ಲುಕೋ[illegible]

ನವೆಂಬರ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಸಂಧ್ಯಾ ಶ್ರೀನಿವಾಸನ್ ಇವರ ಲೇಖನದ ಅನುವಾದ

ಯಾಗಿ ಪರಿವರ್ತಿಸುತ್ತದೆ. ಆದರೆ ಸಾಕಷ್ಟು ಇನ್ಸುಲಿನ್ ತಯಾರಾಗಿದಿದ್ದರೆ ಅಥವಾ ಇದು ಸರಿಯಾಗಿ ಕೆಲಸ ಮಾಡದಿದ್ದರೆ (ಇನ್ಸುಲಿನ್ ತಡೆ) ಗ್ಲುಕೋಸ್ ರಕ್ತದಲ್ಲಿಯೇ ಉಳಿದು ಬಿಡುತ್ತದೆಯಲ್ಲದೆ, ರಕ್ತನಾಳಗಳಿಗೆ, ನರಗಳಿಗೆ ಮತ್ತು ಅಂಗಕಟ್ಟುಗಳಿಗೆ ಅಪಾಯ ಮಾಡುತ್ತದೆ.

ಭಾರತದಲ್ಲಿನ ೫% ಗಿಂತ ಕಡಿಮೆ ಮಧುಮೇಹ ರೋಗಿಗಳಿಗೆ ಹೆಚ್ಚಾಗಿ ಮಕ್ಕಳು ಮತ್ತು ಯುವಕರಲ್ಲಿ --ಇನ್ಸುಲಿನ್ ತಯಾರಿಸುವ ಕೋಶಗಳು ನಾಶಗೊಂಡಿರುತ್ತವೆ. ಈ ರೀತಿ ಬಳಲುವವರಿಗೆ ಒಂದನೇ ತೆರನಾದ ಮಧು ಮೇಹ ರೋಗಿಗಳೆಂದು ಕರೆಯಲಾಗುತ್ತದೆ. ಇಂಥ ರೋಗಿಗಳು ಪ್ರತಿದಿನ ಇನ್ಸುಲಿನ್ ಚುಚ್ಚು ಮದ್ದುಗಳನ್ನು ತೆಗೆದುಕೊಳ್ಳದಿದ್ದರೆ ಸತ್ತು ಹೋಗುತ್ತಾರೆ.

ಆದರೆ ಸುರೇಶಮ್ಹಾತ್ರೆನಂಥ ಬಹುತೇಕ ಮಧುಮೇಹ ರೋಗಿಗಳು ಎರಡನೇ ವರ್ಗದ ಮಧುಮೇಹ ರೋಗದಿಂದ ಬಳಲುತ್ತಾರೆ. ಇಂಥವರಲ್ಲಿ ಇನ್ಸುಲಿನ್ ತಯಾರಾಗುತ್ತದಾದರೂ, ಬಳಕೆ ಮಾಡಿಕೊಂಡು, ಗ್ಲುಕೋಸನ್ನು ಸಂಗ್ರಹಿಸಿಡುವಷ್ಟು ತಯಾರಾಗುವದಿಲ್ಲ. ಮೊದಲು ತಡವಾಗಿ ಕಾಣಿಸಿಕೊಳ್ಳುವ ಮಧುಮೇಹ ಎಂದು ಕರೆಯಲಾಗುತ್ತಿದ್ದ ಈ ಎರಡನೇ ತೆರನಾದ ರೋಗ, ಭಾರತೀಯರಲ್ಲಿ ೪೦ ವರ್ಷ ವಯಸ್ಸಾದ ನಂತರ ಕಾಣಿಸಿಕೊಳ್ಳುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಯುರೋಪಿನ ಜನರಲ್ಲಿ ಇದರ ಪ್ರಮಾಣ ಬಹಳ ಕಡಿಮೆ, ಅಲ್ಲಿ ಇದು ಕಾಣಿಸಿ ಕೊಂಡರೂ ೫೦ ನೇ ವಯಸ್ಸಿನ ನಂತರ.

''ನಿಜಾಂಶವೆಂದರೆ ಭಾರತೀಯರಲ್ಲಿ ಅನುವಂಶಿಯವಾಗಿ ಈ ರೋಗ ಕಾಣಿಸಿಕೊಳ್ಳುತ್ತಿದ್ದಂತಿದೆ' ಎಂದು ಪುಣೆಯ ಕೆ.ಇ.ಎಂ. ಆಸ್ಪತ್ರೆಯಲ್ಲಿ ಮಧುಮೇಹ ಸಂಶೋಧನಾ ಘಟಕದ ನಿರ್ದೇಶಕ ಡಾ. ಸಿ.ಜೆ.ಯಾಗ್ನಿಕ ಹೇಳಿದ್ದಾರೆ.

ಭಾರತದಲ್ಲಿ ಮಧುಮೇಹ ಒಂದು ರೋಗವೆಂದು ಒದು ಸಾವಿರ ವರ್ಷಕ್ಕಿಂತಲೂ ಮೊದಲೇ ಗುರುತಿಸಲಾಯಿತು. ಆಯುರ್ವೇದ ಮೂಲ ಶಾಸ್ತ್ರೀಯ ಗ್ರಂಥಗಳಾದ --ಚರಕ ಸಂಹಿತಾ, ಅಷ್ಟಾಂಗ-ಹೃದಯ ಸಂಹಿತಾ ಮತ್ತು ಸುಶ್ರುತಾ ಸಂಹಿತಾಗಳಲ್ಲಿ ಮಧುಮೇಹದ ಬಗ್ಗೆ ಉಲ್ಲೇಖವಿದೆ ಎಂದು ಭಾರತೀಯ ವಿದ್ಯಾ ಭವನದ ಸ್ವಾಮಿ ಪ್ರಕಾಶ ಆನಂದ ಸಂಶೋಧನಾ ಕೇಂದ್ರದ, ವೈದ್ಯಕೀಯ ಮತ್ತು ಸಂಶೋಧನೆಯ ನಿರ್ದೇಶಕ ಡಾ. ಅಶೋಕ ಬಿ.ವೈದ್ಯ ವಿವರಿಸುತ್ತಾರೆ. ''ಇವುಗಳಲ್ಲಿ ರೋಗದ ಲಕ್ಷಣಗಳು, ಬೇರೆ ಬೇರೆ ತೆರನಾದ ಮಧುಮೇಹ ರೋಗಗಳು ಮತ್ತು ಅವುಗಳ ಚಿಕಿತ್ಸೆ ಬಗ್ಗೆ ಬರೆಯಲಾಗಿದೆ''.

ರಕ್ತದಲ್ಲಿನ ಸಕ್ಕರೆ ಪ್ರಮಾಣ ಮಿತಿಮೀರಿದರೆ ರೋಗಗಳ ಸರಮಾಲೆಯಾಗಿ ಬಿಡುತ್ತದೆ. ಇವುಗಳಲ್ಲಿ ಸುಮಾರು ೭೦% ಮಧುಮೇಹ ರೋಗಿಗಳನ್ನು ಬಲಿತೆಗೆದುಕೊಳ್ಳುವ ಹೃದಯಾಘಾತ ಮತ್ತು ಪಾರ್ಶ್ವವಾಯುಗಳೂ ಇವೆ. ಈ ಮಧುಮೇಹ ರೋಗ ಹೃದಯಾಘಾತದ ಅಪಾಯವನ್ನು ಎರಡರಿಂದ ನಾಲ್ಕು ಪಟ್ಟು ಹೆಚ್ಚಿಸುತ್ತದೆ. ನರಗಳಿಗಾದ ಅಪಾಯ (ಇದಕ್ಕೆ ಪರಧಿಯ ನರ ರೋಗವೆಂದು ಹೆಸರು) ದಿಂದಾಗಿ, ಗಾಯಗಳು ಮತ್ತು ಅಂಟುರೋಗಗಳು ಮಾಯುವುದು ಕಠಿಣ. ಪಾದದಲ್ಲಿನ ಬಹುಕಾಲದ ಹುಣ್ಣುಗಳಿದ್ದಲ್ಲಿ ಪಾದವನ್ನೇ ಕೊಯ್ದು ಹಾಕಬೇಕಾಗುತ್ತದೆ. ಈ ರೀತಿ ಕೊಯ್ದು ಹಾಕಲು, ಭಾರತದಲ್ಲಿ ಮಧುಮೇಹ ರೋಗ ಅತಿ ಸಾಮಾನ್ಯ ಕಾರಣಗಳಲ್ಲೊಂದಾಗಿದೆ

ಅನೇಕ ವರ್ಷಗಳಿಂದ ಈ ಕಾಯಿಲೆಯಿಂದ ಬಳಲಿದಂಥ ರೋಗಿಗಳಲ್ಲಿ ನರ ಹಾಗೂ ನಾಳಗಳಿಗುಂಟಾದ ಅಪಾಯದಿಂದ ಅವರು ನಪುಂಸಕರಾಗುವ ಸಂಭವವುಂಟು. ''ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಿಸುವುದರ ಜೊತೆಗೆ, ಉಳಿದ ಚಿಕಿತ್ಸೆಗಳ ಮೂಲಕ, ಕೆಲವರಾದರೂ ವೀರ್ಯವತ್ತರಾಗಲು ಸಾಧ್ಯ

ವಿದೆ'' ಎಂದು ಪುಣೆಯ ಕೆ.ಇ.ಎಂ. ಆಸ್ಪತ್ರೆಯಲ್ಲಿನ ಮಧುಮೇಹ ರೋಗ ಸಂಶೋಧನಾ ಘಟಕದ ಡಾ. ಕೆ. ಎಂ. ಶೆಲ್ಲಿಕರರ ಅಭಿಪ್ರಾಯ. ಸುರೇಶ ಮ್ಹಾತ್ರೆಗಾದಂತೆ, ಮಧುಮೇಹ ರೋಗ, ಕಣ್ಣಿನ ಹಿಂಭಾಗ ಮತ್ತು ಅಕ್ಷಿಪಟದ ನಾಳಗಳಿಗೆ ಧಕ್ಕೆ ತರಲೂ ಬಹುದು. ನಿಜವೆಂದರೆ, ಅಕ್ಷಿಪಟದ ವ್ಯಾಧಿ ಭಾರತದ ಪಟ್ಟಣದಲ್ಲಿನ ಬಹಳಷ್ಟು ಜನರ ಕುರುಡಿಗೆ ಮುಖ್ಯ ಕಾರಣವಾಗಿದೆ. ದೃಷ್ಟಿ ಹೀನತೆಯನ್ನು ಲೇಸರ ಚಿಕಿತ್ಸೆಯಿಂದ ತಡೆಯಬಹುದಾಗಿದೆಯಾದರೂ, ಮಧುಮೇಹರೋಗದಿಂದ ಬಳಲುವ ಹೊಸ ರೋಗಿಗಳಲ್ಲಿ ೨೦% ಜನರ ಅಕ್ಷಿಪಟಗಳು ಹಾಳಾಗಿರುವುದು ಕಂಡುಬಂದಿದೆ.

ರಕ್ತದಲ್ಲಿನ ಸಕ್ಕರೆ ಪ್ರಮಾಣ ಮಿತಿ ಮೀರಿಕೆಯಿಂದುಂಟಾಗುವ ಅಪಾಯ ಗಂಭೀರ ಪರಿಣಾಮದ್ದಾಗಿರುವುದರಿಂದ, ಅನಾಹುತವನ್ನು ಆದಷ್ಟು ತೀವ್ರ ಗುರುತಿಸಿಕೊಳ್ಳುವುದು ಅಗತ್ಯವಾಗಿದೆ. ಆದರೆ ಇದು ಸುಲಭದ ಕೆಲಸವಲ್ಲ. ''ಮಧುಮೇಹ ರೋಗದ ಅಪಾಯದ ಲಕ್ಷಣಗಳ ಬಗ್ಗೆ ಜನರಿಗೆ ತಿಳಿದಿರುವುದಿಲ್ಲ. ಹೊಸದಾಗಿ ಮಧುಮೇಹ ರೋಗ ಪ್ರಾರಂಭಗೊಂಡಂಥವರಲ್ಲಿ ಕೂಡಾ ೫೦% ನಷ್ಟು ಜನರಿಗೆ ಇದರ ಯಾವುದೇ ಲಕ್ಷಣಗಳು ಕಾಣುವದಿಲ್ಲ'' ವೆಂದು ಡಾ. ರಾಮಚಂದ್ರನ್ ಹೇಳಿದ್ದಾರೆ

ಅನುವಂಶಿಕವಾಗಿ ಮಧುಮೇಹ ಕಾಯಿಲೆ ಬರುವುದು ಒಂದು ಮುಖ್ಯ ಕಾರಣವಾಗಿದೆ. ಡಾ. ರಾಮಚಂದ್ರನ್ ಪ್ರಕಾರ, ಗಂಡ ಮತ್ತು ಹೆಂಡತಿ ಇಬ್ಬರಿಗೂ ಮಧುಮೇಹದ ಕಾಯಿಲೆ ಇದ್ದಿದ್ದರೆ, ಮಕ್ಕಳಲ್ಲಿಯೂ ಇದು ಕಾಣಿಸಿ ಕೊಳ್ಳುವುದು ೬೦% ನಷ್ಟು ಸಾಧ್ಯತೆ ಉಂಟು. ಇದಲ್ಲದೆ ಬೇರೆ ಅಪಾಯಕರ ಅಂಶಗಳೂ ಉಂಟು. ಅದರಲ್ಲಿ ವ್ಯಾಯಾಮದ ಕೊರತೆ ಒಂದು ಮುಖ್ಯ ಕಾರಣ. ವಾರಕ್ಕೆ ಕನಿಷ್ಟ ೪೦ ನಿಮಿಷಗಳ ಕಾಲ ವ್ಯಾಯಾಮ ಮಾಡಿದವರಿಗಿಂತಲೂ ದೈಹಿಕ ಚಟುವಟಿಕೆಯಿಲ್ಲದಂಥಾ ಕೆಲಸದಲ್ಲಿರುವ ೪೦ರಿಂದ ೬೦ ವಯಸ್ಸಿನ ಜನರು ಎರಡನೇ ತೆರನಾದ ಮಧುಮೇಹ ಕಾಯಿಲೆಯಿಂದ ಬಳಲುವ ಸಾಧ್ಯತೆವುಂಟೆಂದು ೧೯೯೬ರಲ್ಲಿ ಫಿನ್ಲ್ಯಾಂಡಿನಲ್ಲಿ ನಡೆಸಲಾದ ಒಂದು ಅಧ್ಯಯನದಿಂದ ತಿಳಿದು ಬಂತು.

ಅಪಾಯದ ಇನ್ನೊಂದು ಕಾರಣ ಬೊಜ್ಜುದೇಹ. ಭಾರತದ ಬಹುತೇಕ ಮಧುಮೇಹ ರೋಗಿಗಳು ದಪ್ಪವಾಗಿಲ್ಲವಾದರೂ, ಒಬ್ಬ ರೋಗಿ ಎಷ್ಟು ಹೆಚ್ಚು ದಪ್ಪಾಗಿರುತ್ತಾನೋ, ಅವನ ದೇಹದ ರಕ್ತದಲ್ಲಿನ ಗ್ಲುಕೋಸನ್ನು ಸರಿಪ್ರಮಾಣದಲ್ಲಿಡಲು ಅಷ್ಟೇ ಹೆಚ್ಚು ಇನ್ಸುಲಿನ್ ಬೇಕಾಗುತ್ತದೆ. ಅಲ್ಲದೆ ಒತ್ತಡದಿಂದಾಗಿ ಅವನ ಮೆದೋಜೀರಕ ಗ್ರಂಥಿ ಸರಿಯಾಗಿ ಕೆಲಸ ಮಾಡದಿರುವ ಸಾಧ್ಯತೆಯೂ ಇರುತ್ತದೆ.

೪೦ ವರ್ಷದ ಪ್ರಣಯ ಜಲಾನ ಎಂಬ ಮುಂಬಯಿಯ ಮಾಧ್ಯಮದ ಅಧಿಕಾರಿಯ ತೂಕ ೯೯ ಕಿಲೊ. ಇದು ಅತಿಯಾದ ತೂಕ. ಹೆಚ್ಚೆಚ್ಚು ದಣಿವು ಮತ್ತು ಪದೇ ಪದೇ ಮೂತ್ರಾಲಯಕ್ಕೆ ಹೋಗುವುದು ಗಂಭೀರ ಸ್ಥಿತಿಯೆನ್ನಿಸಿತು.

ಪ್ರಣಯ ತನಗೆ ಪರಿಚಯವಿದ್ದ ಸಾಮಾನ್ಯ ವೈದ್ಯನ ಪತ್ತಿರ ಹೋದನು. ೬೩೪ರ ಮಟ್ಟದ ಏರಿದ ರಕ್ತದ ಒತ್ತಡ ನೋಡಿ ಗಾಬರಿಗೊಂಡು, ರೋಗಿಯನ್ನು ಡಾ. ಚಂದಲಿಯಾ ಎಂಬ ಮಧುಮೇಹ ರೋಗ ತಜ್ಞನ ಹತ್ತಿರ ಕಳಿಸಿದನು. ಡಾ. ಚಂದಲಿಯಾ ಕೂಡಲೇ ಅವನನ್ನು ಆಸ್ಪತ್ರೆಯಲ್ಲಿ ಸೇರಿಸಿ ಇನ್ಸುಲಿನ್ ಕೊಡ ಹತ್ತಿದನಲ್ಲದೆ, ಅವನು ಮಂಕುಸ್ಥಿತಿಗೆ ಹೋಗದಂತೆ ಕಾಳಜಿ ವಹಿಸ ಹತ್ತಿದನು. ಸುದೈವದಿಂದ, ಪ್ರಣಯನ ರಕ್ತದಲ್ಲಿನ ಸಕ್ಕರೆಯ ಪ್ರಮಾಣ ನಿಯಂತ್ರಣಕ್ಕೆ ಬಂತು. ಆಸ್ಪತ್ರೆಯಿಂದ ಹೊರ ಬಂದ ನಂತರ ಕೂಡಾ, ಡಾ. ಚಂದಲಿಯಾ ಸೂಚಿಸಿದ, ಸರಿಯಾದ

ಆಹಾರಕ್ರಮ ಮತ್ತು ಪಥ್ಯ ಪಾಲಿಸಹತ್ತಿದನು.

ಇದರಿಂದಾಗಿ ಈಗ ಪ್ರಣಯನ ತೂಕ ೮೫ ಕಿಲೊಕ್ಕಿಳಿದಿದೆ. ಈಗ ಅವನ ರಕ್ತದಲ್ಲಿನ ಸಕ್ಕರೆಯ ಮಟ್ಟ ಆರೋಗ್ಯಕರ ೧೦೨ ಕ್ಕೆ ಬಂದಿದೆ. ಆಹಾರ ಕ್ರಮ ಮತ್ತು ವ್ಯಾಯಾಮ ದಿಂದಾಗಿ ಸಕ್ಕರೆ ಪ್ರಮಾಣ ನಿಯಂತ್ರಣ ದಲ್ಲಿದೆ. ಈಗ ಅವನು ಔಷಧಿ ತೆಗೆದು ಕೊಳ್ಳುತ್ತಿಲ್ಲ. ಪ್ರತಿದಿನ ೮ ಕಿಲೊ ಮೀಟರ್ ಓಡುವುದರಿಂದ ಅವನು ಆರೋಗ್ಯವಂತ ನಾಗಿರುವನು.

ಅತಿಯಾದ ಕೊಬ್ಬುಳ್ಳ ಆಹಾರ ಇನ್ನೊಂದು ಅಪಾಯಕಾರಿ ಅಂಶವಾಗಿದೆ. ಇಂಥ ಆಹಾರ ದಿಂದ ಎರಡನೇ ತೆರನಾದ ಮಧುಮೇಹ ರೋಗ ಬರುತ್ತದೆ. ಮಹಿಳೆಯರು ಬಸಿರಿದ್ದಾಗ ಇದರ ಮುನ್ಸೂಚನೆ ಕಂಡು ಬರಬಹುದು; ಗರ್ಭಿಣಿಯರ ರಕ್ತದಲ್ಲಿ ಸಕ್ಕರೆಯ ಪ್ರಮಾಣ ಹೆಚ್ಚಾಗಿದ್ದರೆ, ಎರಡನೇ ತೆರನಾದ ಮಧು ಮೇಹ ಬರುವ ಅಪಾಯವಿದೆಂದು ಸೂಚಿಸು ತ್ತದೆ.

ಹೆತಾಳಮಾಥುರ ತನ್ನ ೩೦ನೇ ವಯಸ್ಸಿ ನಲ್ಲಿ ಬಸಿರಾದಳು. ಸಹಜವಾಗಿ ಅವಳ ರಕ್ತ ಪರೀಕ್ಷಿಸಿದಾಗ ಅದರಲ್ಲಿ ಸಕ್ಕರೆ ಅಂಶ ಸ್ವಲ್ಪ ಹೆಚ್ಚಾಗಿದ್ದುದು ಕಂಡು ಬಂತು. ಅವಳ ತಂದೆ ಮಧುಮೇಹ ರೋಗಿಯಾಗಿದ್ದರಿಂದ, ತಾನೂ ಮುಂದೆ ಮಧುಮೇಹ ರೋಗಿಯಾಗುವ ಅಪಾಯವಿದೆಂಬುದು ಹೆತಾಳಿಗೆ ತಿಳಿದಿತ್ತು. ಮಗು ಹುಟ್ಟಿ ಒಂದೂವರೆ ವರ್ಷವಾಗುವ ವರೆಗೆ ಇದರ ಲಕ್ಷಣಗಳೇನೂ ಅವಳಲ್ಲಿ ಕಂಡು ಬರಲಿಲ್ಲ. ನಂತರ ತಾನು ಬಹಳ ತೀವ್ರವಾಗಿ ದಣಿಯುತ್ತಿದ್ದಂತೆನಿಸಹತ್ತಿತು.

ಪರೀಕ್ಷೆ ನಡೆಸಿದಾಗ ಅವಳ ರಕ್ತದಲ್ಲಿನ ಸಕ್ಕರೆ ಪ್ರಮಾಣ ೨೮೨ಕ್ಕೆ ಏರಿದ್ದು ಕಾಣಿಸಿತು. ಅವಳು ಔಷಧಿಯ ಜೊತೆಗೆ ಸಿಹಿ ಪದಾರ್ಥ ಗಳು ಮತ್ತು ಕರಿದ ತಿನಿಸುಗಳನ್ನು ತ್ಯಜಿಸ ಬೇಕೆಂದು ಕುಟುಂಬದ ವೈದ್ಯ ಸಲಹೆ ನೀಡಿ ದನು. ಇದರಿಂದಾಗಿ ಅವಳ ರಕ್ತದಲ್ಲಿನ ಸಕ್ಕರೆಯ ಪ್ರಮಾಣ ಕಡಿಮೆಯಾಯಿತಲ್ಲದೆ ಅವಳ ಆರೋಗ್ಯ ಕೂಡಾ ಸುಧಾರಿಸಿತು.

ಹೆತಾಳಿಗೆ ಅಪಾಯದ ತಿಳವಳಿಕೆ ಇದ್ದುದ ರಿಂದ, ಮೊದಲ ಲಕ್ಷಣಗಳು ಕಂಡ ಕೂಡಲೇ ವೈದ್ಯರನ್ನು ಕಂಡದ್ದರಿಂದ ಅವಳು ದೃಷ್ಟಿ ಅಥವಾ ಕೈಕಾಲು ಕಳೆದುಕೊಳ್ಳಲಿಲ್ಲ. ಅವಳು ಸುದೈವಿಗಳಲ್ಲೊಬ್ಬಳೆಂದು ಹೇಳಬಹುದು. ''ಅವರ ರೋಗವನ್ನು ಗುರುತಿಸುವಷ್ಟರಲ್ಲಿ, ಕನಿಷ್ಠ ೩೦% ಮಧುಮೇಹ ರೋಗಿಗಳಲ್ಲಿ ಅತಿಯಾದ ರಕ್ತದ ಒತ್ತಡ, ಗಂಭೀರ ಸ್ವರೂಪದ ಕೆಂಟುರೋಗ ಮತ್ತು ಅಂಗಾಂಶಗಳಿಗೆ ಅಪಾಯಗಳಂಥ ತೊಡಕು ಗಳು ಅಂಟಿಕೊಂಡಿರುತ್ತವೆ. ಸುಮಾರು ೧೦ ವರ್ಷಗಳಿಂದ ಈ ಕಾಯಿಲೆ ಅವರಲ್ಲಿ ಮನೆ ಮಾಡಿದ್ದನ್ನು ಪತ್ತೆ ಹಚ್ಚುವ ಗೋಜಿಗೆ ಹೋಗಿಲ್ಲವೆಂದೆನಿಸುತ್ತದೆ'' ಎಂದು ಡಾ.ರಾಮ ಚಂದ್ರನ್ ಹೇಳಿದ್ದಾರೆ. ''ಸಂಕೋಚಪಟ್ಟುಕೊಳ್ಳ ಬೇಡಿ. ನಿಮ್ಮ ಕುಟುಂಬದಲ್ಲಿ ಯಾರಾದರೂ ಮಧುಮೇಹ ರೋಗಿಯಾಗಿದ್ದರೆ ಅಥವಾ ಇತರ ಅಪಾಯದ ಅಂಶಗಳು ಅಥವಾ ಲಕ್ಷಣಗಳು ನಿಮಗೂ ತಾಗಬಹುದೆಂದೆನಿಸಿ ದರೆ, ನೇರವಾಗಿ ನಿಮ್ಮ ವೈದ್ಯರನ್ನು ಭೇಟಿ ಯಾಗಿರಿ'' ಎಂದು ಡಾ. ರಾಮಚಂದ್ರನ್ ಸೂಚಿಸಿರುವರು.

ನಿಜ ಹೇಳಬೇಕೆಂದರೆ, ೩೦ ವರ್ಷ ಮೀರಿದ ಪ್ರತಿಯೊಬ್ಬ ವ್ಯಕ್ತಿ ವರ್ಷಕ್ಕೊಮ್ಮೆ ಯಾದರೂ ಮಧುಮೇಹ ಕಾಯಿಲೆ ಪರೀಕ್ಷೆ ಮಾಡಿಸಿಕೊಳ್ಳಬೇಕೆಂದು ಡಾ. ಸದಿಕೋಟ ಸಲಹೆಯಿತ್ತಿದ್ದಾರೆ. ''ಮೂತ್ರ ಪರೀಕ್ಷೆ ಬೇಡ. ಅದು ಖಚಿತವಾದದ್ದಲ್ಲ. ರಕ್ತ ಪರೀಕ್ಷೆ ಅದಕ್ಕಿಂತಲೂ ಸರಿಯಾದದ್ದು'' ಎಂದು ಆ ವೈದ್ಯನ ಸಲಹೆ.

ಒಮ್ಮೆ ರೋಗ ನಿರ್ಣಯವಾಯಿತೆಂದರೆ, ಮಧುಮೇಹ ರೋಗಿ ಕ್ರಮಬದ್ಧವಾಗಿ ವೈದ್ಯರ ಸಲಹೆ ಮೇರೆಗೆ ಪ್ರೊಟಿನ್‌ಗಾಗಿ ಮೂತ್ರ ಪರೀಕ್ಷೆ ಮಾಡಿಸಿಕೊಳ್ಳಬೇಕು. ಎರಡನೇ ತೆರನಾದ ಮಧುಮೇಹ ಕಾಯಿಲೆ ಕನಿಷ್ಠ ಕಾಲುಭಾಗದಷ್ಟು ರೋಗಿಗಳ ಮೂತ್ರಪಿಂಡಕ್ಕೆ ಘಾಸಿಯುಂಟು ಮಾಡುತ್ತದೆ. ಆದರೆ ಸರಿಯಾದ ರಕ್ತದ ಒತ್ತಡ, ಗ್ಲುಕೋಸಿನ ನಿಯಂತ್ರಣ ಮತ್ತು ಕಡಿಮೆ ಪ್ರಮಾಣದ ಪ್ರೊಟಿನ್‌ಯುಕ್ತ ಆಹಾರದ ಸಹಾಯದಿಂದ ಮೂತ್ರಪಿಂಡದ ರೋಗವನ್ನು ಮುಂದೂಡ ಬಹುದು.

ಹಾಗಾದರೆ ಈ ಕಾಯಿಲೆಯಿಂದ ತಪ್ಪಿಸಿ ಕೊಳ್ಳಲು ನಾವೇನು ಮಾಡಬೇಕು. ''ತಂಗಳು

ಆಹಾರವನ್ನು ತ್ಯಜಿಸಬೇಕು. ಮೇದಸ್ಸಿನ ಪ್ರಮಾಣ ಕಡಿಮೆ ಇರುವ, ಸಕ್ಕರೆ ಪ್ರಮಾಣ ಕಡಿಮೆ ಇರುವ ಹಾಗೂ ಜಟಿಲ ಶರ್ಕರ ಪಿಷ್ಟವುಳ್ಳ ಸಸ್ಯಾಹಾರಿ ಆಹಾರವೇ ಮೂಲ ಮಂತ್ರ. ಇದರ ಜೊತೆಗೆ ಕ್ರಮ ಬದ್ಧವಾದ ಹಾಗೂ ಮಿತವಾದ ವ್ಯಾಯಾಮ ಮಾಡಬೇಕು. ಇವೆರಡರ ಮಿಲನದಿಂದ ಎರಡನೇ ತೆರವಾದ ಮಧುಮೇಹ ಕಾಯಿಲೆಯನ್ನು ತಡೆಯಲು ಸಾಧ್ಯ''ವೆಂದು ಡಾ. ತಲವಾಲ್ಕರ ಬಹಳ ವಿಶ್ವಾಸದಿಂದ ಹೇಳಿದ್ದಾರೆ.

ಜಲಗಾಂವ್‌ನ ಒಂದು ಕಂಪೆನಿಯಲ್ಲಿ [illegible] ಹಿರಿಯ ಅಧಿಕಾರಿಗಳು ಕಡ್ಡಾಯವಾಗಿ ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳಬೇಕೆಂಬ ನಿಯಮವಿದೆ. ೬೩ ವರ್ಷದ ಪ್ರಫುಲ ಕುಮಾರ್‌ಗೆ ಮಧುಮೇಹ ಕಾಯಿಲೆ ಇದೆಯೆಂದು ೧೯೮೨ ರಲ್ಲಿ ತಿಳಿಯಿತು. ಈ ವಿಷಯ ತಿಳಿದಾಗ ಅವನಿಗೆ ಆಶ್ಚರ್ಯ ವಾಯಿತು. ಯಾಕೆಂದರೆ ಅವನಿಗೆ ಈ ಮೊದಲು ರೋಗದ ಲಕ್ಷಣಗಳು ಕಾಣಿಸಿರಲಿಲ್ಲ. ಇದಲ್ಲದೆ, ಅವನ ತಂದೆ-ತಾಯಿ ಅಥವಾ ಮಕ್ಕಳು ಈ ರೋಗದಿಂದ ಬಳಲಿರಲಿಲ್ಲ. ಆದರೆ ಹಣಕಾಸು ಕಾರ್ಯದರ್ಶಿಯಾಗಿರುವ ಕುಮಾರ ಅಂದಿನಿಂದ ಬಹಳ ಕಟ್ಟುನಿಟ್ಟಿನ ಜೀವನ ಸಾಗಿಸಹತ್ತಿದನು. ಪ್ರತಿದಿನ ಬೆಳಿಗ್ಗೆ ೪೫ ನಿಮಿಷಗಳವರೆಗೆ ಭರದಿಂದ ನಡೆದಾಡುತ್ತಾನೆ. ಅನಂತರ ಅರ್ಧಗಂಟೆಯವರೆಗೆ ವ್ಯಾಯಾಮ ಮಾಡುತ್ತಾನೆ. ಸಿಹಿ ಪದಾರ್ಥ ಹಾಗೂ ಕರಿದ ತಿನಿಸುಗಳಿರದ, ಮಿತವಾದ ಆಹಾರವನ್ನು ಅವನು ಸೇವಿಸುತ್ತಿರುವನು. ಇದಲ್ಲದೆ ಔಷಧಿಗಳನ್ನು ತೆಗೆದುಕೊಳ್ಳುವುದನ್ನು ಅವನೆಂದೂ ಮರೆಯುವುದಿಲ್ಲ. ''ಕಠಿಣವಾಗಿ ನಿಯಮ ಪಾಲಿಸುತ್ತಿರುವುದರಿಂದ ನನಗೆ ಲಾಭವಾಗಿದೆ. ನನ್ನ ರಕ್ತದಲ್ಲಿನ ಸಕ್ಕರೆ ಸರಿಪ್ರಮಾಣದಲ್ಲಿದೆ. ಅದರಿಂದ ನಾನು ಸಶಕ್ತನಾಗಿದ್ದೇನೆಂದೆನಿಸುತ್ತದೆ. ಮಧುಮೇಹ ರೋಗವನ್ನು ನಿಯಂತ್ರಿಸಬಹುದೆಂಬುದಕ್ಕೆ ನಾನೇ ನಿದರ್ಶನ''ವೆಂದು ಕುಮಾರ ಹೇಳುತ್ತಾನೆ.

ನಿಜವಾಗಿಯೂ ಮಧುಮೇಹ ಜೀವಾವಧಿ ಶಿಕ್ಷೆಯಂಥ ರೋಗವಾಗಬಾರದು. ಸರಿಯಾದ ರೋಗನಿರ್ಣಯ, ಸರಳ ಜೀವನಕ್ರಮಕ್ಕೆ ಹೊಂದಿಕೊಳ್ಳುವುದು ಮತ್ತು ಅವಶ್ಯವೆನಿಸಿದಾದ ಔಷಧಿ ತೆಗೆದುಕೊಳ್ಳುತ್ತಿದ್ದರೆ, ಮಧುಮೇಹ ರೋಗಿಗಳು ಕೂಡಾ ಇತರರಂತೆ ಉಪಯುಕ್ತ ಜೀವನ ನಡೆಸಬಹುದು.

ಎಚ್ಚರಿಕೆಯ ಲಕ್ಷಣಗಳು

ಈ ಹತ್ತು ಎಚ್ಚರಿಕೆಯ ಲಕ್ಷಣಗಳು ಕಂಡು ಬಂದರೆ ವೈದ್ಯರನ್ನು ಸಂಪರ್ಕಿಸಬೇಕು :

೧. ಅಸಾಧಾರಣ ಹಾಗೂ ಅತಿಯಾದ ನೀರಡಿಕೆ
೨. ಪದೆ ಪದೆ ಕಾಡುವ ಮೂತ್ರವಿಸರ್ಜನೆ
೩. ಅತಿಯಾದ ಹಸಿವು
೪. ಹಠಾತ್ತನೆ, ವಿವರಿಸಲಸಾಧ್ಯವಾದ, ತೂಕದಲ್ಲಿ ಕಡಿಮೆಯಾಗುವಿಕೆ
೫. ಪೆಟ್ಟು, ಗಾಯ ಅಥವಾ ಚರ್ಮದ ಸೊಂಕುಗಳು ತೀವ್ರ ಗುಣವಾಗದಿರುವುದು
೬. ಪದೆ ಪದೆ ಕಾಣಿಸಿಕೊಳ್ಳುವ ರೋಗದ ಸೊಂಕುಗಳು
೭. ದೃಷ್ಟಿ ಮಾಂದ್ಯ
೮. ವಿವರಿಸಲಾಗದ ನಿಶ್ಶಕ್ತಿ ಮತ್ತು ಅತಿಯಾದ ಆಯಾಸ
೯. ಜನನಾಂಗದ ಭಾಗದಲ್ಲಿ ತುರಿತ ಅಥವಾ ನಪುಂಸಕತ್ವ
೧೦. ಸಿಹಿವಾಸನೆಯ ಬೆವರು

ಕತ್ತಲೆ ಹರಿದಾಗ

ಕೆ. ಸುಕನ್ಯ ಭಟ್
ಮಗೀರಾ ಹೌಸ್, ಕದ್ರಿ ರಾಕ್ ಸೈಡ್
ಮಂಗಳೂರು-೫೭೫ ೦೦೪

ಬಿಡುಗಡೆಯ ದಿನ ಹತ್ತಿರ ಬರುತ್ತಿದ್ದಂತೆ ಶರಣಪ್ಪನವರ ಮನಸ್ಸಿನಲ್ಲಿ ಅವ್ಯಕ್ತ ಭಯ ಇಣುಕತೊಡಗಿದ್ದರಿಂದ, ಊಟ- ತಿಂಡಿಯೂ ರುಚಿಸದಂತಾಗಿ ಪೇಚಾಡಿದರು. ಸದಾ ಪ್ರಾರ್ಥನೆಯ ಸಮಯದಲ್ಲಿ ಅವರನ್ನಾವರಿಸುತ್ತಿದ್ದ ಉತ್ಸಾಹ- ಲವಲವಿಕೆ ಹೇಳ ಹೆಸರಿಲ್ಲದಂತೆ ಮಾಯವಾಗಿ, ನಿರುತ್ಸಾಹ ಅವರ ಮೈ-ಮನಗಳನ್ನಾವರಿಸಿ, ಪ್ರಾರ್ಥನೆಯನ್ನು ಇತರರಿಗೆ ಹೇಳಿಕೊಡುವಾಗಲೇ ತಪ್ಪುಗಳಾಗತೊಡಗಿತು. ಅದಕ್ಕೆ ಕಾರಣವೂ ಇಲ್ಲದಿರಲಿಲ್ಲ. ಕೊನೆಗೂ... ಬಂದೇ ಬಿಟ್ಟಿತ್ತು ಅವರು ಬಹಳ ದಿವಸಗಳಿಂದ ಎದುರು ನೋಡುತ್ತಿದ್ದ ''ಆ ದಿನ''.

''ಗೋಡೆಗೊರಗಿ ಕೂತು ಕೊಂಡೇ ಕನಸು ಕಾಣ್ತಿದ್ದೀರಾ ಶರಣಪ್ಪ?''-ಎಂದು ಒಬ್ಬರೆಂದರೆ, ಮತ್ತೊಬ್ಬರು-''ರಾತ್ರೆ ಇಡೀ ನೀವು, ನಿದ್ದೆಯಲ್ಲಿ, ನಾನು ಅಲ್ಲಿಗೆ ಹೋಗೋದಿಲ್ಲ, ಇಲ್ಲೇ ಇರ್ತೇನೆ, ನನ್ಗೆ ಇಲ್ಲೇ ಒಗ್ಗಿ ಹೋಗಿದೆ ಎಂದೆಲ್ಲಾ ಹೇಳ್ತಾ ಇದ್ದಿರಿ ಗೊತ್ತಾ?'' ಎಂದು ನಕ್ಕಿದ್ದರು. ಅವರೆಲ್ಲರ ಮಾತುಗಳನ್ನಾಲಿಸುತ್ತಿದ್ದ ಹಿರಿಯರೊಬ್ಬರು- ''ಇಲ್ಲಿ ನಾವೆಲ್ಲಾ ಒಂದು ಎಂಬ ಭಾವನೆ ಇರ್ತದೆ. ಇಲ್ಲಿನ ಪ್ರಪಂಚವೇ ಬೇರೆ, ಹೊರ ಪ್ರಪಂಚವೇ ಬೇರೆ. ಇಲ್ಲಿಂದ ಹೋಗುವವರನ್ನು ಜನರು ಮೊದಲಿನಂತೆ ಸ್ವೀಕರಿಸೋದೇ ಇಲ್ಲ. ಅದು ತಿಳಿದದ್ದರಿಂದ್ಲೇ ನಮ್ಮ ಶರಣಪ್ಪನಿಗೆ ಆತಂಕ ಅಲ್ವೇ ಶರಣಪ್ಪ?''- ಎಂದು ಕೇಳಿಯೇ ಬಿಟ್ಟರು.

ಶರಣಪ್ಪನವರ ಉತ್ತರಕ್ಕಾಗಿ ಕಾಯುತ್ತ ಉಳಿದವರೂ ಇರುವುದನ್ನು ಗಮನಿಸಿದ ಶರಣಪ್ಪ ವಿಧಿ ಇಲ್ಲದೆ ಮಾತನಾಡಲೇಬೇಕಾಯಿತು.

''ಹೌದು, ನಿಮ್ಗೇನು ಗೊತ್ತು ನನ್ನ ಕಷ್ಟ. ಮೂರು ವರ್ಷಗಳಿಂದ ಇಲ್ಲೇ ಇದ್ದು, ಈಗ ಹೋಗೋದೂಂದ್ರೆ... ಅಲ್ಲಿ, ಅವ್ರೆಲ್ಲಾ ನನ್ನನ್ನು ಹೇಗೆ ಕಾಣ್ತಾರೊ, ಹೇಗೆ ಅವರೊಟ್ಟಿಗೆ ಸೇರಿಸಿಕೊಳ್ತಾರೋಂತ್ಲೆ ನನ್ಗೆ ಯೋಚ್ನೆ ಆಗಿ ಹೋಗಿದೆ. ಇಲ್ಲೇ ಇದ್ದು ಬಿಡ್ಲೆ, ಎಂತಾನೂ ಅನಿಸ್ತಾ ಇದೆ''-ಎಂದು ಶರಣಪ್ಪ ಮಾರ್ನುಡಿದರು.

ಶಂಕ್ರಯ್ಯ ಕೂಡಲೆ, ''ಛೆ, ಹಾಗೆಲ್ಲಾ ಹೇಳ್ಬೇಡಿ, ನಿಮ್ಮ ಮಗ ಬಹಳ ಉದಾರಿ. ತಿಂಗಳು-ತಿಂಗಳು ಸರಿಯಾಗಿ ನಿಮ್ಗೆ ಹಣ ಕಳಿಸ್ತಾನೆ. ಯಾವುದಕ್ಕೂ ಕಡಿಮೆ ಮಾಡಿಲ್ಲ ಅಲ್ವಾ? ನಮ್ಮ ಮನೆಯಿಂದ ಹಣ ಕಳಿಸೋದು ಇರಲಿ, ಕಾಗದ ಕೂಡ ಹಾಕೋದಿಲ್ಲ. ನಾವೇ ಇಲ್ಲಿ ದುಡಿದು, ಹೊಟ್ಟೆ ತುಂಬಿಸಿಕೊಳ್ಬೇಕು. ದುಡ್ಡಿದವರು, ದಯಾಮಯರು ಈ ಆಸ್ಪತ್ರೆಗೆ ಹಣ ಕಳಿಸೋದ್ರಿಂದ ನಮಗೆಲ್ಲಾ ಔಷಧೋಪಚಾರ ನಡೀತಿದೆ, ಇಲ್ದಿದ್ರೆ ನಮ್ಮ ಗತಿ ಯಾರಿಗೂ ಬೇಡ, ಬದುಕಿಯೂ ಸತ್ತಂತೆ'' ಎಂದು ಸಮಾಧಾನಪಡಿಸಿದ.

ಅವರ ಮಾತು ಮುಗಿಯುವುದೇ ತಡ ಶರಣಪ್ಪ ವ್ಯಂಗ್ಯ ಬೆರೆತ ಸ್ವರದಲ್ಲಿ, ''ಕೊಡದೆ ಏನ್ಮಾಡ್ತಾನೆ ಹೇಳಿ. ನಾನು ಗಳಿಸಿಟ್ಟ ಹಣ ತಾನೆ. ಅವ್ನು ತಿಂಗಳು - ತಿಂಗಳು ಕಳಿಸ್ತಿರೋದು. ನಿಮ್ಮನ್ನು ಮನೆಗೆ ಕರ್ಕೊಂಡ್ಹೋಗೋದಕ್ಕೆ ಇವತ್ತು ಬೆಳಿಗ್ಗೆಯೇ ಬರ್ತೇನೇಂತ ತಿಳಿಸಿದ್ದ. ಎಲ್ಲಾ ಸಾಮಾನುಗಳನ್ನು ಮೊದಲೇ ಪ್ಯಾಕ್ ಮಾಡಿಟ್ಟಿರಿ ಎಂತಲೂ ತಿಳಿಸಿದ್ದ ನೋಡಿ, ಇನ್ನೂ ಕಾಣ್ತಾನೇ ಇಲ್ಲ. ಕಾದೂ-ಕಾದೂ ನನ್ಗೆ ಸಾಕಾಗಿ ಹೋಯ್ತು. ಹೀಗೇ ಮಾಡಿಯಾನೆಂದು ನಾನು ಕನಸಿನಲ್ಲೂ ಯೋಚಿಸಿರಲಿಲ್ಲ''.... ಎಂದು

ತಮ್ಮ ಆತಂಕ, ಬೇಸರ ಹೊರಹಾಕಿದರು.

ದೂರದಲ್ಲಿದ್ದೇ ಅವರ ಮಾತುಗಳನ್ನಾಲಿಸುತ್ತಿದ್ದ ಶಿವಯ್ಯ, ''ಅಣ್ಣಾವ್ರೆ, ನಿಮ್ಮ ಬಟ್ಟೆನಾದ್ರೂ, ನನ್ಗೆ ಕೊಟ್ಬುಹೋಗಿ, ನಿಮ್ಮ ಹೆಸರು ಹೇಳಿಕೊಂಡು ಹಾಕಿಕೊಳ್ತೇನೆ'', ಎಂದು ಶರಣಪ್ಪನನ್ನು ಬೇಡಿಕೊಂಡ.

ಎಲ್ಲರೂ ಅಲ್ಲಿಂದೆದ್ದು ಹೊರಟಾಗ, ತಾವೂ ತಮ್ಮ ಕೋಣೆ ಸೇರಿಕೊಂಡರು . ಒಬ್ಬರೇ ಆದೊಡನೆ ಅದುವರೆಗೂ ಇದ್ದಂತಹ ಆತ್ಮಸ್ಥೈರ್ಯ ಉಡುಗಿತು. ಮಂಚದ ಮೇಲೆ ಶಕ್ತಿ ಇಲ್ಲದವರಂತೆ ಕೂತುಕೊಂಡರು. ಹೊತ್ತು ಕಳೆಯಲು ಎಂಬಂತೆ ನೆನಪಿನ ಅಲೆಗಳು ಅವರನ್ನು ಮೂರು ವರ್ಷಗಳಷ್ಟು ಹಿಂದಕ್ಕೆ ನೂಕಿಬಿಟ್ಟವು.

ಸ್ಪರ್ಶ ಜ್ಞಾನವಿಲ್ಲದ ಮಚ್ಚೆಯೊಂದು ಇದ್ದಕ್ಕಿದ್ದಂತೆ ಕಾಣಿಸಿಕೊಂಡದ್ದು, ಗಂಟಾದದ್ದು, ಮುಲಾಮು ಹಚ್ಚಿ-ಹಚ್ಚಿ ಸಾಕಾಗಿ ಮನೆ ವೈದ್ಯರಿಗೆ ತೋರಿಸಿದ್ದು. ಅವರು ತಜ್ಞರನ್ನು ಕಾಣುವಂತೆ ತಿಳಿಸಿದ್ದು. ವಾಸಿಯಾಗದ ರೋಗವೆಂದು ಅನೇಕರು ಕೇಳಿಸುವಂತೆ ಮಾತನಾಡಿಕೊಂಡದ್ದು, ಆದರೂ ಮಗ- ಸೊಸೆ ಸಾಂತ್ವನ ನೀಡಿ ನೋಡಿಕೊಂಡದ್ದು. ಕೊನೆಗೆ ಅವರೆಲ್ಲರೊಡನೆ ಬೆರೆತು ಬಾಳಲಿಚ್ಛಿಸದ ತಾನು ದೂರದೂರಿಗೆ ಪ್ರಯಾಣಿಸಿ ಆಸ್ಪತ್ರೆ ಸೇರಿದ್ದು.

ಮಗನೇನೋ ಆರು ತಿಂಗಳಿಗೊಮ್ಮೆ ತನ್ನ ಕರ್ತವ್ಯವೆಂಬಂತೆ ಬರುತ್ತಿದ್ದರೂ. ಸೊಸೆ ಒಂದು ಸಲವೂ ಬಾರದೆ ಇದ್ದುದು. ಸೊಸೆ ಬಸಿರಾದದ್ದನ್ನೂ ತನಗೆ ತಿಳಿಸದಿದ್ದಾಗ ತಾವೂ ನಿರ್ಲಿಪ್ತರಾದದ್ದು, ಆಸ್ಪತ್ರೆಯ ವಾತಾವರಣಕ್ಕೆ ಹೊಂದಿಕೊಂಡು, ಗುಣಮುಖರಾದಾಗ ಪುನರ್‌ವಸತಿ ಕೇಂದ್ರದಲ್ಲಿ ಸ್ವಇಚ್ಛೆಯಿಂದ ಸಹಾಯ ಮಾಡುವುದು ತಿಳಿದ ಮಗ ಕರೆದೊಯ್ಯಲು ಬರುವೆನೆಂದು ತಿಳಿಸಿದ್ದು; ಯೋಜನೆಗಳನ್ನ ತುಂಡರಿಸುವಂತೆ ಮಧ್ಯಾಹ್ನದ ಊಟದ ಗಂಟೆ ಬಾರಿಸುವುದು ಕೇಳಿಸಿತು. ಊಟ ಮಾಡಲೂ ಮನಬಾರದೆ ಅವರೊಬ್ಬರೇ ಅಲ್ಲಿ ಉಳಿದರು, ಉಳಿದವರು ಒತ್ತಾಯಿಸಿದರೂ ಹೋಗಲೇ ಇಲ್ಲ, ಸಿಸ್ಟರ್ ಎಮಿಲಿ ಅವರ ಮನಸ್ಸನ್ನರಿತವಳಂತೆ, ಊಟದ ತಟ್ಟೆಯೊಂದಿಗೇ ಅಲ್ಲಿಗೇ ಬಂದಳು. ''ನೋಡಿ ನಾನೇ ಊಟ ತಂದಿದ್ದೇನೆ. ನಿಮ್ಮ ಮಗ ಬಾರದಿದ್ದರೇನಾಯಿತು ನಾವೆಲ್ಲಾ ಇಲ್ಲವಾ? ನೀವು ಹೇಳಿಕೊಡುವ ಭಜನೆಗಳು, ನೀವು ಕಲಿಸಿಕೊಂಡುವ ಕೈಕಸುಬುಗಳು ಇಲ್ಲಿರುವ ಅನಾಥರಿಗೆ ಎಷ್ಟು ಪ್ರಯೋಜನವಾಗುತ್ತಿದೆ. ಭಜನೆ, ಎಷ್ಟು ಜನರಿಗೆ ಸಂತೋಷ. ಮನಸ್ಸಿಗೆ ನೆಮ್ಮದಿ ನೀಡುತ್ತಿದ್ದೇಂತ ನಿಮಗೇ ಗೊತ್ತಿದೆ ಅಲ್ಲವಾ? ಪುನರ್‌ವಸತಿ ಕೇಂದ್ರದಲ್ಲಿಯೇ ಮೇಲ್ವಿಚಾರಕರ ಕೆಲಸ ಸಿಕ್ಕೀತು ಇಲ್ಲೇ ಇದ್ದು ಬಿಡಿ. ಎಂದೆಲ್ಲಾ ಹೇಳಿ ಊಟ ಮಾಡುವಂತೆ ಒತ್ತಾಯಿಸಿದಳು.

ಅಮೃತ ಸಿಂಚನದಂತಿದ್ದ ಅವಳ ಮಾತುಗಳು ಅವರ ಬಾಯಿ ಕಟ್ಟಿದುವು. ಆನುವಂಶಿಕವಲ್ಲದ ಈ ರೋಗ ವಾಸಿಯಾದರೂ ಜನ ಹೆದರುತ್ತಾರೆ. ಸಹಾನುಭೂತಿ ತೋರಿಸುವ ಬದಲು ದೂರ ಮಾಡುತ್ತಾರೆ. ಬೇಡವಾದವರೊಡನೆ ನವೆಯುವುದಕ್ಕಿಂತ ಬೇಕಾದವರೊಂದಿಗೆ ಬಾಳುವುದೇ ಸರಿ ಎನಿಸಿತು. ಊಟ ಮುಗಿಸಿ ಅಲ್ಲಿಯೇ ಮಲಗಿದರು. ಮನೆಗೆ ಹೋದಾಗ ಹೇಗೆ ತನ್ನನ್ನು ಬಂಧು- ಬಾಂಧವರು ಕಂಡಾರು ಎಂಬ ಚಿಂತೆ ದೂರಾಗಿ, ಇನ್ನು ಇಲ್ಲೇ ಇದ್ದು ಬಿಡುವುದು ಎಂಬ ಭಾವನೆ, ಅದುವರೆಗೂ ಅವರನ್ನು ಕಾಡುತ್ತಿದ್ದ ಭಯವನ್ನು ದೂರ ಮಾಡಿತು.

ನಿದ್ರೆಯಿಂದೇಳುವ ಹೊತ್ತಿಗೆ ಸರಿಯಾಗಿ, ಆಫೀಸಿನಿಂದ ಕರೆ ಬಂದಿತು. ಅರೆ ಮನಸ್ಸಿನಿಂದ ಎದ್ದು ಮುಖ ತೊಳೆದು, ಹಿರಿಯ ವೈದ್ಯರನ್ನು

ಕಾಣಲು ಹೊರಟರು. ಹಾದಿಯಲ್ಲಿ ಸಿಕ್ಕಿದ ಆಳು ನಿಂಗ ಕುಂಟುತ್ತಾ ಬರುತ್ತಿದ್ದ. ಇವರು ಇನ್ನೂ ಊರಿಗೆ ಹೋಗದಿರುವುದನ್ನು ಕಂಡು, ತನ್ನ ಮುರುಟಿದ ಕೈಗಳನ್ನು ತಿರುವುತ್ತಾ ವ್ಯಂಗ್ಯದಿಂದ, ''ಏನ್ ಬುದ್ದಿ, ಇನ್ನೂ ಇಲ್ಲೇ ಇದ್ದೀರಾ? ಒಂದ್ಸಲ ಇಲ್ಲಿ ಸೇರ್ಕೊಂಡ್ರೆ ಆಗೋಯ್ತು ಬುದ್ದಿ, ಇಲ್ಲಿಂದ ಯಾರೂ ಕರ್ಕೊಂಡ್ಹೋಗೋದೇ ಇಲ್ಲಾ. ಇನ್ನು ನೀವು ಮನೆಗ್ಹೋಗೊ ಯೋಚ್ನೆಬಿಟ್ಬುಡಿ ಬುದ್ದಿ'' ಎಂದು ಹೇಳಿದಾಗ, ''ನೋಡು ಎಷ್ಟು ಸಲ ನಿನ್ಗೆ ಹೇಳಿದ್ದೀನಿ, ಸರಿಯಾಗಿ ಮಾತಾಡೋ ಹಾಗಿದ್ರೆ ಮಾತ್ರ ನಂಜೊತೆ ಮಾತಾಡೂಂತ'' ಎಂದು ಬೈದರು. ಅವನಿಂದ ತಪ್ಪಿಸಿಕೊಳ್ಳಲು ಹೆಜ್ಜೆ ಜೋರು ಮಾಡಿದರು.

ಆಫೀಸಿನೊಳಗೆ ಹೆಜ್ಜೆ ಇಟ್ಟೊಡನೆ ಮಗ, ಸೊಸೆ, ಮೊಮ್ಮಗಳನ್ನು ಕಂಡರು. ಏನೂ ಮಾತನಾಡಲು ತೋಚದೆ ಬಾಗಿಲಲ್ಲೆ ನಿಂತರು. ಒಳ ಬಾರದೆ ಬಾಗಿಲ ಬಳಿಯೇ ನಿಂತ ತಂದೆಯನ್ನು ''ಅಪ್ಪಾ ಬಸ್ ಹಾಳಾಗಿ ಇಲ್ಲಿಗೆ ಬರೋದು ಲೇಟಾಯ್ತು. ಟ್ಯಾಕ್ಸಿ ಮಾಡಿಕೊಂಡು ಬಂದದ್ದಕ್ಕೆ ಇಷ್ಹೊತ್ತಿಗಾದ್ರೂ ತಲುಪಿದ್ದೇವೆ. ನೀವು ಕಾಯ್ತಾ ಇರಬಹುದೂಂತ ನಮ್ಗೆ ದಾರಿ ಉದ್ದಕ್ಕೂ ಯೋಚನೆ ಆಗ್ತಿತ್ತು. ಫೋನ್ ಮಾಡ್ಲಿಕ್ಕೂ ಆಗ್ಲಿಲ್ಲ'' ಎಂದು ಮಗ ಹೇಳಿದರೆ ಸೊಸೆ ''ಇವ್ಳು ನಿಮ್ಗೆ ಹೊಸಬಳು ಅಲ್ವಾ ಮಾವ'' ಎಂದು ತಾನೆತ್ತಿಕೊಂಡಿದ್ದ ಮಗಳನ್ನು ತೋರಿಸಿದಳು. ಅವರ ಕಣ್ಣುಗಳು ಮೊಮ್ಮಗಳನ್ನು ಕಂಡಾಗ ಅರಳಿದರೂ ಮನ ಮುದುಡಿತು. ತಾನವಳನ್ನು ಮುಟ್ಟಲು ಇವರು ಬಿಟ್ಟಾರೆಯೋ ಎಂಬ ಅಳುಕು ಅವರೆದೆಯಲ್ಲಿ ಸುಳಿಯದಿರಲಿಲ್ಲ. ಅಷ್ಟರಲ್ಲಿ ಅವರ ಮನಸ್ಸನ್ನರಿತುಕೊಂಡ ಸೊಸೆ ಶೀಲಾ, ''ಎತ್ತಿಕೊಳ್ಳಿ ಮಾವ. ನಿಮ್ಮ ಕರುಳ ಕುಡಿಯನ್ನು'' ಎಂದು ಹೇಳಿ ಮಗಳನ್ನವರ ಕೈಗಿತ್ತು ನಮಸ್ಕರಿಸಲು ಬಗ್ಗಿದಳು.

ತನ್ನ ಕಿವಿ, ಕಣ್ಣುಗಳು ಏನಾದರೂ ತಮಗೆ ಮೋಸ ಮಾಡುತ್ತಿರಬಹುದೇ ಎಂಬ ಅನುಮಾನ ವಾಯಿತು ಅವರಿಗೆ. ಲಗೇಜು ತರಲು ಮಗ ಹೊರಟಾಗ ಶರಣಪ್ಪನವರಿಗೆ ಉಲ್ಲಾಸದ ರೆಕ್ಕೆಗಳು ಹುಟ್ಟಿಕೊಂಡವು. ಮನ ಹಗುರಾಗಿ, ಮುಖ ಅರಳಿತು. ಅವರ ಅರಳಿದ ಮೊಗ ನೋಡಿ ಎಮಿಲಿ ಮನದಲ್ಲೆ ಅಂದು ಕೊಂಡಳು- ''ಸದ್ಯ ಇವರು ಕಟ್ಟಿದ ಕನಸುಗಳು ಕಾಲಿನಡಿ ಸಿಕ್ಕಿ ಪುಡಿ-ಪುಡಿಯಾಗುವ ತರಗೆಲೆ ಗಳಂತೆ ಆಗಲಿಲ್ಲವಲ್ಲಾ'' ಎಂದು.

ಸಂತಸದ ಸುದ್ದಿ ಸಿಕ್ಕಿ, ಬೀಳ್ಕೊಡಲು ಬಂದವರೆಲ್ಲರಿಗೆ ಕೈಮುಗಿದು ಶರಣಪ್ಪ ಹೊರಟಾಗ, ನೆರೆದವರು ಕಂಬನಿ ಒರೆಸಿಕೊಂಡರು. ತಿಳುವಳಿಕೆ ಅನುಕಂಪ, ಪ್ರೀತಿ, ಇರುವ ಮಗ-ಸೊಸೆ ತಮಗೆ ದೊರೆತುದು ತಮ್ಮ ಸೌಭಾಗ್ಯ ಎಂದು ಕೊಳ್ಳುತ್ತಾ ಕಾರನ್ನೇರಿದರು. ಅಲ್ಲಿರುವ ಇತರರಿಗೂ ಮನೆಯವರ ಪ್ರೀತಿ ಮತ್ತು ಸಮಾಜದ ಅನುಕಂಪ ದೊರೆಯಲಿ ಎಂದವರ ಮನ ದಾರಿಯುದ್ದಕ್ಕೂ ಹಾರೈಸುತ್ತಿತ್ತು.

ವಿವಾಹವೊಂದು ೫೦:೫೦ರ ವ್ಯವಸ್ಥೆಯೆ ?

ಟಿ.ಎಸ್. ಲಲಿತ
೭೦೨, ೧ನೇ ಮಹಡಿ, ೧೭ನೇ ಮುಖ್ಯರಸ್ತೆ
ಸರಸ್ವತಿಪುರಂ , ಮೈಸೂರು-೫೭೦೦೦೯

ಇತ್ತೀಚೆಗೆ ನಾನು ನನ್ನೊಬ್ಬ ಸ್ನೇಹಿತನನ್ನು ಕೇಳಿದೆ, ''ಮದುವೆಯೊಂದು ೫೦-೫೦ರ ವ್ಯವಸ್ಥೆ ಎಂದು ತಿಳಿದಿದ್ದೀಯಾ?'' ಖಂಡಿತ ಅದರಲ್ಲೇನು ಅನುಮಾನ? ಮನೆಯನ್ನು ಶುಚಿಗೊಳಿಸುವ ೯೦% ಭಾಗ ಕೆಲಸ ಅವಳದು. ೧೦ % ಭಾಗ ನನ್ನದು. ೯೦ % ಭಾಗ ಟಿವಿ ನೋಡುವ ಕೆಲಸ ನನ್ನದು, ೧೦% ಭಾಗ ಅವಳದು, ಅಂದರೆ ಸರಾಸರಿ ಕೆಲಸ ೫೦-೫೦ ಎಂದಾಗಲಿಲ್ಲವೆ?'' ಅದವನ ಹಾಸ್ಯಪ್ರಜ್ಞೆ.

ವರ್ಷ ವರ್ಷಗಳಿಂದಲೂ ನಾವು ಸಮಾನತೆಯ ಆದರ್ಶ ವಿವಾಹದ ಬಗ್ಗೆ ಕೇಳುತ್ತಲೇ ಬಂದಿದ್ದೇವೆ. ಅದು ಕೇವಲ ತಾತ್ವಿಕವಾಗಿ ಚೆನ್ನ. ಆದರೆ ಇಂದಿನ ಯಥಾರ್ಥತೆ ಏನು?

ಕಳೆದ ೨೦ ವರ್ಷಗಳಲ್ಲಿ ಪುರುಷರು ನಿಜಕ್ಕೂ ದಿನ ನಿತ್ಯದ ಸಾಂಸಾರಿಕ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇತ್ತೀಚಿನ ಪರಿಶೀಲನೆಯ ಪ್ರಕಾರ ಅಮೆರಿಕದ ಪುರುಷರು ಪಡೆಯುವುದಕ್ಕಿಂತ ಹೆಚ್ಚಿನ ಮಾನಸಿಕ ಸುಖ ಸಂತೋಷಗಳನ್ನು ತಮ್ಮ ಕುಟುಂಬದಿಂದ ಪಡೆಯುತ್ತಾರೆ.

ಅವರ ಹೆಂಡತಿಯರು ಪೂರ್ಣಾವಧಿಯ ಕೆಲಸ ಮಾಡುವವರಾದರೂ ಪುರುಷರು ಮನೆಯಲ್ಲಿ ಹೆಚ್ಚೇನೂ ಕೆಲಸ ಮಾಡುತ್ತಿಲ್ಲ ಎನ್ನುವುದು ನಿಜ. ಅಮೆರಿಕದಲ್ಲಿ ದುಡಿವ ಮಹಿಳೆ, ತನ್ನ ಮನೆಗೆಲಸಕ್ಕಾಗಿ ವಾರಕ್ಕೆ ಸರಾಸರಿ ೨೬ ಘಂಟೆಗಳನ್ನು ವಿನಿಯೋಗಿಸುತ್ತಾಳೆ. ಅವರ ಗಂಡಂದಿರು ಅದಕ್ಕಾಗಿ ೩೬ ನಿಮಿಷಗಳನ್ನು ಉಪಯೋಗಿಸುತ್ತಾರೆ. ಹೆಚ್ಚಿನ ಪುರುಷರು ಮಾಡುವ ಮನೆಗೆಲಸವೆಂದರೆ ಕೇವಲ ಅಂಗಡಿಯಿಂದ ಸಾಮಾನು ತರುವುದು. ಭಾರತದಲ್ಲಿ ದುಡಿವ ಮಹಿಳೆ ಕೂಡ ಮಾಡುವ ಮನೆಗೆಲಸ ಅಸಮ ಪ್ರಮಾಣದ್ದು.

ಹಾಗಾದರೆ ೫೦-೫೦ರ ಆದರ್ಶ ವಿವಾಹದ ಅರ್ಥವೇನು? ಮಹಿಳೆಯರು ಅದರರ್ಥ ಮರೆತು ಪುರುಷರು ಗೊರಕೆ ಹೊಡೆಯುತ್ತಿರುವುದನ್ನು ನೋಡಿ ಸುಮ್ಮನಾಗಬೇಕೆ ಅಥವಾ ಪರಿಪೂರ್ಣ ಪಾಲುದಾರಿಕೆಗಾಗಿ ಹೋರಾಟ ಮುಂದುವರಿಸಬೇಕೆ? ಆ ಗುರಿ ಸಾಧಿಸಲು ಅಸಮರ್ಥರಾಗಿ ಸಂಕಟ ಪಡಬೇಕೆ? ಎರಡು ಬಲೆಗಳಲ್ಲಿ ಬೀಳುವುದನ್ನು ತಪ್ಪಿಸಿಕೊಳ್ಳಲು ಸಾಧ್ಯವಾದಲ್ಲಿ ಎರಡು ವಿಪರೀತಾರ್ಥಗಳೂ ಅವಶ್ಯವಲ್ಲ.

ಒಂದನೆ ಬಲೆಯ ಪ್ರಕಾರ ಎಲ್ಲ ವಲಯಗಳಲ್ಲೂ ಮದುವೆ ೫೦-೫೦ರ ವ್ಯವಸ್ಥೆ ಎನ್ನುವುದೊಂದು ಕಲ್ಪನೆ. ಮದುವೆ ಹಾಗಾಗಲು ಸಾಧ್ಯವಿಲ್ಲ. ಸಾಗರದಂತೆ ಅದು ನಿರಂತರವಾಗಿ ಬದಲಾಗುತ್ತಲೇ ಇರುತ್ತದೆ. ಮಾನಸಿಕವಾಗಿ ಈ ವಾರ ನಿನ್ನದು ಮೇಲುಗೈ ಆಗಿರಬಹುದು. ಕಾರಣ ಅವನ ಬಾಕಿ ಉಳಿದ ಕಾಗದ ಪತ್ರಗಳ ಬೆರಳಚ್ಚು ಮಾಡಲು ದೀರ್ಘ ರಾತ್ರಿಗಳನ್ನು ನೀನು ಕಳೆದಿರುವುದಕ್ಕಾಗಿ ಅವನು ನಿನಗೆ ಕೃತಜ್ಞನಾಗಿರಬಹುದು. ಆದರೆ ಮರುವಾರ ಅವನು ತನ್ನ ನೆಚ್ಚಿನ ಆಟಗಳನ್ನು ನೋಡುತ್ತಾ ಕುಳಿತಾಗ ನೀನದನ್ನು ಕಳೆದುಕೊಳ್ಳಬಹುದು. ತೀರಾ ಆಧುನಿಕ ವಿವಾಹ ಕೂಡ ೫೦-೫೦ರ ವ್ಯವಸ್ಥೆಯಲ್ಲ. ಅದು ಈ ವಾರ ೨-೯೮ ಆಗಿದ್ದಲ್ಲಿ ಮರುವಾರ ೯೮-೨ರ ವ್ಯವಸ್ಥೆಯಾಗಬಹುದು.

ಎರಡನೆಯ ಪ್ರಕಾರದಲ್ಲಿ ಎಲ್ಲ ಬಗೆಯ

ರೀಡರ್ಸ್ ಡೈಜೆಸ್ಟ್ ವಿಶೇಷಾಂಕದಲ್ಲಿ ಪ್ರಕಟವಾದ ಕ್ಯಾರೊಲ್ ಟಾವ್ ರಿಸ್ ಎಂಬುವರ ''ಮ್ಯಾರೇಜ್ ಈಸ್ ನಾಟ್ ಎ ಫಿಫ್ಟಿ/ಫಿಫ್ಟಿ ಅಫೇರ'' ಎಂಬ ಲೇಖನದ ಅನುವಾದ

೫೦-೫೦ರ ವ್ಯವಸ್ಥೆಯ ವಿವಾಹಗಳೂ ಗಣ್ಯ ಎನ್ನುವುದೊಂದು ಕಲ್ಪನೆ. ಇತ್ತೀಚಿನ ಸಂದರ್ಭಗಳಲ್ಲಿ ಅನೇಕ ಆದರ್ಶ ಸಂಬಂಧಗಳ ಬಗ್ಗೆ ನಾವು ಕೇಳಿದ್ದೀವೆ. ಜೊತೆಗಾರಿಕೆಯ ಮದುವೆಯಲ್ಲಿ ಗಂಡ, ಹೆಂಡಿರ ಪ್ರತಿಯೊಂದು ನಿರ್ಣಯ ಮುಂತಾದ ಎಲ್ಲ ಕ್ರಿಯೆಗಳನ್ನು ಹಂಚಿಕೊಳ್ಳಬಹುದು. ಹಂಚಿಕೆಯ ಕರ್ತವ್ಯಗಳ ಪದ್ಧತಿಯಲ್ಲಿ ಗಂಡ ಹೆಂಡತಿಯರ ನಡುವೆ ಮನೆಯ ಎಲ್ಲ ಕೆಲಸ ಕಾರ್ಯಗಳೂ ವಿಭಾಗಿಸಲ್ಪಡುತ್ತವೆ. ಹಾಗೂ ಭಾವನಾತ್ಮಕ ಸಮತೋಲನದ ಪದ್ಧತಿಯ ಪ್ರಕಾರ ಎಲ್ಲ ಗಂಡ ಹೆಂಡತಿಯರು ಪರಸ್ಪರರನ್ನು ಸಮಾನವಾಗಿ ಪ್ರೀತಿಸುತ್ತಾರೋ, ಅಲ್ಲಿ ಯಾರು, ಏನು ಕೆಲಸ ಮಾಡುತ್ತಾರೆನ್ನುವುದರ ಬಗ್ಗೆ ಒತ್ತು ಕೊಡಬೇಕಾಗಿಲ್ಲ.

ಎಲ್ಲ ಸಮಾನತೆಯ ವಿವಾಹಗಳೂ ಸಮಾನವಾಗಿ ಸೃಷ್ಟಿಯಾಗಿರುವುದಿಲ್ಲ. ಸಂಗಾತಿತನದ ಆದರ್ಶ ವೈಯಕ್ತಿಕ ಇಚ್ಛೆಗಳನ್ನು ಅಲಕ್ಷಿಸುವುದರಿಂದ ವಿಫಲಗೊಂಡಿತು. ''ನನ್ನ ಗಂಡ ಛಾಯಾಚಿತ್ರ ಗ್ರಹಣವನ್ನು ಪ್ರಾರಂಭಿಸಿದಾಗ ಕಟ್ಟಡಗಳು ದೋಣಿಗಳು ಮುಂತಾದವುಗಳ ಚಿತ್ರ ಸೆರೆಹಿಡಿಯಲು ಹೊರಟಾಗಲೆಲ್ಲ ನಾನೂ ಜೊತೆಯಲ್ಲಿ ಬರಬೇಕೆಂದು ಒತ್ತಾಯಿಸುತ್ತಿದ್ದ. ಆ ಚಿತ್ರಗಳನ್ನು ತೊಳೆಯುವಾಗಲೂ ನಾನು ಜೊತೆಯಲ್ಲಿರಬೇಕೆನ್ನುತ್ತಿದ್ದ. ಆದರೆ ಅದಷ್ಟು ಬೇಸರ ತರುವ ಆಲೋಚನೆ ಗೊತ್ತೇನು?'' ಎಂದು ಕೇಳುತ್ತಾಳೆ ಗೆಳತಿ ಗ್ರೇಸ್.

ಗ್ರೇಸ್ ನಿಜಕ್ಕೂ ತನ್ನ ಗಂಡನ ಸಂತಸದಲ್ಲಿ ಪಾಲ್ಗೊಳ್ಳಲು ಇಚ್ಛಿಸುತ್ತಿದ್ದಳು., ಆದರೆ ಕೆಲವು ಸಂತಸಗಳು ಒಂಟಿಯಾಗಿಯೇ ಅನುಭವಿಸುವಂಥವು, ಎನ್ನುವುದನ್ನು ಅರ್ಥಮಾಡಿಕೊಳ್ಳಲು ಅವರಿಬ್ಬರಿಗೂ ಸಾಕಷ್ಟು ಸಮಯ ಬೇಕಾಯ್ತು. ಸಮಾನ ಅನುಭವಗಳೆನ್ನುವ ಆಲೋಚನೆ ಅನೇಕ ಗಂಡ ಹೆಂಡತಿಯರ ಮೇಲೆ ಬಲವಾದ ಒತ್ತಡ ತಂದಿತು.

ಹಂಚಿಕೆಯ ಕೆಲಸಗಳ ವ್ಯವಸ್ಥೆಯಲ್ಲೂ ಕಠಿಣ ವಾಸ್ತವಿಕತೆಯನ್ನೆದುರಿಸಬೇಕಾಯ್ತು. ನನ್ನ ಸ್ನೇಹಿತೆ ಮರ್ಸಿ ೮ ವರ್ಷಗಳ ಹಿಂದೆ ಮದುವೆಯಾದಳು. ಅವಳು ಮತ್ತವಳ ಗಂಡ ಕೆಲಸಗಳನ್ನು ಹಂಚಿಕೊಳ್ಳುವ ಒಪ್ಪಂದ ಮಾಡಿಕೊಂಡರು. ಮನೆಗೆಲಸಗಳನ್ನು ಯಾವಾಗ, ಯಾರು, ಎಷ್ಟು ಮಾಡಬೇಕೆಂದು ಕೂಡಿಯೇ ಲೆಕ್ಕಾಚಾರ ಮಾಡಿದರು. ಆದರೆ ಇದು ಇಬ್ಬರನ್ನೂ ವಿಚಿತ್ರ ಪರಿಸ್ಥಿತಿಗೆ ಸಿಕ್ಕಿಸಿತು. ೪ ತಿಂಗಳವರೆಗೆ ನಡೆದ ಈ ವ್ಯವಸ್ಥೆ ಅನಂತರ ಅಂತ್ಯಗೊಂಡಿತು.

ಈ ದಿನಗಳಲ್ಲಿ ನಾನು ೭೫% ಭಾಗ ಮನೆಗೆಲಸಗಳ ಹೊರೆಹೊತ್ತಿದ್ದೇನೆ. ಆದರೆ ನನಗೆ ಮಾಡಲು ಸಾಧ್ಯವಾಗದ ಅಥವಾ ಮಾಡಲಿಷ್ಟವಿಲ್ಲದ ಅನೇಕ ಕೆಲಸಗಳನ್ನು ಆತ ಮಾಡುತ್ತಾನೆ. ನಾನು ಮೂಲದ ಕನಸನ್ನು ಮರೆತಿಲ್ಲ. ಆದರಲ್ಲಿ ಸ್ವಲ್ಪ ಮಾರ್ಪಾಡು ಮಾಡಿಕೊಂಡಿದ್ದೇನೆ'' ಎನ್ನುತ್ತಾಳೆ ಮರ್ಸಿ. ಜೊತೆಗಾರಿಕೆಯಂತೆ ಹಂಚಿಕೆಯ ಕರ್ತವ್ಯಗಳ ಆಲೋಚನೆಯೂ, ಜಿಗಟುತನ ಹಾಗೂ ಅತಿ ಹೆಚ್ಚಿನ ನಿರೀಕ್ಷೆಗಳಿಂದ ನರಳಿತು. ಆದರೂ ನಾವು ಸಂಪೂರ್ಣ ಆಲೋಚನೆಯನ್ನೇ ಬಿಟ್ಟುಕೊಡಬೇಕಾಗಿಲ್ಲ.

ಭಾವನಾತ್ಮಕ ಸಮತೋಲನೆಯ ವ್ಯವಸ್ಥೆ ಅಧಿಕಾರ ಹಂಚಿಕೆಯೊಂದಿಗೆ ಸಂಘರ್ಷಿಸಿತು. ನನ್ನ ಗಂಡ ಸಂಪೂರ್ಣ ಪುರುಷ ಪ್ರಧಾನ ವಾತಾವರಣದಲ್ಲೇ ಬೆಳೆದು ಬಂದವ. 'ಹೌದು ಪ್ರಿಯಾ' ಎನ್ನುವುದನ್ನು ಬಿಟ್ಟು ಹೆಂಡತಿ ಮತ್ತೇನನ್ನೂ ಹೇಳುತ್ತಿರಲಿಲ್ಲ. ಮಹಿಳೆಯರೀಗ ಬಹಳ ಬದಲಾಗಿದ್ದಾರೆ. ಮತ್ತವರು ಹಿಂದಿನ

ಪರಿಸ್ಥಿತಿಗೆ ಹಿಂತಿರುಗಲಾರರು.

ಆದರೆ ಇಂದಿಗೂ ಎಲ್ಲಕ್ಕೂ 'ಹೌದು ಪ್ರಿಯಾ' ಎಂದು ಹೇಳುವ ಸಂತಸಕರ ವಿವಾಹಗಳೂ ಇವೆ. ಆದರೆ ಅವು ವಿರಳವಾಗುತ್ತಿವೆ. ಅನೇಕ ಪರಿಶೀಲನೆಗಳ ನಂತರ 'ಹೌದು ಪ್ರಿಯಾ' ಎನ್ನುವ ವಿವಾಹಗಳು ವಾಗ್ವಾದಕ್ಕೆ, ಕಟುತ್ವಕ್ಕೆ ಹಾಗೂ ನಿರಾಶೆಗೆಡೆಗೊಡುವ ವಿಚಾರವೆನ್ನುವುದು ಅನೇಕ ಅಮೆರಿಕನ್ ದಂಪತಿಗಳ ವಿಚಾರ. ಅಧಿಕಾರ ಹಾಗೂ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಕ್ಕು ಗಂಡ ಹೆಂಡತಿಯರಲ್ಲಿ ಯಾರೊಬ್ಬರ ಕೈಲಿದ್ದರೂ ಮತ್ತೊಬ್ಬರು ಅಸಮಾಧಾನಗಳ್ಳುವುದು ಸ್ವಾಭಾವಿಕ.

ಈ ೫೦-೫೦ರ ಆದರ್ಶದ ಗುರಿಗೆ ನಾವೆಷ್ಟು ಸನಿಹದಲ್ಲಿದ್ದೇವೆ? ನಾವು ತಿಳಿದುಕೊಳ್ಳುವುದಕ್ಕಿಂತ ಹತ್ತಿರವಿರಬಹುದು. ಹಣದುಬ್ಬರ ಹಾಗೂ ಪರಿವರ್ತನೆಯ ಕೊನೆಯ ದಶಕದಲ್ಲಿ ಅನೇಕ ಪುರುಷರು ತಮ್ಮ ಹೆಂಡತಿಯರೊಂದಿಗೆ ಆರ್ಥಿಕ ಹೊರೆ ಹಂಚಿಕೊಳ್ಳಲು ಸಿದ್ಧರಾಗಿದ್ದಾರೆ. ಅಧಿಕಾರ ಹಂಚಿಕೊಳ್ಳುವುದರಲ್ಲಿ ಅಷ್ಟೇ ಉತ್ಸುಕರಾಗಿಲ್ಲ. ಆದರೆ ಆ ಪರಿಸ್ಥಿತಿಯೂ ಬದಲಾಗುತ್ತಿದೆ.

೨೫ ವರ್ಷಗಳ ಹಿಂದೆ ನಡೆದ ನನ್ನ ಗೆಳತಿ ಕ್ಯಾತಿಯ ವಿವಾಹ ಸಮಯದ ಮಾಪಕವಿರಬಹುದು. "ನಾವು ಮದುವೆ ಆದಾಗ, ನಾನು ಮನೆಯಲ್ಲೇ ಉಳಿದು ನನ್ನ ಗಂಡ ಹೇಳಿದ ಕ್ಷಣದಲ್ಲಿ ಅವನೊಂದಿಗಿರಲು ತಯಾರಾಗಬೇಕಿತ್ತು. ಪದವೀಧರಳಾಗಲು ಕಾಲೇಜಿಗೆ ಹೋಗಬೇಕೆನ್ನುವ ಇಚ್ಛೆ ನನಗೆ. ಆದರೆ ಹೆಂಡತಿ ದುಡಿವ ಮಹಿಳೆ ಎಂದರೆ ಅವನ ಸ್ವಾಭಿಮಾನಕ್ಕೆ ಅಪಮಾನ. ಆದರೆ ನನ್ನ ವಿದ್ಯಾಭ್ಯಾಸ ಮುಗಿವ ವೇಳೆಗೆ ನಾನು ಅವನಿಗಿಂತ ಹೆಚ್ಚು ಸಂಪಾದಿಸದಿರುವವರೆಗೂ ನಾನು ಕೆಲಸದಲ್ಲಿದ್ದರೂ ಪರವಾಗಿಲ್ಲ ಎನ್ನುವ ಹಂತ ತಲುಪಿದ್ದ. ಮುಂದೆ ಆ ಪರಿಸ್ಥಿತಿಯೂ ಬದಲಾಯ್ತು. ಈಗ ನಾನವನಿಗೆ ಆರ್ಥಿಕವಾಗಿ ಸಹಾಯ ಮಾಡಿದರೆ ಅವನಿಗೆ ಸಂತೋಷವಾಗುತ್ತದೆನ್ನುವುದು ನನ್ನ ಅನಿಸಿಕೆ.

೫೦-೫೦ರ ಆದರ್ಶ ವಿವಾಹ ವ್ಯವಸ್ಥೆಯ ಸಮಸ್ಯೆ, ಜನ ಅವರ ಬಗ್ಗೆ ಹೊಂದಿರುವ ತಪ್ಪು ಕಲ್ಪನೆಯಲ್ಲಡಗಿದೆ. ಇಬ್ಬರು ವ್ಯಕ್ತಿಗಳು, ವಿವಾಹವೊಂದು ಸೇಬಿನ ಹಣ್ಣಿನಂತೆ ಎನ್ನುವ ರೀತಿ , ಸರಿಸಮಾನವಾಗಿ ಅದನ್ನು ಅರ್ಧಕ್ಕೆ ಕತ್ತರಿಸುವಂತಿಲ್ಲ. ಭಾವನಾತ್ಮಕವಾದ, ಆಸಕ್ತಿಗಳಲ್ಲಿ ಅಥವಾ ಜವಾಬ್ದಾರಿಗಳಲ್ಲಿ ತಮ್ಮ ಅಧಿಕಾರವನ್ನು ಹಾಗೂ ಕುಶಲತೆಯನ್ನು ಸಂಪೂರ್ಣವಾಗಿ ಇಬ್ಬರು ವ್ಯಕ್ತಿಗಳು ವಿಭಾಗಿಸಿಕೊಳ್ಳುವುದು ಸಾಧ್ಯವಿಲ್ಲದ್ದು. ಆದರೆ ಎಲ್ಲಿ ಇಬ್ಬರು ಪಾಲುದಾರರೂ ಸಮಾನವಾಗಿ ಪ್ರೀತಿಸಲ್ಪಡುತ್ತಿದ್ದು, ಸಂಸಾರದ ಬಗ್ಗೆ ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ಇಬ್ಬರೂ ಭಾಗಿಗಳಾಗಿರುತ್ತಾರೋ ಕುಟುಂಬದ ಒಳಿತಿಗೆ ಇಬ್ಬರ ಕೊಡುಗೆಯೂ ಸಮಾನವಾಗಿದೆ ಎಂದು ಭಾವಿಸುತ್ತಾರೋ ಅಂಥ ಭಾವನಾತ್ಮಕ ಸಮಾನತೆ ಯಶಸ್ವಿಯಾಗುತ್ತದೆ.

ಪಾತ್ರೆ ತೊಳೆಯುವುದರಲ್ಲಾಗಲೀ, ನಿರ್ಧಾರ ತೆಗೆದುಕೊಳ್ಳುವುದರಲ್ಲಾಗಲೀ, ಅಥವಾ ಬೇರೆ ಯಾವುದೇ ವಿಧವಾದ ಪ್ರೀತಿಯ ಚಟುವಟಿಕೆ ಗಳಲ್ಲಾಗಲೀ ೫೦-೫೦ರ ಉತ್ಸಾಹ, ಹೊಂದಾಣಿಕೆ ಹಾಗೂ ಕೂಡುಕೊಳ್ಳುವಿಕೆಯೇ ಯಶಸ್ವೀ ವಿವಾಹದ ಮುಖ್ಯ ಅಂಶಗಳು.

ಮಕ್ಕಳಲ್ಲಿ ವಾಚನಾಭಿರುಚಿ ವೃದ್ಧಿಸುವುದು ಹೇಗೆ?

ಎ.ಡಿ.ನಂಜುಂಡಸ್ವಾಮಿ
ಮನೆ ನಂ೧೧/ಸಿ,,೧ನೇ ತಿರುವು
ಕೆ.ಎನ್.ಪುರ, ಉದಯಗಿರಿ,
ಮೈಸೂರು

ವಿದ್ಯುನ್ಮಾನ ಯುಗದಲ್ಲಿ ಈ ಹಿಂದೆ ನಾವು ನೋಡಿ ಕೇಳದಿರುವ ಮಾಹಿತಿ, ಮನರಂಜನೆಯ ಸಂಗತಿಗಳು ಅದ್ಭುತ ಸಾಧನೆ ಎಂದು ಅಚ್ಚರಿಗೊಳ್ಳುತ್ತೇವೆ. ಮುಂಜಾನೆ ಹಾಸಿಗೆಯಿಂದ ಎದ್ದು, ಆಕಳಿಸುತ್ತಿದ್ದಂತೆ ಟಿ.ವಿ. ಪ್ರಸ್ತುತ ಪಡಿಸುವ ಸಂಗೀತ ನಮ್ಮ ಕಿವಿಯನ್ನು ಅರಳಿಸುತ್ತದೆ. ಹೊತ್ತು ಮುಳುಗುತ್ತಿದ್ದಂತೆ, ಊಟ- ಉಪಚಾರದ ನೈಮಿತ್ಯಗಳು ಮುಗಿದು ಅದೇ ಟಿ.ವಿ.ಯ ಮುಂದೆ ಕುಳಿತು, ಸ್ವಲ್ಪ ಹೊತ್ತು ಅದರ ಜೋಗುಳ ಕೇಳಿದ ಅನಂತರ ತೂಕಡಿಸಿ ನಿದ್ರೆಗೆ ಜಾರುತ್ತೇವೆ. ಕೇಳಿ-ನೋಡಿದ ಸಂಗತಿಗಳ ಬಗ್ಗೆ ಇದು ಹೇಗೆ ? ಏನು? ಎತ್ತ? ಇತ್ಯಾದಿ ಪ್ರಶ್ನೆಗಳು ತದನಂತರ ಎದುರುಗೊಳ್ಳುವುದು ಸಹಜ.

ದೂರದರ್ಶನ ಸೇರಿದಂತೆ, ಅದರ ಜ್ಞಾತಿಗಳಾದ ವಿದ್ಯುನ್ಮಾನ ಪರಿಕರಗಳಿಂದ , ನಮಗೆ ನಿತ್ಯ ರಂಜನೆಯ ಸಂತೆ ನಡೆದೇ ಇರುತ್ತದೆ. ನಾಟಕ, ಕಥೆ, ಹಾಡು, ಸಾಹಸ, ಕುಣಿತ, ಪ್ರಣಯ ಒಂದೇ ಎರಡೇ, ಕ್ಷಣ ಮಾತ್ರದಲ್ಲಿ ನಮ್ಮ ಗೃಹಣಿಯರ ಎದುರಲ್ಲಿ ಮಾಯಾಲೋಕವನ್ನು ಈ ಮಾಧ್ಯಮಗಳು ಸೃಷ್ಟಿಸಿವೆ. ಅವರ ನಡುವೆ ಪುರಾಣದ ಚರ್ಚೆ ನಡೆಯುತ್ತಿದ್ದರೆ, ಅಲ್ಲಿಗೆ ಹಾಜರಾದ ಪೋರ ''ಓಹೋ ಅದು ನನಗೆ ಗೊತ್ತು, ಮಹಾಭಾರತ, ರಾಮಾಯಣ ಅಷ್ಟೇ ಏಕೆ ಬೈಬಲ್‌ನ ಹೊಸ ಹಾಗೂ ಹಳೆ ಒಡಂಬಡಿಕೆಯ ಪ್ರಸಂಗಗಳು ನನಗೆ ಚೆನ್ನಾಗಿ ತಿಳಿದಿದೆ'' ಎನ್ನಬಹುದು. ಈ ಎಲ್ಲ ಸಂಗತಿ ಗಳನ್ನು ಟಿ.ವಿ. ಮಾಯಾಪೆಟ್ಟಿಗೆಯ ಕಿರುತೆರೆಯಲ್ಲಿ ಮುಂಚಿತವಾಗಿ ನೋಡಿ, ತಮ್ಮ ಅಮ್ಮಂದಿರ ಚರ್ಚೆ ಕಾಡುಹರಟೆ ಎಂದು ಮಕ್ಕಳು ಮೂಗು ಮುರಿದರೆ ಆಶ್ಚರ್ಯವಿಲ್ಲ. ವಿಶ್ವಕೋಶದ ಸಮಗ್ರ ಸಂಪುಟಗಳು ಒಂದು ಫ್ಲಾಪಿಯಲ್ಲಿ ಬಂಧಿಯಾಗಿರುವಾಗ , ಈ ವ್ಯರ್ಥ ನಿಘಂಟು ನನ್ನ ಕೋಣೆಗೇಕೆಬೇಕು ? ಎಂದು ನಮ್ಮ ಮಕ್ಕಳು ಪುಸ್ತಕಗಳ ಬಗ್ಗೆ ತಾತ್ಸಾರದಿಂದ ಇರಲೂ ಬಹುದು.

ಪ್ರಸ್ತುತ ಸಂದರ್ಭದಲ್ಲಿ ನಾವು ಸಹಿಸಲಿ ಸಾಧ್ಯವಾದ, ಅಷ್ಟೇ ಬೇಸರ ತರುವ ಸುದ್ದಿ ಸಂಗತಿಗಳನ್ನೂ, ಐಕ್ಯದ ಬದುಕನ್ನು ಛಿನ್ನಭಿನ್ನವಾಗಿಸುವ, ಸಮುದಾಯವನ್ನು ತಲ್ಲಣ ಗೊಳಿಸುವ ವಿಷಯಗಳನ್ನು ವಿದ್ಯುನ್ಮಾನದ ಬಳುವಳಿಯಾಗಿ ಅನಿವಾರ್ಯ ಸ್ವೀಕರಿಸಬೇಕಾಗಿದೆ. ಈ ಮಾಧ್ಯಮದ ಮೂಲಕ ನಮ್ಮ ಚಿಣ್ಣರಿಗೆ ನಾವು ನೀಡುವುದಾದರೂ ಏನು? ಅವರ ಕಣ್ಣು, ಕಿವಿಗಳನ್ನು ತಣಿಸುವುದು ಭ್ರಮೆಯ ಸರಕುಗಳು, ಸತ್ತ್ವರಹಿತ ಆಹಾರವನ್ನು ತಿಂದುಂಡು ವಿಹರಿಸುವ , 'ಅಕ್ವೇರಿಯಂ ಮೀನಿನ' ಸ್ಥಿತಿ ನಮ್ಮ ಮಕ್ಕಳ ಪಾಡು! ಈ ಮುನ್ನೆಲೆಯಲ್ಲಿ ಗ್ರಂಥಾವಲೋಕನ, ವಾಚನ, ಅಧ್ಯಯನಗಳ ಆಗತ್ಯತೆಯನ್ನು ಚಿಕಿತ್ಸಕ ಬುದ್ಧಿಯಿಂದ ನಮ್ಮ ಮಕ್ಕಳಿಗೆ ಜ್ಞಾನಾನ್ನವನ್ನು ಉಣಬಡಿಸಬೇಕಾಗಿದೆ.

ಓದು ಒಂದು ಅನ್ವೇಷಣೆಯ ಪ್ರಕ್ರಿಯೆ, ಅದು ವಾಚಕನ ಮನೋಭೂಮಿಕೆಯಲ್ಲಿ ಪ್ರತಿಮೆಯನ್ನು ಕಡೆದು ನಿಲ್ಲಿಸುವ ಮಾಧ್ಯಮ. ಈಗ ಓದಿನ ಸ್ಥಾನದಲ್ಲಿ ವಿದ್ಯುನ್ಮಾನ ಸಾಧನಗಳು ಭರಾಟೆಯಲ್ಲಿರುವುದರಿಂದ , ಒಂದು

ಕಾಲದಲ್ಲಿ ಪ್ರತಿಷ್ಠಿತ ಪತ್ರಿಕೆಗಳಾದ 'ಪಂಚ್' ಅದರ ಮುನ್ನೆಲೆಯಲ್ಲಿ ಭಾರತದಲ್ಲಿ ಆರಂಭ ಗೊಂಡ' 'ಶಂಕರ್ಸ್ ವೀಕ್ಲೀ' ಎನ್‌ಕೌಂಟರ್', 'ಇಲ್ಲಸ್ಟ್ರೇಟಡ್ ವೀಕ್ಲಿ ಆಫ್ ಇಂಡಿಯಾ', 'ಧರ್ಮಯುಗ', 'ಕಲ್ಪನಾ', 'ಮಾಧ್ಯಮ' 'ಉರ್ದು ಸಾಹಿತ್ಯ' ಈ ಎಲ್ಲ ನಿಯತಕಾಲಿಕೆ ಗಳು ಮೂಲೆಗುಂಪಾದವು. ಕುಟುಂಬದವರ ಓದಿಗಾಗಿ ಸಂಗ್ರಹಿಸಿದ ಗ್ರಂಥಗಳು, ಕಾಲು ಹಾದಿಯಲ್ಲಿ ಮಾರಾಟಕ್ಕೆ ಬಂದ ಎರಡನೇ ದರ್ಜೆ ಸರಕುಗಳಾದುವು.

ಬದಲಾದ ಸನ್ನಿವೇಶದಲ್ಲಿ ನಮ್ಮ ಬದುಕಿನ ಒಂದು ಅಂಗವೆನಿಸಿದ ಗ್ರಂಥಗಳಿಗೆ ನೆಲೆಯಿಲ್ಲ ದಂತಾಗಿರುವುದು ವಿಪರ್ಯಾಸ. ಒಂದು ತಲೆಮಾರಿನ ಜನಾಂಗ ಪದವಿ, ಹುದ್ದೆಗಳಿಗಾಗಿ ಆಕರ ಗ್ರಂಥಗಳನ್ನು ಪಕ್ಕಕ್ಕೆ ಸರಿಸಿ, ಮಾರು ಕಟ್ಟೆಯಲ್ಲಿ ಲಭ್ಯವಿರುವ ಸಿದ್ಧಪಾಠಗಳಿಗೆ ಮೊರೆ ಹೋಗುತ್ತಿದ್ದಾರೆ. ಶಿಕ್ಷಕರೆನಿಸಿಕೊಂಡವರು ಅಗ್ಗವಾಗಿ ದೊರಕುವ ಸಿದ್ಧಪಾಠಗಳಿಗೆ ಮೊರೆ ಹೋಗುತ್ತಿದ್ದಾರೆ. ಶಿಕ್ಷಕರೆನಿಸಿಕೊಂಡ ವರು ಅಗ್ಗವಾಗಿ ದೊರಕುವ ಸಿದ್ಧಪಾಠಗಳಿಗೆ ಗ್ರಾಹಕ ರಾಗಿರುವುದು ಕಟುಸತ್ಯ.

ಈ ಎಲ್ಲಾ ಪ್ರತಿಕೂಲ ಸ್ಥಿತಿಯ ನಡುವೆ ನಮ್ಮ ಭಾವಿಜನಾಂಗವಾದ ಮಕ್ಕಳನ್ನು ಪುಸ್ತಕಗಳತ್ತ ಸೆಳೆಯುವುದಾದರೂ ಹೇಗೆ ? ಅದಕ್ಕಾಗಿ ಕುಟುಂಬ ವ್ಯವಸ್ಥೆಯಿಂದ ಮಕ್ಕಳಲ್ಲಿ ಪುಸ್ತಕ ಪ್ರೇಮ ಬೆಳೆಸುವ ಪ್ರಯತ್ನ ಹಿರಿಯ ರಾದ ಪೋಷಕರು ಶಿಕ್ಷಕ ವೃಂದ ಪ್ರಾಥಮಿಕ ಇಲ್ಲವೆ ನರ್ಸರಿ ಹಂತದಿಂದ ಆರಂಭಿಸುವುದು ಯುಕ್ತ.

ಮಗು ಹಿರಿಯರನ್ನು ಅನುಕರಿಸುವುದು ಸಹಜ. ನಮ್ಮ ಹಿರಿಯರೆನಿಸಿಕೊಂಡವರು ತಮ್ಮ ಭೌತಿಕ ಸುಖಕ್ಕಾಗಿ ಅಗತ್ಯ ಸಾಧನಾ ಸಲಕರಣೆ, ಸಂಪರ್ಕಗಳಿಗೆ ನೀಡುವ ಮಹತ್ವವನ್ನು ಪುಸ್ತಕಗಳಿಗೆ ನೀಡಿದಂತಿಲ್ಲ. ಭೌತಿಕಸಾಧನಗಳು ನೀಡುವ ತೃಪ್ತಿ, ಭರವಸೆ, ನೆಮ್ಮದಿಯನ್ನು ಉತ್ತಮ ಗ್ರಂಥಗಳು ಕೊಡ ಲಾರವೆ? ಹೆಚ್ಚಿನ ಮನೆಗಳಲ್ಲಿ ಪುಸ್ತಕಗಳಿಗೆ ಯೋಗ್ಯ ಸ್ಥಳದ ಕೊರತೆ ಕಂಡು ಬರುತ್ತದೆ. ಕುಟುಂಬದಲ್ಲಿ ಗ್ರಂಥಗಳಿಗೆ ಯೋಗ್ಯ ಸ್ಥಾನ ವಿರಬೇಕು. ಓದಲು ಯಾವ ಪುಸ್ತಕ ಆಯ್ದು ಕೊಳ್ಳಬೇಕು, ವಿನಿಮಯಕ್ಕೆ ಯಾವ ಗ್ರಂಥ ಯೋಗ್ಯ ಎಂಬ ಬಗ್ಗೆ ಮಕ್ಕಳ ಸಮ್ಮುಖದಲ್ಲಿ ಹಿರಿಯರು ಚರ್ಚಿಸುವಂತಿರಬೇಕು. ಮಕ್ಕಳಿಗಾಗಿ ಓದುವ, ಮಕ್ಕಳೊಡನೆ ಓದುವ ಹವ್ಯಾಸ ಆರೋಗ್ಯಕರವಾದ ಬೆಳವಣಿಗೆ.

ಸಾಮಾನ್ಯವಾಗಿ ಮಕ್ಕಳು ಪುಸ್ತಕದಲ್ಲಿರುವ ಚಿತ್ರಗಳತ್ತ ಗಮನ ಹರಿಸುತ್ತಾರೆ. ಪಕ್ಷಿ, ಪ್ರಾಣಿ, ಜನರ ಹಾವಭಾವದ ದೃಶ್ಯಗಳು ಮಕ್ಕಳನ್ನು ಸೆಳೆಯುತ್ತವೆ. ಪದಗಳಿಗಿಂತ, ಚಿತ್ರಗಳು ಮಕ್ಕಳಿಗೆ ಹೆಚ್ಚು ಮುದ ಕೊಡುತ್ತವೆ. ಈ ನೆಲೆಯಲ್ಲಿ ಹಿರಿಯರು ಮಕ್ಕಳಿಗೆ ಪುಸ್ತಕ ಪರಿಚಯಿಸುವುದು ಯುಕ್ತ.

ನರ್ಸರಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳು ಶಿಕ್ಷಕಿ ಕಲಿಸಿಕೊಟ್ಟ 'ಶಿಶುಪ್ರಾಸ'ವನ್ನು ಎಷ್ಟು ಚೆನ್ನಾಗಿ ರಾಗವಾಗಿ ಹಾಡಿ ಮತ್ತು ಆಡಿ ಆಚ್ಚರಿಗೊಳಿಸಿರುವುದುಂಟು. ಗೇಯ ಗುಣವುಳ್ಳ 'ಶಿಶುಪ್ರಾಸ' ಗಳಿಂದ ಮಕ್ಕಳು ಮೋಹಿತ ರಾಗುತ್ತಾರೆ. ಮಗುವಿನ ಕಲಿಕೆಗೆ ನೆರವಾಗುವ ಸ್ಫುರಣೆಗೊಂಡ ಪದಗಳು ನಾಟಕೀಯವಾಗಿ ಹಾವಭಾವದಿಂದ ಅಭಿವ್ಯಕ್ತಿಸಿದಾಗ ದುಃಖ, ಸಂತಸ, ಆಶ್ಚರ್ಯ ಸನ್ನಿವೇಶದ ಚಿತ್ರಗಳು ಮಕ್ಕಳ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯು ತ್ತವೆ.

ಕಥೆಯ ಬಗೆಗಿನ ಮಕ್ಕಳ ವ್ಯಾಮೋಹ, ಪುಸ್ತಕ ಪ್ರೇಮದ ಪ್ರಥಮ ಸೋಪಾನ, ಪ್ರಾಣಿ-ಪಕ್ಷಿ ಸಂಬಂಧ ಕಥೆಗಳಲ್ಲಿ ಬರುವ, ಅವುಗಳ

ಸ್ವಭಾವ ಮಕ್ಕಳ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುತ್ತವೆ. ಪಂಚತಂತ್ರದ ಪ್ರಾಣಿ ಪಕ್ಷಿಗಳ ಕಥೆಗಳು ಯಾವ ದೇಶದ ಮಕ್ಕಳಿಗೂ ಅಪಥ್ಯವಾಗದೆ, ಆಹಾರವೆನಿಸಿಕೊಳ್ಳುವಷ್ಟು ಸಹಜವಾಗಿವೆ. ಅಂತೆಯೇ ಸಿಂದಬಾದಿನ ನಾವಿಕ, ರಾಬಿನ್‌ಸನ್ ಕ್ರೂಸೋ, ಗಲಿವರನ ಪ್ರವಾಸ ಇತ್ಯಾದಿ ಕಥೆಗಳು ಎಲ್ಲ ಕಾಲಕ್ಕೂ ಮಕ್ಕಳಿಗೆ ಪ್ರಿಯವಾದ ಪ್ರಸಂಗಗಳು. ಇವುಗಳನ್ನು ಆಧರಿಸಿದ ಚಿತ್ರಕಥೆಗಳು, ವ್ಯಂಗಚಿತ್ರಗಳು ಮಕ್ಕಳಿಗೆ ಬೋಧಿಸಲು ಸಾಮಗ್ರಿಗಳಾಗಬಹುದು.

ಕಣ್ಣು ತಣಿಸುವ , ಕುತೂಹಲಕಾರಿ ಹೊತ್ತಗೆಗಳು ಮಕ್ಕಳನ್ನು ಆಕರ್ಷಿಸುತ್ತವೆ, ಕೆಲವು ಪುಸ್ತಕಗಳು ಮಕ್ಕಳಿಗಾಗಿ ತಯಾರಿಸಲಾಗಿದೆ ಎಂದು ಜಾಹೀರುಗೊಳಿಸಿದರೂ , ಅವುಗಳ ಸತ್ತ್ವ ಕಳಪೆಯಾಗಿದ್ದು, ತಾತ್ಸಾರದಿಂದ ಮುದ್ರಿಸಿರುವುದುಂಟು. ಅಂಥ ಪುಸ್ತಕಗಳನ್ನು ಮಕ್ಕಳಿಗಾಗಿ ಖರೀದಿಸುವ ಬಗ್ಗೆ ಎಚ್ಚರಿಕೆಯಿಂದಿರಬೇಕು.

ಪುಸ್ತಕಗಳ ಬಹುಮುಖ ಸೇವೆಯನ್ನು ಕಿರಿಯರು ಅರಿಯಲು ಸಹಾಯಕವಾಗುವಂತೆ, ಮನೆಗೊಂದು ಗ್ರಂಥಾಲಯವಿರಬೇಕೆನ್ನುವ ಪ್ರಜ್ಞೆ ಮೂಡುವಂತೆ ಮಕ್ಕಳನ್ನು ಪ್ರೋತ್ಸಾಹಿಸುವುದು ಅಪೇಕ್ಷಣೀಯ.

ಮಕ್ಕಳ ಸಾಧನೆಯನ್ನು ಪ್ರೋತ್ಸಾಹಿಸಿ, ಪದಕ, ಕಪ್ಪುಗಳನ್ನು ನೀಡುವ ಬದಲು ಪುಸ್ತಕಗಳನ್ನು ಕಾಣಿಕೆಯಾಗಿ ನೀಡುವುದು ಉತ್ತಮ.

ಮನೋವಿಕಾಸ, ರಂಜನೆಗಾಗಿ ಮಕ್ಕಳನ್ನು ಜಾತ್ರೆ, ಮೇಳ, ಸರ್ಕಸ್ ಇತ್ಯಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವಂತೆ ಪುಸ್ತಕಪ್ರದರ್ಶನ, ಗ್ರಂಥಾಲಯ ಭೇಟಿ ಇತ್ಯಾದಿ ಪುಸ್ತಕ ಸಂಬಂಧ ಚಟುವಟಿಕೆಗಳಲ್ಲಿ ಮಕ್ಕಳು ತೊಡಗುವಂತೆ ಹಿರಿಯರು ಪ್ರೋತ್ಸಾಹಿಸುವುದು ಆರೋಗ್ಯಕರ ಬೆಳವಣಿಗೆ. ಇದರಿಂದ ಮಕ್ಕಳಲ್ಲಿ ಪುಸ್ತಕ ಪ್ರೇಮ ಬೆಳೆದು, ಕಿಶೋರರು ಮುಂದೆ ಸಾಧನೆಯ ಹರಿಕಾರರಾಗಬಹುದು.

ಜ್ಞಾನವಂತರಷ್ಟೇ ಪಂಡಿತರೆನಿಸುವುದಿಲ್ಲ. ತಮ್ಮ ಜ್ಞಾನವನ್ನು ಕ್ರಿಯೆಯಲ್ಲಿ ತೊಡಗಿಸಬಲ್ಲ ಪೌರುಷವಂತರು ಮಾತ್ರ ಪಂಡಿತರೆನಿಸುವರು.

- ಮಹಾಭಾರತ

ಮುಸುಕಿದೀ ಕತ್ತಲು

ಸರೋಜ ಆರ್. ಆಚಾರ್ಯ
''ಭಾಗ್ಯಶ್ರೀ''
೧-೨-೫೦ ಬಿ, ಕುಂಜಿ ಬೆಟ್ಟು
ಉಡುಪಿ-೫೭೬ ೧೦೨

ಪೂರ್ವತೈಮರನ ರಾಜಧಾನಿ 'ಡಿಲಿ' ಯಲ್ಲಿ ಹೊಸತಾಗಿ ನಿರ್ಮಿಸಲಾದ ಚರ್ಚಿನಲ್ಲಿ ಬೋಧಿಸಲೆಂದು, ೧೯೯೭ರಲ್ಲಿ ಸೋದರಿ ಮೆರ್ಲಿನ್ 'ಡಿಲಿ'ಗೆ ತೆರಳಿದಳು. ಈ ದ್ವೀಪವನ್ನು ೧೯೭೫ರಿಂದಲೇ ಇಂಡೋನೇಶ್ಯಾ ಅತಿಕ್ರಮಣ ಮಾಡಿ ತನ್ನ ಪತೋಟಿಯಲ್ಲಿಟ್ಟು ಕೊಂಡಿದೆ ಎಂಬ ವಿಚಾರ ಡಿಲಿಗೆ ಬಂದು ಸೇರುವವರೆಗೂ ಮೆರ್ಲಿನ್‌ಳಿಗೆ ತಿಳಿದಿರಲಿಲ್ಲ. ಡಿಲಿಯ ಪ್ರತಿಯೊಂದು ಕುಟುಂಬವೂ ಒಂದಲ್ಲ ಒಂದು ವಿಧದಲ್ಲಿ ಶೋಷಣೆಗೆ ಗುರಿಯಾಗಿತ್ತು. ದಾಳಿಕೋರರಿಂದ ಅತ್ಯಾಚಾರ, ಹಿಂಸೆ, ಜನರ ನಿಗೂಢವಾದ ನಿರ್ಗಮನ ಮತ್ತು ಸಂಶಯಾಸ್ಪದ ರೀತಿಯಲ್ಲಿ ಅವರ ಮೃತ್ಯು ಎಲ್ಲವೂ ಡಿಲಿಯಲ್ಲಿ ಸರ್ವೇಸಾಮಾನ್ಯವಾಗಿ ನಡೆಯುತ್ತಿದ್ದುವು. ದೇಶದ ೮ ಲಕ್ಷ ಮೂಲ ನಾಗರಿಕರಲ್ಲಿ ಮೂರರಲ್ಲೊಂದು ಭಾಗ ಜನರು ಹಿಂಸಾಚಾರಗಳಿಂದಾಗಿಯೇ ಪ್ರಾಣ ಕಳೆದು ಕೊಂಡಿದ್ದರು.

೧೯೯೯ರಲ್ಲಿ ಇಂಡೋನೇಶ್ಯಾದ ನಿರಂಕುಶತೆಯ ಮೇಲೆ ಅಂತಾರಾಷ್ಟ್ರೀಯ ಒತ್ತಡ ತರಲಾಯಿತು. ಸಂಯುಕ್ತರಾಷ್ಟ್ರದ ಮೇಲ್ವಿಚಾರಣೆಯಲ್ಲಿ ಪ್ರಜಾಮತ ಸಂಗ್ರಹದ ಒಂದು ಗೊತ್ತುವಳಿ ಮಾಡಲಾಯಿತು. ಅದರಂತೆ, ಪೂರ್ವ ತೈಮರ ವಾಸಿಗಳ ಮುಂದೆ ಎರಡು ಪರ್ಯಾಯಗಳನ್ನು ಇಡಲಾಯಿತು. ಇಂಡೋನೇಶ್ಯಾದೊಂದಿಗೆ ಮಿಲನ ಅಥವಾ ಸ್ವಾತಂತ್ರ್ಯ!

೧೯೯೯ ಸೆಪ್ಟೆಂಬರ್ ತಿಂಗಳ ಒಂದು ಶನಿವಾರದ ಮುಂಜಾವು. ಶಾಲೆಯ ರೇಡಿಯೋದ ಮುಂದೆ ೬೦ ಜನ ಸ್ಥಳೀಯ ಆತಂಕಿತ ಜನರ ಗುಂಪಿನೊಂದಿಗೆ ಸೋದರಿ ಮೆರ್ಲಿನ್ ಕೂಡ ಜನಮತದ ಪರಿಣಾಮವನ್ನು ಆಲಿಸಲು ಚಿಂತಾಕ್ರಾಂತಳಾಗಿ ಕಾಯುತ್ತಿದ್ದಳು. ಕಳೆದವಾರ ದೇಶದ ನಾಲ್ಕೂವರೆ ಲಕ್ಷ ನೋಂದಾಯಿತ ಮತದಾರರಲ್ಲಿ ೯೮.೬% ಜನರು ಮತ ಚಲಾಯಿಸಿದ್ದರು. ಆದರೂ ಮೆರ್ಲಿನ್ ಸದಾ ಪ್ರಾರ್ಥಿಸುತ್ತಿದ್ದಳು, 'ಇಂಡೋನೇಶ್ಯಾದವರು ಹಿಮ್ಮೆಟ್ಟುವಂಥ ಪರಿಣಾಮ ಬರಲಿ' ಎಂದು. ಹಿಂದೆಯೇ ಅವಳಿಗೆ ಸೋಜಿಗವೂ-ಒಂದು ರೀತಿಯ ಭಯವೂ ಆಗುತ್ತಿತ್ತು. 'ಹೌದು, ಈ ಅತಿಕ್ರಮಣಕಾರರು ಸೋತು ಹೋದರೂ, ಅವರ ಮುಂದಿನ ಕಾರ್ಯಾಚರಣೆ ಏನಾಗಬಹುದು?

ಈ ತರದ ಸಂಭಾವ್ಯ ಅನಿಷ್ಟಗಳ ಶಂಕೆಯಿಂದಲೇ ಡಿಲಿಯ ಹಲವಾರು ಶಾಲಾ ಮುಖ್ಯಸ್ಥರು ಶಾಲಾ ಕಾಲೇಜುಗಳನ್ನು ಮುಚ್ಚಿಬಿಟ್ಟಿದ್ದರು. ಆದರೆ ಸೋದರಿ ಮೆರ್ಲಿನ್‌ಳ ಶಾಲೆ ಮಾತ್ರ ತೆರೆದಿದ್ದು, ತಂತಮ್ಮ ಮನೆಯಲ್ಲಿರಲು ಹೆದರಿದ್ದ ಹತ್ತಾರು ತೈಮರಿಯನರು ಅವಳ ಶಾಲೆಯ ಆವರಣದಲ್ಲಿ ಆಶ್ರಯ ಪಡೆದಿದ್ದರು.

ಮತ ಎಣಿಕೆಯ ಫಲಿತಾಂಶದ ಘೋಷಣೆಯಾದಾಗ ಇಡೀ ಆವರಣವೇ ಸಂತಸದಿಂದ ಕುಣಿಯಿತು. ಪೂರ್ವ ತೈಮರಿಯನ್ನರು ಸ್ವತಂತ್ರವಾಗಿ ಇರಲು ಬಯಸಿ ಮತ ನೀಡಿದ್ದರು. ಮೆರ್ಲಿನಳ ಸುತ್ತಲೂ ನೆರೆದಿದ್ದ ಜನರು ಕೇಕೆ ಹಾಕಿದರು, ನಕ್ಕರು, ಆನಂದದ ಕಣ್ಣೀರಿಟ್ಟರು.

ಮಾರ್ಚ್ ೨೦೦೧ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಬ್ರೈಯನ್ ಇಯಾಡ್ಸ್ ರವರ 'ಎ ನನ್ ಸ್ಟೋರಿ' ಎಂಬ ಲೇಖನದ ಅನುವಾದ

ಆದರೆ ಈ ಸಂತಸ ಹೆಚ್ಚು ಹೊತ್ತು ಉಳಿಯಲಿಲ್ಲ. ರಾತ್ರಿ ೯ ಗಂಟೆಯ ಕತ್ತಲಿನಲ್ಲಿ, ಶಾಲಾ ಸಮುಚ್ಚಯದ ಬೇಲಿಯ ಹೊರಗೆ ಒಂದು ಗುಂಪು ಮನೆಯಿಂದ ಮನೆಗೆ ಚಲಿಸುತ್ತಿರುವುದನ್ನು ಗಮನಿಸಿದಳು ಮೆರ್ಲಿನ್. ಇಂಡೋನೇಶ್ಯಾದ ಪರವಾಗಿ ಕೆಲಸ ಮಾಡುವ ಸ್ಥಳೀಯ ಜನಸೇನೆಯವರು ಮಿಲಿಷಾ! ತಲೆಗೆ ಕೆಂಪು-ಬಿಳಿ ಪಟ್ಟಿಯನ್ನು ಕಟ್ಟಿಕೊಂಡಿದ್ದರು. ಅವರೊಂದಿಗೆ ಇಂಡೋನೇಶ್ಯದ ಪೊಲೀಸ್ ಕೂಡ ಇರುವುದು ಅವಳ ಗಮನಕ್ಕೆ ಬಂತು.

ಭಯಭೀತರಾದ ಜನ ಪಕ್ಕದಲ್ಲಿದ್ದ 'ಸಲೇಶಿಯನ್ ಪಾದರಿ'ಗಳ ವಸತಿ ಸಂಕೀರ್ಣದಲ್ಲೂ, ಶಾಲೆಯ ಆವರಣದಲ್ಲೂ ಆಶ್ರಯ ಪಡೆದಿದ್ದರು. ದಾಳಿಕೋರರು ಮನೆ ಮನೆಗಳಿಂದಲೂ, ಟೆಲಿವಿಷನ್‌ಗಳು, ಮಂಚ, ಎಂದು ಕೈಗೆ ಸಿಕ್ಕಿದ ಬೆಲೆ ಬಾಳುವ ವಸ್ತುಗಳನ್ನೆಲ್ಲಾ ಎಳೆದೆಳೆದು ಹೊರಹಾಕಿ ಲಾರಿಗಳಲ್ಲಿ ತುಂಬಿಸುತ್ತಿದ್ದರು. ಅನಂತರ ಪೊಲೀಸರು ನಿರ್ಲಿಪ್ತರಾಗಿ ನೋಡುತ್ತಿರುವಂತೆಯೇ ಆ ಮನೆಗಳಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದರು. ಆಗೀಗ ಅಡುಗೆ ಅನಿಲದ ಹಂಡೆಯಾ ಕಾರುಗಳ ಇಂಧನ ಸಂಗ್ರಹ ಬೆಂಕಿಗೆ ಸಿಕ್ಕು ಸ್ಫೋಟಿಸಿದಾಗ ಕಿವಿಗಡಚ್ಚಿಕ್ಕುವ ಸದ್ದಾಗುತ್ತಿತ್ತು. ಒಂದೊಮ್ಮೆ ಶಾಲೆಯ ಆವರಣದ ಹೊರಗೆಯೇ ಗುಂಡಿನ ಸದ್ದಾಗುತ್ತಿದ್ದಂತೆ ನೆರೆಹೊರೆಗಳೆಲ್ಲವೂ ಪ್ರಜ್ವಲಿಸತೊಡಗಿದುವು. ನಮ್ಮ ಶಾಲೆಗೆ ಏನೂ ಆಗದಿರಲಿ ದೇವರೇ'' ಮೆರ್ಲಿನ್ ಅವಿರತವಾಗಿ ಪ್ರಾರ್ಥಿಸಿದಳು.

ಉದಯವಾಯಿತು. ಸುತ್ತ ಮುತ್ತ ಎಲ್ಲಾ ಕಡೆ ವಿನಾಶದ ಅವಶೇಷಗಳು ! ನೆಟ್ಟಗೆ ನಿಂತಿರುವ ಒಂದು ಮನೆಯೂ ಉಳಿದಿಲ್ಲ. ವಿಶೇಷವೆಂದರೆ ಶಾಲೆಯ ಆವರಣಕ್ಕೇನೂ ತೊಂದರೆ ಆಗಿರಲಿಲ್ಲ. ಸದ., ಮೆರ್ಲಿನ್‌ಳ ಪ್ರಾರ್ಥನೆ ಫಲ ನೀಡಿತ್ತು. ನಸುಕು ಹರಿಯುತ್ತಿರುವಂತೆಯೇ ಒಬ್ಬ ಆಜಾನುಬಾಹು ವ್ಯಕ್ತಿ ಥಕ್ಕನೆ ಬಂದು ಶಾಲೆಯೊಳಗೆ ಸೇರಿಕೊಂಡ.

ಅವನ ಹೆಸರು ಎಲ್ವಿನ್ ಗುಸ್ಮಾವ್, (ಸನಾನಾ ಗುಸ್ಮಾವ್) ನ ಸಂಬಂಧಿಕ. ಹೆಸರಾಂತ ಕವಿ ಮತ್ತು ಪತ್ರಕರ್ತನೂ ಆಗಿದ್ದ ಸನಾನಾ ಗುಸ್ಮಾವ್ ಪೂರ್ವತೈಮರ್‌ನ ಸ್ವಾತಂತ್ರ್ಯ ಚಳುವಳಿಯನ್ನು ಇಂಡೋನೇಶ್ಯಾದ ಜೈಲು ಕೋಣೆಯಿಂದಲೇ ನಿಯಂತ್ರಿಸಿದ್ದವನು. ''ಅವರು ನನ್ನನ್ನು ಕೊಲ್ಲ ಬೇಕೆಂದಿದ್ದಾರೆ !'' ಸೋದರಿ ಮೆರ್ಲಿನ್‌ಳ ಮುಂದೆ ತೊದಲಿದ ಎಲ್ವಿನ್. 'ಸಿಟಿ ಸೆಂಟರ್'ನ ಪಕ್ಕದಲ್ಲಿರುವ ಸಂಯುಕ್ತ ರಾಷ್ಟ್ರದ ಕಚೇರಿಯ ಕಟ್ಟಡದ ಪಾಳಿಯೊಳಗೆ ತನ್ನ ಐದು ತಿಂಗಳ ಮಗುವೂ, ಹೆಂಡತಿಯೂ ಇರುವುದಾಗಿಯೂ, ಹೇಗಾದರೂ ತನ್ನನ್ನು ಅಲ್ಲಿಗೆ ಸೇರಿಸಿ ಬಿಡುವಂತೆಯೂ ಗೋಗರೆದ. ಅಲ್ಲಿಗೆ ವಾಹನದಲ್ಲಿ ಹೋಗಿ ತಲಪಲು ೧೫ ನಿಮಿಷಗಳು ಬೇಕಾಗುತ್ತಿತ್ತು.

ಸಲೇಶಿಯನ್ ಮಠದ ಕಾರಿನ ಹಿಂದಿನ ಸೀಟುಗಳ ಮಧ್ಯೆ ಗುಸ್ಮಾವ್ ಅಡಗಿ ಕುಳಿತಿರಲು ಮೆರ್ಲಿನ್ ಕಾರನ್ನು ಹೊರಡಿಸಿದಳು. ಖಾಲಿ ಬಿದ್ದ ರಸ್ತೆಗಳಲ್ಲಿ ಐದು ನಿಮಿಷಗಳ ಪ್ರಯಾಣ ಸುಸೂತ್ರವಾಗಿಯೇ ಸಾಗಿತು. ಮುಂದೆ ಹೋಗುತ್ತಿದ್ದ ಒಂದು 'ಟ್ರಕ್'ನತ್ತ ಆಯಾಚಿತವಾಗಿ ದೃಷ್ಟಿ ಹಾಯಿಸಿದಾಗ ಅವಳ ಹೃದಯ ಬಾಯಿಗೆ ಬಂದಂತಾಯಿತು. ಕೆಂಪು-ಬಿಳಿ ಪಟ್ಟಿಗಳನ್ನು ಧರಿಸಿದ್ದ ಹತ್ತು ಹನ್ನೆರಡು ಜನರು! ಮಿಲಿಷಾ ! ಟ್ರಕ್ ಡ್ರೈವರ್ ತನ್ನತ್ತ ಲಕ್ಷ್ಯ ಕೊಡದೆ ಹಾಗೆಯೇ ಮುಂದೆ ಹೋಗಬಹುದೆಂಬ ನಿರೀಕ್ಷೆಯಿಂದ ಮೆರ್ಲಿನ್ ಗಾಡಿಯನ್ನು ನಿಧಾನಗೊಳಿಸಿದಳು. ಆದರೆ ಹಿಂದಿನಿಂದ ಬರುತ್ತಿದ್ದ ಮೋಟಾರ್ ಸೈಕಲ್‌ನವನನ್ನು

ಅವಳು ನೋಡಿರಲಿಲ್ಲ. ನೋಡಿದಾಗ ತಡವಾಗಿ ಹೋಗಿತ್ತು! ಅವನೂ ಕೆಂಪು-ಬಿಳಿ ಪಟ್ಟಿಯವನೇ!

ಮೆರ್ಲಿನ್‌ಳ ಪಕ್ಕದಲ್ಲೇ ತನ್ನ ದ್ವಿಚಕ್ರವನ್ನೂ ಚಲಾಯಿಸುತ್ತ ಸಾಗಿದ ಆ ಮನುಷ್ಯ ಅವಳನ್ನೂ-ಅವಳ ಸನ್ಯಾಸಿನಿ ಉಡುಪನ್ನೂ ಎಚ್ಚರಿಕೆಯಿಂದ ಪರೀಕ್ಷಿಸಿದವನು ಅವಳ ಹಿಂದೆ ಇದ್ದ ಪ್ರಯಾಣಿಕನತ್ತ ತಿರುಗಿದ. ಎಲ್ವಿಸ್‌ನನ್ನು ಸ್ವಲ್ಪ ಹೊತ್ತು ದಿಟ್ಟಿಸುತ್ತಿದ್ದಂತೆಯೇ ಅವನ ಮುಖದಲ್ಲಿ ಗೆಲುವಿನ ಛಾಯೆ ಮೂಡಿತು. ಈ ಸುದ್ದಿಯನ್ನು ಟ್ರಕ್‌ನಲ್ಲಿರುವವರಿಗೆ ಅರುಹಲೆಂದು ಅವನು ತನ್ನ ವಾಹನದ ವೇಗವನ್ನು ಹೆಚ್ಚಿಸಿದ. ಅಪಾಯವನ್ನು ಮನಗಂಡ ಮೆರ್ಲಿನ್ ತನ್ನ ವೇಗವನ್ನೂ ಹೆಚ್ಚಿಸಿ ಟ್ರಕ್ ಅನ್ನು ಹಿಂದೆ ಹಾಕಿದಳು. ಕೋಪಗೊಂಡ ಟ್ರಕ್ ಚಾಲಕ ಅವಳಿಗೆ ವಾಹನ ನಿಲ್ಲಿಸುವಂತೆ ಸಂಜ್ಞೆ ಮಾಡಿದರೂ ಲೆಕ್ಕಿಸದೆ ಹಾರಿಯೇ ಹೋದಳು. ಮೆರ್ಲಿನ್! ಹಿಂದಿನಿಂದ ಗುಂಡಿನ ಸದ್ದು ಕೇಳಿ ಬರತೊಡಗಿತು. ನಡುಗುವ ಕೈಗಳಿಂದ ಸ್ಟಿಯರಿಂಗ್ ಅನ್ನು ಹಿಡಿದಿದ್ದ ಮೆರ್ಲಿನ್‌ತನಗೆ ಸಾಧ್ಯವಾದಷ್ಟು ವೇಗವಾಗಿ ಸಾಗಿದಳು. ಅಂತೂ ಟ್ರಕ್ ಹಿಂದೆಲ್ಲೋ ಉಳಿಯಿತು.

ಸಂ.ರಾ. ಸಮುಚ್ಚಯಕ್ಕೆ ಹೋಗುವ 'ಎಸ್ಟ್ರಡಾ-ಡಿ-ಬಲೈಡ್' ರಸ್ತೆಯನ್ನು ತಲಪಿದಾಗ ಅವಳ ನೆಮ್ಮದಿಯೆಲ್ಲಾ ಜರ್ರೆಂದು ಇಳಿದು ಹೋಯಿತು. ಸಂ.ರಾ. ಆವರಣಕ್ಕೆ ಇನ್ನೇನು ಐವತ್ತು ಮೀಟರೂ ಇಲ್ಲವೆಂಬ ಸ್ಥಳದಲ್ಲಿ ಇಂಡೋನೇಶ್ಯ ಸೈನಿಕರು 'ಮಾನವ ರಸ್ತೆ ತಡೆ' ನಿರ್ಮಿಸಿದ್ದರು.

ಹತಾಶನಾಗಿ ಹೋದ ಎಲ್ವಿಸ್‌ಗೆ, "ನೀನು ಮೌನವಾಗಿರು, ನಾನೇನಾದರೂ ಮಾತಾಡುತ್ತೇನೆ" ಎಂದು ಹೇಳಿದವಳು ಇಂಡೋನೇಶ್ಯಾದ ಭಾಷೆಯಲ್ಲಿ, ಅಲ್ಲಿದ್ದ ಸೈನಿಕರಲ್ಲಿ, ತಮಗೆ ದಾರಿ ಬಿಡುವಂತೆ ಕೇಳಿ ಕೊಂಡಳು. ಅವರು ಒಪ್ಪದೆ ಅವಳನ್ನು ಹಿಂದಕ್ಕಟ್ಟಿದರು. ಆ ರಸ್ತೆ ತಡೆಯ ಸಮೀಪದಲ್ಲೇ ತನ್ನ ವಾಹನವನ್ನು ನಿಲ್ಲಿಸಿದಂತೆ ಮಾಡುತ್ತ ಒಂದೆರಡು ನಿಮಿಷ ಕಳೆದಳು ಮೆರ್ಲಿನ್. ಅಷ್ಟರಲ್ಲಿ ಎರಡು ಕಾರುಗಳು ಆ ಜಾಗವನ್ನು ಸಮೀಪಿಸಿದವು. ಅವುಗಳಲ್ಲೊಂದನ್ನು ಆಸ್ಟ್ರೇಲಿಯಾದ ಕ್ರೈಸ್ತ ಪಾದರಿ ನಡೆಸುತ್ತಿದ್ದರು. ಅವರತ್ತ ಕೈ ಬೀಸಿದ ಮೆರ್ಲಿನ್, "ಸೋದರರೇ, ಇಲ್ಲೊಂದು ತುರ್ತುಸ್ಥಿತಿ! ನಾವೀಗ ಹೋಗಲೇ ಬೇಕಾಗಿದೆ" ಎಂದು ವಿನಂತಿಸಿದಳು. ಆಯಿತು. ನಮ್ಮ ಎರಡು ಕಾರುಗಳ ಮಧ್ಯೆ ನಿನ್ನ ಕಾರನ್ನು ನಡೆಸು" ಎಂದರವರು. ಕೂಡಲೇ ಮೆರ್ಲಿನ್ ತನ್ನ ವಾಹನವನ್ನು ಆ ಎರಡು ಕಾರುಗಳ ನಡುವಿಗೆ ತರಲು, ಮೂರೂ ಕಾರುಗಳೂ ರಸ್ತೆ ತಡೆಯ ನಡುವಿಂದಾಗಿಯೇ ಸಂ.ರಾ.ಸಂಕೀರ್ಣದ ಒಳಗೆ ನುಸುಳಿ ಬಿಟ್ಟವು.

ಅಲ್ಲಿಂದ ಮರಳಿದ ಮೆರ್ಲಿನ್, ತನ್ನ ಶಾಲೆಯ ಕಟ್ಟಡ ಅಷ್ಟೇನೂ ಸುರಕ್ಷಿತವಲ್ಲ ಎಂದೆನಿಸಿದ ಕಾರಣ, ಅಲ್ಲಿ ಆಶ್ರಯ ಪಡೆದಿದ್ದ ಸುಮಾರು ೬೦ ಜನ ಸ್ಥಳೀಯರನ್ನು ಸಲೇಶಿಯನ್ ಪಾದರಿಗಳ ವಸತಿ ಸಮುಚ್ಚಯಕ್ಕೆ ಕಳುಹಿಸಿದಳು. ಅಲ್ಲಿ ಈಗಾಗಲೇ ೨೦೦೦ ನಿರಾಶ್ರಿತರು ಸೇರಿದ್ದರು. ಅನಂತರ ಶಾಲೆಗೆ ಬೀಗ ಹಾಕಿದ ಮೆರ್ಲಿನ್ ಸಂ.ರಾ ಸಂಕೀರ್ಣದ ಪಕ್ಕದಲ್ಲಿದ್ದ ತನ್ನ ಮಠಕ್ಕೆ ತೆರಳಿದಳು.

ಹೊರಗಿನಿಂದ ಹಿಂಸಾಚಾರದ ವರದಿಗಳು ಬರುತ್ತಲೇ ಇದ್ದುವು. ಒಬ್ಬಳು ತೈಮರಿಯನ್ ಮಹಿಳೆಯ ಮನೆಯನ್ನೆಲ್ಲ ಲೂಟಿ ಮಾಡಿದ ಶಸ್ತ್ರಧಾರಿಗಳು, ಅಲ್ಲಿ ತಂಗಿದ್ದ ನಾಲ್ಕು ವಿಶ್ವವಿದ್ಯಾಲಯ ವಿದ್ಯಾರ್ಥಿಗಳನ್ನು ತಿವಿದು ಗಾಯಗೊಳಿಸಿದರು, ಮಾತ್ರವಲ್ಲ ಅವರನ್ನು

ಟ್ರಕ್‌ನಲ್ಲೇ ತುರುಕಿ ತಮ್ಮೊಂದಿಗೆ ಒಯ್ದರು: ಮತ್ತೆ ಆ ವಿದ್ಯಾರ್ಥಿಗಳನ್ನು ನೋಡಿದವರಿಲ್ಲ! ಸ್ಥಳೀಯ ಜನ ಸೈನ್ಯ 'ಡಿಲಿ'ಯನ್ನು ಅಸ್ತವ್ಯಸ್ತ ಗೊಳಿಸುತ್ತಿತ್ತು.

'ಡಿಲಿ' ಯ ಸಲೇಶಿಯನ್ ಕಾನ್ವೆಂಟ್‌ನ ಮದರ್ ಸುಪೀರಿಯರ್, ಇಟಲಿ ಮೂಲದ ಸೋದರಿ ಪೌಲಾ ಬಟಾಗ್ಲಿಯೋಲಾ, ಹತ್ತು ವರ್ಷಗಳಿಂದಲೂ ಮೆರ್ಲಿನಳನ್ನು ಬಲ್ಲವ ಳಾಗಿದ್ದಳು. 'ವೆನಿಲೇಲ್'ನ ಕಷ್ಟಮಯವಾದ ದಿನಗಳನ್ನು ಒಟ್ಟಿಗೆ ಕಳೆದವಳು. ಈಗಾಗಲೇ ಎರಡು ಕಾನ್ವೆಂಟ್‌ಗಳಲ್ಲಿ ಸುಮಾರು ೮೦೦ ಜನರಿಗೆ ಆಶ್ರಯ ನೀಡಿದ್ದರು. ಈ ಸೋದರಿ ಯರು. ಈಗ ಮತ್ತೊಂದು ಹೊಣೆಗಾರಿಕೆ ಯನ್ನು ಮೆರ್ಲಿನಳಿಗೆ ವಹಿಸಿದಳು ಸೋದರಿ ಪೌಲಾ.

ಸ್ವಾತಂತ್ರ್ಯದ ನೇತಾರ 'ಸನಾನಾ ಗುಸ್ಮಾವ್'ನ ತಂಗಿ ಆರ್ಮಂಡಿನಾ, ಅವಳ ಪತಿ ಮತ್ತು ಎರಡು ಮಕ್ಕಳು, ಅವಳ ಪತಿಯ ಕಚೇರಿ ಯಲ್ಲಿ ಅಡಗಿದ್ದರು. ಇಂಡೋನೇಶ್ಯಾ ಪರವಾಗಿ ಕೆಲಸ ಮಾಡುವ ವಿಧ್ವಂಸಕ ತಂಡ ದವರು ಸ್ವಾತಂತ್ರ್ಯ ಚಳುವಳಿಗಾರರನ್ನು ಹುಡುಕಿ. ಹುಡುಕಿ ಕೊಲ್ಲುತ್ತಿದ್ದರು. ಅವರ ಪ್ರಧಾನ ಗುರಿ 'ಗುಸ್ಮಾವ್' ಮನೆತನದವರನ್ನು ಹಿಡಿಯುವುದೇ ಆಗಿತ್ತು. ಹೀಗಿರಲು ಈಗ ಆರ್ಮಂಡಿನಾ ಗುಸ್ಮಾವ್‌ಳ ಕುಟುಂಬವನ್ನು ಸುರಕ್ಷಿತವಾಗಿ ಕಾನ್ವೆಂಟಿಗೆ ಕರತರಲು ಮೆರ್ಲಿನಳಿಗೆ ಆದೇಶ ವಿತ್ತಳು ಸೋದರಿ ಪೌಲಾ.

ಬೆಳಗಾಗುತ್ತಲೇ ಒಬ್ಬಳು ತೈಮರಿಯನ್ ಸನ್ಯಾಸಿನಿ ಮತ್ತು ಒಬ್ಬ ಅಮೆರಿಕದ ಹಿತೈಷಿ ಯೊಂದಿಗೆ ಒಂದು ಟ್ರಕ್‌ನಲ್ಲಿ ಹೊರಟ ಮೆರ್ಲಿನ್ ಆರ್ಮಂಡಿನಾಳ ಸಂಸಾರವನ್ನು ಕಂಡು ಹಿಡಿದು, ಬೇಗಬೇಗನೆ ಅವರನ್ನು ವಾಹನದೊಳಗೆ ತುರುಕಿಕೊಂಡು ವಾಯು ವೇಗದಲ್ಲೇ ಕಾನ್ವೆಂಟಿಗೆ ವಾಪಸಾದಳು. ಆದರೆ ತಮ್ಮ ಉಪಸ್ಥಿತಿಯಿಂದಾಗಿ ಇಲ್ಲಿರುವ ನೂರಾರು ಶರಣಾರ್ಥಿಗಳಿಗೆ ಕೇಡು ಉಂಟಾಗ ಬಹುದೆಂದು ಭಾವಿಸಿದ ಆರ್ಮಂಡಿನಾ ಪರಿವಾರದವರು 'ಡಿಲಿ'ಯ ಹೊರಗಿನ ಗುಡ್ಡಗಾಡುಗಳಿಗೇ ಓಡಿ ಹೋದರು. ತೈಮರ್‌ನ ಸಾವಿರಾರು ಜನರು ಆ ಗುಡ್ಡಗಾಡುಗಳಲ್ಲೇ ಅಡಗಿದ್ದರು.

ಮರು ಹಗಲೆಲ್ಲಾ ಗುಂಡಿನ ಮಳೆಯೇ! ಸಂಜೆಯಾಗುತ್ತಿದ್ದಂತೆ 'ಡಿಲಿ' ಯ ಮೇರಿ ಮಾತೆಯ ಮಂದಿರದ ಎದುರಿನಲ್ಲಿದ್ದ ಮಿಲಿಷಾ ಸೈನ್ಯದವರು 'ಮೊಲೋಟೋವ್' ಮದ್ಯಕ್ಕೆ ಉರಿ ಹಚ್ಚಿ ಆ ಮನೆಯ ಕಿಟಕಿ ಯೊಳಗೆ ಎಸೆದರು. ಆ ಮನೆಯಲ್ಲಿದ್ದವರು 'ಸನಾನಾ ಗುಸಾವ್'ನ ವೃದ್ಧ ತಾಯಿ ತಂದೆಯರು. ೮೩ ವರ್ಷ ಪ್ರಾಯದ ಮ್ಯಾನುಯಲ್ ಗುಸ್ಮಾವ್ ಹೃದ್ರೋಗಿ ಯಾದರೆ, ಆತನ ಪತ್ನಿ ೭೮ ವರ್ಷದ ಆಂಟೋನಿಯಾ ಮಧುಮೇಹ ರೋಗಿ! ಮರುದಿನ ಸುಟ್ಟು ಹೋದ ಮನೆಯ ತಪಾಸಣೆಗೆಂದು ಮೆರ್ಲಿನ್ ಬಂದಾಗ ಆ ವೃದ್ಧರಿಬ್ಬರೂ ಹೆಚ್ಚು ಗಾಯಗಳಿಲ್ಲದೆ ಪಾರಾಗಿದ್ದು ಕಂಡು ಆಶ್ಚರ್ಯ ಮತ್ತು ನೆಮ್ಮದಿಯ ಉಸಿರೆಳೆದಳು, ಮತ್ತು ಅವರನ್ನು ಕರೆತಂದಳು.

ಆ ಬೆಳಿಗ್ಗೆ ಕಾನ್ವೆಂಟಿನ ಪ್ರಧಾನ ದ್ವಾರಕ್ಕೇ ಲಗ್ಗೆ ಹಾಕಿದ ಐದು ಶಸ್ತ್ರಧಾರಿಗಳು "ಈಗ ಸಾಧ್ಯವಿರುವಾಗಲೇ ಇಲ್ಲಿಂದ ಹೊರಟು ಹೋಗಿ!" ಎಂದು ಕೂಗಿದರು. ಬಳಿಕ ಇಂಡೋನೇಶ್ಯಾ ಸೈನಿಕರೂ ಬಂದು ಸೇರಿ ಕೊಂಡರು. "ಈ ಕಾನ್ವೆಂಟಿನ ಸುರಕ್ಷೆಗೆ ನಾವು ಬದ್ಧರಲ್ಲ!" ಎಂದೂ ಎಚ್ಚರಿಸಿದ್ದರು.

ಓರ್ವ ಅಮೆರಿಕ ಪ್ರಜೆಯಾಗಿರುವುದ

ರಿಂದ ಒಂದು ಬಿಡುವು ವಿಮಾನದಲ್ಲಿ ತಾನು ಆಸ್ಟ್ರೇಲಿಯಾಕ್ಕೆ ಹಾರಿ ಹೋಗಿ ಬಿಡಬಹುದು ಎನ್ನುವುದನ್ನು ಮೆರ್ಲಿನ್ ಚೆನ್ನಾಗಿ ಅರಿತಿದ್ದಳು. ಸ್ಪೆಯಿನ್ ಮತ್ತು ಇಟಲಿಯ ಇಬ್ಬರು ಕ್ರೈಸ್ತ ಸೋದರಿಯರು ಸಂ.ರಾ. ವಿಮಾನದಲ್ಲಿ ಡಾರ್ವಿನ್‌ಗೆ ಹೋಗಿದ್ದರು, ಕೂಡ! ಆದರೆ ಮೆರ್ಲಿನ್‌ಳ ಮನಃಸ್ಥಿತಿ ಬೇರೆಯೇ ಆಗಿತ್ತು.

'ನಾನು ಇವರೊಂದಿಗೆ ಇರಲೆಂದೇ ಇಲ್ಲಿಗೆ ಬಂದಿರುವವಳು. ಇವರನ್ನು, ಅದರಲ್ಲೂ ಇಂಥ ಸಮಯದಲ್ಲಿ, ಖಂಡಿತವಾಗಿಯೂ ಬಿಟ್ಟು ಹೋಗಲಾರೆ!'

ಆ ರಾತ್ರಿ ದೂರವಾಣಿ ಸಂಪರ್ಕವೂ ಕಡಿದು ಹೋಯಿತು. 'ಈಗ ಅವರು ನಮ್ಮನ್ನು ಕೊಂದು ಹಾಕಿದರೂ ಯಾರಿಗೂ ಗೊತ್ತಾಗದು. ನಮ್ಮ ರಕ್ಷಣೆಯ ಹೊಣೆ ಸಂಪೂರ್ಣವಾಗಿ ನಮ್ಮ ಮೇಲೆಯೆ!' ಎಡೆಬಿಡದ ಓಡಾಟದಿಂದ ಸೋತು ಮಲಗಿದ್ದ ಮೆರ್ಲಿನ್ ಹೀಗೆ ಆಲೋಚನೆ ಮಾಡುತ್ತ ನಿದ್ರೆಗೆ ಜಾರಿದಳು.

ಸಿ.ಎನ್.ಎನ್. ದೂರದರ್ಶನದ ಮೂಲಕ, ಇಂಡೋನೇಶ್ಯಾದ ಅಧಿಕಾರಿಗಳು ಸೈನಿಕ ಶಾಸನವನ್ನು ಘೋಷಿಸಿರುವ ವಿಷಯ ತಿಳಿದು ಬಂತು. ಸಂಜೆಯ ಭಾಗದಲ್ಲಿ ಮೂವರು ಪಾದರಿಗಳು ಮತ್ತು ಹಲವಾರು ಸನ್ಯಾಸಿಯರನ್ನೂ ಕೊಲ್ಲಲಾಗಿದೆಯೆಂಬ ಸುದ್ದಿಯೂ ಬಂತು. ಸಾಲದೆಂಬಂತೆ ಈ ತನಕವೂ ಎಲ್ಲರ ಆಶಾದೀಪವೆನಿಸಿದ್ದ ಸಂ.ರಾ. ಕರ್ಮಚಾರಿಗಳೂ ತಂತಮ್ಮ ದೇಶಗಳಿಗೆ ಮರಳುವ ತಯಾರಿ ನಡೆಸಿದ್ದರು. ''ಅವರೂ ಹೊರಟು ಹೋದರೆ ನಮ್ಮ ಸಾವು ನಿಶ್ಚಿತ!'' ಎಂದು ಒಬ್ಬ ಶರಣಾರ್ಥಿ ಪ್ರಲಾಪಿಸಿದಾಗ ಧೈರ್ಯ ಹೇಳಿದಳು ಮೆರ್ಲಿನ್, ''ಇಲ್ಲ, ಹಾಗೆ ಆಗುವುದಿಲ್ಲ''!

ಪಕ್ಕದ ಕಾನ್ವೆಂಟ್ ಸಮುಚ್ಚಯದಲ್ಲಿದ್ದ ೪೦೦ ಜನರಲ್ಲಿ ಹೆಚ್ಚಿನವರು -ಗಂಡಸರು -ಗುಡ್ಡಗಾಡುಗಳಿಗೆ ಓಡಿಹೋದರು. ಉಳಿದ ೧೧೦೬ ಹೆಂಗಸರು, ಮತ್ತು ಮಕ್ಕಳ ಹೊಣೆಗಾರಿಕೆಯನ್ನು ಸೋದರಿಯರಿಗೆ ವಹಿಸಿ ಹೋಗಿದ್ದರು. ಎರಡು ರಾತ್ರಿಗಳ ಬಳಿಕ ಗುಂಡಿನ ಸುರಿಮಳೆ ಮತ್ತೆ ಶುರುವಾಯಿತು. ಪಕ್ಕದ -ಈಗ ಖಾಲಿಯಾಗಿದ್ದ- ಕಾನ್ವೆಂಟಿಗೆ ಪ್ರಜಾ ಸೈನ್ಯದವರು ಉರಿ ಹಚ್ಚಿದರು. ಒಳಗೆ ಅಡುಗೆ ಅನಿಲದ ಹಂಡೆಗಳು ಬಾಂಬುಗಳಂತೆ ಸ್ಫೋಟಿಸುತ್ತಿರಲು, ಭಯದಿಂದ ಕಂಪಿಸುತ್ತಿದ್ದ ಜನರ ಮುಂದೆ ಕೃತಕವಾದ ಶಾಂತಿಯನ್ನು ನಟಿಸುತ್ತ, 'ನೀವು ಪ್ರಾರ್ಥನೆ ಮಾಡಿರಿ, ನಮ್ಮ ನಿವಾಸವನ್ನು ಅಗ್ನಿ ಮುಟ್ಟಲಾರದು!' ಎಂದು ಭರವಸೆ ನೀಡುತ್ತಿದ್ದಳು ಮೆರ್ಲಿನ್-'ನನ್ನ ಮನದ ಭೀತಿಯನ್ನು ನಾನು ಹೊರಗೆ ತೋರಿಸಿದರೆ, ಈ ಬಡಪಾಯಿ ಹೆಂಗಸರ, ಮಕ್ಕಳ ಪಾಡೇನು?' ಎಂದು ತನಗೆ ತಾನೇ ಹೇಳಿಕೊಂಡಳು.

ಅದೃಷ್ಟವಶಾತ್ ಸಲೇಶಿಯನ್ ಮಠದ ಪಾಳಿಗಳಲ್ಲಿ ಶೇಖರಿಸಿಡಲಾಗಿದ್ದ ಪೆಟ್ರೋಲ್ ಪೀಪಾಯಿಗಳನ್ನು ಬೆಂಕಿಯ ನಾಲಿಗೆ ಸಮೀಪಿಸಿರಲಿಲ್ಲ. ಮರುದಿನ ಮತ್ತೆ ಆಯುಧಗಳನ್ನು ಝಳಪಿಸುತ್ತ ಕಾನ್ವೆಂಟನ್ನು ಪ್ರವೇಶಿಸಿದ ಸೈನಿಕರು ಸನ್ಯಾಸಿನಿಯರನ್ನು ದುರುಗುಟ್ಟಿ ನೋಡುತ್ತ ಆದೇಶಿಸಿದರು. ''ಈಗಿಂದೀಗಲೇ ಜಾಗ ಖಾಲಿ ಮಾಡಿರಿ!''

''ನಾವಿಲ್ಲಿ ಬರೀ ಹೆಂಗಸರು ಮತ್ತು ಮಕ್ಕಳು ಮಾತ್ರ ಇದ್ದೇವೆ'' ಎಂದು ದೃಢವಾಗಿ ಹೇಳಿದಳು ಸೋದರಿ ಪೌಲಾ. ಆದರೆ ಇತರ ಸೈನಿಕರು ಸೋದರಿಯರ ಕೋಪ ತತ್‌ಕ್ಷಣವೇ ಭಯಕ್ಕೆ ತಿರುಗಿತು.

'ಗುಸ್ಮಾವ್ ದಂಪತಿಗಳು'! ಅವರನ್ನು ಹೇಗೆ ಕಾಪಾಡುವುದು? ಅವರು ಅಡಗಿದ್ದ ಉಗ್ರಾಣದ ಬಾಗಿಲನ್ನು ವಾಡಿಕೆಯಂತೆ

ಈಗಲೂ ಹಾಕಲಾಗಿದೆ. ಹೌದು! ಆದರೂ ಅವರೇನಾದರೂ ಸಿಕ್ಕಿ ಬಿದ್ದರೆ ಕೂಡಲೇ ಕೊಲ್ಲಲ್ಪಡುವರು!'

ಅತಿಕ್ರಮಣಕಾರರು ಹುಡುಕುತ್ತ ಹುಡುಕುತ್ತ ಮಾಳಿಗೆಯತ್ತ ಹೋದದ್ದೇ ತಡ, ನೆಲ ತುಂಬಾ ನೀರೆರಚಿ ಇಡೀ ಆವಾರವನ್ನು ತೊಳೆಯುವಂತೆ ಮೂರು, ನಾಲ್ಕು ಹುಡುಗಿಯರಿಗೆ ಆದೇಶಿಸಿದಳು ಸೋದರಿ ಪೌಲಾ. ತಪಾಸಣೆ ಮುಗಿಸಿ ಮಾಳಿಗೆಯಿಂದ ಕೆಳಗಿಳಿದ ಶಸ್ತ್ರಧಾರಿಗಳು ನೆಲ ತೊಳೆಯುತ್ತಿರುವ ಹುಡುಗಿಯರನ್ನು, ಚೆಲ್ಲಿದ್ದ ನೀರನ್ನು ಕಂಡು ಉಗ್ರಾಣದ ಕಡೆಗೆ ಗಮನವೀಯದೆ ಬೈಯುತ್ತ ಹೊರಟು ಹೋದರು. ಆದರೆ ಅರ್ಧಗಂಟೆಯೊಳಗೆ ಸಮವಸ್ತ್ರಧಾರಿಗಳಾದ ಇಂಡೋನೇಶಿಯ ಸೈನಿಕರು ಮಿದ್ದಾಗಿ ಬಂದಿಳಿದರು. ಮೆರ್ಲಿನ್ ತನ್ನ ಹುಡುಗಿಯರಿಗೆ ಸನ್ನೆ ಮಾಡುತ್ತಲೂ, ಅವರು ಅದೇ ಕೊಳಕು ನೀರನ್ನು ಮತ್ತೆ ಚೆಲ್ಲಿ ಒರಸುವಂತೆ ನಟಿಸ ತೊಡಗಿದರು. ಸೈನಿಕರು ಈ ಸಲವೂ ಬರೀ ಕೈಯಲ್ಲಿ ಹಿಂತಿರುಗಿದರು. ಉಗ್ರಾಣದ ಒಳಗಿನ ಮೂಲೆಯ ಮೇಜಿನ ಹಿಂದೆ ಅವಿತು ಮಲಗಿದ್ದ ಗುಸ್ತಾವ್ ದಂಪತಿಗಳು ಎರಡನೆಯ ಸಲ ನೆಮ್ಮದಿಯ ಉಸಿರುಬಿಟ್ಟರು.

ಆ ರಾತ್ರಿ ಮೂರನೆಯ ಸಲ ದಂಗೆಕೋರರು ಎರಡು ಕಾರುಗಳಲ್ಲಿ ಬಂದು ಪೆಟ್ರೋಲ್ ಡಬ್ಬಿಗಳೊಂದಿಗೆ ಬೇಲಿ ಹಾರಿ, ಆವರಣದೊಳಗೆ ನುಗ್ಗಿದಾಗ ಸೋದರಿಯರು ಪೌಲಾ ಮತ್ತು ಮೆರ್ಲಿನ್ ಹೊರಗೆ ಓಡಿ ಬಂದರು. ಅವರನ್ನು ನೋಡಿದ ಮುಖಂಡ ಒದರಿದ, ''ನೀವು ಈಗಲೇ ಇಲ್ಲಿಂದ ಹೋಗಿ''! ''ಇಲ್ಲಿರುವವರು ಬರಿ ಹೆಂಗಸರು, ಮಕ್ಕಳು ಮತ್ತು ಮುದಿಯರು, ನಮ್ಮಿಂದ ಯಾರಿಗೂ ಅಪಾಯವಿಲ್ಲ'' ಸೋದರಿ ಪೌಲಾಳ ಸೌಮ್ಯ ಮತ್ತು ಪ್ರಶಾಂತವಾದ ಮುಖಮುದ್ರೆ ಮತ್ತು ಅವಳ ಕ್ಷಮತೆಯನ್ನು ಕಂಡು ಅಪ್ರತಿಭರಾಗಿ ತಲೆ ತಗ್ಗಿಸಿ ಹೊರಟು ಹೋದರು ದಂಗೆಕೋರರು.

ಭಯೋತ್ಪಾದಕರ ಆಳ್ವಿಕೆಯಲ್ಲಿ ಒಂದು ವಾರ ಕಳೆಯಿತು. ಇಂಡೋನೇಶ್ಯಾದ ಅಧ್ಯಕ್ಷ ಪೂರ್ವತೈಮರ್‌ನಲ್ಲಿ ಒಂದು ಅಂತಾರಾಷ್ಟ್ರೀಯ ಸೇನಾ ತುಕಡಿಯನ್ನು ಇಡಲು ಒಪ್ಪಿದ್ದಾನೆಂಬ ಸುದ್ದಿಯೇನೋ ಬಂತಾದರೂ, 'ಮಿಲಿಷಾ' ತನ್ನ ಲೂಟಿಯನು ಮುಂದುವರಿಸಿತು. ಮತ್ತು ಒಂದು ವಾರ ಕಳೆದು, ಒಂದು ಮುಂಜಾನೆ ೫.೧೫ರ ಹೊತ್ತಿಗೆ ಒಂದು ಹಡಗಿನ ಫಾಗ್ ಹಾರ್ನ್' ಸದ್ದು ಡಿಲಿಯ ಬೀದಿಗಳಲ್ಲಿ ಪ್ರತಿಧ್ವನಿಸಿತು. ಓಹ್! ಅದು ಶಾಂತಿ ಸಂರಕ್ಷಣೆಗಾಗಿ ಬಂದಿರುವ ನೌಕೆ! ಸಮುಚ್ಚಯದೊಳಗಿನ ಶರಣಾರ್ಥಿಗಳು ಸಂತಸದಿಂದ ಕಣ್ಣೀರು ಸುರಿಸಿದರು.

ಸೆಪ್ಟಂಬರ್-೩೦ ಸೋಮವಾರ. ಅರಾಜಕತೆ ಶುರುವಾಗಿ ಹದಿನಾರನೆಯ ದಿನ. ಈ ೧೫ ದಿನಗಳಲ್ಲಿ ದಂಗೆಕೋರರು ಕಾನ್ವೆಂಟಿನ ಮೇಲೆ ಏಳು ಸಲ ದಾಳಿ ನಡೆಸಲು ಬಂದಿದ್ದರು. ಮೆರ್ಲಿನ್ ಸೋದರಿಯರು ಏಳು ಸಲವೂ ತಮ್ಮ ಪ್ರಾಣದ ಹಂಗು ತೊರೆದು ಉಪಾಯದಿಂದ ಅವರನ್ನು ತಡೆದಿದ್ದರು. ಅವರ ಬಳಿ ಆಶ್ರಯ ಪಡೆದಿದ್ದವರನ್ನು ರಕ್ಷಿಸಿದ್ದರು.

ಭಾಗಶಃ ಸುಟ್ಟು ಹೋಗಿದ್ದ ತನ್ನ ಶಾಲೆಯನ್ನು ವೀಕ್ಷಿಸಿದ ಮೆರ್ಲಿನ್ ಅಂದುಕೊಂಡಳು, ''ಇರಲಿ, ಅರ್ಧವಾಸಿ ಕಟ್ಟಡ ಉಳಿದಿದೆಯಷ್ಟೆ! ನಾವು ಮತ್ತೆ ಪ್ರಾರಂಭಿಸುವ!''

ಒಂದು ವಾರದ ತರುವಾಯ ಮಾನ್ಯುವಲ್ ಗುಸ್ತಾವ್ ಮತ್ತು ಅವನ ಹೆಂಡತಿ ತಮ್ಮ ಮನೆಗೆ ಹೊರಟು ನಿಂತರು. ''ಸೋದರಿ, ನಿನಗೆ ಹೇಗೆ ಕೃತಜ್ಞತೆ ಸಲ್ಲಿಸ ಬೇಕೋ ತಿಳಿಯದು! ನಿನ್ನ ಋಣವನ್ನು ತೀರಿಸಲು ಪೂರ್ವ ತೈಮರ್‌ನ ಜನರಿಗೆ ಎಂದಿಗೂ ಸಾಧ್ಯವಾಗದು!'' ಎನ್ನುತ್ತ ಮೆರ್ಲಿನ್‌ಳ ಕೈಗಳನ್ನು ಎತ್ತಿ ಕೊಂಡು ವೃದ್ಧ ಗುಸ್ತಾವ್ ಗದ್ಗದಿತ ಧ್ವನಿಯಲ್ಲಿ ಹೇಳಿದಾಗ, ಅವನ ಮುದಿ ಕೆ ಸ ನೆರಿಗೆ ಗಳಲ್ಲಿ ಕಣ್ಣೀರ ಕೋಡಿ ಹರಿದಿತ

''ಕರುಣಾಳು ಬಾ ಬೆಳಕೆ!
ಮುಸುಕಿದೀ ಕತ್ತಲಲಿ ಕೈಹಿಡಿದು ನಡೆಸೆನ್ನ ಮುಂದೆ!''

ಘರ್ಷಣೆಯನ್ನು ತಪ್ಪಿಸುವುದು ಹೇಗೆ

ಗಂಗಾ ಬಿ. ರಾಜಪುರೋಹಿತ
೭೧೬, ೧೬ನೇ ಮುಖ್ಯ ರಸ್ತೆ
ಸರಸ್ವತೀಪುರ, ಮೈಸೂರು

ಕತ್ತಲಾಗುತ್ತಿತ್ತು. ಎವ್ರಿಲ್ ಸಾಂಡರ್ಸ್ ತನಗೆ ದೊಡ್ಡದೊಂದು ಆಪತ್ತು ಬರಲಿದೆ ಎಂದು ತಿಳಿದುಕೊಂಡಳು. ಇಂಗ್ಲೆಂಡಿನ ಮ್ಯಾಂಚೆಸ್ಟರಿನಲ್ಲಿ ಕ್ರಿಡಾಭಿವೃದ್ಧಿ ಅಧಿಕಾರಿಯಾಗಿದ್ದ ಆಕೆ ಬೇರೆ ಇಬ್ಬರು ಹೆಣ್ಣು ಮಕ್ಕಳೊಡನೆ ಪಂದ್ಯಗಳ ಬಗ್ಗೆ ಮಾತನಾಡುತ್ತಿದ್ದಾಗ ದೂರದಲ್ಲಿ ಭಯಾನಕವಾದ ಚೀತ್ಕಾರವೊಂದು ಕೇಳಿಸಿತು. ಏನೆಂದು ನೋಡುವಷ್ಟರಲ್ಲಿ ೧೪ ವರ್ಷದ ಹುಡುಗನೊಬ್ಬ ಏದುಸಿರು ಬಿಡುತ್ತ ಓಡೋಡಿ ಬಂದ. ಅವನನ್ನು ಹದಿವಯಸ್ಸಿನ ಎಂಟು ಜನರ ಗುಂಪೊಂದು ಅಟ್ಟಿಸಿಕೊಂಡು ಬಂತು. ಈ ಘಟನೆ ನಡೆದುದು ಎಷ್ಟು ಜೋರಾಗಿ ಕೂಗಿದರೂ ಕೇಳಿಸದಷ್ಟು ದೊಡ್ಡ ಮೈದಾನದಲ್ಲಿ. ಎವ್ರಿಲ್‌ಳ ಕೈಯಲ್ಲಿದ್ದ ೧೦-೧೨ ಬ್ಯಾಟುಗಳು ಬೇರೆ ಇದ್ದುವು. ಹೊಡೆದಾಡಬೇಕೆನ್ನುವವರಿಗೆ ಅವು ಆಯುಧಗಳಾಗುವಂತಿದ್ದುವು. ತನಗೇ ಒಳಗೆ ಧೈರ್ಯವಿರದಿದ್ದರೂ ತೋರಿಸಿಕೊಳ್ಳದೇ ಹೇಗೋ ಧೈರ್ಯ ತಂದುಕೊಂಡು ಪ್ರತಿ ಯೊಬ್ಬ ಹುಡುಗನನ್ನು ಕಣ್ಣಲ್ಲಿ ಕಣ್ಣಿಟ್ಟು ದಿಟ್ಟಿಸಿ ನೋಡಿದಳು. ಆ ಹುಡುಗರೂ ಪ್ರತಿಯಾಗಿ ಈಕೆಯನ್ನು ನೋಡಿದರು. ಮನಸ್ಸಿನ ಉದ್ವೇಗದಿಂದ ಮೈಯೆಲ್ಲ ಬಿಗಿಯಾದಂತೆ ಅನಿಸುತ್ತಿತ್ತು. ಅವರಲ್ಲಿ ಒಬ್ಬ ಹುಡುಗ ಈಕೆಗೆ ಗೊತ್ತಿರುವವನಂತೆ ಕಂಡ. ''ನಾನು ನಿನ್ನನ್ನು ಎಲ್ಲೋ ನೋಡಿದಂತಿದೆಯಲ್ಲ? ಹಾಂ, ಎರಡು ವಾರದ ಹಿಂದೆ ನಾವು ನಡೆಸಿದ ಬ್ಯಾಸ್ಕೆಟ್ ಬಾಲ್ ಉತ್ಸವಕ್ಕೆ ಬಂದಿದ್ದೆಯಲ್ಲವೇ?'' ಎಂದು ಕೇಳಿದಳು. ಆ ಹುಡುಗ ತನಗೇನೂ ಗೊತ್ತಿಲ್ಲ ಎಂಬಂತೆ 'ಮಣ ಮಣ' ಅಂದ. ಮಾತು ಮರೆಸ ಬೇಕೆಂದು ಎವ್ರಿಲ್ ಮುಂದುವರಿಸಿ ''ಈಗ ನಾವು ಸ್ನೇಹ-ಪಂದ್ಯ ಆಡುತ್ತೇವೆ. ಆದರೇನು ಮಾಡುವುದು! ನಿಮ್ಮಷ್ಟು ಸಣ್ಣ ಹುಡುಗರಿಗೆ ಸರಿ ಹೋಗುತ್ತೋ ಇಲ್ಲವೋ'' ಅಂದಳು. ಹೀಗೆ ಆಕೆ ಹೆಚ್ಚು ಹೆಚ್ಚು ಮಾತನಾಡಿದಷ್ಟು ತನ್ನ ಮನಸದ ಉದ್ವೇಗ ಕಡಿಮೆಯಾದಂತೆ ಅನಿಸುತ್ತಿತ್ತು. ಅಂತೂ ಅಟ್ಟಿಸಿಕೊಂಡು ಬಂದ ಆ ಹುಡುಗರು ಮೈದಾನ ಬಿಟ್ಟು ಹೋಗುವಂತೆ ಮನವೊಲಿಸುವಲ್ಲಿ ಯಶಸ್ವಿಯಾದಳು. ಏದುಸಿರು ಬಿಡುತ್ತ ಬಂದ ಹುಡುಗನನ್ನು ಮಾತ್ರ ತನ್ನ ಕಾರಿನಲ್ಲಿ ಕರೆತಂದು ಅವನ ಮನೆಗೆ ಬಿಟ್ಟಳು. ಎವ್ರಿಲ್ ಇಂಥ ಎಷ್ಟೋ ಉದ್ವೇಗಕಾರಕ ಘಟನೆಗಳನ್ನು ಎದುರಿಸಿದ್ದಳು. ಇಂಥ ಸಂದರ್ಭಗಳಲ್ಲಿ ಸುರಕ್ಷಿತವಾಗಿ ಪಾರಾಗುವುದು ಹೇಗೆ ಎಂಬ ತಂತ್ರಗಳನ್ನೂ ಆಕೆ ಕಲಿತುಕೊಂಡಿದ್ದಳು.

ಮಾತಾಡುತ್ತಲೇ ಇರಿ :

ಇಂಥ ಹಿಂಸಾತ್ಮಕ ಸನ್ನಿವೇಶಗಳನ್ನು ಸ್ಪೋರ್ಟ್ಸ್ ಕ್ಲಬ್ಬಿನ ಕಾರ್ಮಿಕರು, ಪೊಲೀಸರು, ನೈಟ್‌ಕ್ಲಬ್ ನಡೆಸುವವರು ಎದುರಿಸುತ್ತಲೇ ಇರುತ್ತಾರೆ. ಇತ್ತೀಚಿನ ದಿನಗಳಲ್ಲಿ ಇವು ಹೆಚ್ಚುತ್ತಿದೆ. ಆದರೆ ಕುಡುಕನೊಬ್ಬ ಗಲಾಟೆ ಮಾಡಿದಾಗ ಆಗಲಿ ಅಥವಾ ಮೋಟರ್ ಸೈಕಲ್ ಸವಾರನೊಬ್ಬ ಮೈಮೇಲೆ ಏರಿ ಬಂದಾಗ ಆಗಲಿ ಇವೇ ಮೊದಲಾದ ಇಕ್ಕಟ್ಟಿನ ಪ್ರಸಂಗಗಳಲ್ಲಿ ನೀವು ನಿಮ್ಮ ರಕ್ಷಣೆಯನ್ನು ಹೇಗೆ

ರೀಡರ್ಸ್ ಡೈಜೆಸ್ಟ್‌ನ ಫೆಬ್ರುವರಿ ೨೦೦೧ರ ಸಂಚಿಕೆಯಲ್ಲಿ ಪ್ರಕಟವಾದ ಡೇವಿಡ್ ಮೋಲರ್ ಎಂಬುವರ 'ಹೌ ಟು ಡಿಫ್ಯೂಜ್ ಹಾಟ್‌ಹೆಡ್ಸ್' ಎಂಬ ಲೇಖನದ ಭಾವಾನುವಾದ

ಮಾಡಿಕೊಳ್ಳಬೇಕು ಎಂಬ ಬಗ್ಗೆ ಬಲ್ಲವರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಒಂದನ್ನು ಎಪ್ರಿಲ್ ಸಾಂಡರ್ಸ್ ಮಾತಾಡಿ ಮಾತಾಡಿ ಹುಡುಗರ ಗಮನವನ್ನು ಬೇರೆಡೆ ಸೆಳೆದು ಆಗಬಹುದಾದ ಅನಾಹುತವನ್ನು ತಪ್ಪಿಸಿದಳು ಎಂಬಲ್ಲಿ ನೋಡಿದೆವು. ಪೊಲೀಸರು ಕೂಡ ಇದೇ ರೀತಿ ಕೋಪೋದ್ರಿಕ್ತ ಮನುಷ್ಯರೊಡನೆ ಮಾತಾಡಿ ಮಾತಾಡಿ ಅವನು ಮಾಡಬಹುದಾದ ಅನಾಹುತವನ್ನು ತಪ್ಪಿಸಿದ್ದುಂಟು. ಪಾಲ್ ಡ್ಯಾನ್‌ಬರಿ ಎಂಬ ಒಬ್ಬ ಪೊಲೀಸ್ ಅಧಿಕಾರಿ ''ಹೀಗೆ ಮಾತಾಡುವುದರಿಂದ ನಿಮಗೆ ಕನಿಷ್ಠ ಮೊಬೈಲ್ ಫೋನಿನಲ್ಲಿ ಸಹಾಯಕ್ಕಾಗಿ ಬೇರೆಯವರನ್ನು ಕರೆಯುವದಕ್ಕಾದರೂ ಅವಕಾಶ ಸಿಗುತ್ತದೆ'' ಎಂದು ಹೇಳುತ್ತಾನೆ.

ಏರೊಪ್ಲೇನಿನಲ್ಲಿ ಮೊದಲೇ ಇಕ್ಕಟ್ಟಾದ ಸ್ಥಳ. ಅಲ್ಲದೇ ಅಷ್ಟೊಂದು ಎತ್ತರದಲ್ಲಿ ಹಾರುತ್ತಿರುವಾಗ, ಕುಡಿದವರಿಗೆ ಒಂದು ತರಹದ ಉನ್ಮತ್ತತೆ ಉಂಟಾಗುತ್ತದೆ. ಆಗ ವಿಮಾನ ಪರಿಚಾರಕರು ಅವರನ್ನು ಶಾಂತ ರೀತಿಯಿಂದ ಮಾತಾಡಿಸಿ ಅವರ ಉನ್ಮಾದವನ್ನು ಕಡಿಮೆ ಮಾಡುತ್ತಾರೆ. ಅದನ್ನು ಹೇಗೆ ಮಾಡಬೇಕೆಂಬ ಬಗ್ಗೆ ಅವರಿಗೆ ವಿಶೇಷ ತರಬೇತಿ ಇರುತ್ತದೆ.

ಪಾಲ್ ಮೂರ್ ಎಂಬ ವರ್ಜಿನ್ ಅಟ್ಲಾಂಟಿಕ್ ಏರ್ ಲೈನ್ಸಿನ ಅಧಿಕಾರಿ ಇತ್ತೀಚೆಗೆ ನಡೆದ ಒಂದು ಘಟನೆಯನ್ನು ವಿವರಿಸುತ್ತಿದ್ದ. ಪ್ರಯಾಣಿಕನೊಬ್ಬನೊಡನೆ ವಾದಕ್ಕಿಳಿದಿದ್ದ ಮತ್ತೊಬ್ಬ ಪ್ರಯಾಣಿಕನನ್ನು ಸತತವಾಗಿ ಎರಡು ಗಂಟೆಗಳ ಕಾಲ ಮಾತನಾಡಿಸಿ ಸಮಾಧಾನ ಪಡಿಸಿದನಂತೆ. ಸಹ ಪ್ರಯಾಣಿಕರೊಡನೆ ಘರ್ಷಣೆಗೆ ಇಳಿಯುವುದರ ಬದಲು ವಿಮಾನ ಪರಿಚಾರಕರಿಗೆ ಹೇಳುವುದು ಒಳ್ಳೆಯದು. ಎಂಥ ಸಂದರ್ಭವನ್ನೂ ನಿಭಾಯಿಸಬಲ್ಲ ತರಬೇತಿ ಅವರಿಗೆ ಇರುತ್ತದೆ.

ಕೇಳಿಕೊಳ್ಳಿರಿ, ವಾದಕ್ಕಿಳಿಯಬೇಡಿರಿ

ಕಳೆದ ೨೦ ವರ್ಷಗಳಿಂದ ಮಿಕ್ ಕೆರಲ್ ಎಂಬಾತ ಒಂದು ವಸತಿ ಗೃಹದಲ್ಲಿ ಕೆಲಸ ಮಾಡುತ್ತಿದ್ದನಂತೆ . ಕುಡಿತ, ಮಾದಕ ದ್ರವ್ಯ ಸೇವನೆ ಮತ್ತು ಮಾನಸಿಕ ಅಸ್ವಸ್ಥತೆಯಿಂದ ಬಳಲುವರಿಗೆ ಪುನರ್ವಸತಿ ಒದಗಿಸುವ ಗೃಹ ಅದಾಗಿತ್ತು. ಅವನ ಅನುಭವ ಕುತೂಹಲಕಾರಿಯಾಗಿದೆ. ಅಲ್ಲಿ ಇದ್ದವರೆಲ್ಲ ಕಿರುಚಾಡಿ ಗಲಾಟ್ ಮಾಡುತ್ತಿದ್ದುದು ಸರ್ವೇಸಾಮಾನ್ಯ. ಅದು ಅವರ ಮಾನಸಿಕ ವ್ಯಥೆ ಭಯಗಳ ದ್ಯೋತಕವಾಗಿರುತ್ತಿತ್ತಲ್ಲದೇ ಅನೇಕ ಸಲ ಅವರು ಹಿಂಸಾಚಾರಕ್ಕೆ ಇಳಿಯುವ ಮುನ್ಸೂಚನೆಯೂ ಆಗಿರುತ್ತಿತ್ತು. ಕ್ರೋಧಾವಿಷ್ಟರಾದವರ ಮುಂದೆ ನೀತಿ ಮಾತನ್ನು ಹೇಳುವುದರ ಬದಲು ಏನೂ ನಡೆದೇ ಇಲ್ಲವೇನೋ ಎಂಬಂತೆ ಅವರ ಚಿತ್ತವನ್ನು ಬೇರೆಡೆಗೆ ತಿರುಗಿಸುವುದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಕೋಪದಲ್ಲಿರುವ ಅಂಥ ವ್ಯಕ್ತಿಗೆ ''ನೋಡಪ್ಪ, ನೀನು ಹೀಗೆ ಮಾಡುವದು ತಪ್ಪು. ಇದು ನನಗೆ ಸರಿ ಬರುವುದಿಲ್ಲ'' ಎಂದು ನೇರವಾಗಿ ಹೇಳುವುದರ ಬದಲು ''ನಿನಗೆ ಈಗ ಕೋಪ ಬರುವದು ಸ್ವಾಭಾವಿಕ. ಆದರೆ ನಿನ್ನ ಕೋಪದ ಕಾರಣವನ್ನು ಇನ್ನೊಂದು ದಿಕ್ಕಿನಿಂದಲೂ ವಿಚಾರಿಸಿ ನೋಡು'', ಎಂದು ಅಂದಾಗ ಅವನ ಕೋಪ ಅರ್ಧ ಕಡಿಮೆಯಾಗುತ್ತದೆ.''ನೀನು ಹೀಗೆ ಜೋರಾಗಿ ಕಿರಿಚಾಡಿದರೆ ನಾನು ನಿನಗೆ ಹೇಗೆ ಸಹಾಯ ಮಾಡುವುದಕ್ಕೆ ಸಾಧ್ಯ? ಆದ್ದರಿಂದ ನೀನು ಗಲಾಟೆ ಮಾಡದೇ ಸ್ವಲ್ಪ ಶಾಂತ ರೀತಿಯಿಂದ ಹೇಳಿದರೆ ನಿನ್ನ ಮಾತು ನನಗೆ ಸರಿಯಾಗಿ ಕೇಳಿಸಿ ನನ್ನ ಮಾತೂ ನಿನಗೆ ಕೇಳಿಸುತ್ತದೆ. ಅದರಿಂದ ನಿನಗೇ ಸಹಾಯವಾದೀತು''.

ಎಂದು ತಿಳಿಸಿ ಹೇಳುವುದರಿಂದ ವ್ಯಕ್ತಿ ಶಾಂತನಾಗುತ್ತಾನೆ.

ದೇಹ ಆಡುವ ಮಾತು

ಘರ್ಷಣೆ ನಡೆಯುವ ಸಂದರ್ಭದಲ್ಲಿ ನೀವು ಅಲ್ಲಿಗೆ ಹೋಗಿ ಯಾವ ಭಂಗಿಯಲ್ಲಿ ಹೇಗೆ ನಿಲ್ಲುತ್ತೀರಿ ಎಂಬುದೂ ಮುಖ್ಯವಾಗುತ್ತದೆ. ನೀವು ನಿಂತ ಭಂಗಿಯಿಂದ ಅಲ್ಲಿ ಶಾಂತ ವಾತಾವರಣ ಉಂಟಾಗುತ್ತದೋ ಅಥವಾ ಇನ್ನೂ ಹೆಚ್ಚು ಘರ್ಷಣೆ ನಡೆಯುತ್ತದೋ ಎಂಬುದು ನಿರ್ಧಾರವಾಗುತ್ತದೆ. ಬ್ರಿಟಿಷ್ ಆಸ್ಪತ್ರೆಯೊಂದರಲ್ಲಿ ೨೭ ಜನರ ಸುರಕ್ಷಾ ಸಿಬ್ಬಂದಿಯ ಮುಖ್ಯಸ್ಥನಾಗಿದ್ದ ಡೇವಿಡ್ ಸಾಟರ್ ಎಂಬ ವ್ಯಕ್ತಿ ಹೇಳುವ ಪ್ರಕಾರ ಘರ್ಷಣೆ ನಡೆಯುವ ಸಂದರ್ಭದಲ್ಲಿ ನೀವು ಅಧಿಕಾರಯುಕ್ತವಾಗಿ ನಡೆದುಕೊಳ್ಳಬೇಕೇ ಹೊರತು ಅಧಿಕಾರ ಚಲಾಯಿಸಬಾರದು. ಉದಾಹರಣೆಗೆ, ಕೈ ಮುಂದೆ ಮಾಡಿ ತೋರು ಬೆರಳನ್ನು ತೋರಿಸುತ್ತ ಜೋರಾಗಿ ಮಾತಾಡುವುದಾಗಲಿ , ಸೊಂಟದ ಮೇಲೆ ಕೈ ಇಟ್ಟುಕೊಂಡು ಸೆಟೆದು ನಿಲ್ಲುವುದಾಗಲಿ, ಬಿಗುಮಾನದಿಂದ ನೋಡುವುದಾಗಲಿ ಮಾಡಿ ದರೆ, ಅಥವಾ ಅವರ ಕಣ್ಣಲ್ಲಿ ಕಣ್ಣಿಟ್ಟು ತದೇಕ ದೃಷ್ಟಿಯಿಂದ ನೋಡುವದರಿಂದ ಅಥವಾ ಒಮ್ಮೆಲೇ ನುಗ್ಗಿದಂತ ಮಾಡುವದರಿಂದ ಕೋಪಗೊಂಡ ವ್ಯಕ್ತಿಗೆ ಇನ್ನಷ್ಟು ಉದ್ರೇಕವಾಗುತ್ತದೆ. ಅದರ ಬದಲು ನೀವು ಸಹಜವಾಗಿ ಸ್ವಾಭಾವಿಕವಾಗಿ ನಮ್ರತೆಯಿಂದ ನಡೆದುಕೊಂಡರೆ ಅವನು ತಾನೇ ಶಾಂತನಾಗುತ್ತಾನೆ.

ವಾಹನ ಸಂಚಾರ ನಿಯಂತ್ರಣಾಧಿಕಾರಿ ಅಂಗೇಲಾ ರೈಸ್‌ನು ಘರ್ಷಣೆ ಕೈಮೀರುತ್ತದೆ ಎಂಬ ಸಂದರ್ಭದಲ್ಲಿ ಆ ಜಾಗದಿಂದ ಸ್ವಲ್ಪ ದೂರ ಸರಿದು ನಿಲ್ಲುತ್ತಾನಂತೆ . ಅದರಿಂದ ಘರ್ಷಣೆಯಲ್ಲಿ ತೊಡಗಿದ ವ್ಯಕ್ತಿಗೆ ತನ್ನ ಬಗ್ಗೆ ತಿರಸ್ಕಾರವಿಲ್ಲ ಎಂದೆನಿಸುತ್ತದಂತೆ. ಇಂಥ ಪ್ರಸಂಗದ ಬಗ್ಗೆ ಮಿಕ್ ಕೆರಲ್ ಹೇಳುವ ಮಾತೂ ಮಹತ್ವದ್ದಾಗಿದೆ. ''ಹೊಡೆದಾಡು ಇಲ್ಲವೆ ಜಾಗ ಖಾಲಿ ಮಾಡು'' ಅನ್ನುವಂಥ ವ್ಯಕ್ತಿಗಳು ತಮ್ಮ ಉದ್ರೇಕದಲ್ಲಿ ಸಣ್ಣ ಸಣ್ಣ ಉಸಿರು ತೆಗೆದುಕೊಳ್ಳುತ್ತಾರೆ. ಅದರಿಂದ ಅವರ ಮಿದುಳಿಗೆ ಪ್ರಾಣವಾಯುವಿನ ಸರಬರಾಜು ಕಡಿಮೆಯಾಗಿ ಮೈಯಲ್ಲೆಲ್ಲ ಆವೇಶ ಬಂತಂತೆ ವರ್ತಿಸುತ್ತಾರೆ. ಅವರಿಗೆ ಒಳಗೆ ಭಯವೆನಿಸಿದರೂ ಅದನ್ನು ತೋರಗೊಡದೇ ತಾವು ಧೈರ್ಯದಿಂದಲೇ ಇದ್ದೇವೆಂದು ತೋರಿಸಬೇಕು ಎನಿಸುತ್ತದೆ. ಏನಾದರೂ ಮಾಡಿ ಕೋಪಗೊಂಡ ವ್ಯಕ್ತಿ ದೀರ್ಘವಾಗಿ ಉಸಿರಾಡುವಂತೆ ಮಾಡಿದರೆ ಅವನ ಮಿದುಳಿಗೆ ಹೆಚ್ಚು ಪ್ರಾಣವಾಯು ಸರಬರಾಜಾಗಿ, ಅದು ಸರಿಯಾಗಿ ಕೆಲಸ ಮಾಡಿ, ಕೋಪವನ್ನು ಶಾಂತ ಮಾಡುತ್ತದೆ.

ಘರ್ಷಣೆಯ ಸ್ಥಳದಿಂದ ದೂರವಿರಿ

ಘರ್ಷಣೆ ನಡೆಯುವ ಸ್ಥಳದಲ್ಲಿ ಗಲಾಟೆ ಮಾಡುವವರಿಂದ ಸ್ವಲ್ಪ ದೂರವಿರಬೇಕು. ಗ್ರಹಾವ್ ಥಾವ್ಸನ್ ಎಂಬ ಪೋಲೀಸ್ ಅಧಿಕಾರಿ ಹೇಳುವ ಪ್ರಕಾರ ಆಕ್ರಮಣಮಾಡಬೇಕೆಂಬ ವ್ಯಕ್ತಿ ಕನಿಷ್ಠ ಎರಡು ಮೀಟರ್ ಅಂತರವನ್ನು ಇಟ್ಟುಕೊಂಡಿರುತ್ತಾನಂತೆ. ಇದರಿಂದ ಎದುರಾಳಿಗಳಿಗೆ ತಪ್ಪಿಸಿ ಕೊಳ್ಳಲು ಅಥವಾ ಎದುರಿಸಲು ಅವಕಾಶವಾಗುತ್ತದೆಯಂತೆ. ಅದರ ಬದಲು ಅವನ ಹತ್ತಿರವೇ ನಿಂತರೆ ಅವನ ಆಕ್ರಮಣವನ್ನಾಗಲಿ, ಹೊಡೆತವನ್ನಾಗಲಿ ತಪ್ಪಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಉದ್ರೇಕಗೊಂಡ ವ್ಯಕ್ತಿಯ ಹೆಗಲ ಮೇಲೆ ಕೈ ಹಾಕುವುದಾಗಲಿ ಅವನನ್ನು ಮುಟ್ಟುವುದಾಗಲಿ ಮಾಡಬಾರದು. ತನ್ನನ್ನು ಹೊಡೆಯಲು ಬಂದರೆಂದೇ ತಿಳಿದು ಅವನ ಉದ್ರೇಕ ಇನ್ನೂ ಹೆಚ್ಚುತ್ತದೆ.

ಮೋಟರ್ ಬೈಕ್‌ನಲ್ಲಿ ಜೋರಾಗಿ ಹೋಗುವವರು ಎದುರಿಗೆ ಬಂದವರನ್ನು ಕೆಕ್ಕರಿಸಿ

ನೋಡುವುದು, ಕಾರಿನಲ್ಲಿ ಹೋಗುವವರು ಸಿಕ್ಕಾಪಟ್ಟೆ ಹಾರ್ನ್ ಮಾಡುವುದು ಕೂಡ ಅವರ ಮನೋದ್ರೇಕವನ್ನೇ ಸೂಚಿಸುತ್ತವೆ. ವಾಹನ ನಡೆಸುವವರು ಕೂಡ ಅಂತರವನ್ನು ಇಟ್ಟುಕೊಂಡರೆ ಆಗಬಹುದಾದ ಅನಾಹುತವನ್ನು ತಪ್ಪಿಸಬಹುದು. ಆಕಸ್ಮಾತ್ ತಪ್ಪು ಮಾಡಿದಾಗ 'ದಯವಿಟ್ಟು ಕ್ಷಮಿಸಿ' ಅನ್ನುವುದು; ''ನೀವು ಹೋಗಿ, ನನಗೆ ಅವಸರವಿಲ್ಲ'' ಎಂದು ಇನ್ನೊಬ್ಬರಿಗೆ ದಾರಿ ಮಾಡಿಕೊಡುವುದು ಸಜ್ಜನಿಕೆಯನ್ನು ತೋರಿಸುತ್ತದೆ.

ಮುಖ ಉಳಿಸಿಕೊಳ್ಳುವುದು

ಒಬ್ಬ ವ್ಯಕ್ತಿ ಕೋಪಗೊಂಡು ಘರ್ಷಣೆಗೆ ಇಳಿದಾಗ ಎಲ್ಲರ ಎದುರು ಅವನನ್ನು ಬಯ್ಯುವುದರಿಂದ ಅಥವಾ ಅವನೊಬ್ಬ ಕ್ಷುಲ್ಲಕ ವ್ಯಕ್ತಿ ಎಂದು ಅನ್ನುವುದರಿಂದ ಆ ವ್ಯಕ್ತಿ ಇನ್ನಷ್ಟು ಕೋಪೋದ್ರಿಕ್ತನಾಗಿ ಹೆಚ್ಚು ಆಕ್ರಮಣ ಮಾಡುವಂತಾಗುತ್ತದೆ. ಇಂಥ ಸನ್ನಿವೇಶಗಳನ್ನು ಅಭ್ಯಾಸ ಮಾಡಿದ ಪೊಲೀಸ್ ಆಫೀಸರ್ ಆ್ಯಂಡ್ರ್ಯೂ ವಾಕರ್ ಹೇಳುವ ಮಾತುಗಳು ಮಹತ್ವದ್ದಾಗಿವೆ. ಒಬ್ಬ ವ್ಯಕ್ತಿ ಬಾರಿನಲ್ಲಿ ಕುಳಿತು ಕುಡಿದು ತನ್ನ ಗೆಳೆಯರ ಮುಂದೆ ತಾನೊಬ್ಬ ಗಣ್ಯ ವ್ಯಕ್ತಿಯೆಂದು ಜಂಬ ಕೊಚ್ಚಿಕೊಳ್ಳುತ್ತ ಗಲಾಟೆ ಮಾಡುತ್ತಿದ್ದರೆ ಅವನನ್ನು ಶಾಂತ ರೀತಿಯಿಂದ ಬೇರೆಡೆಗೆ ಕರೆದೊಯ್ದು ಸಮಾಧಾನ ಹೇಳುವುದರಿಂದ ಅವನು ಹಿಂಸೆಗೆ ಇಳಿಯುವ ಪ್ರಸಂಗ ತಪ್ಪುತ್ತದೆ. ''ಇಂದು ನೀನು ಗಲಾಟೆ ಮಾಡದೇ ಹೊರಗೆ ಹೋದರೆ ನಾಳೆ ನಿನ್ನನ್ನು ಮತ್ತೆ ಬಾರಿನೊಳಗೆ ಬಿಡುತ್ತೇವೆ'' ಎಂದು ಹೇಳಿದಾಗಲೂ ಗಲಾಟೆ ಆಗದೇ ಇರಬಹುದು.

ಅಪಾಯ ಪ್ರಸಂಗದಿಂದ ಹೊರಗೆ ಹೋಗುವವ ಜಾಣ

ಯಾವುದಾದರೂ ಒಂದು ಅಪಾಯಕಾರೀ ಪ್ರಸಂಗ ಬಂದಾಗ ಅದನ್ನು ಎದುರಿಸಲಾಗದಿದ್ದರೆ ಅಲ್ಲಿಂದ ಹೊರಗೆ ಹೋಗುವುದು ಸೂಕ್ತ. ಅಪರಿಚಿತ ಸ್ಥಳದಲ್ಲಂತೂ ಅಪಾಯದ ಸೂಚನೆ ಕಂಡರೆ ತಪ್ಪಿಸಿಕೊಳ್ಳಲು ಅನುಕೂಲವಾಗುವಂತೆ ಬಾಗಿಲ ಹತ್ತಿರ ಕುಳಿತುಕೊಳ್ಳುವುದು ಒಳ್ಳೆಯದು. ಒಂದು ವೇಳೆ ಹೋರಾಟಕ್ಕೆ ಇಳಿಯಲೇಬೇಕಾದ ಪ್ರಸಂಗ ಬಂದರೆ ನಿಮ್ಮ ತೋಳಿನಲ್ಲಿ, ತೊಡೆಯಲ್ಲಿ, ಹೊಟ್ಟೆಯಲ್ಲಿ ಸಾಕಷ್ಟು ಶಕ್ತಿ ಇದೆ ಎನ್ನುವುದನ್ನು ಖಾತ್ರಿ ಮಾಡಿಕೊಂಡು ಹೋರಾಟಕ್ಕೆ ಇಳಿಯುವುದು ಒಳ್ಳೆಯದು. ಇಲ್ಲವಾದರೆ ಅಲ್ಲಿಂದ ಹೊರಟು ಹೋಗುವುದು ಕ್ಷೇಮ. ಈಗಿನ ಕಾಲದಲ್ಲಿ ದೈಹಿಕ ಹೋರಾಟಕ್ಕಿಂತ ಆಯುಧಗಳ ಬಳಕೆ ಅಂದರೆ ಚಾಕು ಚೂರಿ ಪಿಸ್ತೂಲುಗಳ ಬಳಕೆ ಹೆಚ್ಚಾಗಿದೆ. ಅಂಥ ಅಪಾಯಕಾರೀ ಸಂದರ್ಭದಲ್ಲಿ ಜಾಗ ಖಾಲಿ ಮಾಡುವುದು ಬುದ್ಧಿವಂತಿಕೆಯ ಲಕ್ಷಣ.

ಪ್ರೀತಿಯು ಸರಿಯಾದ ಬೆಳಕು ಬೀರುತ್ತಿರುವಾಗ, ಆನಂದವು ಅದಕ್ಕೆ ಜೊತೆಯಾಗಿರುವಾಗ, ನಮ್ಮ ಸ್ವಭಾವ ಉಲ್ಲಾಸವೂ ಸುಖಕರವೂ ಆಗಿರುವುದು. ನಮ್ಮ ಜೀವನ ಶಾಂತಿಮಯವಾಗಿರುವುದು.

-ವರ್ಡ್ಸ್‌ವರ್ಥ್

ಕುಷ್ಠರೋಗ

ಡಾ.ಎಸ್.ಕೃಷ್ಣನ್ ಹರವೆ
೧೧, ೩ನೇ ಮುಖ್ಯ ರಸ್ತೆ,
ಸರಸ್ವತೀಪುರಂ
ಮೈಸೂರು-೯

ಈ ರೋಗ ಮೈಕ್ರೋಬ್ಯಾಕ್ಟೀರಿಯಮ್ ಲೆಪ್ರೆ ಎಂಬ ಸೂಕ್ಷ್ಮ ಕ್ರಿಮಿಗಳಿಂದ ಉಂಟಾಗುತ್ತದೆ. ಇದು ಗುಣವಾಗದಿರುವ ವ್ಯಾಧಿಯೆಂದೇ ಬಹಳ ವರ್ಷಗಳಿಂದಲೂ ಅಭಿಪ್ರಾಯಪಡಲಾಗಿದೆ. ಈ ವ್ಯಾಧಿ ಭಾರತ, ಬರ್ಮ ಮತ್ತು ಇತರ ಉಷ್ಣದೇಶಗಳಾದ ಏಷ್ಯ, ಆಫ್ರಿಕ, ದಕ್ಷಿಣ ಮತ್ತು ಮಧ್ಯ ಅಮೆರಿಕ, ಅಮೆರಿಕ ಸಂಯುಕ್ತ ಸಂಸ್ಥಾನಗಳ ಪೆಸಿಫಿಕ್ ಮತ್ತು ದಕ್ಷಿಣ ಭಾಗಗಳಲ್ಲಿ ಹೆಚ್ಚಾಗಿ ಕಾಣ ಬರುತ್ತದೆ. ಇದು ಸಮಾಜದಲ್ಲಿ ಒಂದು ಕಳಂಕ ಪ್ರಾಯವಾದ ರೋಗವೆಂದು ಪರಿಗಣಿತವಾಗಿದೆ. ಈ ರೋಗದ ಕ್ರಿಮಿಗಳನ್ನು ನಾರ್ವೆಯ ವಿಕಾಣುಜೀವಿವಿಜ್ಞಾನಿ ಆರ್ಮರ್ ಹಾನ್‌ಸೆನ್ ಎಂಬುವ ಪತ್ತೆ ಮಾಡಿದನು. ಈ ರೋಗಕ್ಕೆ ಇರುವ ಚಿಕಿತ್ಸೆ ಬಲು ನಿಧಾನದ್ದು; ಏಕೆಂದರೆ ಇದರ ಕ್ರಿಮಿಗಳು ಜಾಗ್ರತೆ ಬೆಳೆಯುವುದಿಲ್ಲ. ಮನುಷ್ಯರ ಕುಷ್ಠರೋಗವನ್ನು ಪ್ರಾಣಿಗಳಿಗೆ ಸುಲಭವಾಗಿ ವರ್ಗಾವಣೆ ಮಾಡಲಾಗುವುದಿಲ್ಲ, ಮತ್ತು ರೋಗದ ಕ್ರಿಮಿಗಳನ್ನು ಹೊರಗಡೆ ಬೆಳೆಸುವುದು ಅಷ್ಟು ಸುಲಭವಲ್ಲ. ಮನುಷ್ಯರಲ್ಲೂ ಇದಕ್ಕೆ ಬಹಳ ವರ್ಷಗಳ ನಿಕಟವಾದ ಸೋಂಕು ಇರಬೇಕು. ಕುಷ್ಠರೋಗ ಒಂದು ಹಠಮಾರಿ ವ್ಯಾಧಿಯಾದುದರಿಂದ ಚಿಕಿತ್ಸೆಯನ್ನು ಅನೇಕ ದಿವಸಗಳವರಿವಿಗೆ ಮಾಡಬೇಕು. ಮನುಷ್ಯರ ಕುಷ್ಠರೋಗ ಕ್ರಿಮಿಗಳನ್ನು ವ್ಯಕ್ತಿಯ ಮೂಗನ್ನು ತೊಳೆದ ನೀರಿನಿಂದ ಮತ್ತು ಚರ್ಮದ ಚೂರುಗಳಿಂದ ಇಲಿಗಳಲ್ಲಿಟ್ಟು ಬೆಳೆಸಿದ್ದಾರೆ. ಈ ರೋಗದಲ್ಲಿ ಸಯಾಟಿಕ್ ನರವು ಪಾಲ್ಗೊಂಡಿರುತ್ತದೆ. ಕುಷ್ಠರೋಗದ ಕ್ರಿಮಿಗಳು ಆರ್ಮಡಿಲೋ ಪ್ರಾಣಿಗಳಲ್ಲಿ ಬೆಳೆಯುತ್ತದೆ. ಈ ಪ್ರಾಣಿಗಳ ಅಂಗಾಂಶಗಳಲ್ಲಿ ಕ್ರಿಮಿಗಳು ಶೇಖರಣೆಯಾಗಿರುತ್ತವೆ. ಕುಷ್ಠರೋಗದ ಸಂಕೀರ್ಣತೆಗಳಿಗೆ ಸಂಬಂಧಿಸಿದ ಪ್ರಯೋಗಗಳು ಹಾಗೂ ಚಿಕಿತ್ಸೆಗಳು ೧೯೪೦ರಲ್ಲಿ ಆರಂಭವಾದುವು.

ಕುಷ್ಠರೋಗದ ಬಗೆಗಳು: ರೋಗದ ಸಂಕೀರ್ಣತೆಯ ಪ್ರಕಾರ ಈ ವ್ಯಾಧಿಯನ್ನು ನಾಲ್ಕು ವಿಧವಾಗಿ ವಿಂಗಡಿಸಿದೆ : ಲೆಪ್ರೋಮಾಟಸ್ ಲೆಪ್ರೊಸಿ, ಟ್ಯೂಬರ್ ಕ್ಯುಲಾಯಿಡ್ ಲೆಪ್ರೊಸಿ, ಅನಿಶ್ಚಿತ ಲೆಪ್ರೊಸಿ ಮತ್ತು ಡೈಮಾರ್ಕ್ಸ ಲೆಪ್ರೊಸಿ. ಇವುಗಳನ್ನು ಮನುಷ್ಯರಲ್ಲಿ ಕುಷ್ಠರೋಗ ಕ್ರಿಮಿಗಳಿಗೆ ಇರುವ ಅಣುಕೋಶ ಸಂಬಂಧವುಳ್ಳ ರಕ್ಷಣೆಯ ರೀತಿ ವಿಂಗಡಿಸಿದೆ.

ಲೆಪ್ರೋಮಾಟಸ್ ಕುಷ್ಠರೋಗದಲ್ಲಿ ಅಂಗಾಂಶ ಸಂಬಂಧವುಳ್ಳ ರಕ್ಷಣೆ ಕಡಿಮೆ. ಆದ್ದರಿಂದ ಈ ರೋಗ ಜಾಗ್ರತೆ ಬೆಳೆಯುತ್ತದೆ ಮತ್ತು ಕ್ರಿಮಿಗಳೂ ಬೇಗ ಬೆಳೆಯುತ್ತವೆ. ಈ ರೋಗ ಮುಖ್ಯವಾಗಿ ಮುಖ, ಮೂಗು, ಕಿವಿಗಳಲ್ಲಿ ಕಾಣಿಸಿಕೊಂಡು ಲಸಿಕೆಗ್ರಂಥಿಗಳನ್ನು ಹೊಂದಿರುತ್ತದೆ, ಕುಷ್ಠರೋಗದ ವ್ರಣಗಳು ಗುಂಡಾಗಿರುತ್ತವೆ. ವ್ರಣಗಳ ಜಾಗದಲ್ಲಿ ಕೂದಲಿರುವುದಿಲ್ಲ. ಇವು ಮುಂತಾದ ಮಚ್ಚೆಗಳಂತೆ ಇರುತ್ತವೆ. ಇದರಲ್ಲಿ ಕಡಿತವಾಗಲಿ ಅಥವಾ ಸ್ಪರ್ಶಜ್ಞಾನವಾಗಲಿ ಇರುವುದಿಲ್ಲ. ಈ ವ್ರಣಗಳು ಚಿಕ್ಕದಾಗಿರುತ್ತವೆ ಹಾಗೂ ನಯವಾಗಿರುತ್ತವೆ. ಕ್ರಿಮಿಗಳು ಕಿವಿ, ಮೂಗು ಮತ್ತು ಕಣ್ಣುಗಳಿಗೂ ಹರಡುತ್ತವೆ.

ಕ್ಷಯರೋಗ ಕುಷ್ಠದಲ್ಲಿ ಕ್ರಿಮಿಗಳು ಕಡಿಮೆ. ನರಗಳೂ ಇದರಲ್ಲಿ ಸೇರಿರುತ್ತವೆ. ರೋಗದ ಬೆಳೆವಣಿಗೆ ನಿಧಾನ. ಈ ವ್ರಣಗಳು

ಚಪ್ಪಟೆಯಾದ, ದೊಡ್ಡದಾದ, ಮಂಕಾಗಿರುವ, ಕೃಶವಾಗಿರುವ ವ್ರಣಗಳಾಗಿದ್ದು ಚರ್ಮದಲ್ಲಿ ಇರುತ್ತವೆ. ವ್ರಣಗಳಿಗೆ ಕೆಂಪಾದ ಅಂಚುಗಳಿರುತ್ತವೆ. ವ್ಯಕ್ತಿಗೆ ಸ್ಪರ್ಶಜ್ಞಾನ ಕುಗ್ಗಿರುತ್ತದೆ. ನರಗಳು ದಪ್ಪನಾಗಿರುತ್ತವೆ. ರೋಗದ ಮುನ್ನರಿವನ್ನು ಕೊಡುತ್ತವೆ. ಲೆಪ್ರೋಮಾಟಸ್ ಕುಷ್ಠರೋಗಕ್ಕಿಂತಲೂ ಈ ರೋಗದ ಚಿಕಿತ್ಸೆ ಸುಲಭ, ಅಧಿಕ ಅಂಗಗಳ ದುರ್ಬಲತೆ, ನರಗಳ ನಾಶ ಮತ್ತು ಸ್ಪರ್ಶಜ್ಞಾನರಾಹಿತ್ಯ ಇಲ್ಲಿಯ ಲಕ್ಷಣ. ಸೂಕ್ಷ್ಮದರ್ಶಕದ ಮೂಲಕ ನೋಡಿದರೆ ಎಪಿಥೀಲಿಯಲ್ ಅಣುಕೋಶಗಳು ಮತ್ತು ಅದ್ಭುತ ಅಣುಕೋಶಗಳು ಮತ್ತು ಲಿಂಫೋಸಿಟಿಕ್ ಸೋಸುವಿಕೆ ಕಾಣಬರುತ್ತದೆ.

ಅನಿಶ್ಚಿತ ಕುಷ್ಠದಲ್ಲಿ ವ್ರಣಗಳು ಕಡಿಮೆ; ರೋಗದ ವಿಷಯವಾಗಿ ಕಂಡುಬರುವ ಸೂಚನೆಗಳು ವಿರಳ. ಬಾರ್ಡರ್ ಲೈನ್ ಮತ್ತು ಲೆಪ್ರೋಮಾಟಸ್ ಕುಷ್ಠಗಳು ದೃಢವಲ್ಲದ್ದು, ಮತ್ತು ಅವುಗಳ ರಕ್ಷಣಾ ಸಾಮರ್ಥ್ಯ ಕಡಿಮೆ. ಇದಕ್ಕೆ ಯುಕ್ತ ಚಿಕಿತ್ಸೆ ಮಾಡದಿದ್ದರೆ ಅದು ಲೆಪ್ರೋಮಾಟಸ್ ಕುಷ್ಠವಾಗಿ ಪರಿಣಮಿಸುತ್ತದೆ. ಇವುಗಳಲ್ಲಿ ಹೆಚ್ಚು ಕ್ರಿಮಿಗಳು ಶೇಖರವಾಗಿದ್ದರೆ ಇದಕ್ಕೆ ಮಲ್ಟಿಬಾಸಿಲ್ಲರಿ ಕುಷ್ಠರೋಗವೆಂದು ಹೆಸರು. ಕ್ಷಯರೋಗ ಕುಷ್ಠ ಮತ್ತು ಅನಿಶ್ಚಿತ ಕುಷ್ಠಗಳಲ್ಲಿ ಕ್ರಿಮಿಗಳ ಸಂಖ್ಯೆ ಕಡಿಮೆ ಇರುತ್ತದೆ. ಆದ್ದರಿಂದ ಇವನ್ನು ಪಾಸಿಬಾಸಿಲ್ಲರಿ ಕುಷ್ಠರೋಗವೆಂದು ಕರೆಯಲಾಗಿದೆ. ಈ ಕುಷ್ಠರೋಗದ ಸ್ವಭಾವ ಪರೀಕ್ಷೆಯಲ್ಲಿ ಮುಖ್ಯವಾಗಿ ರೋಗದ ಸಂಕೀರ್ಣತೆ ಮತ್ತು ಇದರೊಡನೆ ಇರುವ ಕ್ರಿಮಿಗಳ ಅವಲೋಕನ ನಡೆಯಬೇಕಾಗುತ್ತದೆ. ಇವನ್ನು ವ್ರಣಗಳ, ಚಿಕ್ಕ ಗ್ರಂಥಿಗಳ, ಮೂಗಿನಿಂದ ಅಥವಾ ಕಿವಿಗಳಿಂದ ತೆಗೆದು ದ್ರವ್ಯಗಳ, ಚಿಕ್ಕಗ್ರಂಥಿಗಳ, ಮೂಗಿನಿಂದ ಅಥವಾ ಕಿವಿಗಳಿಂದ ತೆಗೆದ ದ್ರವ್ಯಗಳ ಪೂಸುವಿಕೆಯಿಂದ ತಿಳಿಯಬಹುದು. ಲೆಪ್ರೋಮಿನ್ ಪರೀಕ್ಷೆ ಅಷ್ಟು ರೋಗಸ್ವಭಾವ ಲಕ್ಷಣವನ್ನು ತೋರಿಸುವುದಿಲ್ಲ, ಏಕೆಂದರೆ ಮನುಷ್ಯರಲ್ಲಿ ಕುಷ್ಠರೋಗದ ಸಮೀಪದಲ್ಲಿ ಇಲ್ಲದಿದ್ದರೂ ಮಾಂಟೋ ಪರೀಕ್ಷೆ ಖಚಿತವಾಗಿರುತ್ತದೆ. ಆದರೆ ಕ್ಷಯರೋಗ ಕುಷ್ಠದಲ್ಲಿ ಖಂಡಿತವಾಗಿರುತ್ತದೆ. ಮಾಂಟೋ ಪರೀಕ್ಷೆಯಲ್ಲಿ ನೆಗೆಟೀವ್ ಪ್ರತಿಕ್ರಿಯೆ ಕಾಣಬರುತ್ತದೆ. ಲೆಪ್ರೋಮಾಟಸ್ ಕುಷ್ಠದಲ್ಲಿ ಅಷ್ಟು ತ್ರಾಣವಿರುವುದಿಲ್ಲ. ಕೆಲವು ಅನಿಶ್ಚಿತ ಮತ್ತು ಕ್ಷಯ ಕುಷ್ಠದ ವ್ರಣಗಳು ಸ್ವತಃ ಪ್ರವರ್ತಿತ ನಿರೋಧ ಸಾಮರ್ಥ್ಯವನ್ನು ಚಿಕಿತ್ಸೆಯಿಲ್ಲದೆ ಪಡೆಯಬಹುದು. ಆದರೂ ಎಲ್ಲ ಕುಷ್ಠರೋಗಗಳನ್ನೂ ಚಿಕಿತ್ಸೆ ಮಾಡಬೇಕು. ಸಂದೇಹದ ಮೇಲೆ ಚಿಕಿತ್ಸೆ ಮಾಡುವುದು ಆಪತ್ತಿಗೆ ಎಡೆಮಾಡಿಕೊಟ್ಟಂತೆ ಆಗುತ್ತದೆ. ಇದರಿಂದ ರೋಗಿಯು ತೀಕ್ಷ್ಣವಾದ ಔಷಧಿಗಳಿಂದ ಚಿಕಿತ್ಸೆಗೆ ಬಹಳ ದಿವಸಗಳವರೆಗೂ ಗುರಿಯಾಗುತ್ತಾನೆ.. ಇದರ ಜೊತೆಗೆ ಮಾನಸಿಕ ತೊಂದರೆಗಳಿಗೂ ಗುರಿಯಾಗುತ್ತಾನೆ. ಸರಿಯಾದ ಲಕ್ಷಣಗಳು ಉಂಟಾಗುವ ತನಕ ಕಾದು ಚಿಕಿತ್ಸೆಮಾಡಿದರೆ ಒಳ್ಳೆಯದು, ಏಕೆಂದರೆ ರೋಗದ ಮುನ್ನರಿವು ಬಲು ನಿಧಾನ. ಚಿಕಿತ್ಸೆಯ ಮುಖ್ಯವಾದ ಗುರಿಗಳು ಏನೆಂದರೆ ರೋಗದ ಸಂಕೀರ್ಣತೆ ಮತ್ತು ಕ್ರಿಮಿಗಳ ಗುಣಗಳನ್ನು ತಿಳಿಯುವುದೇ ಆಗಿದೆ. ಬೇರೆ ದೈಹಿಕ ತೊಂದರೆಗಳು ನರಗಳಿಂದಲಾಗಲಿ ಅಥವಾ ಅಂಗಾಂಶ ತೊಂದರೆಗಳಿಂದಾಗಲಿ ರೋಗ ತಗುಲಿದ್ದರೆ ಯುಕ್ತ ಚಿಕಿತ್ಸೆ ನೀಡಬೇಕು. ಮಾನಸಿಕ ಮತ್ತು ಹೊರವಲಯದ ಪರಿಸ್ಥಿತಿಗಳನ್ನು ತಿಳಿದುಕೊಂಡು ಚಿಕಿತ್ಸೆ ಮಾಡಬೇಕು.

ಕುಷ್ಠರೋಗದಲ್ಲಿ ಉಪಯೋಗಿಸುವ ಔಷಧಿಗಳು :

೧. ಸಲ್‌ಫ್ಲೋನ್ - ಡಾಫ್ಲೋನ್ಸ್, ಸೊಲಾ ಫ್ಲೋನ್, ಅಸಿಟಾಫ್ಲೋನ್

೨. ಫೆನ್‌ಜೀನ್‌ನಿಂದ ಉತ್ಪನ್ನವಾದವು- ಕ್ಲೋಫಜ ಮಿನ್

೩. ಕ್ಷಯವಿರುಧ ಔಷಧಗಳು-ರೈಫಾಂಪಿನ್, ಇಥಿಯೋನಮೈಡ್, ಥಯ ಅಸಿಟಜೋನ್

೪. ಮಿಶ್ರದ್ರವ್ಯಗಳು -ಸಲ್ಫಡಾಕ್ಸಿನ್, ಒಫ್ಲಾ ಕ್ಸಸಿನ್

ಸಲ್‌ಫ್ಲೋನ್ಸ್ : ಇವು ೪-೪' ಡೈಅಮೈನೋಡೈ, ಫೀನೈಲ್ ಸಲ್‌ಫ್ಲೋನ್‌ನಿಂದ ತಯಾರಾಗಿರು ವಂಥವು. ಇವನ್ನು ೧೯೦೮ರಲ್ಲಿ ತಯಾರಿಸಿ ದರು. ಇವುಗಳ ಕ್ರಿಯೆಯು ೧೯೩೭ರಲ್ಲಿ ಅರಿವಾಯಿತು. ೧೯೪೧ರಲ್ಲಿ ಕುಷ್ಠರೋಗಕ್ಕೆ ಇದನ್ನು ಉಪಯೋಗಿಸಲಾಯಿತು. ಇವು ಜೀರ್ಣಕೋಶದಿಂದ ಪೂರ್ತಿಹೀರಲ್ಪಡುತ್ತವೆ. ರಕ್ತಕ್ಕೆ ೧-೩ಗಂಟೆಗಳೊಳಗೆ ಸರಿಯಾಗಿ ಶೇಖರಣೆಯಾಗಿ ಕ್ರಿಮಿಗಳ ಬೆಳೆವಣಿಗೆ ಮೇಲೆ ಕೆಲಸಮಾಡುತ್ತದೆ. ಮತ್ತು ರಕ್ತದಲ್ಲಿ ೮-೧೨ ಗಂಟೆಗಳ ಕಾಲದವರಿವಿಗೆ ಇರುತ್ತದೆ. ಇವು ರಕ್ತದಲ್ಲಿ ಶೇಖರಣೆಯಾಗಿರುತ್ತದೆ. ಹೆಚ್ಚಾಗಿ ಶರೀರದ ದ್ರವ ಪದಾರ್ಥಗಳಲ್ಲಿ ಸೇರಿರುತ್ತೆ. ದೇಹದ ಅಂಗಾಂಶಗಳಲ್ಲಿ ಮೂರು ವಾರಗಳ ತನಕ ಇರುತ್ತದೆ. ಆದ್ದರಿಂದ ಕುಷ್ಠರೋಗ ವ್ರಣಗಳಲ್ಲಿ (ಚರ್ಮದ) ಕಂಡು ಹಿಡಿಯ ಬಹುದು. ಆಮೇಲೆ ಗ್ಲೂಕ್ಯುರೋನಿಕ್ ಆಮ್ಲದ ಸಂಯುಗ್ಮಗಳಾಗಿ ಮೂತ್ರದಲ್ಲಿ ಮತ್ತು ಪಿತ್ತರಸದಲ್ಲಿ ಹೊರಕ್ಕೆ ಹೋಗುತ್ತದೆ. ಎದೆ ಹಾಲಿನಲ್ಲಿಯೂ ಇದು ವಿಸರ್ಜನೆ ಯಾಗುತ್ತದೆ.

ವಿರುದ್ಧಗುಣಗಳು : ಇವು ವಿಷಪೂರಿತ ದ್ರವ್ಯಗಳು. ಇವು ಅಗ್ನಿಮಾಂದ್ಯ, ವಾಕರಿಕೆ, ವಾಂತಿ, ಔಷಧ ಜ್ವರ, ಚರ್ಮದ ತೊಂದರೆ ಗಳು ಶೇ ೩.ರಷ್ಟು ಜನರಲ್ಲಿ ಉಂಟಾಗುತ್ತದೆ. ರಕ್ತಹೀನತೆ ಮತ್ತು ಜಿಪಿಡಿ ಕಡಿಮೆ ಆಗುತ್ತದೆ. ರಕ್ತದ ದುರ್ಬಲತೆಯೂ ಉಂಟಾಗುತ್ತದೆ. ಪಿತ್ತಜನಕಾಂಗದ ತೊಂದರೆಗಳು, ಮೂತ್ರ ದಲ್ಲಿ ರಕ್ತ ವಿಸರ್ಜನೆ, ಗಾಯಿಟರ್ ಉಂಟಾ ಗುತ್ತವೆ.

ಡಾಫ್ಲೋನ್ : ೫೦-೧೦೦ ಮಿ.ಗ್ರಾಂ. ದಿನಕ್ಕೆ. ಶೇ.೨೦ ಸಲ್ಯೂಶನ್‌ನ್ನು ಮಾಂಸಖಂಡಗಳಿಗೆ (ಇಂಟ್ರಿ ಮಸ್ಕ್ಯುಲರ್) ಇಂಜಕ್ಷನ್ ಕೊಡ ಬಹುದು. ಇದನ್ನು ವಾರಕ್ಕೆ ಒಂದು ಬಾರಿಕೊಡ ಬಹುದು.

ಸಲ್ಫಟ್ರೋನ್ ಸೋಡಿಯಮ್- ಬಾಯಿ ಮೂಲಕ ೩.ಮಿ.ಲೀ. ಇಂಜಕ್ಷನ್ ರೂಪದಲ್ಲಿ ೦.೫ ಮಿ.ಲೀ. ಕೊಡುವುದು.

ಇಥೀಯೋನಮೈಡ್, ಕ್ಲೋಫಜಮಿನ್- ೧೦೦ ಮಿ.ಗ್ರಾಂ. ೩ ಬಾರಿ ಸೇವಿಸುವುದು.

ರೈಫಾಮೈಸಿನ್-೬೦೦ಮಿ.ಗ್ರಾಂ. ದಿನಕ್ಕೆ ಒಂದು ಬಾರಿ. ಸೇವಿಸುವುದು

ಪ್ರೆಡ್ನಿಸೋಲೋನ್- ೨೦-೪೦ ಮಿ.ಗ್ರಾಂ. ದಿವಸಕ್ಕೆ ಒಂದು ಬಾರಿಯಂತೆ ೧೨ ತಿಂಗಳು ಗಳು ಸೇವಿಸಬೇಕು.

ಹೃದಯದ ಮಿಡಿತ

ಜಯಂತಿ ಅಮೃತೇಶ್
೪೦ ಕೃತ್ತಿಕ, ೭ನೇ ತಿರುವು, ಅರನೆಯ ಮುಖ್ಯ ರಸ್ತೆ, ಸರಸ್ವತೀಪುರ, ಮೈಸೂರು-೫೭೦ ೦೦೯

ನಾನು ನೌಕಾದಳವನ್ನು ಸೇರಲು ನಿಶ್ಚಯಿಸಿದಾಗ ನನಗೆ ೧೭ವರ್ಷಗಳು. ಆ ಕನಸಿನಿಂದ ದೂರವಿಡಲು ನನ್ನ ತಾಯಿ ಅನೇಕ ರೀತಿಯಲ್ಲಿ ಪ್ರಯತ್ನಿಸಿ ಸೋತಳು. ಕೊನೆಗೆ ನನ್ನ ಅರ್ಜಿಪತ್ರಗಳಲ್ಲಿ ಸಹಿ ಮಾಡಿ ಅನುಮತಿ ಕೊಟ್ಟಳು.

ನೌಕಾದಳದ ತರಬೇತಿಗಾಗಿ ನನ್ನನ್ನು ಅರ್ಧ ಪ್ರಪಂಚವನ್ನು ದಾಟಿ ಫಿಲಿಫೈನ್ಸ್‌ನ ಸುಬಿಕ್ ಕೊಲ್ಲಿಯಲ್ಲಿರುವ ನೌಕಾಶಿಬಿರಕ್ಕೆ ಕಳುಹಿಸುತ್ತಾರೆಂದು ತಿಳಿಯಿತು. ನೌಕಾದಳ ಸೇರುವ ಮುನ್ನ ನಾನು ನಮ್ಮ ಮನೆಯಿಂದ ೮೦ ಕಿಲೋಮೀಟರ್ ದಾಟಿ ಹೋಗಿರಲಿಲ್ಲ.

ನೌಕಾ ಶಿಬಿರದಲ್ಲಿ ಎರಡು ವರ್ಷದ ತರಬೇತಿಯ ನಂತರ ಒಂದು ದಿನ ಅಲ್ಲಿಯ ಅಧಿಕಾರಿಯಾದ ಲೆಫ್ಟಿನೆಂಟ್ ಕರ್ನಲ್ ಬಾಯ್ಡ್‌ರವರಿಂದ ಕರೆ ಬಂದಿತು. ಅವರು ಕರುಣಾಮಯಿಯಂತೆ ಕಂಡರೂ ಸುಮ್ಮನೆ ಕಾಲಕಳೆಯಲು ಕರೆದಿಲ್ಲವೆಂದು ನನಗೆ ಖಾತ್ರಿಯಾಗಿತ್ತು.

ಅವರು ಪತ್ರಗಳ ಪರಿಶೀಲನೆ ಮಾಡುತ್ತಿದ್ದಾಗ ನಾನು ಅವರ ಟೇಬಲ್ಲಿನ ಮುಂದೆ ಅಸಹನೆಯಿಂದ ನಿಂತಿದ್ದೆ. ಅವರು ತಲೆ ಎತ್ತಿ ''ಸೈನಿಕನೇ, ನೀನು ೬ತಿಂಗಳಿನಿಂದ ನಿಮ್ಮ ತಾಯಿಗೆ ಪತ್ರ ಬರೆದಿಲ್ಲವೆ? ಏಕೆ? '' ಎಂದು ಕೇಳಿದರು. ಆಕ್ಷಣ ನನ್ನ ಕಾಲುಗಳು ಕುಸಿಯುತ್ತಿರುವಂತೆ ಭಾಸವಾಯಿತು. ಅಷ್ಟೊಂದು ದಿನಗಳಾಯಿತೆ ಎಂದು ಯೋಚಿಸಿದೆ. ''ಬರೆಯಲು ವಿಷಯವೇನೂ ಇರಲಿಲ್ಲ ಸಾರ್'' ಎಂದು ಹೇಳಿದೆ. ಅವರು ಸಂಶಯಾತ್ಮಕ ದೃಷ್ಟಿಯನ್ನು ನನ್ನತ್ತ ಹರಿಸಿದರು. ಆದರೆ ಸತ್ಯವೇನೆಂದರೆ ಯುವಕ ಮರೈನ್‌ಗಳು ವಿರಾಮದ ವೇಳೆಯನ್ನು ಎಷ್ಟು ಆನಂದ ಮತ್ತು ಮೋಜಿನಿಂದ ಕಳೆಯುತ್ತಿದ್ದರೆಂದರೆ ಅವರಿಗೆ ಪ್ರಪಂಚದ ಬೇರೆಲ್ಲ ವಿಷಯಗಳು ಅತಿಗೌಣವಾಗಿ ಕಾಣುತ್ತಿದ್ದುವು.

ಬಾಯ್ಡ್ ಅವರು ಹೇಳಿದ ಪ್ರಕಾರ ನನ್ನ ತಾಯಿಯು ಅಮೆರಿಕನ ರೆಡ್‌ಕ್ರಾಸ್ ಸಂಸ್ಥೆಯನ್ನು ಸಂಪರ್ಕಿಸಿದ್ದರು. ರೆಡ್‌ಕ್ರಾಸ್‌ನವರು ಅದನ್ನು ನನ್ನ ಮೇಲಧಿಕಾರಗಳಿಗೆ ತಿಳಿಸಿದರು. ಆಮೇಲೆ ಅವರು ಸೈನಿಕನೆ ನಿನಗೆ ಆ ಮೇಜು ಕಾಣಿಸುತ್ತಿದೆಯೆ? ಎಂದು ಕೇಳಿದರು.

ನಾನು ಹೌದೆಂದೆ.

''ಅದರ ಮೇಲಿನ ಸೆಳೆಖಾನೆಯಲ್ಲಿ ಕೆಲವು ಹಾಳೆಗಳು ಮತ್ತು ಲೇಖನಿ ಇದೆ. ಇಲ್ಲಿ ಕುಳಿತು ಈ ಕ್ಷಣದಲ್ಲಿ ನಿನ್ನ ತಾಯಿಗೆ ಏನನ್ನಾದರೂ ಬರಿ'' ಎಂದರು.

'ಸರಿ' ಎಂದು ಹೇಳಿ ಬರೆಯಲು ಕುಳಿತೆ.

ನನ್ನ ತಾಯಿಗೆ ಚಿಕ್ಕದಾದ ಪತ್ರವನ್ನು ಬರೆಯು ಮುಗಿಸಿದ ಮೇಲೆ ಅವರೆದುರು ಹೋಗಿ ನಿಂತೆ. ಅವರು ಈ ರೀತಿ ಆಜ್ಞಾಪಿಸಿದರು. ''ಸೈನಿಕನೆ ಪ್ರತಿವಾರವೂ ನಿನ್ನ ತಾಯಿಗೆ ಒಂದು ಪತ್ರ ಬರೆಯಬೇಕೆಂದು ಅರ್ಥವಾಯಿತೆ?'' ಎಂದು ಕೇಳಿದರು. 'ಸರಿ' ಎಂದು ತಲೆಯಲ್ಲಾಡಿಸಿದೆ.

ಮೂವತ್ತು ವರ್ಷಗಳನಂತರ ನನ್ನ ತಾಯಿಯ ಪರಿಸ್ಥಿತಿಯು ಮಾನಸಿಕ ದೌರ್ಬಲ್ಯ

ಜುಲೈ ೨೦೦೦ದ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾಗಿರುವ ಜೇಮ್ಸ್ ಪೆಬ್ಬರ್ ಅವರ 'ಸ್ಟೇಯಿಂಗ್ ಇನ್ ಟಚ್' ಎಂಬ ಲೇಖನದ ಅನುವಾದ

ದಿಂದಾಗಿ ಕ್ಷೀಣಿಸುತ್ತಿತ್ತು. ಶುಶ್ರೂಷೆ ಮತ್ತು ಚಿಕಿತ್ಸೆಗಾಗಿ ಆರೋಗ್ಯ ಕೇಂದ್ರಕ್ಕೆ ಸೇರಿಸಿದ್ದೆ.

ನಾನು ಮನೆಯಲ್ಲಿದ್ದ ಅವಳ ಸಾಮಾನುಗಳನ್ನು ಪರಿಶೀಲನೆ ಮಾಡತೊಡಗಿದೆ. ನನ್ನ ದೃಷ್ಟಿ ಆಕೆಯ ದೇವದಾರು ಮರದ ಪೆಟಾರಿಯ ಮೇಲೆ ಹೋಯಿತು. ಕುತೂಹಲದಿಂದ ಅದರಲ್ಲಿರುವ ವಸ್ತುಗಳನ್ನು ಪರಿಶೀಲಿಸತೊಡಗಿದೆ. ಅದರ ತಳದಲ್ಲಿ ಕೆಂಪು ಟೇಪಿನಿಂದ ಕಟ್ಟಿದ ಪತ್ರಗಳ ಒಂದು ಗಂಟು ಸಿಕ್ಕಿತು.

ಆ ಪತ್ರಗಳು ನಾನು ಫಿಲಿಫೈನ್ಸ್‌ನಿಂದ ಬಾಯ್ಡ್‌ರವರ ಆಜ್ಞೆಯ ಮೇರೆಗೆ ಬರೆದ ಪತ್ರಗಳಾಗಿದ್ದುವು. ನಾನು ಆ ದಿನ ನನ್ನ ತಾಯಿಯ ಮನೆಯ ಹಜಾರದಲ್ಲಿ ಕುಳಿತು ಒಂದೊಂದು ಪತ್ರವನ್ನೂ ಓದಿದೆ. ನನ್ನ ಕಣ್ಣಿನಿಂದ ಕಣ್ಣೀರಿನ ಕೋಡಿ ಹರಿಯುತ್ತಿತ್ತು. ಆಗ ನನಗೆ ವಿಶದವಾಯಿತು. ಯುವಕನಾಗಿದ್ದಾಗ ಸ್ವಲ್ಪವೂ ಪೂರ್ವಾಲೋಚನೆಯಿಲ್ಲದೆ ಆಕೆಯನ್ನು ಹೇಗೆ ನಿರಾಸೆಗೊಳಿಸಿದ್ದೆ ಎಂದು.

ಜೀವನದಲ್ಲಿ ಇದರಿಂದ ಕಲಿತ ಪಾಠ ನನ್ನ ತಾಯಿಗೆ ಏನೂ ಸಹಾಯವಾಗಿರದೇ ಹೋಗಿರಬಹುದು. ಆದರೆ ಅದರಿಂದ ನನಗೆ ಬಹಳಷ್ಟು ಒಳ್ಳೆಯದಾಯಿತು.

ಇತ್ತೀಚಿನ ದಿನಗಳಲ್ಲಿ ನನಗೆ ಪ್ರಿಯವಾದವರಿಗೆ ಪತ್ರ ಬರೆಯುವಂತೆ ಆಜ್ಞಾಪಿಸಲು ಯಾವ ಅಧಿಕಾರಿಯ ಅವಶ್ಯಕತೆಯೂ ಇಲ್ಲ.



ಮಳೆಯನೀರು ಮೊದಲು ಪರ್ವತದ ಶಿಖರಗಳ ಮೇಲೆ ಬೀಳುತ್ತದೆ. ಅಲ್ಲಿಂದ ಬೆಟ್ಟ, ಬಯಲು, ಊರು, ಕೇರಿಗಳಲ್ಲಿ ಹರಿದು ಬಂದು ನದಿಯಾಗಿ ಸಮುದ್ರ ಸೇರುತ್ತದೆ. ಅದರಂತೆಯೇ ಉತ್ತಮ ಯೋಚನೆಗಳು ವಿಚಾರಶೀಲರ ತಲೆಯಲ್ಲಿ ಮೊದಲು ಹೊಳೆಯುತ್ತವೆ. ನಂತರ ಅವರಿವರ ವಿಚಾರದಲ್ಲಿ ಹರಿದು ಕೊನೆಗೆ ಗುರಿ ಮುಟ್ಟುತ್ತವೆ.

-ಎಮರ್ಸನ್

ತಾಳಮೇಳಗಳಿದ್ದು... ಪ್ರೇಮವಿಲ್ಲದ ಗಾನ...

ಮನೋರಮಾ ಎಂ. ಭಟ್
"ಸೌಗಂಧಿಕಾ"
ಉರ್ವಾ ಸ್ಟೋರ್
ಮಂಗಳೂರು-೫೭೫ ೦೦೬

ದಂಪತಿಗಳಿಬ್ಬರು ಪ್ರೀತಿವಿಶ್ವಾಸಗಳ ಬದುಕನ್ನು ಅರ್ಧ ಶತಮಾನಕ್ಕಿಂತಲೂ ಹೆಚ್ಚು ಕಾಲ ಜೊತೆಯಲ್ಲಿ ಕಳೆದರೂ ಕೊನೆಗೆ ಇಬ್ಬರಲ್ಲಿ ಒಬ್ಬರು ಮೊದಲು ಈ ಲೋಕವನ್ನು ಬಿಡ ಬೇಕಾಗಿ ಬರುವುದು ಪ್ರಕೃತಿ ಧರ್ಮ. ಎಲ್ಲಿಯಾದರೂ ತಾನು ಮೊದಲು ಕಾಲವಾಗಿ ತನ್ನ ಪತ್ನಿ ಉಳಿದರೆ ಆಕೆಗೆ ಗೌರವಪೂರ್ಣ ಬದುಕನ್ನು ಸಾಗಿಸಲು ಅನುಕೂಲವಾಗಲೆಂದು ಪತಿ ತನ್ನ ವೀಲುನಾಮೆಯಲ್ಲಿ ತನ್ನ ಎಲ್ಲಾ ಸ್ಥಿರ ಮತ್ತು ಚರ ವಸ್ತುಗಳನ್ನೂ ಉಳಿದಿರುವ ಹಣಕಾಸುಗಳನ್ನೂ ಪತ್ನಿಗೆ ಎಂದು ಬರೆದಿಡುತ್ತಾನೆ. ತನ್ನ ಪತ್ನಿ ಆದಷ್ಟು ಸುಖವಾಗಿ, ತೃಪ್ತಿಯಿಂದ ಗೌರವಪೂರ್ಣವಾದ ಬಾಳನ್ನು ಬಾಳಲಿ ಎಂದು ತನ್ನ ಆಸೆ ಎಂದು ಪತಿಯು ಆಶಿಸಿದರೂ, ಪತಿಯ ಮರಣದ ಕ್ಷಣದಿಂದ ಆಕೆಗೆ ಧಾರ್ಮಿಕ 'ಮಾನ್ಯತೆ' ಇಲ್ಲದೆ ಇರುವುದು ಸತ್ಯ ಸಂಗತಿಯಾಗಿದೆಯಷ್ಟೆ...

ಮನುಷ್ಯನಿಗೆ ಒಂಟಿಯಾಗಿ ಬದುಕಲು ಸಾಧ್ಯವಿಲ್ಲ. ಆತ ಅಥವಾ ಆಕೆ ಸಮಾಜದ ಒಂದು ಅಂಗ. ಒಂದು ಸಮಾಜದ ಸುವ್ಯವಸ್ಥೆಗೆ ಧಾರ್ಮಿಕ ತಳಹದಿ ಇರಬೇಕು. ನಮ್ಮ ಧಾರ್ಮಿಕ ಚಿಂತನೆಯು, ಮನುಷ್ಯರ ಜೀವನಕ್ಕೆ ಸಾಮಾನ್ಯವಾಗಿ ಸರಿಹೊಂದುವಂಥಾ 'ನೀತಿ ಸಂಹಿತೆ' ಯನ್ನು ಅಳವಡಿಸಿಕೊಳ್ಳುತ್ತದೆ.

ಗುರು ಹಿರಿಯರಿಗೆ, ಹೆತ್ತವರಿಗೆ ಗೌರವ ತೋರಿಸುವುದು; ಕಷ್ಟದಲ್ಲಿ ಇರುವವರಿಗೆ ತನ್ನಿಂದ ಆದ ಸಹಾಯ ಮಾಡುವುದು: ದುಃಖಿಗಳಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸುವುದು ; ಅಕ್ಕತಂಗಿಯರನ್ನು, ಪರಸ್ತ್ರೀಯನ್ನು ಆದರಿಸುವುದು; ಇತರರ ಆಪತ್ಕಾಲದಲ್ಲಿ ತನುಮನಧನಗಳಿಂದ ಸಹಾಯ ಕೊಡುವುದು ; ವೈರಿಯನ್ನೂ ಕ್ಷಮಿಸುವುದು ; ಕೊಟ್ಟ ಮಾತಿಗೆ ತಪ್ಪದೆ ಇರುವುದು ; ಹಸಿದವನಿಗೆ ಅನ್ನ ಕೊಡುವುದು; ಇವುಗಳನ್ನೆಲ್ಲಾ ನಮ್ಮ ಸಮಾಜ ಸಾವಿರಾರು ವರ್ಷಗಳಿಂದ ಪಾಲಿಸುತ್ತಾ ಬಂದ ನಡವಳಿಕೆಗಳು.

ಆದರೆ ನಮ್ಮ ಸಮಾಜದಲ್ಲಿ, ಸ್ತ್ರೀಯೊಬ್ಬಳು ತನ್ನ ಪತಿಯನ್ನು ಕಳಕೊಂಡಾಗ ಆಕೆಗೆ ಏನು ಬೇಕಾಗುತ್ತದೆ. ಆಕೆಗೆ ಅತ್ಯಂತ ಅಗತ್ಯವಾಗಿರವ ವಿಷಯಗಳು, ಅಥವಾ ವಸ್ತುಗಳು ಯಾವುವು ಎಂದು ತಿಳಿದುಕೊಳ್ಳಲು ನಮ್ಮ ಭಾರತೀಯ ಧಾರ್ಮಿಕ ವ್ಯವಸ್ಥೆಗೆ ಸಾಧ್ಯವಾಗಲಿಲ್ಲವೆಂದು ಒಬ್ಬ ಸ್ತ್ರೀಯಾಗಿ, ಒಬ್ಬ ವಿಧವೆಯಾಗಿ ಅತ್ಯಂತ ದುಃಖದಿಂದ ಹೇಳಬಯಸುತ್ತೇನೆ. ವಿಧವೆಯಾದಾಕೆಗೆ ಕನಿಕರದ, ಸಹಾನುಭೂತಿಯ ಕಣ್ಣೀರು ಬೇಕಾಗಿಲ್ಲ. ಆಕೆಗೆ ಬೇಕಾಗಿರುವುದು ಆಕೆಯ ಪತಿಯು ಬದುಕಿದ್ದಾಗ ಸಿಗುತ್ತಿದ್ದ ಗೌರವಪೂರ್ಣವಾದ ಧಾರ್ಮಿಕಸ್ಥಾನ ಮತ್ತು ಮಾನ. ನಮ್ಮ ಸಮಾಜ ವಿಧವೆಗೆ ಗೌರವದ ಸ್ಥಾನವನ್ನು ಕೊಡುವುದಿಲ್ಲ. ಇದಕ್ಕೆ ನಮ್ಮ ಧಾರ್ಮಿಕ ವ್ಯವಸ್ಥೆಯೇ ಕಾರಣ ಎಂದು ಹೇಳಬಯಸುತ್ತಿದ್ದೇನೆ.

ಒಂದು ಸಾಮಾಜಿಕ ವ್ಯವಸ್ಥೆ ಸಾರ್ವಜನಿಕವಾಗಿ ಮನುಷ್ಯರ ಜೀವನಕ್ಕೆ ಕಾಲಕ್ರಮದಲ್ಲಿ ಸರಿಹೊಂದದೆ ಬಂದಾಗ ನಮ್ಮ ಧಾರ್ಮಿಕ

ರೀತಿ ನೀತಿಗಳು ಮನುಷ್ಯರ ಆಶೋತ್ತರಗಳಿಗೆ ಅನುಕೂಲವಾಗಿ ಬದಲಾದದ್ದು ಉಂಟು. ಉದಾಹರಣೆಗೆ, ಕಳೆದ ಶತಮಾನದ ಅರ್ಧ ಭಾಗದವರೆಗೂ ನಮ್ಮ ಸಮಾಜದಲ್ಲಿ ವಿಜಾತಿ ವಿವಾಹಕ್ಕೆ ಮನ್ನಣೆ ಇರಲಿಲ್ಲ. ಬ್ರಾಹ್ಮಣರ ಮಕ್ಕಳು, ಬ್ರಾಹ್ಮಣೇತರ ಕುಟುಂಬದಿಂದ ವಿವಾಹವಾಗಲು ಸಾಧ್ಯವಿರಲಿಲ್ಲ. ತಮ್ಮ ಮಕ್ಕಳ ಮೇಲಿನ ಪ್ರೀತಿಯಿಂದ, ವಿಜಾತೀಯ ವಿವಾಹಗಳನ್ನು ಹೆತ್ತವರು ಒಪ್ಪಿದರೂ ನಮ್ಮ ವೈದಿಕರು ಅಂಥಾ ವಿವಾಹಕ್ಕೆ ವೈದಿಕ ಸಹಕಾರ ವನ್ನು ಕೊಡುತ್ತಿರಲಿಲ್ಲ. ಅಂಥಾ ವಿವಾಹಿತ ದಂಪತಿಗಳಿಗೆ ಸಂಬಂಧಿಕರ ಮನೆಗಳಲ್ಲಿ ಸಹಪಂಕ್ತಿಯನ್ನೂ ಕೊಡದೆ ನವವಿವಾಹಿತರಿಗೆ ನೋವನ್ನು ಕೊಡುವುದಕ್ಕೂ ಹೇಸುತ್ತಿರಲಿಲ್ಲ. ವ್ಯಕ್ತಿಯ ಆಶೋತ್ತರಗಳಿಗಿಂತ ಸಮಾಜದ ಸಮಷ್ಟಿಯ ಹಿತವೇ ಅಂದಿನ ಸಾಮಾಜಕರಿಗೆ ಮುಖ್ಯವಾಗಿತ್ತು.

ಆದರೆ ಕಳೆದ ಶತಮಾನದ ಕೊನೆಯ ಭಾಗದಲ್ಲಿ ನಮ್ಮ ಮನೆಯಲ್ಲಿ, ನಮ್ಮ ಕುಟುಂಬದಲ್ಲಿ ನಡೆದ ವಿಜಾತೀಯ ವಿವಾಹ ಗಳನ್ನು ನಮ್ಮ ಕುಲಪುರೋಹಿತರೇ ಶುದ್ಧ ವೈದಿಕ ರೀತಿಯಲ್ಲಿ ನಡೆಸಿದ್ದರು. ಅವರ ವಿಶಾಲದೃಷ್ಟಿಗೆ, ಅವರ ಸಹೃದಯತೆಗೆ, ಸಹಕಾರಕ್ಕೆ ನಾನು ವಂದಿಸುತ್ತಿದ್ದೇನೆ. ಆದರೂ ನನ್ನ ಮನಸ್ಸಿನಲ್ಲೊಂದು ಸಂಶಯದ ಸುಳಿ ಇಣುಕುತ್ತಿದೆ. ಅಂದರೆ ಸುಮಾರು ೫೦ ವರ್ಷಗಳ ಹಿಂದೆ ನಮ್ಮ ಸಮಾಜದಲ್ಲಿ ನಡೆಯಲು ಸಾಧ್ಯವೇ ಇಲ್ಲದ ಒಂದು ಸ್ಥಿತಿ ಇಂದು ನಡೆದಿದೆ ಎಂದಾದರೆ- ಜಾತಿ ಜಾತಿಗೆ ಸಂಬಂಧಿಸಿದ ಧಾರ್ಮಿಕ ವ್ಯವಸ್ಥೆಯ ''ನೀತಿ ಸಂಹಿತೆ'' ಯನ್ನು ನಿರ್ಧರಿಸುವವರು ಯಾರು? ಅದನ್ನು ಜನರ ರೀತಿ ನೀತಿಗಳು ಪರಿವರ್ತನೆ ಹೊಂದುವುದಕ್ಕೆ ಸರಿಯಾಗಿ ಬದಲಾಯಿಸಲು ಸಾಧ್ಯವಿದ್ದರೆ, ಅದನ್ನು ಬದಲಾಯಿಸುವವರು ಯಾರು? ವೈದಿಕರೇ...? ಗುರುಗಳೇ..?· ವಿದ್ವಾಂಸರೇ...? ಸಮಾಜ ಶಾಸ್ತ್ರಜ್ಞರೇ...? ಅಥವಾ ಜನರೇ...?

ಭಾರತೀಯ ನಾಗರಿಕನಿಗೆ ಗೌರವದಿಂದ ಬದುಕುವ ಹಕ್ಕನ್ನು ನಮ್ಮ ಸಂವಿಧಾನ ಒದಗಿಸಿದೆಯಷ್ಟೆ. ಹಾಗಾದರೆ ಗೌರವಪೂರ್ಣ ಬದುಕು ಅಂದರೆ ಏನೆಂದು ಹೇಳಬೇಕಾಗು ತ್ತದೆ. ಅಂದರೆ ಭಾರತೀಯರ ಬದುಕು ಕಾನೂನು ಮಾನ್ಯ ಮಾಡಿದ ರೀತಿಯಲ್ಲಿಯೇ ಇರಬೇಕು. ಜನರು ಗೌರವವನ್ನು ಇತರರಿಗೂ ಕೊಡಬೇಕು. ತಾವೂ ಪಡೆದುಕೊಳ್ಳಬೇಕು. ಇದು ಸಾಮಾಜಿಕವಾಗಿಯೂ, ಧಾರ್ಮಿಕ ವಾಗಿಯೂ ಪರಸ್ಪರ ಅನ್ವಯವಾಗುತ್ತದೆ. ಒಂದು ಸಮಾಜದಲ್ಲಿ ವಿದ್ಯಾವಂತ ಪತಿಪತ್ನಿ ಯರಿಬ್ಬರು ಸರಕಾರ ಮತ್ತು ಸಮಾಜ ಮಾನ್ಯ ಮಾಡಿದ ರೀತಿಯಲ್ಲಿಯೇ ಗೌರವ ಪೂರ್ಣ ಬದುಕನ್ನು ಸಾಗಿಸುತ್ತಿರುವಾಗ ಪ್ರಕೃತಿ ಸಹಜ ವೆಂಬಂತೆ ಪತಿಗೆ ಸಾವು ಬಂದರೆ ಇದ್ದಕ್ಕಿದ್ದ ಹಾಗೆ ಆ ನತದೃಷ್ಟೆ ಪತ್ನಿ- ಯಾಕೆ ಸಾಮಾಜಿಕ ಮತ್ತು ಧಾರ್ಮಿಕ ಜೀವನದಲ್ಲಿ ಈಗಾಗಲೇ ಇದ್ದ ಗೌರವ ಸ್ಥಾನವನ್ನು ಕಳೆದುಕೊಳ್ಳಬೇಕು? ಆಕೆ 'ವಿಧವೆ' ಯಾಗಿರುವುದು ನಿಜ. 'ವಿಧವೆ' ಎನ್ನುವ ಪದಕ್ಕೆ ಕಿಟ್ಟೆಲ್‌ನ ಪದಕೋಶದಲ್ಲಿ 'ಪತಿ ಸತ್ತವಳು' A HUSBANDLESS WOMAN ಅಂತ ಮಾತ್ರ ಅರ್ಥ ಇದೆ. ಇದು ಸ್ತ್ರೀಯರ ಜೀವನದಲ್ಲಿ ಬರಬಹುದಾದ ಒಂದು ಅವಸ್ಥೆ ಅಷ್ಟೆ. ಆದರೆ ನಮ್ಮ ಧಾರ್ಮಿಕ ಬದುಕಲ್ಲಿ ಅದನ್ನು ನಂಬುವ ಜನರ ಜೀವನದಲ್ಲಿ ಪತಿಯನ್ನು ಕಳೆದುಕೊಂಡ ಪತ್ನಿಗೆ ಮಾನ್ಯತೆಯೇ ಇಲ್ಲ. ಆಕೆಗೆ ಸಹಿಸಲಾರದಷ್ಟು ನೋವು ನೀಡುವ ಪ್ರಸಂಗಗಳನ್ನು ಜನರು ನಮ್ಮ ಧರ್ಮ ಸೂಚಿಸಿದ್ದು ಎನ್ನುವಂತೆ ಆಚರಣೆಗೆ ತರುತ್ತಾರಲ್ಲಾ!

ಇದರ ಬಗ್ಗೆ ನಿಜವಾಗಿಯೂ ಸಂಶೋಧನೆ ನಡೆಯಬೇಕು. ದೇವರಿಗೆ ಪೂಜೆ ಮಾಡಿದ ಹೂವನ್ನೂ ವಿಧವೆಯ ಕೈಗೆ ಪ್ರಸಾದ ರೂಪದಲ್ಲಿ ನಮ್ಮ ದೇವಸ್ಥಾನಗಳಲ್ಲಿ ಅರ್ಚಕರು, ಮನೆಗಳಲ್ಲಿ ಕೂಡ ಪುರೋಹಿತರು ಯಾಕೆ ನೀಡುವುದಿಲ್ಲ? ಯಾಕೆ ಯಾರೂ ಈ ನಿಟ್ಟಿನಲ್ಲಿ ಚಿಂತಿಸುವುದಿಲ್ಲ? ಪ್ರಶ್ನಿಸುವುದಿಲ್ಲ?

ಹೂಗಿಡಗಳು ನಮ್ಮ ಪ್ರಕೃತಿಯ ಚೆಲುವಿಗೆ ಭೂಷಣ. ಪರಿಸರವನ್ನು ಶುದ್ಧಗೊಳಿಸಲೂ ಹೂಗಿಡಗಳು ಪ್ರಯತ್ನಿಸುತ್ತವೆ. ಮನೆಯ ಸುತ್ತ ಹೂಗಿಡಗಳನ್ನು ಬೆಳೆಸುವಾಗ ಅವುಗಳಿಗೆ ನೀರು ಉಣಿಸುವಾಗ , ಅವನ್ನು ದಿನನಿತ್ಯ ನೋಡುವಾಗ, ಅವುಗಳ ಜೊತೆಗೆ ಮನಸ್ಸಿನಲ್ಲಿಯೇ ಸಂಭಾಷಿಸುವಾಗ ಮನಕ್ಕೆ ಸಿಗುವ ಆನಂದ ವರ್ಣನಾತೀತ. ಒಬ್ಬ ವಿಧವೆಯ ಮನೆಯ ಮುಂದೆ ಸುಂದರವಾದ ಫಲ ಪುಷ್ಪಗಳಿರಬಹುದು. ಆದರೂ ಆಕೆ ಇನ್ನೊಬ್ಬರಿಂದ ಹೂಗಳನ್ನು ಸ್ವೀಕರಿಸುವಂತಿಲ್ಲ; ಇನ್ನೊಬ್ಬರಿಗೆ ಹೂಗಳನ್ನು ನೀಡುವಂತಿಲ್ಲ. ಇದರ ನೋವು ಏನೆಂದು ನಮ್ಮ ಧರ್ಮಕ್ಕೆ ಅದನ್ನು ಅನುಷ್ಠಾನಕ್ಕೆ ತರುವ ಸಮಾಜಕ್ಕೆ ತಿಳಿಯುತ್ತದೆಯೇ? ಯಾಕೆ ವಿಧವಾ ಸ್ತ್ರೀಯ ಸಾಮಾಜಿಕ, ಧಾರ್ಮಿಕ, ಜೀವನದ ಅಸ್ಪೃಶ್ಯತೆಯ ಬಗ್ಗೆ ಯಾರಿಗೂ ಕಾಳಜಿ ಇಲ್ಲ? ವಿಚಾರವಂತರಿಗೂ ಇಲ್ಲ. ವಿದ್ವಾಂಸರಿಗೂ ಇಲ್ಲ. ಅದ್ವಿತೀಯ, ಸುಸಂಸ್ಕೃತವೆಂದು ನಾವು ಹೆಮ್ಮೆಪಟ್ಟುಕೊಂಡು ಉದ್ಗರಿಸುವ ಭಾರತೀಯ ಸಾಂಸ್ಕೃತಿಕ ಬದುಕಿನಲ್ಲಿಯೂ ಸಾವಿರಾರು ವರ್ಷಗಳಿಂದ ವಿಧವಾ ಹೆಣ್ಣು ಮಗಳು ತಿನ್ನುವ ನೋವಿನ ಕುರಿತು ಯಾಕೆ ಯಾರೂ ದನಿ ಎತ್ತುತ್ತಿಲ್ಲ? ನಾಟಕಗಳೂ ಸಿನೆಮಾಗಳೂ ವಿಧವೆಯ ಅಸಹಾಯಕತೆಯನ್ನೇ ಬಂಡವಾಳವನ್ನಾಗಿಸಿ, ವೈಭವೀಕರಿಸಿ ಕೊಂಡು ಕತೆಗಳನ್ನು ದೃಶ್ಯವಾಗಿಸಿ ಹಣ ಮತ್ತು ಹೆಸರುಗಳಿಸುತ್ತವೆ. ಪತಿಯನ್ನು ಕಳೆದು ಕೊಂಡ ಪತ್ನಿ ತನ್ನ ಕೊರಳಿನಲ್ಲಿರುವ ಮಂಗಲ ಸೂತ್ರವನ್ನು ತೆಗೆಯಬೇಕಾಗಿಲ್ಲ. ಏಕೆಂದರೆ ಇದು ನಿನಗೆ, ಇದರ ಜೊತೆಗೆ ನೀನು ನೂರು ವರ್ಷ ಕಾಲ ಬಾಳು- ಎಂದು ಮಾತು ಕೊಟ್ಟು ಆತ ಆಕೆಯ ಕೊರಳಿಗೆ ತಾಳಿ ಕಟ್ಟಿದ್ದಾನೆ. ಕೊಟ್ಟ ಮಾತನ್ನು ಉಳಿಸಿಕೊಡುವುದು ಅತ್ಯಂತ ಶ್ರೇಷ್ಠ ನಡತೆ. ಸ್ತ್ರೀ ಯಾವಾಗಲೂ, ಎಂದೂ ಮಾನ್ಯಳೇ. ಪತಿಯನ್ನು ಕಳೆದುಕೊಂಡ ವಿಧವೆ, ಆಕೆಯ ಮನೆಯಲ್ಲಿ ನಡೆಯುವ ಮಂಗಳ ಕಾರ್ಯಕ್ರಮದಲ್ಲಿ 'ನಾಂದಿ' ಯಾಗಿ ದೇವರಿಗೆ ದೀಪ ಉರಿಸ ಕೂಡದು ಎಂದು ಯಾವ ಶಾಸ್ತ್ರದಲ್ಲಿ ಹೇಳಿದೆ? ನಮ್ಮ ತಾಯಿ ನಮ್ಮ ಮುಂದಿರುವ ದೇವತೆ ಎನ್ನುವ ಮಕ್ಕಳು. ದೇವರ ಮುಂದೆ ಅಮ್ಮ ದೀಪ ಉರಿಸಬಾರದು ಎಂದಾದರೆ-ನಮಗೆ ಆ ಸಂಬಂಧವಾಗಿ ನಡೆಸುವ ಕಾರ್ಯಕ್ರಮಗಳೇ ಬೇಡ ಎಂದು ಹೇಳುತ್ತಾರಲ್ಲಾ? ಈ ಮಕ್ಕಳು ಕೊಡುವ ಮಾನಸಿಕ ಸಹಕಾರವನ್ನು ನಮ್ಮ ಸಮಾಜದ ಎಲ್ಲಾ ಸೋದರರೂ ನೀಡುವ ಹಾಗೆ ಆದರೆ... ಇಲ್ಲಿ ಹಾಗೆ ಆಗುವುದು ಸುಲಭವಲ್ಲ. ಭಾರತೀಯರ ಜೀವನದಲ್ಲಿ ವಿಧವಾ ಹೆಣ್ಣು ಮಗಳು ಸಾವಿರಾರು ವರ್ಷಗಳಿಂದ ಸಮಾಜ ನೀಡುವ ನಾನಾತರದ ಮಾನಸಿಕ ಮತ್ತು ಶಾರೀರಿಕ ವೇದನೆಗಳನ್ನು ಮೌನವಾಗಿ ಉಣ್ಣುತ್ತಾ ಬಂದಿದ್ದಾಳೆ. ಪುರುಷಪ್ರಧಾನ ಚಿಂತನೆಗಳು ನಮ್ಮ ಸಾಮಾಜಿಕರನ್ನು ಈ ದೃಷ್ಟಿಯಿಂದಲೇ ಸಮ್ಮೋಹನಕ್ಕೆ ಒಳಪಡಿಸುತ್ತಾ ಬೆಳೆಸಿದೆ ಎಂದು ಖಂಡಿತವಾಗಿ ಹೇಳಬಹುದು.

ವಿಧವಾ ಸಮಸ್ಯೆಯನ್ನು ಸಂಸ್ಕೃತ ವಿದ್ವಾಂಸರು ಮತ್ತು ವೈದಿಕರು ವೇದಕಾಲಕ್ಕೆ ಕೊಂಡು ಹೋಗುತ್ತಾರೆ. ನಿಜವಾಗಲೂ ವಿಧವಾ ಸಮಸ್ಯೆ - ವೈದಿಕ ವಿಧಿಗಳಿಗೇ ಆಗಲಿ, ಶಾಸ್ತ್ರ ವಾಕ್ಯಗಳಿಗಾಗಲಿ ಸಂಬಧಿಸಿದ್ದಲ್ಲ. ಅದು ಕೇವಲ

ಸಾಮಾಜಿಕ ಸಮಸ್ಯೆ. ಮಾಂಗಲ್ಯ ಚಿಹ್ನೆಗಳು ವಿವಾಹಿತ ಸ್ತ್ರೀಯ ಮನಸ್ಸಿನ ಮೇಲೆ, ಆಕೆಯ ನಿತ್ಯಜೀವನದ ಮೇಲೆ, ಅವುಗಳಿಂದ ಆಕೆಗೆ ಸಿಗುವ ಸಾಮಾಜಿಕ ಮಾನ್ಯತೆಯ ಮೇಲೆ ಪರಿಣಾಮ ಬೀರುವಷ್ಟು ಗಾಢವಾದ ಪ್ರಭಾವವನ್ನು ಬೇರಾವುವೂ ಬೀರುವುದು ಸಾಧ್ಯವಿಲ್ಲ. ಪತಿಯು ಕಾಲವಾದ ಕ್ಷಣದಿಂದ ಅವುಗಳನು ತ್ಯಜಿಸುವ ವ್ಯವಸ್ಥೆಯ ಜೊತೆಗೆ, ಆಕೆ ಕಳೆದುಕೊಳ್ಳುವ ಸಾಮಾಜಿಕ 'ಮಾನ್ಯತೆ'ಯ ಸ್ಥಾನ-ಇದು ಮಾಡುವ ಆಘಾತ, ಅದರ ನೋವು-ಅನುಭವಿಸಿದವರಿಗೆ ಮಾತ್ರ ಗೊತ್ತಾದೀತು. ಇದರ ವೇದನೆ ಅಸಹನೀಯವಾದದ್ದು. ಆ ತನಕ 'ಸುಮಂಗಲಿ'ಯಾಗಿದ್ದ ವಳು-ಪತಿಯ ಮರಣದ ಕ್ಷಣ ದಿಂದ 'ಅಮಂಗಲೆ'ಯರ ಸ್ಥಾನಕ್ಕೆ ಇಳಿಯುತ್ತಾಳೆ. ಆಕೆ ಉತ್ತಮ ಗೆಳತಿಯಾಗಿರಬಹುದು; ಒಳ್ಳೆಯ ತಾಯಿಯಾಗಿರಬಹುದು; ಸಹೃದಯಿ 'ಅತ್ತೆ' ಎನಿಸಿಕೊಂಡಿರಬಹುದು; ಬಡವರ ಬಂಧುವಾಗಿರಬಹುದು; ಗುಣವಂತೆಯಾಗಿದ್ದು, ಕರುಣಾಮಯಿಯಾಗಿರಬಹುದು; ಆದರೂ ಆಕೆಗೆ 'ಮಾನ್ಯತೆ' ಇಲ್ಲ.. ವಿದ್ಯಾವಂತೆಯಾಗಿದ್ದರೂ...! ನಮ್ಮ ಸಮಾಜಕ್ಕೆ ತಾಯಿಯ ಹಂತಕನೂ ಮಾನ್ಯನೇ, ಹೆಂಡಕ್ಕೆ ದಾಸನಾಗಿ ಹೆಂಡತಿ ಮಕ್ಕಳನ್ನು ಬೀದಿಪಾಲು ಮಾಡಿದವನೂ ಮಾನ್ಯನೇ. ಕಳ್ಳ... ಸುಳ್ಳುಗಾರ... ಮೋಸಗಾರ... ಇವರೆಲ್ಲಾ ಎಂದೂ ತಮ್ಮ ಸ್ಥಾನವನ್ನು ಧಾರ್ಮಿಕವಾಗಿ ಕಳೆದುಕೊಳ್ಳುವುದಿಲ್ಲ. ಆದರೆ ಹೆಣ್ಣಿಗೆ! ಗಂಡ ಉಸಿರಾಡುತ್ತಿದ್ದರೆ ಮಾತ್ರ 'ಮಾನ್ಯತೆ'. ಇಲ್ಲದಿದ್ದರೆ ಇಲ್ಲ! ಏನು? ಇದನ್ನೂ 'ಸ್ತ್ರೀವಾದ' ವೆಂದು ಹೇಳುತ್ತಾ ಅಲಕ್ಷ್ಯ ತೋರುತ್ತೀರಾ? ಇಲ್ಲ, ಹಾಗೆ ಭಾವಿಸಬೇಡಿ. ಒಂದು ಸಮಾಜದ ಉನ್ನತಿಗೆ ಸ್ತ್ರೀ ಪುರುಷರಿಬ್ಬರೂ ಕಾರಣರು. ನಾವೆಲ್ಲರೂ ಸೇರಿ ಚಿಂತಿಸಿದರೆ ನಮ್ಮ ಸಮಾಜವನ್ನು ಬದಲಾಯಿಸಬಹುದು. ಬಾಹ್ಯ ಆಚರಣೆಗಳನ್ನು ಬದಲಾಯಿಸುವಾಗ ಆ ಬದಲಾವಣೆ ಅಂತರಂಗವನ್ನೂ ತಟ್ಟಲಿ. ತಾಳಮೇಳಗಳ ಜೊತೆಗೆ ಪ್ರೇಮವೂ ಸೇರಲಿ. ಇಲ್ಲವಾದರೆ, ತಾಳಮೇಳಗಳಿದ್ದು ತಂಬೂರಿ ಮೊದಲಾದ ಅಖಿಳ ವಾದ್ಯಗಳಿದ್ದು ಪ್ರೇಮವಿಲ್ಲದ ಗಾನ ಕೇಳನೋ ಹರಿ, ತಾಳನೋ!

ನೀವೂ ಬದುಕಿರಿ. ಎಲ್ಲರಿಗೂ ಬದುಕಲು ಕೊಡಿರಿ,
ನಾನೊಬ್ಬನೇ ಬದುಕುತ್ತೇನೆ, ಸುಖವಾಗಿರುತ್ತೇನೆ, ಎನ್ನುವ
ಪ್ರವೃತ್ತಿ ಯಾವಾಗಲೂ ತುಳಿಯಲ್ಪಡುತ್ತದೆ.

-ವಿವೇಕಾನಂದ

ಆ ಐದು ಮಿನಿಟುಗಳು

ಜಿ. ವೈದೇಹಿ
೩.೫೮, ಪುನರ್ವಸು, ನವಿಲು
ಮುಖ್ಯರಸ್ತೆ, ಕುವೆಂಪು ನಗರ
ಮೈಸೂರು-೫೭೦ ೦೨೩

ಆ ದಿನ ಪ್ರಸೂತಿ ಗೃಹದಲ್ಲಿ ನಡೆದ ಘಟನೆ ಪ್ರತಿಯೊಬ್ಬ ಪ್ರಸೂತಿ ತಜ್ಞನಿಗೂ ಒಂದು ದುಃಸ್ವಪ್ನ.

ಅಮೇರಿಕದ ಕನ್‌ಕಾರ್ಡ್‌ನಲ್ಲಿರುವ ಎಮರ್ಸನ್ ಆಸ್ಪತ್ರೆಯ ತನ್ನ ಕಚೇರಿಯಿಂದ ಡಾ. ಕೆನ್ನೆತ್ ಹೆಕ್‌ಮನ್ ಹೊರಬರುತ್ತಿದ್ದ. ಐವತ್ತೆರಡು ವಯಸ್ಸಿನ ಆ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞ, ''ಯಾರಿಗಾದರೂ ನನ್ನ ಅವಶ್ಯಕತೆ ಇದ್ದಲ್ಲಿ ನಾನು ಏಳನೆಯ ಪ್ರಸೂತಿ ಕೋಣೆಯಲ್ಲಿ ಶ್ರೀಮತಿ ಶೆಪರ್ಡ್‌ನೊಂದಿಗೆ ಇರುತ್ತೇನೆ'' ಎಂದು ಸ್ವಾಗತಕಾರನಿಗೆ ತಿಳಿಸಿ ಹೊರಟನು.

೧೯೯೫ರ ಡಿಸೆಂಬರ್ ೨೯ ಗುರುವಾರ ಆಗಲೇ ಅಪರಾಹ್ನ ೩. ಗಂಟೆಯಾಗಿತ್ತು. ಮೂರು ಚಿಕ್ಕ ಚಿಕ್ಕ ಮಕ್ಕಳ ತಾಯಿ ೨೯ ವಯಸ್ಸಿನ ಲೆಸ್ಲಿ ಶೆಪರ್ಡ್ ಬೆಳಗಿನ ಜಾವದಿಂದಲೇ ಪ್ರಸವ ವೇದನೆಯಲ್ಲಿದ್ದಳು. ಭ್ರೂಣ ಪರೀಕ್ಷೆಯಿಂದ ಹೆಣ್ಣು ಮಗುವೆಂದು ತಿಳಿದಿತ್ತು. ಪ್ರಸವಕ್ಕೆ ಆಗಲೇ ಎರಡು ದಿನಗಳು ತಡವಾಗಿದ್ದುವು. ನಾಲ್ಕುವರೆ ಕಿಲೋಗಳಿಗಿಂತ ಅಧಿಕ ತೂಕವಿದ್ದ ಮಕ್ಕಳನ್ನು ಪಡೆದಿದ್ದರಿಂದ ಅವಳು ಮತ್ತು ಡಾ. ಹೆಕ್‌ಮನ್ ಪ್ರೇರಕ ಪ್ರಸವವೇದನೆಗೆ ಸಿದ್ಧರಿದ್ದರು. ಊಹಿಸಿದ್ದಂತೆಯೇ ನಡೆದರೆ ಅವಳ ಮಗು ಸುಮಾರು ೫ ಗಂಟೆ ವೇಳೆಗೆ ಹೊರಪ್ರಪಂಚವನ್ನು ಕಾಣಬೇಕು.

೩.೫೦೦ಕ್ಕಿಂತಲೂ ಹೆಚ್ಚು ಹೆರಿಗೆಗಳನ್ನು ಮಾಡಿಸಿರುವ ಅನುಭವಿ ಹೆಕ್‌ಮನ್ 'ಹುಟ್ಟಿ'ನ ಅರ್ಥವನ್ನು ತಿಳಿದುಕೊಂಡ ಕ್ಷಣವನ್ನು ಖಂಡಿತ ಮರೆಯಲಾರ. ತನ್ನ ತಾಯಿ ಪೋಲಿಯೋದಿಂದ ನರಳುತ್ತಿರುವುದನ್ನು ನಿಸ್ಸಹಾಯಕನಾಗಿ ಗಮನಿಸುತ್ತಿದ್ದ. ಹೆಕ್‌ಮನ್ ಚಿಕ್ಕ ಹುಡುಗನಿರುವಾಗಲೇ ತಾನು ಇನ್ನೂ ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗಲೇ ತನ್ನ ಮೊದಲ ಮಕ್ಕಳ ಹೆರಿಗೆ ಮಾಡಿಸಿದ್ದ.

ಗ್ರಂಥಾಲಯದಲ್ಲಿ ಒಂದು ರಾತ್ರಿ ಓದುತ್ತ ಕುಳಿತಿದ್ದಾಗ ಹಿಂದೆ ಕೆಲಸದ ಪಾಳಿಯ ವೇಳೆ ಆದ ಘಟನೆ ಥಟ್ಟನೆ ನೆನಪಿಗೆ ಬಂತು. ಕೊಟ್ಟ ವಾಗ್ದಾನ ಒಂದು ಕಡೆಯಾದರೆ ಸಿಕ್ಕಿರುವ ಅವಕಾಶ ಮತ್ತೊಂದೆಡೆ ಎಂದು ತನಗೆ ತಾನೇ ಹೇಳಿಕೊಂಡ. ಆ ಕ್ಷಣ ಅವನಿಗೆ ಭಾವನಾತ್ಮಕವಾಗಿಯೂ ಗಂಭೀರವಾಗಿಯೂ ಇತ್ತು.

ಆತನ ಪ್ರಾಧ್ಯಾಪಕರುಗಳಲ್ಲಿ ಒಬ್ಬರು ಆ ಅನಿಸಿಕೆಯನ್ನು 'ಪೂರ್ವಾನುದರ್ಶನದ ಕೃಪೆ' ಎಂದರು. ನಾವು ಅನೇಕ ಸಲ ಒಂದು ಘಟನೆ ನಡೆಯುವವರೆಗೆ ಮತ್ತು ಅನಂತರ ಅದರ ಮಹತ್ತ್ವವನ್ನು ತಿಳಿದುಕೊಳ್ಳುವುದೇ ಇಲ್ಲ. ಅಂತಹುದೇ ಮತ್ತೊಂದು ಘಟನೆಯಾದಾಗ ಮಾತ್ರ, ಪೂರ್ವಾನುಭವ ನಮಗೆ ಕೃಪೆ ಮಾಡಿದಂತೆನಿಸಿ ಆ ಘಟನೆಯ ಮಹತ್ತ್ವ ತಿಳಿಯುತ್ತದೆ. ಹೆಕ್‌ಮನ್‌ಗೆ ಈಗ ಮತ್ತೆ ಅಂತಹುದೇ ಘಟನೆಯನ್ನು ಎದುರಿಸಬೇಕಾಗುತ್ತದೆ ಎಂದೆನಿಸಿತು.

ಹೆಕ್‌ಮನ್ ರೂಮಿನೊಳಗೆ ಪ್ರವೇಶಿಸಿದಾಗ ಲೆಸ್ಲಿ ಶೆಪರ್ಡ್ ದೂರದರ್ಶನ ನೋಡುತ್ತಿದ್ದಳು. ಅಂಗವಿಕಲ ಮಕ್ಕಳ ಅಭಿವೃದ್ಧಿ ಶಾಲೆ ವಾಣಿಜ್ಯ ಶಾಖೆಯ ನಿರ್ದೇಶಕನಾಗಿದ್ದ ೩೩. ವಯಸ್ಸಿನ ನಾಟೆ, ಲೆಸ್ಲಿಯ ಪತಿ, ಪಕ್ಕದ

ಸೆಪ್ಟೆಂಬರ್ ೧೯೯೬ರ ರೀಡರ್ಸ್ ಡೈಜೆಸ್ಟ್‌ನ ಬಾಬ್ ಟ್ರಿಬಿಲಾಕ್ ಬರೆದ 'ಫೈವ್ ಮಿನಿಟ್ಸ್ ಟು ಲಿವ್' ಎಂಬ ಲೇಖನದ ಅನುವಾದ

ಕುರ್ಚಿಯಲ್ಲಿ ಕುಳಿತಿದ್ದ.

ಭ್ರೂಣದ ಹೃದಯ ಬಡಿತ ವಿಧಾನದ ಮುದ್ರಿತ ನಮೂನೆಯನ್ನು ಹೆಕ್‌ಮನ್ ಗಮನವಿಟ್ಟು ನೋಡಿದ. ನೋವು ಬರುವ ಸಮಯದಲ್ಲಿ ಮಗುವಿನ ಹೃದಯಬಡಿತ ನಿಧಾನವಾಗುತ್ತಿದ್ದುದರ ಬಗ್ಗೆ ಹೆರಿಗೆ ಮಾಡಿಸುವ ದಾದಿಗೆ ಬಹಳ ಆತಂಕವಿತ್ತು. ಇದು ಕೆಲವು ವೇಳೆ ಮುಂಬರುವ ತೊಡಕು ಗಳನ್ನು ಸೂಚಿಸಬಹುದು. ಆದರೆ ಹೆಕ್‌ಮನ್‌ಗೆ ಆ ಮುದ್ರಿತ ನಮೂನೆಯಲ್ಲಿ ಸಮಸ್ಯೆ ತಂದೊಡ್ಡುವ ಯಾವುದೇ ಸೂಚನೆ ಕಂಡುಬರಲಿಲ್ಲ. ಲೆಸ್ಲಿಯನ್ನು ಪರೀಕ್ಷಿಸಿ ಭ್ರೂಣ ಪೊರೆಯನ್ನು ಒಡೆಯಲು ಮುಂದಾದ. ಮಗು ಅಪಾಯ ಸ್ಥಿತಿಯಲ್ಲಿದೆಯೆಂದು ಸೂಚಿಸುವ ಮೆಕೊನಿಯಮ್‌ಗಾಗಿ ಹೆಕ್‌ಮನ್ ಭ್ರೂಣದ್ರವದಲ್ಲಿ ಕೈಯಾಡಿಸಿದ. ಭ್ರೂಣದಿಂದ ವಿಸರ್ಜನೆಯಾದ ಹಸುರುಬಣ್ಣದ ತ್ಯಾಜ್ಯವೇ ಮೆಕೊನಿಯಮ್. ಆದರೆ ಲೆಸ್ಲಿಯ ದ್ರವ ತಿಳಿಯಾಗಿತ್ತು.

''ಯಾವ ಸಮಸ್ಯೆಯೂ ನನಗೆ ಕಾಣುತ್ತಿಲ್ಲ. ಶಿಶುವಿನ ತಲೆ ಸಾಮಾನ್ಯವಾಗಿರುವಂತೆ ಇಲ್ಲಿಯೂ ಗರ್ಭಕೋಶದ ದ್ವಾರಕ್ಕೆ ಬಂದಿದೆ. ಕೆಲವು ಗಂಟೆಗಳ ಅನಂತರ ಬಂದು ನಿನ್ನನ್ನು ಕಾಣುವೆ'' ಎಂದು ಹೆಕ್‌ಮನ್ ದಾದಿಗೆ ಹೇಳಿ ಹೊರಟ.

ವೈದ್ಯರು ಹೊರಟುಹೋದ ಕೂಡಲೇ ಲೆಸ್ಲಿಗೆ ಎದೆ ಬಿಗಿತ ಕಾಣಿಸಿಕೊಂಡಿತು. ''ನಾನು ಅಸ್ವಸ್ಥಳಾಗುತ್ತಿದ್ದೇನೆ'' ಎಂದು ಹೇಳುತ್ತ ವಾಂತಿ ಮಾಡಲು ಎದ್ದು ಕುಳಿತಳು. ''ಗರ್ಭಕೋಶದಿಂದ ನೀರು ಹೊರಬಂದಾಗಲೂ ಇವಳು ಇದೇ ರೀತಿ ಮಾಡಿದ್ದಳು'' ಎಂದು ನಾಟೆ ದಾದಿಗೆ ಹೇಳುತ್ತ ಬೇಸಿನ್ ತರಲು ಎದ್ದ. ಅವನು ಅದನ್ನು ಲೆಸ್ಲಿಯ ಬಳಿ ಇಡುವುದರೊಳಗಾಗಿ ಲೆಸ್ಲಿ ಕಣ್ಣು ಮುಚ್ಚಿ ಎಚ್ಚರದಪ್ಪಿದಳು.

ದಾದಿ ಹಾಸಿಗೆ ಬಳಿ ಓಡಿ ರೋಗಿಯನ್ನು ಒಂದು ಪಕ್ಕಕ್ಕೆ ತಿರುಗಿಸಿದಳು. ''ಲೆಸ್ಲಿ ನೀನೆಲ್ಲಿದ್ದೀಯೆ?'' ಎಂದು ದಾದಿ ಕೇಳಿದ್ದಕ್ಕೆ ''ನಾನು ಆಸ್ಪತ್ರೆಯಲ್ಲಿದ್ದೇನೆ'' ಎಂದು ಉತ್ತರಿಸಿದಳು. ''ಯಾವ ಆಸ್ಪತ್ರೆ ?'' ಲೆಸ್ಲಿಯ ಕಣ್ಣುಗಳು ಮುಚ್ಚಿದುವು. ಏನೂ ಉತ್ತರ ಬರಲಿಲ್ಲ. ''ಡಾಕ್ಟರ್ ಹೆಕ್‌ಮನ್‌ಗೆ ತತ್‌ಕ್ಷಣವೇ ಪೇಜ್ ಮಾಡಿ,'' ಎಂದು ದಾದಿ ಪಿಸುಗುಟ್ಟಿದಳು.

ಲೆಸ್ಲಿಯ ಚರ್ಮ ನೀಲಿಯಾಗುತ್ತಿತ್ತು. ಅವಳು ಉಸಿರಾಡುತ್ತಿರಲಿಲ್ಲ. ಕೆಲವೇ ಕ್ಷಣಗಳಲ್ಲಿ ಕೊಠಡಿ ನರ್ಸ್‌ಗಳಿಂದ ತುಂಬಿತು. ಅವರುಗಳ ಹಿಂದೆ ಹೆಕ್‌ಮನ್ ಶಸ್ತ್ರಕ್ರಿಯಾ ಗವುಸುಗಳನ್ನು ಕೈಗಳಿಗೆ ಹಾಕಿಕೊಳ್ಳುತ್ತಿದ್ದ. ''ಲೆಸ್ಲಿ ನಾನು ನಿನ್ನನ್ನು ಪರೀಕ್ಷಿಸುವೆ'' ಎಂದಾಗ ಅವಳ ತೋಳು ಮತ್ತು ಕಾಲುಗಳು ಬಹಳ ಸೂಕ್ಷ್ಮವಾಗಿ ಒದರಿದಂತಾಯಿತು. ಮತ್ತೆ ದೇಹ ತಟಸ್ಥವಾಯಿತು. ಈ ರೀತಿಯ ಪ್ರತಿಕ್ರಿಯೆಗೆ ಜರಾಯುವಿನ ಬೇರ್ಪಡೆಯೇ ಕಾರಣವಾಗಿರುತ್ತದೆ. ಅಂದರೆ ಭ್ರೂಣ ತನಗೆ ಅಗತ್ಯವಿರುವ ಆಹಾರ ಮತ್ತು ಆಮ್ಲಜನಕವನ್ನು ತಾಯಿಯ ರಕ್ತದಿಂದ ಜರಾಯುವೆಂಬ ವಿಶಿಷ್ಟ ರಚನೆಯ ಮೂಲಕ ಪಡೆಯುತ್ತದೆ. ಆದರೆ ಈಗ ಆ ಜರಾಯು ಲೆಸ್ಲಿಯ ಗರ್ಭಕೋಶದ ಸಂಪರ್ಕ ವನ್ನು ಕಡಿದುಕೊಂಡಿದೆಯೆಂದು ಹೆಕ್‌ಮನ್ ಯೋಚಿಸಿದ. ಇದನ್ನು ದೃಢಪಡಿಸಿಕೊಳ್ಳಲು ಲೆಸ್ಲಿಯ ಆಂತರಿಕ ಪರೀಕ್ಷೆ ಮಾಡಿದ. ಆದರೆ ಅವಳ ಗರ್ಭಕೋಶ ಹರಿದಿರಲಿಲ್ಲ. ಅದೂ ಅಲ್ಲದೆ ಜರಾಯುವಿನ ಆಘಾತವನ್ನು ಸೂಚಿಸುವ ರಕ್ತಸ್ರಾವವೂ ಆಗಿರಲಿಲ್ಲ. ನಿಜ ಹೇಳಬೇಕೆಂದರೆ ಅಲ್ಲಿ ರಕ್ತವೇ ಇರಲಿಲ್ಲ ! ಭ್ರೂಣದ ತಲೆ ಗರ್ಭಕೋಶ ದ್ವಾರದಲ್ಲಿರಲಿಲ್ಲ. ಲೆಸ್ಲಿಯ ರಕ್ತ ಪರಿಚಲನೆ ಸ್ತಬ್ಧವಾಗಿತ್ತು.

ಒಂದು ಸಂದರ್ಭದಲ್ಲಿ ಹೆಕ್‌ಮನ್ ಈ ರೀತಿಯ ಪರಿಸ್ಥಿತಿಗೆ ಕಾರಣವಾಗುವ ಸಾಮಾನ್ಯ ಸಮಸ್ಯೆಗಳನ್ನು ತಳ್ಳಿಹಾಕಿದ. ಒಂದೇ ಒಂದು

ಸಾಧ್ಯತೆ ಮಾತ್ರ ಇತ್ತು. ''ಅಯ್ಯೋ ದೇವರೆ ಅದು ಭ್ರೂಣ ದ್ರವದ ಗಡ್ಡೆಗಟ್ಟುವಿಕೆ'' ಎಂದು ಹೆಕ್‌ಮನ್ ಯೋಚಿಸಿದ.

ಇಂಥ ಅತ್ಯಂತ ಅಪರೂಪ ಪರಿಸ್ಥಿತಿಯಲ್ಲಿ ಭ್ರೂಣದ್ರವ ತಾಯಿಯ ರಕ್ತ ಪ್ರವಾಹವನ್ನು ಸೇರಿ ಪುಪ್ಪುಸದ ಅಭಿಧಮನಿಯ ಮೂಲಕ ಶ್ವಾಸಕೋಶವನ್ನು ಸೇರುತ್ತದೆ. ಈ ಮಲಿನತೆಗೆ ದೇಹವು ಅತ್ಯಂತ ವಿಷಮವಾಗಿ ಪ್ರತಿಕ್ರಿಯಿಸುತ್ತದೆ. ಹೃದಯಬಡಿತವಿದ್ದರೂ ಆಕ್ಸಿಜನ್ ಸಹಿತ ರಕ್ತ ಮಾತ್ರ ಮುಖ್ಯ ಅಂಗಗಳಿಗೆ ಹರಿಯುವುದು ನಿಂತು ಹೋಗುತ್ತದೆ. ಐದೇ ನಿಮಿಷಗಳಲ್ಲಿ ಆಕ್ಸಿಜನ್ ಕೊರತೆಯಿಂದ ತಾಯಿ ಮತ್ತು ಮಗುವಿನ ಪ್ರಾಣ ಹೋಗಬಹುದು.

ಹೆಕ್‌ಮನ್ ಇಂಥ ವಿಷಮ ಪರಿಸ್ಥಿತಿಯನ್ನು ಈ ಹಿಂದೆ ಎದುರಿಸಿರಲಿಲ್ಲ. ಆದರೆ ಇದು ಪ್ರತಿ ಪ್ರಸೂತಿ ತಜ್ಞನ ದುಃಸ್ವಪ್ನವೆಂದು ಆತನಿಗೆ ತಿಳಿದಿತ್ತು. ಬಹುತೇಕ ಸಂದರ್ಭಗಳಲ್ಲಿ ಭ್ರೂಣ ದ್ರವ ಗಡ್ಡೆಗಟ್ಟುವಿಕೆ ಮರಣಾಂತಿಕವಾಗಿರುತ್ತದೆ. ಸಾಮಾನ್ಯವಾಗಿ ರೋಗವನ್ನು ಶವಪರೀಕ್ಷೆಯಿಂದ ಪತ್ತೆಹಚ್ಚಲಾಗುತ್ತದೆ. ಬದುಕುಳಿದ ಕೆಲವರಿಗೆ ಆಕ್ಸಿಜನ್ ಕೊರತೆಯಿಂದ ಮಿದುಳಿನ ಆಘಾತವಾಗಿರುತ್ತದೆ.

ತತ್‌ಕ್ಷಣವೇ ಹೆಕ್‌ಮನ್ ಒಂದು ಉಪಾಯ ಹೊಳೆಯಿತು. ಮಗುವನ್ನೂ ಉಳಿಸಿ-ಭ್ರೂಣ ದ್ರವವು ಗಡ್ಡೆಗಟ್ಟುವುದಕ್ಕೆ ಕಾರಣವಾದ ಮೂಲವನ್ನೂ ತೆಗೆದು ಹಾಕಬೇಕು. ಇದಕ್ಕಾಗಿ ಆದಷ್ಟು ಬೇಗ ಮಗುವನ್ನು ಹೊರತೆಗೆಯಬೇಕು. ''ಎಲ್ಲರೂ ಬನ್ನಿ. ಈಗಲೇ ಶಸ್ತ್ರಕ್ರಿಯಾ ಕೊಠಡಿಗೆ ಹೋಗೋಣ. ಇಲ್ಲವಾದರೆ ಅವಳನ್ನು ಕಳೆದುಕೊಳ್ಳಬೇಕಾದೀತು'', ಎಂದನು.

ಲೆಸ್ಲಿ ಎಚ್ಚರದಪ್ಪಿ ಒಂದು ಮಿನಿಟ್ ಕಳೆದು ಹೋಗಿತ್ತು. ಅವಳನ್ನು ಅವಳ ಮಗುವನ್ನೂ ಉಳಿಸಲು ಹೆಕ್‌ಮನ್‌ಗೆ ಕೇವಲ ನಾಲ್ಕು ಮಿನಿಟ್ ಉಳಿದಿತ್ತು. ಧಾರ್ಮಿಕ ತರಬೇತಿಯಿಂದ ಕಲಿತ ''ಪ್ರಾರ್ಥಿಸು ಮತ್ತು ಮಾಡು'' ಎಂಬ ಘೋಷಣೆಯನ್ನು ನೆನಪಿಸಿಕೊಂಡ.

ಲೆಸ್ಲಿಯನ್ನು ಶಸ್ತ್ರಕ್ರಿಯಾ ಕೊಠಡಿಗೆ ಕ್ಷಣಮಾತ್ರದಲ್ಲಿ ಕರೆದುಕೊಂಡು ಹೋದರು. ಅವಳ ಹೃದಯಬಡಿತವನ್ನು ಮರುಕಳಿಸಲು ದಾದಿಯರು ಅವಳ ಎದೆಯನ್ನು ನವುರಾಗಿ ಗುದ್ದತೊಡಗಿದರು. ಅವಳ ಚರ್ಮ ಕಡು ನೀಲಿಯಾಗಿತ್ತು. ಅದು ಅವಳ ರಕ್ತದಲ್ಲಿರುವ ಆಕ್ಸಿಜನ್ ಮಟ್ಟಕ್ಕೆ ಸಂಕೇತವಾಗಿತ್ತು. ಆಕ್ಸಿಜನ್ನನ್ನು ಕೊಂಡೊಯ್ಯುವ ಹೀಮೊಗ್ಲೋಬಿನ್ ಪ್ರತಿಶತ ಎಪ್ಪತ್ತರಷ್ಟು ಮಾತ್ರ ಇತ್ತು. ಅದು ಮಿದುಳಿನ ಕ್ರಿಯಾ ನಿರ್ವಹಣೆಗೆ ಮಾತ್ರ ಸಾಕಾಗಿತ್ತು. ''ಅವಳು ಸತ್ತಿದ್ದಾಳೆ ''ಎಂದು ಒಬ್ಬ ದಾದಿ ಪಿಸುಗುಟ್ಟಿದಳು.

ಹೆಕ್‌ಮನ್‌ಗೂ ಅವಳು ಸತ್ತಂತೆಯೇ ತೋರಿತು. ಆದರೆ ಆ ಯೋಚನೆ ಕ್ಷಣಮಾತ್ರವಿತ್ತು. ಅಭ್ಯಾಸಬಲ ಅವನನ್ನು ಕಾರ್ಯವಿಮುಖನನ್ನಾಗಿ ಮಾಡಿತು. ತಾನು ಮಾಡುವ ಕೆಲಸದ ಮೇಲೆ ಸಂಪೂರ್ಣ ಗಮನವಿರಿಸಿದ.

''ನಾವು ಈಗ ಮಗುವನ್ನು ಹೊರತೆಗೆಯುತ್ತಿದ್ದೇವೆ'' ಎಂದ. ಸಿಸೇರಿಯನ್ ಶಸ್ತ್ರಕ್ರಿಯೆಗೆ ಕನಿಷ್ಟ ೨೦ರಿಂದ ೩೦ ನಿಮಿಷಗಳ ಸಿದ್ಧತೆ ಬೇಕು ಮತ್ತು ಮಗುವನ್ನು ಹೊರತೆಗೆಯಲು ಐದು ಮಿನಿಟುಗಳು ಬೇಕು. ಹೆಕ್‌ಮನ್‌ಗೆ ಅಷ್ಟು ಕಾಲಾವಕಾಶವಿರಲಿಲ್ಲ. ಲೆಸ್ಲಿ ಎಚ್ಚರದಪ್ಪಿದ ಎರಡು ಮೂರು ಮಿನಿಟುಗಳಲ್ಲಿಯೇ ಅವಳ ಮೇಲೆ ಶಸ್ತ್ರಕ್ರಿಯೆ ಮಾಡಬೇಕಾಗಿತ್ತು. ಸಾಮಾನ್ಯವಾಗಿ ಮಾಡುವ ಅಡ್ಡಕೊಯ್ತದ ಬದಲು ಉದ್ದಕ್ಕೆ ಹೊಟ್ಟೆಯ

ಕೆಳಗಿನವರೆಗೂ ಕೊಯ್ಯಲು ಹೆಕ್‌ಮನ್ ನಿರ್ಧರಿಸಿದ. ಇದರಿಂದ ಆತನು ಗರ್ಭ ಕೋಶವನ್ನು ಬೇಗ ತಲಪಬಹುದಾಗಿತ್ತು.

''ಅವಳಿನ್ನೂ ನಿದ್ರಿಸಿಲ್ಲ'' ಎಂದು ದಾದಿಯೊಬ್ಬಳು ಎಚ್ಚರಿಸಿದಳು. ''ನಿದ್ದೆಗೂ ಹೆಚ್ಚಿನ ಮಟ್ಟದಲ್ಲಿದ್ದಾಳೆ'' ಎಂದು ಹೆಕ್‌ಮನ್ ಯೋಚಿಸಿದ. ಆದರೆ ವಾದವಿವಾದಕ್ಕೆ ಆಸ್ಪದವಿರಲಿಲ್ಲ. ಒಂದು ಸ್ಥಳೀಯ ಅರಿವಳಿಕೆಯನ್ನು ಚುಚ್ಚಿ ಹೊಟ್ಟೆಯನ್ನು ಕತ್ತರಿಸಿದ.

ಲೆಸ್ಲಿಯ ಗರ್ಭಕೋಶದಲ್ಲಿ ಬಲುಮಟ್ಟಿಗೆ ರಕ್ತವೇ ಇರಲಿಲ್ಲ. ಆದರೆ ಮಗು ಮಾತ್ರ ಜೀವಂತವಾಗಿತ್ತು. ಹೆಕ್‌ಮನ್ ಪುಟ್ಟಹುಡುಗಿಯನ್ನು ಹೊರತೆಗೆದು ಜರಾಯು ಅಥವಾ ಹೊಕ್ಕಳಹುರಿಯನ್ನು ಕತ್ತರಿಸಿ ಕಟ್ಟಿ ಅವಳನ್ನು ಮಕ್ಕಳ ತಜ್ಞನಿಗೆ ಒಪ್ಪಿಸಿದ. ಆತ ಮಗುವನ್ನು ಮಕ್ಕಳ ಕೋಣೆಗೆ ಒಯ್ದ.

''ಒಂದಿಷ್ಟು ಚಟುವಟಿಕೆ ಕಂಡು ಬರುತ್ತಿದೆ. ನಾಡಿ ಮಿಡಿಯುತ್ತಿದೆ'' ಎಂದು ಲೆಸ್ಲಿಯನ್ನು ಗಮನಿಸುತ್ತಿದ್ದ ಅರಿವಳಿಕೆ ದಾದಿ ಹೇಳಿದಳು.

ಹೆಕ್‌ಮನ್‌ಗೆ ಈ ನಾಡಿಮಿಡಿತದ ಬಗ್ಗೆ ಅಷ್ಟೇನೂ ಭರವಸೆ ಇರಲಿಲ್ಲ. ''ಇನ್ನೇನು ಬದುಕಿದಳು'' ಮತ್ತು ''ಬಹಳ ಮಟ್ಟಿಗೆ ಸತ್ತಂತೆ'' ಎಂಬ ಈ ಎರಡು ಸ್ಥಿತಿಗಳು ನಡುವೆ ಬಹಳ ಸೂಕ್ಷ್ಮವಾದ ರೇಖೆ ಇರುತ್ತದೆ. ರೋಗಿಗೆ ಹೃದಯಬಡಿತವಿದ್ದರೂ ಜೀವಿಸುವನೆಂಬ ಭರವಸೆ ಇರುವುದಿಲ್ಲ. ಲೆಸ್ಲಿ ಆ ರೇಖೆಯನ್ನು ದಾಟಿರುವ ಬಗ್ಗೆ ಹೆಕ್‌ಮನ್‌ಗೆ ಅರಿವಿರಲಿಲ್ಲ.

''ತತ್‌ಕ್ಷಣವೇ ಗಾಯವನ್ನು ಮುಚ್ಚಬೇಕು'' ಎಂದು ದಾದಿಯೊಬ್ಬಳು ಹೇಳಿದಳು. ಹೆಕ್‌ಮನ್ ಹೊಲಿಯಲು ಪ್ರಾರಂಭಿಸಿದ.

ತನ್ನ ಹೆಂಡತಿ ಇನ್ನೂ ಹುಟ್ಟದ ಮಗುವಿನೊಂದಿಗೆ ಶಸ್ತ್ರಕ್ರಿಯಾ ಕೊಠಡಿಯನ್ನು ಪ್ರವೇಶಿಸಿ ಮರೆಯಾಗಿದ್ದನ್ನು ನಾಟೆ ನೋಡಿದ್ದ. ಕೆಲವು ಮಿನಿಟು ಬಳಿಕ ಒಬ್ಬ ದಾದಿ ಹಜಾರಕ್ಕೆ ಬಂದು, ''ನಿನ್ನ ಮಗು ಆರೋಗ್ಯವಾಗಿದೆ ನೀನು ಅವಳನ್ನು ನೋಡಬಹುದು'', ಎಂದಳು.

''ಲೆಸ್ಲಿ ಹೇಗಿದ್ದಾಳೆ?''

''ಅವಳು ಸಾಮಾನ್ಯ ಸ್ಥಿತಿಗೆ ಮರಳುತ್ತಿದ್ದಾಳೆ''.

''ಹಾಗೆಂದರೇನು?''

ಆದರೆ ಮುಂದಿನ ಯಾವುದೇ ಸುದ್ದಿ ವೈದ್ಯರಿಂದಲೇ ಬರಬೇಕಾಗಿತ್ತು.

ನಾಟೆ ತನ್ನ ಮಗಳನ್ನು ನೋಡಲು ಹಜಾರದಿಂದ ಕೆಳಗಿಳಿದು ಹೋದ. ಶರೀರ ಕ್ರಿಯೆಗಳನ್ನು ಗಮನಿಸುವ ಯಂತ್ರವನ್ನು ಅವಳ ಕೈಕಾಲುಗಳಿಗೆ ಜೋಡಿಸಿದ್ದರು. ಅವಳು ಒದ್ದಾಡುತ್ತ ಅಳುತ್ತಿದ್ದಳು. ಮಗು ಆರೋಗ್ಯವಾಗಿದೆಯೆಂದು ಖಚಿತಪಡಿಸಿಕೊಂಡು ತನ್ನ ಪತ್ನಿಯ ಸಮಾಚಾರ ತಿಳಿಯಲು ಕಾತುರನಾಗಿ ಕಾಯ ತೊಡಗಿದ.

ಹೆಕ್‌ಮನ್ ಲೆಸ್ಲಿಯ ಗಾಯವನ್ನು ಹೊಲಿಯುತ್ತಿದ್ದಂತೆ ಅವಳ ಚರ್ಮ ತಿಳಿಗುಲಾಬಿ ಬಣ್ಣಕ್ಕೆ ತಿರುಗತೊಡಗಿತು. ರಕ್ತದೊತ್ತಡ ಸಾಮಾನ್ಯ ಮಟ್ಟಕ್ಕೆ ಬಂತು. ಗಡ್ಡೆಗಟ್ಟುವಿಕೆಯು ಎಷ್ಟು ಶೀಘ್ರವಾಗಿ ಪ್ರಾರಂಭವಾಯಿತೋ ಅಷ್ಟೇ ಶೀಘ್ರವಾಗಿ ತಿಳಿಯಾಗುವಿಕೆಯೂ ಆರಂಭವಾಯಿತು ಎಂಬುದಕ್ಕೆ ಇವು ಸೂಚಕಗಳಾದುವು.

ಸಂಜೆ ೫ ಗಂಟೆಯಾಗುತ್ತಿದ್ದಂತೆಯೇ ಲೆಸ್ಲಿಯನ್ನು ತೀವ್ರ ನಿಗಾ ಘಟಕಕ್ಕೆ ಕೊಂಡೊಯ್ಯಲಾಯಿತು. ಅವಳ ಬದುಕುಳಿಯುವಿಕೆಯು ಇನ್ನೂ ಪ್ರಶ್ನಾರ್ಥಕವಾಗಿಯೇ ಇತ್ತು. ಅವಳ ಮಿದುಳಿಗೆ ಸಾಕಷ್ಟು ಪ್ರಮಾಣದ ಆಕ್ಸಿಜನ್ ತಲಪುತ್ತಿದ್ದುದರ ಬಗ್ಗೆ ಯಾರಿಗೂ ಅರಿವಿರಲಿಲ್ಲ ಅದು ಒಂದು ದೀರ್ಘ ರಾತ್ರಿಯಾಗಿತ್ತು.

ಏನೇನು ನಡೆಯಿತೆಂದು ಹೆಕ್‌ಮನ್ ನಾಟೆಗೆ ವಿವರಿಸಿದ. ''ಅವಳು ಸುರಕ್ಷಿತ ಕೈಗಳಲ್ಲಿದ್ದಾಳೆ. ಬೆಳಗಿನ ಹೊತ್ತಿಗೆ ಅವಳ ಸ್ಥಿತಿಯ ಬಗ್ಗೆ ಇನ್ನೂ ಹೆಚ್ಚು ತಿಳಿಯ ಬಹುದು.''

ನಾಟೆ ರಾತ್ರಿ ಸುಮಾರು ೮ ಗಂಟೆಗೆ ಲೆಸ್ಲಿಯನ್ನು ತೀವ್ರ ನಿಗಾ ಘಟಕದಲ್ಲಿ ನೋಡಿದ. ಅವಳ ಚರ್ಮ ಅರೆ ಪಾರದರ್ಶಕವಾಗಿತ್ತು. ಚುಚ್ಚುಮದ್ದಿನ ಮೂಲಕ ದ್ರವಗಳು ಪ್ರವೇಶಿಸುತ್ತಿದ್ದುದರಿಂದ ಅವಳ ದೇಹ ಊದಿಕೊಂಡಿತ್ತು. ಹತ್ತಿರ ಹೋಗಿ ಅವಳ ಹಣೆಯನ್ನೂ ಕೆನ್ನೆಯನ್ನೂ ಮುಟ್ಟಿದ. ''ನಮ್ಮ ಮಗು ಚೆನ್ನಾಗಿದೆ . ನಾವೆಲ್ಲರೂ ನಿನ್ನನ್ನು ಪ್ರೀತಿಸುತ್ತೇವೆ'' ಎಂದು ಅವಳ ಕಿವಿಯಲ್ಲಿ ಹೇಳಿದ.

ಉಪಶಮನ ಮದ್ದನ್ನು ಹೆಚ್ಚಾಗಿ ಕೊಟ್ಟಿದ್ದರಿಂದ ಲೆಸ್ಲಿ ಮರುದಿನವೂ ಅಂದರೆ ಶುಕ್ರವಾರ ಸಂಜೆಯವರೆಗೂ ಪ್ರಜ್ಞಾಹೀನ ಸ್ಥಿತಿಯಲ್ಲಿಯೇ ಇದ್ದಳು. ಆ ಸಂಜೆ ಅವಳು ಕಣ್ಣು ತೆರೆದಾಗ ಹೆಕ್‌ಮನ್ ಅವಳ ಬಳಿಯೇ ಇದ್ದ. ''ಲೆಸ್ಲಿ ನೋವಿಗೆ ಏನಾದರೂ ಔಷಧಿಯನ್ನು ಕೊಡಲೇ?'' ಎಂದು ಕೇಳಿದ.

ಇನ್ನೂ ಮಂಪರಿನಲ್ಲಿದ್ದ ಲೆಸ್ಲಿಗೆ ಒಂದು ದಿನ ಕಳೆದಿರುವುದೂ ತಿಳಿದಿರಲಿಲ್ಲ.. ''ಈಗ ಬೇಡ ಮಧ್ಯಾಹ್ನವಷ್ಟೇ ತೆಗೆದುಕೊಂಡಿದ್ದೇನೆ. ಸ್ನಾಯುಗಳನ್ನು ಚಲಿಸಲಾಗಲಿಲ್ಲ'', ಎಂದಳು. ಹೆಕ್‌ಮನ್ ಮನದೊಳಗೇ ಹಿಗ್ಗಿದ. ''ನಿನಗೆ ಕೆಲವು ಸಮಸ್ಯೆಗಳುಂಟಾಗಿದ್ದುವು. ಅದರ ಬಗ್ಗೆ ಮುಂದೆ ತಿಳಿಸುತ್ತೇನೆ'', ಎಂದ.

ಹೆಕ್‌ಮನ್ ಪಕ್ಕಕ್ಕೆ ಸರಿಯುತ್ತಿದ್ದಂತೆಯೇ ನಾಟೆ ತನ್ನ ಪತ್ನಿ ಬಳಿ ಹೋದ. ಅವನನ್ನು ನೋಡಿ ಲೆಸ್ಲಿ ''ಕೆರ್ರಿ ೪ ಗಂಟೆಗೆ ಬರುವಳು', ಎಂದಳು.

ನಾಟೆಗೆ ನಗು ಬಂತು. ಕೆರ್ರಿ ಆ ದಂಪತಿಗಳ ಮಕ್ಕಳನ್ನು ನೋಡಿಕೊಳ್ಳುವ ದಾದಿ. ಹಿಂದಿನ ದಿನ ೪ ಗಂಟೆಗೆ ಅವಳು ಲೆಸ್ಲಿ ಮನೆಗೆ ಬರಬೇಕಿತ್ತು. ಲೆಸ್ಲಿಗೆ ಆ ದಾದಿ ಮನೆಗೆ ಬರುವ ಚಿಂತೆಯೇ ಆಗಿತ್ತು. ಇನ್ನು ಅವಳ ಸ್ಥಿತಿ ಸುಧಾರಿಸುವುದೆಂದು ನಾಟೆಗೆ ಭರವಸೆ ಮೂಡಿತು.

''ಮಗು ಹೇಗಿದೆ?'' ಎಂದಳು

''ಆರೋಗ್ಯವಾಗಿದೆ''.

ಲೆಸ್ಲಿಯ ಚೇತರಿಕೆ ಸಾಧಾರಣ ಮಟ್ಟದ್ದು. ಸೋಮವಾರ ಅಂದರೆ ಎರಡೇ ದಿನಗಳಿಗೆ ತನ್ನ ಹಾಸಿಗೆಯನ್ನು ತಾನೇ ಸರಿಮಾಡಿಕೊಂಡಳು. ಮಂಗಳವಾರ ಮೊತ್ತಮೊದಲ ಬಾರಿಗೆ ತನ್ನ ಮಗುವನ್ನು ನೋಡಿದಳು. ನಾಲ್ಕೂವರೆ ಕಿಲೊ ತೂಕವುಳ್ಳ ಎಲ್ಲ ವಿಧದಲ್ಲಿಯೂ ಆರೋಗ್ಯವಾದ ಮಗುವಾಗಿತ್ತು. ಲೆಸ್ಲಿ ಮತ್ತು ನಾಟೆ ಅವಳನ್ನು 'ಲಿಲ್ಲಿ' ಎಂದು ಕರೆದರು.

ತಾಯಿಗಾಗಲೀ ಮಗುವಿಗಾಗಲೀ ಈ ಸತ್ವಪರೀಕ್ಷೆಯ ಅಡ್ಡ ಪರಿಣಾಮಗಳೇನೂ ಆಗಲಿಲ್ಲ. ತಾನು ಲಿಲ್ಲಿಯನ್ನು ಸಾಮಾನ್ಯಕ್ಕಿಂತ ಹೆಚ್ಚು ಆತ್ಮೀಯತೆಯಿಂದ ಬಿಗಿದಪ್ಪಿಕೊಳ್ಳುತ್ತೇನೆಂದು ಹೇಳಿದ ಲೆಸ್ಲಿ, ''ಅವಳನ್ನು ನೋಡಿದಾಗಲೆಲ್ಲಾ ಅವಳನ್ನು ಕಳೆದುಕೊಂಡೇ ಬಿಟ್ಟಿರುತ್ತಿದ್ದೆ ಎನಿಸುತ್ತದೆ. ಆದರೆ ಇವರುಗಳು ನನ್ನನ್ನೇ ಕಳೆದುಕೊಳ್ಳುತ್ತಿದ್ದರು. ಡಾ. ಹೆಕ್‌ಮನ್ ನಿಜವಾಗಲೂ ಒಬ್ಬ ಪವಾಡ ಪುರುಷ . ಏಕೆಂದರೆ ಅವನು ಆ ಮೊದಲ ಕ್ಷಣಗಳಲ್ಲಿ ಸ್ವಸ್ಥಚಿತ್ತನಾಗಿ ಕೆಲಸ ನಿರ್ವಹಿಸಿದನು.''

ಆ ಐದು ಮಿನಿಟುಗಳಲ್ಲಿ ತಾನು ಹೇಗೆ ಆ ಎರಡು ಜೀವಗಳನ್ನು ಉಳಿಸಿದೆನೆಂದು ಕೆನ್ನೆತ್ ಹೆಕ್‌ಮನ್ ಆಗಾಗ ಆ ಹಿಂದಿನ ಘಟನೆಯನ್ನು ನೆನಪಿಸಿಕೊಳ್ಳುವನು.

'ಅದು ಕೃಪೆ, ಪೂರ್ವಾನುದರ್ಶನದ ಕೃಪೆ' ಎಂದು ಹೇಳುವನು.

ನಮ್ಮ ಆರೋಗ್ಯ ಭಾಗ್ಯ ರಹಸ್ಯ

ಸುಮತಿ ಪಾಂಗಾಳ
೨೦೨, ಮಾನಸ ಅಪಾರ್ಟ್‌ಮೆಂಟ್
ಲೋಬೋಲೇನ್, ಬೆಂದೂರು
ಮಂಗಳೂರು-೫೭೫ ೦೦೨

ರೋಗ ರುಜಿನಗಳಿಂದ ಜೀವರಕ್ಷಣೆ ಮಾಡಿಕೊಳ್ಳುವುದು ಅತಿ ತ್ರಾಸದಾಯಕ. ಕೆಲವೇ ಕೆಲವು ವರ್ಷಗಳ ಮೊದಲು ಸಾಂಕ್ರಾಮಿಕ ರೋಗಗಳಾದ ಡಿಫ್ತೀರಿಯಾ ಮುಂತಾದ ರೋಗಗಳಿಂದ ಹಲವಾರು ಜನರು ಸಾವನ್ನಪ್ಪುತ್ತಿದ್ದರು. ಆದರೆ ಈಗ ಇಂತಹ ರೋಗಗಳಿಂದಾಗುವ ಮರಣಗಳು ಕಡಿಮೆಯಾಗಿವೆ. ಬದಲಾಗಿ ಕಲುಷಿತ ವಾತಾವರಣ, ಜೀವನ ಶೈಲಿಯ ನ್ಯೂನತೆಗಳು ಎಷ್ಟೋ ಕಾಯಿಲೆಗಳಿಗೆ ಕಾರಣವಾಗಿವೆ. ರೋಗರಹಿತ ದೀರ್ಘಾಯುಷ್ಯವೇ ಆರೋಗ್ಯದಲ್ಲಿ ಕಾಳಜಿಯುಳ್ಳವರ ಗುರಿಯಾಗಿದೆ. ಆಹಾರ, ವಿಹಾರ, ವಿಶ್ರಾಂತಿ, ಸಾಮಾಜಿಕ ಜೀವನದ ಕ್ರಮಗಳು, ಹಾಗೂ ಉದ್ವೇಗ ರಹಿತ ಜೀವನದಿಂದ ಆರೋಗ್ಯ ಭಾಗ್ಯವನ್ನು ಪಡೆಯಬಹುದು.

ರೋಗನಿರೋಧಕ ಶಕ್ತಿ

ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಹಲವಾರು ಸೋಂಕುಗಳು, ವಿಷಾಣುಗಳು, ಕ್ರಿಮಿಗಳು, ಸೂಕ್ಷ್ಮಜೀವಿಗಳು, ಅಡಕವಾಗಿವೆ. ಇವುಗಳನ್ನೇ 'ವೈರಸ್' ಎನ್ನುವರು. ಇವುಗಳು ಒಮ್ಮೆ ನಮ್ಮ ದೇಹದ ಮೇಲೆ ಧಾಳಿ ಮಾಡಿದಾಗ ದೇಹದಲ್ಲಿ ರೋಗ ನಿರೋಧಕ ಶಕ್ತಿಯು ಉತ್ಪನ್ನವಾಗುವುದು. ರೋಗ ನಿರೋಧಕ ಶಕ್ತಿಯ ಅಭಾವವಿದ್ದ ವ್ಯಕ್ತಿಗಳು ಬೇಗನೆ ಸೋಂಕು ರೋಗಗಳಿಗೆ ಈಡಾಗುತ್ತಾರೆ. ಈ ವಿವಿಧ ಬಗೆಯ ರೋಗಗಳಿಂದ ರಕ್ಷಿಸಿಕೊಳ್ಳಲು ಪ್ರತಿಯೊಬ್ಬರೂ ಎಚ್ಚರಿಕೆಯಿಂದಲೂ ಜಾಣ್ಮೆಯಿಂದಲೂ ಜೀವಿಸುವುದನ್ನು ಕಲಿಯಬೇಕು.

ಲಸಿಕೆಗಳು

ಅದೃಷ್ಟವಶಾತ್ ಈಗ ಜೀವಂತ ಲಸಿಕೆಯನ್ನು ಕೊಡುವುದರ ಮೂಲಕ ಮರಣಾಂತಿಕ ರೋಗಗಳನ್ನು ತಡೆಗಟ್ಟಬಹುದು. ಆದುದರಿಂದ ಶೈಶವದ ಸೋಂಕು ರೋಗಗಳಿಂದ ಮಕ್ಕಳನ್ನು ರಕ್ಷಿಸಬಹುದು.

ಗಳಚರ್ಮರೋಗ, ಟೆಟನಸ್, ನಾಯಿಕೆಮ್ಮು, ದಡಾರ, ಜರ್ಮನ್ ದಡಾರ, ಗದ್ದಕಟ್ಟು ಅಥವಾ ಮಂಗನ ಬಾವು, ಶೈಶವಪಾರ್ಶ್ವವಾಯು, ಮುಂತಾದ ರೋಗಗಳಿಗೆ ಲಸಿಕೆಗಳು ಲಭ್ಯವಾಗಿವೆ. ತೀವ್ರವಾದ ಯಕೃತ್ತಿನ ಉರಿಯೂತಕ್ಕೆ ಹೆಪಟೈಟಿಸ್-ಬಿ ಎನ್ನುವರು. ಈ ಕಾಯಿಲೆಯಿಂದಲೂ ರಕ್ಷಿಸಿಕೊಳ್ಳುವುದು ಅತೀ ಅಗತ್ಯವಾಗಿದೆ.

ಸಮತೂಕದ ಆಹಾರ

ಉತ್ತಮ ಆರೋಗ್ಯಕ್ಕೆ ಅಗತ್ಯವಾದ ಎಲ್ಲಿ ಪೌಷ್ಟಿಕಾಂಶಗಳೂ ಇರುವ ಆಹಾರವನ್ನು ಸೇವಿಸಬೇಕೆನ್ನುವುದು ಸರ್ವವಿದಿತ. ಖನಿಜ ಮತ್ತು ಜೀವಾತುಗಳು ನಮ್ಮ ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ, ದೇಹದ ಆರೋಗ್ಯವನ್ನು ರಕ್ಷಿಸುತ್ತವೆ. ಅದರಲ್ಲೂ 'ಇ' ಅನ್ನಾಂಗ ಪ್ರಮುಖವಾದ ಜೀವರಕ್ಷಕ ಜೀವಾತು. ದೇಹವು 'ಇ' ಅನ್ನಾಂಗವನ್ನು ಪುನರ್ಬಳಕೆ ಮಾಡಿ, ಅದರ ಪ್ರಯೋಜನವನ್ನು ಹೆಚ್ಚು ಕಾಲ ಉಳಿಸಿ ಕೊಳ್ಳಲು 'ಸಿ' ಅನ್ನಾಂಗ ಸಹಾಯ ಮಾಡುವುದು.

೨೦೦೦ದ ಇಸವಿ ಜುಲೈ ತಿಂಗಳ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ ಪೇರುಲ್ ಆರ್ ಶೇತ್ ಅವರ 'ಯುವರ್ ಗೈಡ್ ಟು ಗುಡ್ ಹೆಲ್ತ್' ಲೇಖನದ ಅನುವಾದ

ಸಾವಿರದ ಒಂಬೈನೂರ ತೊಂಬತ್ತೆಂಟರಲ್ಲಿ ಬೋಸ್ಟನ್ನಿನ ಟಫ್ ಟ್ಸ್ ವಿಶ್ವವಿದ್ಯಾಲಯದಲ್ಲಿ ನಡೆಸಿದ ಅಧ್ಯಯನದ ಪ್ರಕಾರ 'ಬೀಟಾ ಕ್ಯಾರೊಟನ್' ಅಥವಾ 'ಎ' ಅನ್ನಾಂಗ ದೇಹದಲ್ಲಿ ಕೇನ್ಸರ್ ರೋಗದ ಗೆಡ್ಡೆಗಳನ್ನು ನಾಶ ಮಾಡುವಲ್ಲಿ ಸಹಕಾರಿ ಎಂದು ತಿಳಿದು ಬಂದಿದೆ. ಮಾತ್ರವಲ್ಲ ರೋಗ ನಿರೋಧಕ ಶಕ್ತಿಯನ್ನೂ ನೀಡುವಲ್ಲಿ ಅತ್ಯುನ್ನತ ಸ್ಥಾನವನ್ನು ಹೊಂದಿದೆ. ಆದುದರಿಂದ ದೇಹದ ಸರ್ವಾಂಗೀಣ ಆರೋಗ್ಯಕ್ಕೆ ಸಮತೂಕದ ಆಹಾರವೇ ಅತೀ ಅಗತ್ಯ ಹೊರತು, ಜೀವಾತುವಿನ ಗುಳಿಗೆಗಳಲ್ಲ.

ನಿದ್ರೆ

ರಾತ್ರಿಯಲ್ಲಿ ದಿನಕ್ಕೆ ಆರರಿಂದ ಎಂಟು ತಾಸು ನಿದ್ರಿಸುವುದು ಆರೋಗ್ಯದ ದೃಷ್ಟಿಯಿಂದ ಉಪಯುಕ್ತ . ನಿದ್ರಾಹೀನತೆ ನಮ್ಮ ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸಿ, ರೋಗಗಳಿಗೆ ಆಹ್ವಾನವೀಯುತ್ತದೆ. ನಿದ್ರಾ ಸಮಯದಲ್ಲಿ ಮದ್ಯಪಾನ, ಅಥವಾ ಕೇಫಿನ್ ಯುಕ್ತವಾದ ಕಾಫಿ ಮುಂತಾದ ಪೇಯುಗಳನ್ನು ಸೇವಿಸದೆ ದಿನಾ ಕ್ಲಿಪ್ತ ಸಮಯದಲ್ಲಿ ನಿದ್ರಿಸುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು.

ಮಾನಸಿಕ ಒತ್ತಡಗಳು

ಮಾನಸಿಕ ಒತ್ತಡಗಳು ರೋಗ ನಿರೋಧಕ ಶಕ್ತಿಯನ್ನು ಕುಂಠಿತಗೊಳಿಸುತ್ತವೆ. ಸಾವೋದ್ವೇಗಗಳಿಗೆ ಒಳಗಾಗುವುದನ್ನು ಆದಷ್ಟು ಮಟ್ಟಿಗೆ ತಡೆಯಬೇಕು. ತೃಪ್ತಿಯಿಲ್ಲದ ಉದ್ಯೋಗದಲ್ಲಿ ಮುಂದುವರಿಯುವುದು, ಸಂಸಾರದಲ್ಲಿ ಸಮಸ್ಯೆಗಳು, ಹಾಗೂ ಅಸಮ ಅಥವಾ ವಿಷಮ ದಾಂಪತ್ಯ ಇವು ಅನೇಕ ಸಮಸ್ಯೆಗಳಿಗೆ ಪೂರಕ ಕಾರಣಗಳಾಗಿವೆ. ನಲ್ಮೆಯ ಸಂಸಾರ ಹಾಗೂ ಆತ್ಮೀಯ ಗೆಳೆತನ ಇವುಗಳಿಂದ ಒತ್ತಡಗಳು ಕಡಿಮೆಯಾಗಿ ಸಾಮಾನ್ಯ ಕಾಯಿಲೆಯಾದ ನೆಗಡಿಯಿಂದ ಹಿಡಿದು ಮಾನಸಿಕ ಖಿನ್ನತೆಯವರೆಗಿನ ಸಮಸ್ಯೆಗಳನ್ನು ನಿರೋಧಿಸಲು ಸಾಧ್ಯವಿದೆ.

ಪಚನಕಾರ್ಯ

ಪಚನ ಕಾರ್ಯವು ಸುಸೂತ್ರವಾಗಿ ನಡೆದರೆ ಮಾತ್ರ, ನಾವು ಸೇವಿಸಿದ ಆಹಾರದ ಪೋಷಣಾಂಶಗಳು ರಕ್ತಗತವಾಗಿ ಆರೋಗ್ಯವಾಗಿರಲು ಸಾಧ್ಯ. ಜೀರ್ಣಕಾರ್ಯವು ಬಾಯಿಯಿಂದಲೇ ಪ್ರಾರಂಭವಾಗುವುದರಿಂದ ದಂತ ಪಂಕ್ತಿಗಳ ಆರೋಗ್ಯ ರಕ್ಷಣೆ ಅತಿ ಅಗತ್ಯವಾದುದು. ಆರೋಗ್ಯವಾದ ಹಲ್ಲುಗಳು ಸುದೃಢ ದೇಹದ ಪ್ರತಿಬಿಂಬವಾಗಿವೆ.

ಹಲ್ಲುಗಳ ಕಾಯಿಲೆಗಳಲ್ಲಿ ದಂತಕ್ಷಯವು ಸರ್ವೇಸಾಮಾನ್ಯ. ಆಹಾರದಲ್ಲಿರುವ ಶರ್ಕರ ಪಿಷ್ಟದ ಚೂರುಗಳು ಹಲ್ಲುಗಳ ಸಂದುಗಳಲ್ಲಿ ಸಿಕ್ಕಿಕೊಂಡು , ಅಲ್ಲಿ ಬ್ಯಾಕ್ಟೀರಿಯಾದ ಬೆಳವಣಿಗೆಗೆ ಎಡೆಮಾಡಿಕೊಡುತ್ತದೆ. ಅನಂತರ ಜೊಲ್ಲು ರಸದಲ್ಲಿ ಆಮ್ಲೀಯ ಪ್ರತಿಕ್ರಿಯೆಯ ಉತ್ಪನ್ನ ಮಾಡುವುವು. ತತ್ಪರಿಣಾಮವಾಗಿ ಹಲ್ಲಿನ ಮೇಲ್ಪದರು ದಾಳಿಗೀಡಾಗುವುದು. ಹಲ್ಲುಗಳ ಗಟ್ಟಿಯಾದ ಗಾಜು ಹೊದಿಕೆಯಲ್ಲಿ ಅತಿಸೂಕ್ಷ್ಮವಾದ ಬಿರುಕುಗಳನ್ನುಂಟು ಮಾಡುವುವು. ದಂತವ್ಯಾಧಿಗಳು ಅನೇಕ ತರದ ಉಗ್ರರೋಗಗಳಿಗೂ ಹೇತುವಾಗಬಲ್ಲವು. ಪಸಡುಗಳಲ್ಲಿನ ರಕ್ತಸ್ರಾವ, ವಸಡುಗಳಲ್ಲಿಯ ಉರಿಯೂತ ಇವು ಮಧುಮೇಹ ಹಾಗೂ ಹೃದಯದ ಕಾಯಿಲೆಗಳ ಜೊತೆಗೆ ಶ್ವಾಸಕೋಶಗಳ ಸೋಂಕಿಗೂ ಕಾರಣವಾಗುತ್ತವೆ.

ವಸಡಿನ ರಕ್ತಸ್ರಾವದಲ್ಲಿರುವ ಬ್ಯಾಕ್ಟೀರಿಯವು ಸಂಪೂರ್ಣ ರಕ್ತವಾಹಿನಿಯಲ್ಲಿ ಹರಿದು ಒಂದಾಗಿ ರಕ್ತಚಲನೆಯಲ್ಲಿ ಅಡೆತಡೆ ಉಂಟು ಮಾಡುವುದರೊಂದಿಗೆ ಶ್ವಾಸಕೋಶದಲ್ಲಿ ಉರಿಯೂತದ ಕಾಯಿಲೆಯನ್ನು ಉಂಟು ಮಾಡುತ್ತದೆ.

ಕಲುಷಿತ ನೀರು ಮತ್ತು ಆಹಾರಗಳಿಂದ ಬರುವ ರೋಗಗಳು

ಅಶುದ್ಧ ನೀರು ಮತ್ತು ಆಹಾರದಲ್ಲಿರುವ ಸೂಕ್ಷ್ಮಾಣುಗಳು ವಿಷವಾಗಿ ಪರಿವರ್ತಿತವಾಗಿ, ಕರುಳಿನಲ್ಲಿ ದುಷ್ಪರಿಣಾಮ ಬೀರಿ ಸೋಂಕುಗಳನ್ನು ಹರಡುತ್ತವೆ. ಉದರ ಬೇನೆ, ಆಮಶಂಕೆ, ತಲೆತಿರುಗು, ವಾಂತಿ ಬರುವಿಕೆ, ಜ್ವರ, ಕರುಳಿನ ಉರಿಯೂತ ಗಳನ್ನು ಆಹ್ವಾನಿಸುತ್ತವೆ. ಈ ಸೋಂಕು ತೀವ್ರ ತರದ್ದಾದರೆ ರಕ್ತವಾಹಿನಿಯಲ್ಲಿ ಬೆರೆತು ದೇಹದ ಇತರ ಅಂಗಾಂಗಗಳಾದ ಮೂತ್ರ ಜನಕಾಂಗ ಹಾಗೂ ನರಮಂಡಲದ ವ್ಯವಸ್ಥೆಗಳಿಗೂ ಅಪಾಯವನ್ನು ತರಬಲ್ಲವು.

ಕುಟುಂಬದ ಆರೋಗ್ಯ ರಕ್ಷಣೆಯ ಪ್ರಮುಖ ಸೂತ್ರಗಳು.

೧. ಆಹಾರವನ್ನು ತಯಾರಿಸುವ ಮೊದಲು ಹಾಗೂ ತಯಾರಿಸಿದ ಬಳಿಕ ಶುದ್ಧವಾದ ನೀರಿನಿಂದ ಕೈಗಳನ್ನು ತೊಳೆಯಿರಿ

೨. ಶುದ್ಧಗೊಳಿಸದ ಅಥವಾ ಕ್ರಿಮಿಗಳನ್ನು ನಾಶಮಾಡದ(ಪಾಶ್ಚರೀಕರಣ ಮಾಡದ) ಹಸಿ ಹಾಲಿನಂಥ ಪದಾರ್ಥಗಳನ್ನು ಉಪಯೋಗಿಸುವ ಮೊದಲು ಶುದ್ಧ ನೀರಿನಿಂದ ಸರಿಯಾಗಿ ತೊಳೆಯಿರಿ

೩. ಹಣ್ಣುಗಳನ್ನು ಮತ್ತು ತರಕಾರಿಗಳನ್ನು ಉಪಯೋಗಿಸುವ ಮೊದಲು ಶುದ್ಧ ನೀರಿನಿಂದ ಸರಿಯಾಗಿ ತೊಳೆಯಿರಿ

೪. ಬೇಗನೆ ಹಾಳಾಗುವಂಥ ವಸ್ತುಗಳನ್ನು ಶೀತಕಾರಿಯಲ್ಲಿ ಇರಿಸಿ.

೫. ಆಹಾರವಸ್ತುಗಳನ್ನು ಶೀತಕಾರಿಯಲ್ಲಿ ಇರಿಸುವ ಮೊದಲು ಪ್ರತ್ಯೇಕ ಪ್ರತ್ಯೇಕವಾಗಿ ಮುಚ್ಚಿಡಿ.

೬. ಹಸಿ ಮಾಂಸ ಮತ್ತು ಸಾಗರೋತ್ಪನ್ನ (ಮೀನು)ಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಸುತ್ತಿ ಬೇರೆಯೇ ಇರಿಸಿ.

೭. ಶೀತಕಾರಿಯ ತಾಪಮಾನ ಸರಿಯಾಗಿದೆಯೇ ಎಂದು ತಿಂಗಳಿಗೊಂದಾವರ್ತಿ ಪರಿಶೀಲಿಸಿ.

೮. ಆಹಾರ ಸಾಮಗ್ರಿಗಳಲ್ಲಿರುವ ರೋಗವಾಹಕ ಸೂಕ್ಷ್ಮಾಣುಗಳನ್ನು ನಾಶಗೈಯ್ಯುವ ವಿಕಿರಣನದಿಂದ ಸಂರಕ್ಷಿಸಲಾದ ಆಹಾರ ಸಾಮಗ್ರಿಗಳನ್ನು ಪಯೋಗಿಸಿ.

೯. ಪಾತ್ರೆ ತೊಳೆಯುವ ಸ್ಥಳ ಮತ್ತು ಅಡುಗೆ ಕೋಣೆಯಲ್ಲಿ ಉಪಯೋಗಿಸುವ ವಸ್ತುಗಳಾದ ತಟ್ಟೆ, ಬಟ್ಟಲು, ಒರೆಸುವ ವಸ್ತ್ರಗಳನ್ನು, ವಸ್ತುಗಳನ್ನು ಸ್ವಚ್ಛವಾಗಿಡಿ.

೧೦. ನಲ್ಲಿಯ ನೀರನ್ನು ಶುದ್ಧೀಕರಿಸಲು ಸೋಸುವ ಸಲಕರಣೆಯನ್ನು ಅಳವಡಿಸಿ.

ಆರೋಗ್ಯವಂತ ಹೃದಯ ಪಡೆಯಲು ಅನುಸರಿಸಬೇಕಾದ ಸೂತ್ರಗಳು

೧. ಅಪಾಯದ ಸಂಕೇತಗಳನ್ನು ಅರಿತ ಕೂಡಲೇ ಕಾರ್ಯಪ್ರವೃತ್ತರಾಗುವುದು.

೨. ಹೊಟ್ಟೆಬಾಕರಂತೆ ತಿನ್ನದೆ ಹಿತಮಿತವಾಗಿ ಸಮ ತೂಕದ ಆಹಾರಸೇವನೆ.

೩. ಕೊಬ್ಬಿನಂಶ ಕಡಿಮೆಯಿರುವ ಆಹಾರ ಸೇವನೆ

೪. ಆಹಾರದಲ್ಲಿ ಆದಷ್ಟು ಲವಣದಂಶದ ಕಡಿತ.

೫. ಹಸಿರು ತರಕಾರಿ, ಸೊಪ್ಪಿನ ತರಕಾರಿ, ಹಣ್ಣು ಹಂಪಲು ಹಾಗೂ ತರಕಾರಿಯ ಹಸಿ ಪಚ್ಚಡಿಯನ್ನು ಸೇವಿಸಿರಿ.

೬. ಧಾರಾಳವಾಗಿ ನೀರು ಮತ್ತು ದ್ರವಾಹಾರದ ಸೇವನೆ.

೭. ಊಟವಾದ ಮೇಲೆ ಜೀರ್ಣಕಾರ್ಯ ಉತ್ತಮವಾಗಲು ಕೆಲವು ನಿಮಿಷಗಳವರೆಗೆ ನಡೆದಾಡಿರಿ.

೮. ವಿಶ್ರಾಮ ತೆಗೆದುಕೊಳ್ಳುವ ಅಭ್ಯಾಸ ಕರಗತ ಮಾಡಿಕೊಳ್ಳಿರಿ.

೯. ಸಿಹಿವಸ್ತು, ಮಾಂಸಾಹಾರ, ಮೊಟ್ಟೆ ಇವುಗಳ ಸೇವನೆಯಲ್ಲಿ ಕಡಿತ.

ನಾವು ಸೇವಿಸಿದ ಆಹಾರದಂತೆ ನಮ್ಮ ಆರೋಗ್ಯ

ನಮ್ಮ ದೇಹವೆಂಬುದು ಒಂದು ಮೋಟಾರು ವಾಹನವಿದ್ದಂತೆ. ಅದು ಸರಿಯಾಗಿ ಓಡಬೇಕಾದರೆ ಒಳ್ಳೆಯ ಇಂಧನದೊಂದಿಗೆ ಉತ್ತಮ ಆರೈಕೆಯೂ ಅಗತ್ಯ. ಅಂತೆಯೇ ನಾವು ಒಳ್ಳೆಯ ಆಹಾರವನ್ನು ಸೇವಿಸಿದರೆ ಮಾತ್ರವೇ ನಮ್ಮ ದೇಹ ಆರೋಗ್ಯವಾಗಿರುವುದು. ನ್ಯೂನ ಪೋಷಣೆಯಿಂದ ಆಯಾಸ, ನಿದ್ರಾಹೀನತೆ ಉಂಟಾಗಿ ರೋಗ ನಿರೋಧಕ ಶಕ್ತಿ ಕುಂಠಿತಗೊಳ್ಳುವುದು.

ಹಾಗೆಯೇ ಹೊಟ್ಟೆಬಾಕತನದಿಂದ ಅಕಾಲ ವೃದ್ಧಾಪ್ಯವುಂಟಾಗುವುದು. ಕಡಿಮೆ ಉಪ್ಪು, ಕೊಲೆಸ್ಟರಾಲ್ ರಹಿತ ಹೆಚ್ಚು ನಾರಿನಂಶವಿರುವ ಪ್ರೊಟೀನು ಯುಕ್ತ ಆಹಾರ ಸೇವಿಸುವುದು ಒಳಿತು. ಎಲ್ಲ ಜೀವಾತುಗಳು ಖನಿಜ ಲವಣಗಳು ಸಸಾರಜನಕ ನೀರಿನಿಂದ ಕೂಡಿದ ಆಹಾರ ಇವುಗಳ ಸೇವನೆಯಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಧಾನ್ಯ, ಬೇಳೆಕಾಳುಗಳು, ಸೊಪ್ಪು, ತರಕಾರಿ, ಹಣ್ಣುಹಂಪಲುಗಳ ಸೇವನೆ ಅತೀ ಅಗತ್ಯ. ಬೇಕರಿ ತಿಂಡಿಗಳಾದ ಬಿಸ್ಕೆಟು, ಕೇಕುಗಳನ್ನು ವರ್ಜಿಸಬೇಕು. ಜ್ಯಾಂ ಸಿಹಿತಿಂಡಿ, ಐಸ್‌ಕ್ರೀಂ, ಚಾಕಲೇಟು ಮೊದಲಾದುವುಗಳನ್ನು ಸೇವಿಸದಿರಿ. ದಿನಂಪ್ರತಿ ಎಂಟರಿಂದ ಹತ್ತು (೮-೧೦) ಲೋಟನೀರು ಕುಡಿಯುವುದರಿಂದ ದೇಹದ ಜೀವದ್ರವ ಆರುವುದಿಲ್ಲ.

ದೇಹ ಮತ್ತು ಮನಸ್ಸುಗಳ ಸಮತೋಲನವೇ ಆರೋಗ್ಯ ಮತ್ತು ದೀರ್ಘಾಯುಷ್ಯದ ರಹಸ್ಯವಾಗಿದೆ.



ಹೃದಯ ವಿಕಾಸಕ್ಕೆ ಹೃದಯ ಪಕ್ವವಾಗಬೇಕು. ಪಕ್ವ ವಿವೇಕ ಮತ್ತು ಹೃದಯ ವಿಕಾಸದಿಂದ ಮಾನವನ ಜೀವನವು ವಿಶಾಲವಾಗಿ, ಸೊಗಸು, ಪ್ರೀತಿ ಸೌಭಾಗ್ಯಗಳಿಂದ ಬೆಳಗಬಲ್ಲದು.

-ವರ್ಡ್ಸ್‌ವರ್ಥ್

ಏಮಿ ಜೇಕ್ಸನ್‌ಳ ಹತ್ಯೆ

ಭಾರತೀ ಭಟ್
೧೩೫, ೨೨ನೇ ಕ್ರಾಸ್,
ಡಿ. ಬ್ಲಾಕ್, ವಿಜಯನಗರ, ೩ನೇ
ಹಂತ, ಮೈಸೂರು-೫೭೦ ೦೧೭

ಕಪ್ಪು-ಬಿಳಿ ಬಣ್ಣದ ಆ ಕರು ಹುಟ್ಟಿ ಒಂದು ದಿನವಾಗಿತ್ತಷ್ಟೆ. ಅದರ ತಲೆಯನ್ನು ಸವರಬೇಕೆಂದು ಏಮಿ ಜೇಕ್ಸನ್ ಕೈ ಚಾಚಿದಾಗ ಅದು ತನ್ನ ಒದ್ದೆಯಾದ ಮೂತಿಯಿಂದ ಆಕೆಯ ಕೈಯನ್ನು ನೆಕ್ಕತೊಡಗಿತು. ಅದನ್ನು ನೋಡಿ ಆಕೆಗೆ ಭಾರೀ ಖುಶಿಯಾಯಿತು. ಆಕೆ ಅದರ ಕಿವಿಯನ್ನು ಮೆತ್ತಗೆ ಉಜ್ಜಿದಳು. ಹಸಿ ಹುಲ್ಲನ್ನಿರಿಸಿದ ಬೋಗುಣಿಯನ್ನು ಸರಿಪಡಿಸಿದಂತೆಲ್ಲ ಕರು ಅದನ್ನು ಮಗುಚಿ ಹಾಕುತ್ತಿತ್ತು. ಆಗಲೇ ಅದಕ್ಕೆ ಅಷ್ಟು ತುಂಟತನ!

ಹನ್ನೊಂದು ವರ್ಷದ ಏಮಿಗೆ ಕಂದು ಬಣ್ಣದ ಕೂದಲಿತ್ತು. ಆಕೆಯ ಕಣ್ಣುಗಳೂ ಕಂದುಬಣ್ಣದವೇ. ತನ್ನ ಹದಿಮೂರು ವರ್ಷದ ಅಣ್ಣ ಬೋಬಿ ಮತ್ತು ತಂದೆ ರೋಬರ್ಟ್ ಇವರೊಂದಿಗೆ ಆಕೆ ಅಮೆರಿಕಾದ ಜೋನ್ಸ್‌ವಿಲ್ಲಿ ಎಂಬ ಚಿಕ್ಕ ಪಟ್ಟಣದಲ್ಲಿ ವಾಸಿಸುತ್ತಿದ್ದಳು. ಅವರ ಮನೆ ಶುಮೇಕರ್ ಡೈರಿಯ (ಕೀಲಾರ) ಒಂದು ಕಾರಿನ ಮನೆ (ಕೆರವಾನ್). ಅವಳ ತಂದೆ ಆ ಡೈರಿಯಲ್ಲಿ ಮೇನೇಜರನಾಗಿದ್ದ.

ಕೊಟ್ಟಿಗೆಯಲ್ಲಿ ದಿನಾಲೂ ಒಂದೆರಡು ದನಗಳಾದರೂ ಕರು ಈನುತ್ತಿದ್ದುವು. ಈ ಕರುಗಳನ್ನು ನೋಡುವುದು ಮಾತ್ರವಲ್ಲದೆ ಏಮಿಗೆ ತನ್ನ ಬೆಕ್ಕನ್ನು ನೋಡಿಕೊಳ್ಳುವುದು ಸಂತೋಷದ ಕೆಲಸವಾಗಿತ್ತು. ಅದು ಆಗ ತಾನೇ ಆರು ಮರಿಗಳನ್ನು ಹಾಕಿತ್ತು.

ಆದರೆ ಈ ಸಂತೋಷದ ನಡುವೆಯೂ ಅವಳಿಗೆ ದುಃಖವನ್ನು ತರುವ ಸಂಗತಿಯೊಂದಿತ್ತು. ಅದೇನೆಂದರೆ, ಆಕೆಯ ತಾಯಿ ಶಾನಾ ಆರು ತಿಂಗಳು ಹಿಂದೆ ಮನೆ ಬಿಟ್ಟು ಹೋಗಿದ್ದಳು. ಅವಳಿಗೆ ತನ್ನ ಮಕ್ಕಳ ಹತ್ತಿರ ಬಹಳ ಪ್ರೀತಿಯಿತ್ತು. ಆದರೆ, ಅಲ್ಲಿಯ ಕೆಲಸ ಮಾತ್ರ ಆಕೆಗೆ ಬಹಳ ಜಾಸ್ತಿ ಎಂದೆನಿಸ ತೊಡಗಿತ್ತು. ಅವಳ ಗಂಡ ರಾಬರ್ಟ್ ಬೆಳಗ್ಗೆ ಎರಡು ಗಂಟೆಗೆ ಡೈರಿಯ ಕೆಲಸಕ್ಕೆ ಹೋದರೆ ಮತ್ತೆ ಬರುವುದು ಎಂಟು ಗಂಟೆಗೆ. ಪುನಃ ಮಧ್ಯಾಹ್ನ ಎರಡು ಗಂಟೆಗೆ ಹೋದರೆ ಮತ್ತೆ ಬರುವುದು ರಾತ್ರಿ ಎಂಟು ಗಂಟೆಗೆ.

ಶಾನಾ ಮನೆ ಬಿಟ್ಟು ಹೋದದ್ದು ರಾಬರ್ಟ್‌ಗೂ ಬಹಳ ಬೇಸರ ತಂದಿತ್ತು. ಆತ ಚಿಕ್ಕಂದಿನಿಂದಲೂ ಡೈರಿಯಲ್ಲೇ ಬೆಳೆದು ಬಂದವನಾದ ಕಾರಣ ಡೈರಿಯ ಕೆಲಸ ಅವನಿಗೆ ಅಷ್ಟೊಂದು ಕಷ್ಟವೆಂದೆನಿಸುತ್ತಿರಲಿಲ್ಲ. ೩೨ ವರ್ಷಗಳಷ್ಟು ಹಿಂದಿನಿಂದಲೂ ಆತನಿಗೆ ಡೈರಿಯ ಕೆಲಸ ಮಾಡಿ ಗೊತ್ತಿತ್ತು. ಮೊದಲಿಗೆ ನ್ಯೂಯಾರ್ಕ್‌ನಲ್ಲಿದ್ದ ತನ್ನ ತಾಯಿತಂದೆಯರ ಡೈರಿಯಲ್ಲಿ ಕೆಲಸ ಮಾಡಿದುದರಿಂದ ಆತ ಒಳ್ಳೆ ನುರಿತ ಡೈರಿ ಕೆಲಸಗಾರನಾಗಿದ್ದ. ಇದಲ್ಲದೆ ಡೈರಿಯ ಒಡೆಯನಾದ ಶೂಮೇಕರ್ ಕೂಡ ಆತನಿಗೆ ಚಿಕ್ಕಂದಿನಿಂದಲೂ ಪರಿಚಿತನಾಗಿದ್ದ. ಹಾಗಾಗಿ ಬಿಡುವಿಲ್ಲದೆ ಇಡೀ ದಿವಸ ಕೆಲಸ ಮಾಡಬೇಕಾಗುವುದಾದರೂ ಆತ ಅದನ್ನು ಅಷ್ಟೊಂದು ಮನಸ್ಸಿಗೆ ಹಚ್ಚಿಕೊಳ್ಳುತ್ತಿರಲಿಲ್ಲ.

ಡೈರಿಯಲ್ಲಿದ್ದ ೧೫೦ ಹಸುಗಳ ಸಂಗೋಪನೆಯನ್ನು ರಾಬರ್ಟ್ ಬಹಳ ಜಾಗ್ರತೆಯಿಂದ ಮಾಡುತ್ತಿದ್ದ. ಅಲ್ಲದೆ ಅಲ್ಲಿ ಸಿಗುವ ಹಾಲು ಇತರ ಕಡೆಗಳಲ್ಲಿ ಸಿಗುವ ಹಾಲಿಗಿಂತ ಉತ್ತಮವಾಗಿರುವಂತೆ ನೋಡಿಕೊಳ್ಳುತ್ತಿದ್ದ. ತನ್ನ ಮಕ್ಕಳಾದ ಏಮಿ ಮತ್ತು ಬೋಬಿ ತನ್ನ ಹಾಗೆ ವರ್ಷದಲ್ಲಿ ೩೬೫ ದಿನವೂ ಕೆಲಸ

ಜುಲೈ ೧೯೯೮ರ ರೀಡರ್ಸ್ ಡೈಜೆಸ್ಟ್ ಸಂಚಿಕೆಯಲ್ಲಿ ಪ್ರಕಟವಾದ ಹೆನ್ರಿ ಹ್ಯೂಟ್ ಅವರ "ಫ್ರೀ ಟು ಕಿಲ್" ಲೇಖನದ ಸಂಗ್ರಹಾನುವಾದ

ಮಾಡಿಕೊಂಡಿರದೆ ಒಳ್ಳೆಯ ಜೀವನ ನಡೆಸ ಬೇಕೆಂದು ಆತ ಆಶಿಸುತ್ತಿದ್ದ.

ಆತನ ಮಕ್ಕಳು ಡೈರಿಯಲ್ಲಿ ಮಾಡುತ್ತಿದ್ದ ಕೆಲಸವೆಂದರೆ ಅಲ್ಲಿಯ ಕರುಗಳ ಜತೆ ಆಡುತ್ತಾ ಅವಕ್ಕೆ ಒಮ್ಮೊಮ್ಮೆ ತಿನ್ನಲು ಹುಲ್ಲು ಕೊಡು ವುದು ಮಾತ್ರ. ಇದು ಅವರಿಗೆ ವಿನೋದದ ಕೆಲಸವಾಗಿತ್ತು.

ಬೋಬಿಯೂ ತನ್ನ ತಂಗಿಯನ್ನು ಪ್ರೀತಿ ಯಿಂದ ನೋಡಿಕೊಳ್ಳುತ್ತಿದ್ದ. ಅವರಿಬ್ಬರೂ ಜತೆಯಲ್ಲಿ ಶಾಲೆಗೆ ಹೋಗಿ ಬರುತ್ತಿದ್ದರು. ಎಮಿ ಬೆಳಗ್ಗಿನ ತಿಂಡಿಯನ್ನು ಇಬ್ಬರಿಗೂ ತಯಾರಿಸುತ್ತಿದ್ದಳು. ಅವರ ತಾಯಿ ಅವರನ್ನು ಬಿಟ್ಟು ಹೋದ ಬಳಿಕ ಮಕ್ಕಳಿಬ್ಬರೂ ಹೆಚ್ಚಿನ ವೇಳೆಯನ್ನು ಜತೆಯಲ್ಲಿ ಕಳೆಯುತ್ತಿದ್ದರು. ಜಾಸ್ತಿ ಜಗಳಾಡುತ್ತಿರಲಿಲ್ಲ.

ಶಾಲೆಗೆ ಹೋಗಲು ಎಮಿಗೆ ಬಹಳ ಇಷ್ಟ. ಅಲ್ಲಿ ಚೆನ್ನಾಗಿ ಕಲಿತು ಅನಂತರ ಕಾಲೇಜಿಗೂ ಹೋಗಬೇಕೆಂದು ಅವಳ ಆಸೆಯಾಗಿತ್ತು. ಅವಳೊಮ್ಮೆ ಶಾಲೆಯ ಪ್ರಬಂಧದಲ್ಲಿ ಈ ರೀತಿ ಬರೆದಿದ್ದಳು.: ''ನಾನು ಕಾಲೇಜಿನಲ್ಲಿ ಕಲಿತು ನರ್ಸ್ ಆಗಬೇಕು. ಅನಂತರ ಶ್ರೀಮಂತ ನಾಗಿರುವ ಒಬ್ಬ ಸುಂದರ ಯುವಕನನ್ನು ಮದುವೆಯಾಗಬೇಕು. ನನಗೆ ಒಂದು ಕಾರು ಬೇಕು ಮತ್ತು ಎರಡು ಮಹಡಿಗಳಿರುವ ಮನೆ ಬೇಕು. ಇಬ್ಬರು ಮಕ್ಕಳು ಬೇಕು. ಸತ್ತನಂತರ ನಾನು ಸ್ವರ್ಗಕ್ಕೆ ಹೋಗಬೇಕು.''

ಆ ವರ್ಷದ ಆಗಸ್ಟ್ ತಿಂಗಳಿಗೆ ಆಕೆಗೆ ಹನ್ನೆರಡು ವರ್ಷ ತುಂಬುತ್ತದೆ. ತನ್ನ ಇತರ ಗೆಳತಿಯರ ಹತ್ತಿರ ಇರುವಂತಹ ಪರ್ಸಿನ ಹಾಗಿರುವ ಪುಸ್ತಕ ಇರಿಸುವ ಚೀಲ ಆಕೆಗೆ ಬೇಕಿತ್ತು. ಅದಕ್ಕೋಸ್ಕರ ಅಷ್ಟು ದಿವಸ ಹಣ ಉಳಿಸಿ ತಾನು ಹಂಬಲಿಸುತ್ತಿದ್ದ ಚೀಲವನ್ನು ಕೊಂಡು ತಂದಿದ್ದಳು. ಈಗ ರಜ ಮುಗಿದು ಶಾಲೆ ಸುರುವಾಗುವುದನ್ನೇ ಕಾಯುತ್ತಿದ್ದಳು.

ಅವಳ ತಂದೆ ರಾಬರ್ಟ್ ಹೇಳುತ್ತಿದ್ದ: ''ಈ ವರ್ಷ ಎಮಿಗೆ ಶಾಲೆಗೆ ಹೋಗಲು ಇಷ್ಟೊಂದು ಆತುರವಿರಲು ಕಾರಣ ಬೇರೆಯೇ ಇದೆ. ತನ್ನ ಹೊಸ ಚೀಲವನ್ನು ಹಿಡಿದುಕೊಂಡು ಆಕೆಗೆ ಸ್ಕೂಲ್ ಬಸ್ ಹತ್ತಬೇಕಾಗಿದೆ.''

ರಾತ್ರಿಯ ಪ್ರಯಾಣಿಕ

ಸ್ಟೇಟ್‌ವಿಲ್ಲೆಯ ದಿನಪತ್ರಿಕೆಯಲ್ಲಿ ಬೇರೆ ಬೇರೆ ರೀತಿಯ ಜಾಹೀರಾತುಗಳು ದಿನಾಲೂ ಬರುತ್ತಿದ್ದುವು. ೧೯೯೫ ಫೆಬ್ರುವರಿಯಲ್ಲಿ ಒಂದು ದಿನ, ಡೈರಿಯಲ್ಲಿ ಕೆಲಸ ಮಾಡುವವರು ಬೇಕಿದ್ದಾರೆ ಎಂಬ ಜಾಹೀರಾತು ಬಂತು. ಜಾನ್ ಶೂಮೇಕರ್ ಆ ಜಾಹೀರಾತನ್ನು ನೀಡಿದ್ದ. ಅವನ ಮೇನೇಜರನಾಗಿದ್ದ ರಾಬರ್ಟ್‌ಗೆ ಸಹಾಯಕನೊಬ್ಬನನ್ನು ನೇಮಿಸುವುದಕ್ಕಾಗಿ ಆತ ಈ ಜಾಹೀರಾತನ್ನು ಕೊಟ್ಟಿದ್ದ.

ಹಾರ್ಮನಿ ಎಂಬ ಚಿಕ್ಕ ಪಟ್ಟಣದಲ್ಲಿ ತನ್ನ ತಾಯಿಯೊಂದಿಗೆ ವಾಸಿಸುತ್ತಿದ್ದ ಇಪ್ಪತ್ತೊಂದು ವರ್ಷದ ಆರ್ಕಿಬಿಲ್ಲಿಂಗ್ಸ್ ಆ ಜಾಹೀರಾತನ್ನು ಗಮನಿಸಿದ. ಡೈರಿಯಲ್ಲಿ ಕೆಲಸ ಮಾಡಿ ಅನುಭವವಿದ್ದ ಆರ್ಕಿ ಒಳ್ಳೆ ಗಟ್ಟಿಮುಟ್ಟಾಗಿದ್ದ. ಅವನ ಕೈಗಳು ಮತ್ತು ತೋಳುಗಳು ಬಹಳ ಬಲಿಷ್ಠವಾಗಿದ್ದುವು. ಅವನ ಮೈಬಣ್ಣ ಮಾತ್ರ ಬಹಳ ಬಿಳಿಯದಾಗಿದ್ದು. ಕಡು ಕಪ್ಪು ಬಣ್ಣದ ಅವನ ಕೂದಲು ಮತ್ತು ಕಣ್ಣುಗಳು ಎದ್ದು ಕಾಣಿಸುತ್ತಿದ್ದುವು.

ಡೈರಿಗಳಲ್ಲಿ ಕೆಲಸ ಮಾಡುವುದು ಆರ್ಕಿಗೆ ಬಹಳ ಇಷ್ಟವಾಗಿತ್ತು. ಬೆಳಗ್ಗಿನ ಜಾವದಲ್ಲಿ ಮತ್ತು ಹಗಲು ಹೊತ್ತಿನಲ್ಲಿ ಮಾತ್ರ ಅಲ್ಲಿ ಕೆಲಸ ಮಾಡಬೇಕಾಗಿರುತ್ತಿತ್ತು. ಹಾಗಾಗಿ ರಾತ್ರಿ ಹೊತ್ತು ಆತನಿಗೆ ಬೇಕಾದೆಡೆಗಳಲ್ಲಿ ತಿರುಗಾಡು ತ್ತಿರಲು ಸಾಧ್ಯವಿತ್ತು. ಸಾಮಾನ್ಯವಾಗಿ ಆತ ಸ್ವಲ್ಪವೂ ಸದ್ದು ಮಾಡದೆ ನಡೆದುಕೊಂಡೇ ತಿರುಗಾಡುತ್ತಿದ್ದ. ಕೆಲವೊಮ್ಮೆ ತನ್ನ ಸೈಕಲ್‌ನಲ್ಲಿ ಹೋಗುವುದೂ ಇತ್ತು.

ಟೆಲಿಫೋನಿನ ಮೂಲಕ ಆರ್ಕಿ ಶೂಮೇಕರನನ್ನು ಸಂಪರ್ಕಿಸಿ, ಕೆಲಸಕ್ಕೆ ಸೇರಲು ತಾನು ಸಿದ್ಧವಿರುವು ದಾಗಿ ತಿಳಿಸಿದ. ಶೂಮೇಕರ್ ತನ್ನ ಹೆಂಡತಿ ಮತ್ತು ನಾಲ್ಕು ಮಂದಿ ಹೆಣ್ಣುಮಕ್ಕಳೊಂದಿಗೆ

ವಾಸಿಸುತ್ತಿದ್ದನಾದ ಕಾರಣ ಹೊಸಬರನ್ನು ಕೆಲಸಕ್ಕೆ ನೇಮಿಸುವ ಮೊದಲು ಸಾಧ್ಯವಾದಷ್ಟು ಜಾಗರೂಕನಾಗಿರುತ್ತಿದ್ದ. ಆರ್ಕಿಯೊಂದಿಗೆ ಆತನ ಡೈರಿಯ ಅನುಭವಗಳನ್ನು ಕೇಳಿ ತಿಳಿದು ಕೊಂಡುದು ಮಾತ್ರವಲ್ಲದೆ ಅವನಿಗೆ ದೃಢಪತ್ರ ವನ್ನು ಕೊಡಬಲ್ಲವರ ಹೆಸರು ಮತ್ತು ವಿಳಾಸಗಳನ್ನೂ ಕೇಳಿ ತಿಳಿದುಕೊಂಡಿದ್ದ. ಮತ್ತು ಇವೆಲ್ಲವನ್ನೂ ಜಾಗ್ರತೆಯಿಂದ ಆತ ಬರೆದಿಟ್ಟುಕೊಂಡಿದ್ದ.

ಫೋನಿನಲ್ಲಿ ಮಾತಾಡಿದ ಮೇಲೆ ಆರ್ಕಿ ತನ್ನ ತಾಯಿಯ ಹತ್ತಿರ, "ಈ ಶೂಮೇಕರ್ ಡೈರಿ ಇಲ್ಲಿಂದ ಅಷ್ಟೊಂದು ದೂರ- ೧೯೦ ಕಿಲೋಮೀಟರುಗಳಷ್ಟು ದೂರ-ಇರುವುದು ಒಳ್ಳೆಯದೇ ಆಯಿತು" ಎಂದು ಹೇಳಿದ. ಆತನಿಗೆ ಪೊಲೀಸರಿಂದಾಗಿ ಅಲ್ಲಿ ಇರುವುದೇ ಬಹಳ ಕಷ್ಟವಾಗಿತ್ತು. ಅಷ್ಟು ದೂರ ಕೆಲಸ ಸಿಕ್ಕಿದರೆ ಅಲ್ಲಿ ಯಾರಿಗೂ ತನ್ನ ಹಳೆಯ ಕತೆಗಳು ಗೊತ್ತಾಗಲಾರವೆಂದು ಆತ ಭಾವಿಸಿದ.

ಆರ್ಕಿ ಬಿಲ್ಲಿಂಗ್ ಹುಟ್ಟಿದಂದಿನಿಂದಲೂ ಸ್ವಚ್ಛಂದವಾಗಿ ಬೆಳೆದಿದ್ದ. ಅವನು ಹುಟ್ಟಿದಾಗ ಅವನ ತಂದೆ ಹಾರ್ವಿಕಾಸ್‌ಗೆ ೭೦ ವರ್ಷ. ಆತ ಕಳ್ಳಭಟ್ಟಿ ವ್ಯಾಪಾರ ಮಾಡುತ್ತಿದ್ದ. ಆತನಿಗೆ ಹನ್ನೆರಡು ಜನ ವಿವಾಹದಿಂದ ಹುಟ್ಟಿದ ಮಕ್ಕಳಿದ್ದರು. ಆರ್ಕಿ ವಿವಾಹದಿಂದ ಹೊರಗೆ ಹುಟ್ಟಿದವನು. ಹಾಗಾಗಿ ಅವನಿಗೆ ಬಿಲ್ಲಿಂಗ್ಸ್ ಎಂಬುದಾಗಿ ತಾಯಿಯ ಹೆಸರು ಮಾತ್ರ ಸಿಕ್ಕಿತ್ತು. ಅವನ ಹಾಗೆಯೇ ಅವನ ತಾಯಿಗೆ ಇನ್ನಿಬ್ಬರು ಮಕ್ಕಳಿದ್ದರು.

ಆರ್ಕಿ ಹುಟ್ಟಿದ್ದು ಮರದ ದಿಮ್ಮಿಗಳಿಂದ ಮಾಡಿದ್ದ ಒಂದು ಮನೆಯಲ್ಲಿ. ಆತನಿಗೆ ಆರು ವರ್ಷಗಳಾಗುವಷ್ಟು ಹೊತ್ತಿಗೆ ಅವನ ತಾಯಿ ಮನೆಯನ್ನು ಬೇರೆಡೆಗೆ ಬದಲಾಯಿಸಿದಳು. ಆ ಮನೆ ಒಂದು ಶಾಲೆಯ ಹತ್ತಿರವೇ ಇದ್ದಿತಾದರೂ ಆರ್ಕಿಗೆ ಕಲಿಯುವಿಕೆಯಲ್ಲಿ ಜಾಸ್ತಿ ಶ್ರದ್ಧೆ ಬರಲಿಲ್ಲ. ಚರ್ಚಿನಿಂದಲೂ ಆತ ದೂರವೇ ಉಳಿದಿದ್ದ.

ಆರ್ಕಿ ಕಲಿಯುವಿಕೆಯನ್ನು ಅರ್ಧದಲ್ಲೇ ನಿಲ್ಲಿಸಿ ಕುಡಿಯುವುದು, ಮರಿಜುವಾನಾದ ಹೊಗೆ ಸೇದುವುದು ಇತ್ಯಾದಿಗಳಲ್ಲಿ ತನ್ನನ್ನು ತೊಡಗಿಸಿಕೊಂಡ. ಅವನ ತಾಯಿಯೂ ಕೆಲವೊಮ್ಮೆ ಇದರಲ್ಲಿ ಅವನೊಂದಿಗೆ ಸೇರಿಕೊಳ್ಳುತ್ತಿದ್ದಳು. ಒಮ್ಮೆ ಆರ್ಕಿ ತನ್ನ ತಾಯಿಯ ಮನೆಯನ್ನು ಬಿಟ್ಟು, ತನ್ನ ಅಣ್ಣ ಕೀತ್ ಎಂಬುವನೊಂದಿಗೆ ವಾಸಿಸತೊಡಗಿದ. ಅವನ ಅಣ್ಣ ತನ್ನ ಪ್ರೇಯಸಿಯೊಂದಿಗೆ ವಾಸಿಸುತ್ತಿದ್ದ. ಒಂದು ರಾತ್ರಿ ಆಕೆ ಬೊಬ್ಬೆ ಹಾಕಿದ್ದು ಕೇಳಿ ಕೀತ್‌ಗೆ ಎಚ್ಚರವಾಯಿತು. ಎದ್ದು ನೋಡಿದಾಗ ಆರ್ಕಿ ಆತನ ಪ್ರೇಯಸಿಯ ಹಾಸಿಗೆಯಲ್ಲಿದ್ದುದು ಕಾಣಿಸಿತು. ಒಡನೆಯೇ ಆತ ಆರ್ಕಿಗೆ ಚನ್ನಾಗಿ ಹೊಡೆದು ಆತನನ್ನು ಮನೆಯಿಂದ ಹೊರಗೆ ಹಾಕಿದ. ಕೆಲವು ತಿಂಗಳುಗಳ ಅನಂತರ ಆತ ಪುನಃ ಆರ್ಕಿಗೆ ತನ್ನ ಮನೆಯಲ್ಲಿರಲು ಇನ್ನೊಂದು ಚಾನ್ಸ್ ಕೊಟ್ಟ.

೧೮ನೇ ಹುಟ್ಟುಹಬ್ಬಕ್ಕೆ ಒಂದು ತಿಂಗಳಿರುವಾಗ ಆರ್ಕಿ ತನ್ನ ಮೊದಲನೆಯ ದೊಡ್ಡ ಅಪರಾಧ ಮಾಡಿದ. ಮಿತಿಮೀರಿದ ವೇಗದಿಂದ ಕಾರನ್ನು ಓಡಿಸುತ್ತಿರುವಾಗ ಪೊಲೀಸರು ನಿಲ್ಲಿಸಲು ಹೇಳಿದರೂ ನಿಲ್ಲಿಸದೆ ಜೋರಾಗಿ ಓಡಿಸಿ ಅನಂತರ ಸಿಕ್ಕಿಬಿದ್ದ. ತನಿಖೆ ನಡೆಸಿದಾಗ ಅವನ ಹತ್ತಿರ ಡ್ರೈವಿಂಗ್ ಲೈಸೆನ್ಸ್ ಇರಲಿಲ್ಲ ಮತ್ತು ಜೇಬಿನಲ್ಲಿ ಮರಿಜುವಾನಾ (ಡ್ರಗ್) ಇತ್ತು. ನ್ಯಾಯಾಲಯದಲ್ಲಿ ಆತನಿಗೆ ಹತ್ತು ಸಾವಿರ ರೂಪಾಯಿ ದಂಡ ಮತ್ತು ಆರು ತಿಂಗಳ ಜೈಲುವಾಸದ ಶಿಕ್ಷೆಯಾಯಿತು. ಆದರೆ ಆತನನ್ನು ಜೈಲಿಗೆ ಹಾಕದೆ ಎರಡು ವರ್ಷಗಳ ವಟ್ಟಿಗೆ ನಿರೀಕ್ಷಣಾ ಜಾಮೀನಿನಲ್ಲಿರಿಸಲಾಯಿತು. ಆ ನಿರೀಕ್ಷಣೆಯ ಅವಧಿ ೧೯೯೨ ನೇ ಇಸವಿಯ ಏಪ್ರಿಲ್ ೬ರಂದು ಸುರುವಾಯಿತು.

ಅನಂತರ ಅವನು ಹಲವಾರು ತಪ್ಪುಗಳನ್ನು ಮಾಡಿದರೂ ಅವನ ಈ ನಿರೀಕ್ಷಣಾ ಜಾಮೀನು ರದ್ದಾಗಲಿಲ್ಲ. ಏಪ್ರಿಲ್ ೧೯ರಂದು ಮಧ್ಯರಾತ್ರಿ

ಅವನ ಅಣ್ಣ ಕೀತ್ ಕೋಣೆಯ ಹೊರಗೆ ಏನೋ ಸದ್ದು ಕೇಳಿಸುತ್ತದೆಂದು ನೋಡಲು ಹೋದಾಗ ಅಲ್ಲಿ ಆರ್ಕಿ ಒಂದು ಕೋಪಿ ಹಿಡಿದುಕೊಂಡು ನಿಂತಿದ್ದ. "ಏನಪ್ಪಾ" ಎಂದು ಕೇಳುವ ಮೊದಲೇ ಆತ ಕೀತ್‌ನ ಮೇಲೆ ಗುಂಡು ಹಾರಿಸಿದ. ಅದು ಕೀತ್‌ನ ಕೈಯನ್ನು ಛೇದಿಸಿತು. ಕೂಡಲೇ ಆ ಕೋವಿಯನ್ನು ಕೀತ್ ಆತನ ಕೈಯಿಂದ ಎಳೆದು ತೆಗೆದ. ಕೀತ್‌ನ ಹೆಂಡತಿ ಅವನನ್ನು ಆಸ್ಪತ್ರೆಗೆ ಸೇರಿಸಿದಳು. ಅಲ್ಲಿ ಆತನಿಗೆ ಗುಂಡಿನಿಂದಾದ ಗಾಯ ವಾಸಿಯಾಗಲು ಕೆಲವು ದಿನಗಳೇ ಬೇಕಾದುವು.

ಅಣ್ಣತಮ್ಮಂದಿರೊಳಗೆ ಆ ರಾತ್ರಿ ಜಗಳ ವೇನೂ ಆಗಿರಲಿಲ್ಲ. ಹಾಗಿದ್ದರೂ ಆರ್ಕಿ ಕೀತ್‌ನ ಮೇಲೆ ಗುಂಡು ಹಾರಿಸಿದುದು ಯಾಕೆ? ಬಹುಶಃ ತನ್ನನ್ನು ಕೊಂದು ತನ್ನ ಪ್ರೇಯಸಿ ಯನ್ನು ವಶಪಡಿಸಿಕೊಳ್ಳಬೇಕೆಂದು ಆತ ನಿರ್ಧರಿಸಿರಬೇಕೆಂದು ಕೀತ್‌ನ ಊಹೆ.

ಪೊಲೀಸರು ಆರ್ಕಿಯನ್ನು ದಸ್ತಗಿರಿ ಮಾಡಿ ಆತನ ಮೇಲೆ ಕೀತ್‌ನನ್ನು ಕೊಲ್ಲಲು ಪ್ರಯತ್ನಿಸಿದನೆಂಬ ಆರೋಪ ಹೊರಿಸಿದರು. ಆದರೆ ಮರುದಿನವೇ ಆತನನು ಜಾಮೀನಿನಮೇಲೆ ಬಿಟ್ಟುಬಿಟ್ಟರು ಮತ್ತು ಎಂಟು ತಿಂಗಳ ನಂತರ ಕೀತ್ ಮತ್ತು ಅವನ ಪ್ರೇಯಸಿ ಆತನ ಮೇಲೆ ಆರೋಪ ಹೊರಿಸದುದರಿಂದಾಗಿ ಆ ಆರೋಪ ಬಿದ್ದು ಹೋಯಿತು.

ಈ ಘಟನೆ ಆರ್ಕಿಗೆ ನಿರೀಕ್ಷಣಾ ಜಾಮೀನು ಕೊಟ್ಟು ಹತ್ತು ದಿವಸ ಕಳೆಯುವುದರೊಳಗೆ ಸಂಭವಿಸಿತ್ತಾದರೂ ಆತನ ಜಾಮೀನನ್ನು ರದ್ದು ಮಾಡುವ ಪ್ರಯತ್ನ ಕೋರ್ಟಿನಲ್ಲಿ ನಡೆದಿರಲಿಲ್ಲ.

೧೯೯೩ರಲ್ಲಿ ಆರ್ಕಿ ಇನ್ನೂ ಕೆಲವು ಭೀಕರ ಅಪರಾಧಗಳನ್ನು ಎಸಗಿದ. ಮೇ ತಿಂಗಳಲ್ಲಿ ಒಂದು ಅಂಗಡಿಯಲ್ಲಿ ಜಗಳ ಮಾಡಿ ಒಂದು ಸುತ್ತಿಗೆಯಿಂದ ಅಲ್ಲಿದ್ದವನೊಬ್ಬನ ತಲೆಯ ಮೇಲೆ ಹಲವು ಬಾರಿ ಹೊಡೆದಿದ್ದ. ಈ ಅಪರಾಧದ ವಿಚಾರಣೆ ನ್ಯಾಯಾಲಯದಲ್ಲಿ ನಡೆಯಿತಾದರೂ ಆರ್ಕಿ ನ್ಯಾಯಾಲಯದ ವೆಚ್ಚವನ್ನು ಮಾತ್ರ ಭರಿಸಬೇಕಾಯಿತು.

ಸೆಪ್ಟೆಂಬರ್ ತಿಂಗಳಲ್ಲಿ ಡ್ರೈವಿಂಗ್ ಲೈಸೆನ್ಸ್ ಇಲ್ಲದೆ, ರಿಜಿಸ್ಟ್ರೇಶನ್ ಇಲ್ಲದೆ ಮತ್ತು ಇನ್ಶೂರೆನ್ಸ್ ಇಲ್ಲದೆ ಕಾರು ಓಡಿಸುತ್ತಿದ್ದಾಗ ಆರ್ಕಿ ಸಿಕ್ಕಿಬಿದ್ದಿದ್ದ. ನ್ಯಾಯಾಧೀಶರು ಅವನಿಗೆ ೨೫ ಡಾಲರ್ (ಸಾವಿರ ರೂಪಾಯಿ) ದಂಡ ಮತ್ತು ಒಂದು ತಿಂಗಳ ಜೈಲು ಶಿಕ್ಷೆ ವಿಧಿಸಿದರಾದರೂ ಜೈಲು ಶಿಕ್ಷೆಯನ್ನು ಅಮಾನತ್ತಿನಲ್ಲಿರಿಸಿದರು. ಏನು ಮಾಡಿದರೂ ತನಗೆ ಶಿಕ್ಷೆಯಾಗುವುದಿಲ್ಲ ವೆಂಬ ಭಾವನೆ ಅವನಲ್ಲಿ ಬೇರೂರತೊಡಗಿತು.

೧೯೯೪ರಲ್ಲಿ ಆತ ಪುನಃ ಡ್ರೈವಿಂಗ್ ಲೈಸೆನ್ಸ್ ಇಲ್ಲದೆ ಕಾರು ಓಡಿಸುವಾಗ ಸಿಕ್ಕಿ ಬಿದ್ದ. ಅದೇ ವರ್ಷ ಆಗಸ್ಟ್‌ನಲ್ಲಿ ಇನ್ನೊಮ್ಮೆ ಅದೇ ಕಾರಣಕ್ಕಾಗಿ ಮತ್ತು ಪೊಲೀಸರು ನಿಲ್ಲಿಸಲು ಹೇಳಿದರೂ ನಿಲ್ಲಿಸದೆ ಓಡಿಸಿದುದಕ್ಕಾಗಿ ಸಿಕ್ಕಿ ಬಿದ್ದ. ಈ ಬಾರಿ ಆತನಿಗೆ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಎರಡು ತಿಂಗಳ ಜೈಲು ವಾಸವನ್ನು ಅನುಭವಿಸ ಬೇಕಾಯಿತು.

ದಾರಿ ತಪ್ಪಿದ್ದು

೧೯೯೨ ರಿಂದ ೧೯೯೪ರವರೆಗಿನ ಅವಧಿಯಲ್ಲಿ ೩೪ ತಿಂಗಳು ಆತ ಎರಡು ಬೇರೆ ಬೇರೆ ಹಾಲಿನ ಡೈರಿಗಳಲ್ಲಿ ಕೆಲಸ ಮಾಡಿದ್ದ. ಬಿಡುವಿನ ವೇಳೆಯಲ್ಲೆಲ್ಲ ಆತ ಊರಿನಲ್ಲಿ ಸುತ್ತಾಡುತ್ತ ಜನರಿಗೆ ತೊಂದರೆ ಕೊಡುತ್ತಿದ್ದ.

ಅವನು ಕೆಲಸ ಮಾಡುತ್ತಿದ್ದ ಮೊದಲನೇ ಡೈರಿಗೂ ಮತ್ತು ಅವನ ಮನೆಗೂ ನಡುವೆ ಡೇನಿಯಲ್ ಅಲೆನ್ ಎಂಬುವನ ತೋಟವಿತ್ತು. ಅಲೆನ್‌ಗೆ ೧೨ ಮತ್ತು ೧೭ ವರ್ಷದ ಇಬ್ಬರು ಹುಡುಗಿಯರಿದ್ದರು. ಒಂದು ರಾತ್ರಿ ಅವರೆಲ್ಲ ಚರ್ಚಿಗೆ ಹೋಗಿದ್ದಾಗ ಯಾರೋ ಹಿಂದಿನ ಬಾಗಿಲನ್ನು ಮುರಿದು ಒಳಗೆ ಬಂದಿದ್ದರು. ಕಳ್ಳತನವೇನೂ ಆಗಿರಲಿಲ್ಲ. ಆದರೆ ಹುಡುಗಿಯರ ಕೋಣೆಯಲ್ಲಿ ಸಾಮಾನುಗಳು ಅಸ್ತವ್ಯಸ್ತವಾಗಿರುವುದು ಕಾಣಿಸಿತು.

ಇದಲ್ಲದೆ ಹುಡುಗಿಯರು ಮಲಗುವ ಕೋಣೆಯ ಹಿಂದುಗಡೆ ಗೋಡೆಗೆ ಒಂದು ಏಣಿಯನ್ನು ತಗಲಿಸಿರುವುದು ಕಾಣಿಸಿತು. ಕೆಲವು ದಿನಗಳಿಂದ ರಾತ್ರಿ ಹೊತ್ತು ಹುಡುಗಿಯರಿಗೆ ಹೊರಗಿನಿಂದ ಏನೋ ಶಬ್ದ ಕೇಳಿಸುತ್ತಿತ್ತು. ಆದರೆ ಅದು ರಾತ್ರಿಯ ಶಬ್ದವಿರಬೇಕೆಂದು ಅವರು ಸುಮ್ಮನಿದ್ದರು.

ಈ ವಿಷಯದಲ್ಲಿ ಪೋಲೀಸರು ಅಲ್ಪ ಸ್ವಲ್ಪ ವಿಚಾರಣೆ ನಡೆಸಿದರೂ ಅದು ಅಲೆನ್‌ಗೆ ಸಮಾಧಾನ ತರಲಿಲ್ಲ. ಆತ ರಾತ್ರಿ ಹೊತ್ತು ಕೋವಿ ಹಿಡಿದುಕೊಂಡು ಯಾರು ಬರುವರೆಂದು ತಿಳಿಯಲು ತಾನೇ ಹೊರಗೆ ಕಾದು ಕುಳಿತ. ಯಾರೋ ಮನೆಯ ಹಿಂಭಾಗದಲ್ಲಿ ನಡೆದು ಬರುವುದು ಕಾಣಿಸಿತು. ಕರೆದರೂ ಉತ್ತರ ಬಾರದಿದ್ದಾಗ ಅಲೆನ್ ಗುಂಡು ಹಾರಿಸಿದ. ಕತ್ತಲೆಯಲ್ಲಿ ಬಂದವನು ಓಡಿ ಹೋದುದು ಕಾಣಿಸಿತು. ಅನಂತರ ಹುಡುಕಿದಾಗ ಓಡಿ ಹೋದವನ ಜಾಕೆಟ್ ಅಲ್ಲೇ ಬಿದ್ದುಕೊಂಡಿತ್ತು. ಅದರ ಕಾಲರ್‌ನಲ್ಲಿ ''ಆರ್ಕಿ'' ಎಂದು ಬರೆದಿತ್ತು.

ವಿಚಾರಣೆ ನಡೆಸಿದಾಗ ಆ ಜಾಕೆಟ್ ಹತ್ತಿರದ ಡೈರಿಯಲ್ಲಿ ಕೆಲಸ ಮಾಡುವ ಆರ್ಕಿ ಬಿಲ್ಲಿಂಗ್ಸ್‌ನದೇ ಎಂಬ ವಿಷಯ ಸ್ಪಷ್ಟವಾಯಿತು. ಆತನನ್ನು ಪ್ರಶ್ನಿಸಿದಾಗ ಮೊದಲಿಗೆ ತಾನು ಅಲ್ಲಿಗೆ ಹೋದುದನ್ನು ಅಲ್ಲಗಳೆದನಾದರೂ ಕೊನೆಗೆ ತನ್ನ ತಪ್ಪನ್ನು ಒಪ್ಪಿದ. ಅದಕ್ಕೆ ಆತನಿಗೆ ೪೫ ದಿನಗಳ ಸೆರೆಮನೆ ವಾಸ ದೊರಕಿತು. ಅದಲ್ಲದೆ ಬಾಗಿಲನ್ನು ಒಡೆದು ಅಲೆನ್‌ನ ಮನೆಯೊಳಗೆ ಹೋದುದಕ್ಕಾಗಿ ೩೬ ತಿಂಗಳ ಶಿಕ್ಷೆಯಾಯಿತು. ಹೀಗಿದ್ದರೂ ಅವನನ್ನು ಜೈಲಿಗೆ ಕಳುಹಿಸದೆ ನಿರೀಕ್ಷಣಾ ಜಾಮೀನಿನಲ್ಲಿರಿಸಲಾಯಿತು. ಕೋರ್ಟಿನ ವೆಚ್ಚ ಮತ್ತು ಅಲೆನ್‌ನ ಮನೆಯವರಿಗೆ ೫೦ ಸಾವಿರ ರುಪಾಯಿ ಪರಿಹಾರ ಇಷ್ಟು ಮಾತ್ರ ಕೊಡಬೇಕಾಯಿತು.

ಆರ್ಕಿ ತಲೆ ಸರಿಯಿಲ್ಲದುದರಿಂದಾಗಿ ಹೀಗೆ ಮಾಡುತ್ತಿರಬಹುದೇನೋ ಎಂಬ ಸಂಶಯದ ಮೇಲೆ ಆತನನ್ನು ಮೆಂಟಲ್ ಆಸ್ಪತ್ರೆಯಲ್ಲಿ ಪರೀಕ್ಷಿಸಲಾಯಿತು. ಅಲ್ಲಿನ ಲೋಯ್ ಡಿವೈನ್ ಎಂಬ ಡಾಕ್ಟರ್ ಆತನನ್ನು ಪರೀಕ್ಷಿಸಿ ಆತ ಇತರರಿಗೆ ತೊಂದರೆ ಕೊಡುವಷ್ಟು ಅಪಾಯದ ವ್ಯಕ್ತಿಯಲ್ಲ . ಹಾಗಾಗಿ ಅವನಿಗೆ ಯಾವ ಚಿಕಿತ್ಸೆಯೂ ಬೇಕಾಗಿಲ್ಲ ಎಂದು ಹೇಳಿದ.

ಆರ್ಕಿಯೊಂದಿಗೆ ಫೋನಿನಲ್ಲಿ ಮಾತನಾಡಿದ ದಿವಸ ಶೂಮೇಕರ್‌ನಿಗೆ ಇದೊಂದು ವಿಷಯವೂ ಗೊತ್ತಿರಲಿಲ್ಲ. ಆರ್ಕಿಯ ಮಾತು ಕೇಳಿ ಖುಶಿಯಾಗಿ ಅವನನ್ನು ಕೆಲಸಕ್ಕೆ ತೆಗೆದುಕೊಳ್ಳಲು ಆತ ನಿರ್ಧರಿಸಿದ್ದ.

ಅನಂತರ ಆರ್ಕಿ ತನಗೆ ಪರಿಚಿತರೆಂದು ಹೇಳಿದವರನ್ನು ವಿಚಾರಿಸಿದಾಗ ಅವರಲ್ಲಿ ಒಬ್ಬ ಸಮಾಧಾನಕರವಾದ ಉತ್ತರ ಕೊಟ್ಟಿದ್ದ. ಆದರೆ ಇನ್ನೊಬ್ಬ ಆರ್ಕಿಯ ವಿಷಯ ಏನನ್ನು ಹೇಳುವುದಕ್ಕೂ ಸಿದ್ಧನಿರಲಿಲ್ಲ. ಆತ ಆರ್ಕಿ ಕೆಲಸ ಮಾಡುತ್ತಿದ್ದ ಡೈರಿಯ ಯಜಮಾನನಾಗಿದ್ದ. ನಿಜಕ್ಕೂ ಆತ ಆರ್ಕಿಯನ್ನು ಕೆಲಸದಿಂದ ತೆಗೆದು ಹಾಕಿದ್ದ. ರಾತ್ರಿಹೊತ್ತು ಮಲಗುವ ಕೋಣೆಯ ಹತ್ತಿರ ನಿಂತುಕೊಂಡು ಕದ್ದು ನೋಡುತ್ತಿದ್ದನೆಂಬ ಆಪಾದನೆಯೇ ಇದಕ್ಕೆ ಕಾರಣವಾಗಿತ್ತು. ಆದರೆ ಇದನ್ನಾತ ಶೂಮೇಕರನಿಗೆ ತಿಳಿಸಲಿಲ್ಲ.

ಯಾರೂ ಆರ್ಕಿಯ ವಿಷಯ ಕೆಟ್ಟುದೇನೂ ಹೇಳಿರಲಿಲ್ಲವಾದ ಕಾರಣ, ಶೂಮೇಕರ್ ಆತನನ್ನು ಕೆಲಸಕ್ಕೆ ತೆಗೆದುಕೊಳ್ಳಲು ನಿರ್ಧರಿಸಿದ. ಅವನಿಂದ ಕರೆ ಬಂದ ಕೂಡಲೇ ಆರ್ಕಿ ತನ್ನ ಹಳೆಯದೊಂದು ಸೈಕಲ್ಲನ್ನೂ ಮತ್ತು ಬೇರೆ ಕೆಲವು ಸಾಮಾನುಗಳನ್ನೂ ತೆಗೆದುಕೊಂಡು ಶೂಮೇಕರನ ಡೈರಿಗೆ ಬಂದ. ಅವನಿಗೆ ಅಲ್ಲಿ ಉಳಿದುಕೊಳ್ಳಲು ಡೈರಿಯಿಂದ ಒಂದೂವರೆ ಕಿಲೋಮೀಟರ್ ದೂರದಲ್ಲಿ ಒಂದು ಜಾಗವೂ ಸಿಕ್ಕಿತು.

ಹಾರ್ದಿಕ ಸ್ವಾಗತ

ಡೈರಿಯಲ್ಲಿ ಕೆಲಸಕ್ಕೆ ಸೇರಿದ ನಂತರ ಆರ್ಕಿ

ಅಲ್ಲಿ ಚೆನ್ನಾಗಿ ಕೆಲಸ ಮಾಡುತ್ತಾ ಇತರ ಕೆಲಸಗಾರರೊಡನೆ ಚೆನ್ನಾಗಿ ಹೊಂದಿಕೊಂಡ. ನೆರೆಹೊರೆಯವರೊಡನೆ ಮಾತ್ರವಲ್ಲದೆ, ಶೂಮೇಕರನ ನಾಲ್ಕು ಮಂದಿ ಹುಡುಗಿಯರೊಡನೆ ಮತ್ತು ರೋಬರ್ಟ್‌ನ ಮಕ್ಕಳಾದ ಬೋಬಿ ಮತ್ತು ಏಮಿ ಇವರೊಡನೆಯೂ ಒಳ್ಳೇ ಗೆಳೆತನ ಬೆಳೆಸಿಕೊಂಡ. ಅವರಿಗೆ ಕೊಡುವುದಕ್ಕಾಗಿ ಯಾವಾಗಲೂ ಆತ ತನ್ನ ಜೇಬಿನಲ್ಲಿ ಚಾಕ್ಲೇಟ್ ಇಟ್ಟುಕೊಳ್ಳುತ್ತಿದ್ದ.

ಶೂಮೇಕರನ ಪತ್ನಿ ಸಾರಾ ಒಮ್ಮೆ ಡೈರಿಯಲ್ಲಿ ಕೆಲಸ ಮಾಡುವವರನ್ನೆಲ್ಲ ರಾತ್ರಿ ಊಟಕ್ಕೆ ಕರೆದಿದ್ದಳು. ಆಗ ಆರ್ಕಿಯೂ ಬಂದಿದ್ದ. ಅವನು ಆ ದಿನ ಮನೆಯವನಂತೆ ಓಡಾಡಿಕೊಂಡು ಮಕ್ಕಳೊಡನೆ ಆಟವಾಡಿಕೊಂಡಿದ್ದ. ಇದರಿಂದಾಗಿ ಸಾರಾ ಶೂಮೇಕರ್‌ಗೆ ಅವನ ಮೇಲೆ ಒಳ್ಳೆ ಅಭಿಪ್ರಾಯ ಹುಟ್ಟುವ ಹಾಗೆ ಆಯಿತು. ಸಾರಾಳ ೧೫ ವರ್ಷದ ಮಗಳು ಲೂಸಿಯೊಡನೆಯೂ ಆತ ಚೆನ್ನಾಗಿ ಹೊಂದಿಕೊಂಡಿದ್ದ. ''ನನಗೆ ಒಮ್ಮೆಯೂ ಅವನು ಕೆಟ್ಟವನೆಂದು ಅನಿಸಲಿಲ್ಲ'' ಎಂದು ಆಕೆ ಅನಂತರ ಹೇಳಿದಳು.

ಏಮಿ ಜೇಕ್ಸನ್‌ಗೆ ಮಾತ್ರ ಅವನ ಮೇಲೆ ಸಂಶಯವಿತ್ತು. ಒಂದು ರಾತ್ರಿ ಸಾಫ್ಟ್ ಬಾಲ್ ಕ್ಲಬ್‌ನಿಂದ ಹಿಂದಿರುಗುವಾಗ ತನ್ನ ಕೋಚ್‌ನ ಹತ್ತಿರ ಮನೆಯಲ್ಲಿ ತನ್ನ ಅಣ್ಣ ಇದ್ದಾನೋ ಇಲ್ಲವೋ ಎಂಬುದನ್ನು ನೋಡಿ ಬರುವಲ್ಲಿವರೆಗೆ ಕಾಯಲು ಹೇಳಿದ್ದಳು. ''ಡೈರಿಯಲ್ಲಿ ಕೆಲಸ ಮಾಡಲು ಹೊಸಬನೊಬ್ಬ ಬಂದಿದ್ದಾನೆ, ಆತ ರಾತ್ರಿ ಹೊತ್ತು ಅಲ್ಲಿ ಇಲ್ಲಿ ನಿಂತಿರುತ್ತಾನೆ'' ಎಂದಿದ್ದಳು.

ಆದರೆ ಹೆಚ್ಚಿನವರಿಗೂ ಆರ್ಕಿಯ ಮೇಲೆ ಒಳ್ಳೇ ಅಭಿಪ್ರಾಯವೇ ಇತ್ತು. ನಿರೀಕ್ಷಣಾ ಜಾಮೀನಿನಲ್ಲಿದ್ದುದರಿಂದ ಅವನು ತಪ್ಪದೆ ಕೋರ್ಟಿಗೆ ಹೋಗಿ ಹಾಜರಿ ಕೊಡಬೇಕಾಗಿತ್ತು. ಆದರೆ ತಾನು ಜೋರಾಗಿ ಕಾರು ಓಡಿಸಿದ ತಪ್ಪಿಗಾಗಿ ಹೀಗೆ ಮಾಡಬೇಕಾಗಿದೆಯೆಂದು ಆತ ಶೂಮೇಕರನಿಗೆ ತಿಳಿಸಿದ್ದ. ಒಂದು ದಿನ ರಾತ್ರಿ ಬಾರ್‌ನಲ್ಲಿ ಕುಡಿಯುತ್ತಾ ಇರುವಾಗ ಅವನಿಗೆ ಪರಿಚಯವಿದ್ದ ಒಬ್ಬ ಹೆಂಗಸಿನೊಂದಿಗೆ ಯಾವುದೋ ಒಂದು ವಿಷಯದಲ್ಲಿ ಜಗಳವಾಯಿತು. ಇದ್ದಕ್ಕಿದ್ದಂತೆ ಆತ ಆಕೆಯ ಕೆನ್ನೆಗೆ ಹೊಡೆದಿದ್ದ. ಏನೋ ಕುಡಿದ ಅಮಲಿನಲ್ಲಿ ಹಾಗೆ ಮಾಡಿರಬಹುದೆಂದು ಜನ ಭಾವಿಸಿದರಲ್ಲದೆ ಅವನ ನಿಜವಾದ ಸ್ವಭಾವವನ್ನು ಅರ್ಥಮಾಡಿಕೊಳ್ಳಲಿಲ್ಲ.

ಚೂರಿ ಇರಿತದ ರಾತ್ರಿ

ಜುಲೈ ೬ರಂದು ತಾನು ಒಂದು ಬೇಂಡ್ ಸಂಗೀತ ಕೇಳಲು ಹೋಗುವುದಾಗಿ ಆರ್ಕಿ ರೋಬರ್ಟ್‌ನ ಹತ್ತಿರ ಹೇಳಿದ. ರೋಬರ್ಟ್ ಅದಕ್ಕೆ ತಾನು ಆ ಮಾರ್ಗವಾಗಿಯೇ ಹೋಗುವ ಕಾರಣ ಅಲ್ಲಿವರೆಗೆ ತನ್ನ ಟ್ರಕ್ಕಿನಲ್ಲಿ ಬರಬಹುದೆಂದು ಹೇಳಿದ. ಆರ್ಕಿ ತನ್ನ ಸೈಕಲ್ಲನ್ನು ಟ್ರಕ್ಕಿನ ಹಿಂದೆ ಇರಿಸಿ ಮುಂದೆ ಬಂದು ಕುಳಿತುಕೊಂಡ.

ಬೇಂಡ್ ಸಂಗೀತ ನಡೆಯುವಲ್ಲಿ ಅವನನ್ನು ಬಿಟ್ಟು ''ನಾಳೆ ಬೆಳಿಗ್ಗೆ ಕಾಣೋಣ'' ಎಂದು ಹೇಳಿ ರೋಬರ್ಟ್ ತನ್ನ ಮನೆಗೆ ಹಿಂದಿರುಗಿದ. ಬೇಂಡ್ ಸಂಗೀತವನ್ನು ಬ್ರೋಡೀ ಕಿಂಗ್ ಎಂಬಾತ ತನ್ನ ಕ್ಲಬ್ಬಿನಲ್ಲಿ ಏರ್ಪಡಿಸಿದ್ದ. ಮಧ್ಯವಯಸ್ಸಿನ ಬ್ರೋಡಿ ಜುಟ್ಟು ಬಿಟ್ಟಿದ್ದ. ಆರ್ಕಿ ಯಾರ ತಂಟೆಗೂ ಹೋಗದೆ ತನ್ನಷ್ಟಕ್ಕೇ ಇರುವವನು ಎಂಬುದು ಅವನ ಅಭಿಪ್ರಾಯವಾಗಿತ್ತು. ಬಿಯರ್ ಕುಡಿಯಲು ಅವನು ಆ ಕ್ಲಬ್ಬಿಗೆ ಒಮ್ಮೊಮ್ಮೆ ಬರುವುದಿತ್ತು.

ಆ ದಿನ ರಾತ್ರಿ ಒಂದು ಬಿಯರ್ ಕುಡಿದ ಮೇಲೆ ಆರ್ಕಿ ಹೊರಟು ಹೋದುದನ್ನು ಬ್ರೋಡೀ ನೋಡಿದ್ದ. ಅಲ್ಲಿಂದ ಯಾನ್ಸ್‌ವಿಲ್ಲಾಕ್ಕೆ ಹೋಗಿ ಅಲ್ಲಿ ಸ್ವಲ್ಪ ವಿಸ್ಕಿ ಕುಡಿದಿದ್ದನೆಂದು ಕೆಲವರ ಅಭಿಪ್ರಾಯ. ಮರಿಜುವಾನಾ ಸೇದಿರಲೂ ಸಾಕು ಎಂಬುದು ಬೇರೆ ಕೆಲವರ ಅಭಿಪ್ರಾಯ.

ಅಲ್ಲಿಂದ ಹೊರಟ ಆರ್ಕಿ ನೇರವಾಗಿ ಪೂರ್ವ ದಿಕ್ಕಿಗೆ ಹೋಗಿದ್ದ. ಆ ದಿನ ಮಳೆ

ಬಂದುದರಿಂದ ನೆಲ ಒದ್ದೆಯಾಗಿತ್ತು. ಶೂಮೇಕರ್ ಡೈರಿಯನ್ನು ದಾಟಿ ಆತ ಬೋಬಿ ಮತ್ತು ಏಮಿ ಮಲಗಿರುವ ಕೆರವಾನಿನ ಕಡೆಗಾಗಿ ಸಾಗಿದ. ಬೆಳಗ್ಗಿನ ಜಾವ ಎಂದರೆ ಎರಡು ಗಂಟೆ ಹತ್ತಿಗೆ ಅವರ ತಂದೆ ರೋಬರ್ಟ್ ಡೈರಿಯಲ್ಲಿ ಕೆಲಸ ಮಾಡುತ್ತಿರುತ್ತಾನೆಂದು ಆತನಿಗೆ ಗೊತ್ತಿತ್ತು.

ಅದಲ್ಲದೆ ಡೈರಿಯಲ್ಲಿ ಹಾಲು ಕರೆಯುವ ಯಂತ್ರಗಳು ಮಾಡುವ ಸದ್ದಿನಿಂದಾಗಿ ಅಲ್ಲಿಂದ ಸ್ವಲ್ಪ ದೂರವಿರುವ ಕೆರವಾನ್‌ನಲ್ಲಿ ಯಾವ ಶಬ್ದವಾದರೂ ಅದು ಡೈರಿಯಲ್ಲಿರುವ ಅವರ ತಂದೆಗೆ ಕೇಳಿಸಲಾರದು ಎಂದೂ ಆತನಿಗೆ ಗೊತ್ತಿತ್ತು. ಕೆರವಾನ್‌ನಲ್ಲಿ ಟೆಲಿಫೋನ್ ಇಲ್ಲ ಎಂಬುದನ್ನೂ ಕೂಡ ಆತ ಅರಿತಿದ್ದ.

ಬೋಬಿ ಯಾವಾಗಲೂ ತನ್ನ ಕೋಣೆಯಲ್ಲೇ ಮಲಗುತ್ತಿದ್ದ. ಆದರೆ ಆವತ್ತು ಅವನ ಕೋಣೆಯಲ್ಲಿದ್ದ ಮೊಲಗಳ ಗೂಡನ್ನು ಸ್ವಚ್ಛ ಮಾಡದಿದ್ದುದರಿಂದ ಕೆಟ್ಟ ವಾಸನೆ ಬರುತ್ತಿತ್ತು. ಹಾಗಾಗಿ ಆವತ್ತಿನ ಮಟ್ಟಿಗೆ ಏಮಿಯ ಕೋಣೆಯಲ್ಲಿ ಮಂಚದ ಕೆಳಗಿನ ಭಾಗದಲ್ಲಿ ಮಲಗುವುದೆಂದು ನಿರ್ಧರಿಸಿದ್ದ. ಇದಕ್ಕೊಪ್ಪಿ ಏಮಿ ಮಂಚದ ಮೇಲಿನ ಭಾಗಕ್ಕೆ ಹತ್ತಿ ಮಲಗಿದ್ದಳು. ಬೋಬಿ ಕೆಳಗಿನ ಭಾಗದಲ್ಲಿ ಮಲಗಿದ್ದ. ಇಬ್ಬರೂ ಗಾಢ ನಿದ್ದೆಯಲ್ಲಿದ್ದರು.

ಬೆಳಗಿನ ಜಾವ ೧.೪೦ಕ್ಕೆ ಕೆಲಸಕ್ಕೆ ಹೋಗುವ ಮೊದಲು ರಾಬರ್ಟ್ ಮಕ್ಕಳ ಕೋಣೆಗೆ ಬಂದು ಅವರು ನಿದ್ದೆಯಲ್ಲಿರುವುದನ್ನು ನೋಡಿ ಹೋಗಿದ್ದ. ತನ್ನ ತಂದೆ ಬಂದು ನೋಡಿದ್ದು ಬೋಬಿಗೆ ಗೊತ್ತಾಗಿತ್ತು. ಆದರೆ ಒಡನೆಯೇ ಆತ ಪುನಃ ನಿದ್ದೆ ಹೋಗಿದ್ದ. ರೋಬರ್ಟ್ ಹೊರಗೆ ಹೋಗುವಾಗ ಹಾಲ್‌ನ ಲೈಟನ್ನು ನಂದಿಸದೆ ಎಂದಿನಂತೆ ಬಾಗಿಲಿಗೆ ಬೀಗ ಹಾಕಿ ಹೋಗಿದ್ದ.

ರಾಬರ್ಟ್ ಡೈರಿಯಲ್ಲಿ ಹಾಲು ಕರೆಯಲು ಸುರುಮಾಡಿ ಸ್ವಲ್ಪ ಹೊತ್ತಾಗುತ್ತಲೇ ಆರ್ಕಿ ಸದ್ದು ಮಾಡದೆ ಕೆರವಾನಿನ ಕಿಟಕಿಯ ಮೂಲಕ ಒಳಗೆ ಬಂದಿದ್ದ. ಇದ್ದಕ್ಕಿದ್ದಂತೆ ಬೋಬಿಗೆ ಎಚ್ಚರವಾಯಿತು. ಒಡನೆಯೇ ಚೂರಿಯ ಅಲಗೊಂದು ಅವನ ಎದೆಯನ್ನು ತಿವಿಯಿತು. ಆತ ಗಲಿಬಿಲಿಗೊಂಡು ಭಯ ಮತ್ತು ನೋವುಗಳಿಂದ ಕಣ್ಣು ತೆರೆದಾಗ ತನಗೂ ಮತ್ತು ತನ್ನ ತಂಗಿಗೂ ಪ್ರೀತಿಯಿಂದ ಚಾಕ್ಲೇಟ್ ಕೊಡುತ್ತಿದ್ದ ಆರ್ಕಿ ಎದುರಿಗಿದ್ದ.

ಆರ್ಕಿ ಪುನಃ ಪುನಃ ಹಲವು ಬಾರಿ ಚೂರಿಯಿಂದ ಬೋಬಿಯನ್ನು ತಿವಿದ. ನೋವು ತಡೆಯಲಾರದೆ ಬೋಬಿ ಮಂಚದಿಂದ ಕೆಳಗೆ ಬಿದ್ದ. ಅಲ್ಲಿಂದ ತೆವಳಿಕೊಂಡು ತನ್ನ ಕೋಣೆಗೆ ಹೋಗಲು ಪ್ರಯತ್ನಿಸಿದ. ಅಲ್ಲಿ ಆತನ ಗನ್ ಒಂದಿತ್ತು.

ಬೋಬಿ ಚಲಿಸತೊಡಗಿದುದನ್ನು ನೋಡಿ ಆರ್ಕಿ ಪುನಃ ಚೂರಿಯಿಂದ ಅವನ ಮೈಮೇಲೆ ತಿವಿದ. ಬೋಬಿ ಕದಲದೆ ಸುಮ್ಮಗೆ ಮಲಗಿದ. ಆದರೆ ಆರ್ಕಿ ಆಚೆ ಕಡೆಗೆ ತಿರುಗಿದೊಡನೆ ಪುನಃ ತೆವಳುತ್ತಾ ಕೋಣೆಯಿಂದ ಹೊರಗೆ ಹೋಗಲು ಪ್ರಯತ್ನಿಸಿದ. ಅವನ ಗಾಯಗಳಿಂದೆಲ್ಲ ರಕ್ತ ಸುರಿಯುತ್ತಿತ್ತು. ಆರ್ಕಿ ಪುನಃ ಆತನೆಡೆಗೆ ಹಾರಿ ಕುತ್ತಿಗೆಯ ಹತ್ತಿರ ಬಲವಾಗಿ ತಿವಿದ. ಆ ಗಾಯ ೩೦ ಸೆ.ಮೀ. ಉದ್ದ ಮತ್ತು ೨.೫ ಸೆ.ಮೀ. ಆಳದ್ದಾಗಿತ್ತು.

ಇದರಿಂದ ಎಚ್ಚರ ತಪ್ಪಿದಂತಾಗಿ ಬೋಬಿ ಅಲ್ಲಾಡದೆ ಮಲಗಿದ. ಆರ್ಕಿ ಏಮಿಯನ್ನು ಮಂಚದ ಮೇಲಿನಿಂದ ಎಳೆಯುವುದು ಮತ್ತು ಆಕೆ ''ಬೇಡ ಆರ್ಕಿ, ಬೇಡ, ಬೇಡ ಆರ್ಕಿ'' ಎಂದು ಕಿರಿಚುವುದು ಕೇಳಿಸುತ್ತಿತ್ತು.

ಏಮಿ ಅವನ ಕೈಯಿಂದ ತಪ್ಪಿಸಿಕೊಂಡು ತನ್ನ ತಂದೆಯ ಕೋಣೆಗೆ ಓಡಿದಳು. ಬಹುಶಃ ತನ್ನ ತಂದೆ ಇಷ್ಟು ಹೊತ್ತಿಗೆ ಡೈರಿಗೆ ಹೋಗಿರಬಹುದೆಂಬ ವಿಷಯ ಅವಳಿಗೆ ಹೊಳೆದಿರಲಿಲ್ಲ. ಅವಳ ಹಿಂದೆ ಓಡಲು ಪ್ರಾರಂಭಿಸಿದ ಆರ್ಕಿ ಸ್ವಲ್ಪ ತಡೆದು ಬೋಬಿಯನ್ನು ಹೊರಳಿಸಿ ನೋಡಿದ. ಆತ ಸತ್ತವನಂತೆ ನಟಿಸುತ್ತಾ ಅಲ್ಲಾಡದೆ ಮಲಗಿದ್ದ.

ಅನಂತರ ಆರ್ಕಿ ೧೧ ವರ್ಷದ ಏಮಿಯನ್ನು ಆಕೆಯ ತಂದೆಯ ಹಾಸುಗೆಯಲ್ಲಿ ಅತ್ಯಾಚಾರ

ಮಾಡಿ ಪುನಃ ಅವಳ ಕೋಣೆಗೆ ಬಂದ. ಅಲ್ಲಿ ಇನ್ನೊಮ್ಮೆ ಬೋಬಿಯನ್ನು ಕಾಲಿನಿಂದ ಒದ್ದ ಮತ್ತು ಪುನಃ ಅವನನ್ನು ಹೊರಳಿಸಿ ನೋಡಿದ. ಆತನಿಗೆ ತನ್ನ ಮೇಲೆ ಆಪಾದನೆ ಹೊರಿಸುವವರು ಯಾರೂ ಇಲ್ಲವೆಂಬುದನ್ನು ದೃಢಪಡಿಸಿಕೊಳ್ಳಬೇಕಾಗಿತ್ತು.

ಸ್ವಲ್ಪ ಹೊತ್ತಿನ ನಂತರ ಬೋಬ್ಬಿ ಕಣ್ಣು ತೆರೆದು ನೋಡಿದ. ಪೈಜಾಮ ಮಾತ್ರ ಹಾಕಿಕೊಂಡಿದ್ದ ಏಮಿ ಕೆರವಾನಿನಿಂದ ಹೊರಗೆ ಓಡುತ್ತಿರುವುದು ಮತ್ತು ಅವಳನ್ನು ಹಿಡಿಯಲು ಅವಳ ಹಿಂದಿನಿಂದ ಆರ್ಕಿ ಓಡುತ್ತಿರುವುದು ಅವನಿಗೆ ಕಾಣಿಸಿತು. ಅನಂತರ ಅವರಿಬ್ಬರೂ ಕತ್ತಲೆಯಲ್ಲಿ ಕಣ್ಮರೆಯಾದರು. ಒಟ್ಟು ೨೩ ಬಾರಿ ತಿವಿದುದರಿಂದಾಗಿ ಆತ ರಕ್ತ ಹೋಗಿ ತೀರ ನಿಃಶಕ್ತನಾಗಿದ್ದ. ಕುತ್ತಿಗೆಯ ದೊಡ್ಡ ಗಾಯ ಮಾತ್ರವಲ್ಲದೆ ಬೆನ್ನಿನಲ್ಲೂ ಒಂದು ೧೫ ಸೆ.ಮೀ. ಉದ್ದದ ಗಾಯವಿತ್ತು. ಒಂದು ಗಾಯ ಹೊಟ್ಟೆಯನ್ನು ತೂತು ಮಾಡಿತ್ತು. ಇನ್ನೊಂದು ಅವನ ಎದೆಗುಂಡಿಗೆಯನ್ನು ಹೊಕ್ಕಿತ್ತು.

ಆರ್ಕಿ ಏಮಿಯನ್ನು ಬೆನ್ನಟ್ಟಿ ಹಿಡಿದು ಹತ್ತಿರದ ಸೋಯಾಬೀನ್ಸ್‌ನ ಗದ್ದೆಗೆ ಎಳೆದುಕೊಂಡು ಹೋದ. ಆ ಚಿಕ್ಕ ಹುಡುಗಿ ಅವನ ಮೈಮೇಲೆ ಪರಚಿ ಗಾಯಮಾಡಿ ಆತನಿಂದ ಬಿಡಿಸಿಕೊಳ್ಳಲು ತನಗೆ ಸಾಧ್ಯ ಇದ್ದಷ್ಟು ಹೋರಾಡಿದಳು. ಆದರೆ ಆತ ಬಿಡದೆ ಆಕೆಯನ್ನು ಅಲ್ಲಿಂದ ೬೦೦ ಮೀಟರ್ ದೂರವಿರುವ ಒಂದು ಪೈನ್ ಮರಗಳಿರುವ ಕಾಡಿಗೆ ಎಳೆದುಕೊಂಡು ಹೋದ. ಅಲ್ಲಿ ಇನ್ನೊಮ್ಮೆ ಆಕೆಯ ಮೇಲೆ ಅತ್ಯಾಚಾರ ಮಾಡಿ ಚೂರಿಯಿಂದ ಅವಳ ಕುತ್ತಿಗೆಗೆ ಇರಿದ.

ಅವಳ ಶವ ಪರೀಕ್ಷೆ ಮಾಡಿದ ಡಾಕ್ಟರರ ಅಭಿಪ್ರಾಯದಂತೆ ಆಕೆ ಅನಂತರ ೪೫ ಸೆಕೆಂಡುಗಳಷ್ಟು ಸಮಯ ಜೀವಂತ ಇದ್ದಿರಬಹುದು. ಆಮೇಲೆ ಕುತ್ತಿಗೆಯಿಂದ ರಕ್ತಸ್ರಾವವಾಗಿ ಆಕೆ ಆ ಒದ್ದೆ ಮಣ್ಣಿನಲ್ಲಿ ಸತ್ತು ಹೋಗಿರಬೇಕು.

ಆರ್ಕಿ ಅಲ್ಲಿಂದ ಡೈರಿಯಿರುವಲ್ಲಿಗೆ ಹೋಗಿ ತನ್ನ ರಕ್ತ ಅಂಟಿಕೊಂಡ ಬಟ್ಟೆಯನ್ನು ಕಳಚಿ ಒಂದು ಕಡೆ ಅಡಗಿಸಿಟ್ಟ, ಮತ್ತು ಅಲ್ಲೇ ಇದ್ದ ಬೇರಾರದೋ ಬಟ್ಟೆಯನ್ನು ತೊಟ್ಟುಕೊಂಡ. ಅನಂತರ ಒಳ್ಳೇ ನಂಬಿಗಸ್ತ ಕೆಲಸಗಾರನಂತೆ ಸರಿಯಾದ ಸಮಯಕ್ಕೆ ಕೆಲಸಕ್ಕೆ ಹೋಗಲು ಸಿದ್ಧನಾದ.

ಕೊಲೆಯ ಪತ್ತೆ

ಬೆಳಗಿನ ಜಾವ ೫.೨೦ಕ್ಕೆ ಶೂಮೇಕರನಿಗೆ ಪೋಲೀಸರಿಂದ ದೂರವಾಣಿ ಕರೆ ಬಂತು. ''ಏಮಿ ಕಾಣೆಯಾಗಿದ್ದಾಳೆ. ಅವಳ ಅಣ್ಣನಿಗೆ ಚೂರಿಯ ಗಾಯವಾಗಿ ಸಾಯುವ ಸ್ಥಿತಿಯಲ್ಲಿದ್ದಾನೆ. ಆರ್ಕಿ ಎಂಬುವನ ಹೆಸರು ಹೇಳಿದ್ದಾನೆ.'' ಎಂದವರು ಅವನಿಗೆ ತಿಳಿಸಿದರು.

ಕೂಡಲೇ ಶೂಮೇಕರ್ ಡೈರಿಯಲ್ಲಿ ಹಾಲು ಕರೆಯುವಲ್ಲಿಗೆ ಹೋದ. ರೋಬರ್ಟ್‌ನನ್ನು ಕರೆದು ತನ್ನೊಂದಿಗೆ ಟ್ರಕ್ಕಿನಲ್ಲಿ ಬರಲು ಹೇಳಿದ. ಅವರು ಹೊರಗೆ ಬಂದಾಗ ಕೆರವಾನ್ ಇರುವಲ್ಲಿ ಹತ್ತು ಹನ್ನೆರಡು ನೀಲಿ ಮತ್ತು ಕೆಂಪು ಲೈಟುಗಳು ಉರಿಯುತ್ತಿರುವುದು ಕಾಣಿಸಿತು. ಏಮಿ ಮತ್ತು ಬೋಬಿ ಅದೇನೋ ಭಯಂಕರವಾದ ತೊಂದರೆಯಲ್ಲಿ ಸಿಲುಕಿರುವರೆಂದು ಶೂಮೇಕರ್ ರೋಬರ್ಟ್‌ಗೆ ತಿಳಿಸಿದ. ಅನಂತರ ಆತನನ್ನು ಕೆರವಾನ್ ಇರುವಲ್ಲಿಗೆ ಕರೆದುಕೊಂಡು ಹೋದ.

ರೋಬರ್ಟ್ ಎಷ್ಟು ಬಾರಿ ಕೇಳಿ ಕೊಂಡರೂ ಪೋಲೀಸರು ಅವನನ್ನು ಕೆರವಾನ್ ನೊಳಗೆ ಹೋಗಲು ಬಿಡಲಿಲ್ಲ. ಅನಂತರ ಆತ ತನ್ನ ಮಗ ಇರುವ ಆಸ್ಪತ್ರೆಗೆ ಹೋದ. ಅಲ್ಲದೆ ತನ್ನ ಪತ್ನಿ ಶಾನಾಗೆ ಸಮಾಚಾರ ತಿಳಿಸಬೇಕೆಂದು ಆತ ಶೂಮೇಕರ್‌ಗೆ ಹೇಳಿದ.

ಬೆಳಿಗ್ಗೆ ೬.೨೦ಕ್ಕೆ ಆರ್ಕಿ ಹಾಲು ಕರೆಯುವಲ್ಲಿ ನಿಂತಿರುವುದನ್ನು ಕಂಡು ಶೂಮೇಕರ್‌ಗೆ ಆಶ್ಚರ್ಯವಾಯಿತು. ಯಾವಾಗಲೂ ಆತ ೭ ಗಂಟೆಯ ಒಳಗೆ ಕೆಲಸಕ್ಕೆ ಬರುತ್ತಿರಲಿಲ್ಲ. ಅದಲ್ಲದೆ ಎಷ್ಟೋ ದಿವಸಗಳಿಂದ ಹಟ್ಟಿಯಲ್ಲಿ

ಬದ್ದಿದ್ದ ಉಡುಪನ್ನು ಆತ ತೊಟ್ಟಿದ್ದ. ಶೂಮೇಕರ್ ಆತನೊಡನೆ "ರೋಬರ್ಟ್ ಜೇಕ್ಸನ್‌ನ ಕೆರವಾನ್‌ನಲ್ಲಿ ಅಟೇನೋ ನಡೆದಿದೆಯಂತೆ ಮತ್ತು ಆ ವಿಷಯದಲ್ಲಿ ಪೊಲೀಸರಿಗೆ ನಿನ್ನ ಹತ್ತಿರ ಮಾತನಾಡುವುದಕ್ಕೆ ಇದೆಯಂತೆ. ಹಾಗಾಗಿ ಅತ್ತ ಹೋಗೋಣವೇ" ಎಂದು ಕೇಳಿದ. ಆರ್ಕಿ ಸ್ವಲ್ಪವೂ ಪ್ರತಿಭಟಿಸದೆ ಅವನೊಂದಿಗೆ ಹೋದ.

ಪೊಲೀಸರು ವಿಚಾರಿಸಿದಾಗ ತನಗೇನೂ ಗೊತ್ತಿಲ್ಲವೆಂದು ಆರ್ಕಿ ಹೇಳಿದ. ತಾನು ರಾತ್ರಿಯೆಲ್ಲಾ ಹೊರಗೆ ಇದ್ದು ಕುಡಿಯುತ್ತಿದ್ದೆ ಮತ್ತು ಈ ದಿನ ಬೆಳಗ್ಗೆ ಬೇಗನೆ ಕೆಲಸಕ್ಕೆ ಬಂದಿದ್ದೆ ಎಂದು ಹೇಳಿದ. ಸ್ವಲ್ಪ ಹೊತ್ತು ಪ್ರಶ್ನೆ ಕೇಳಿದ ಅನಂತರ ಪೊಲೀಸರು ಅವನನ್ನು ಬಂಧಿಸಿ ಸ್ಟೇಶನ್‌ಗೆ ಕರೆದುಕೊಂಡು ಹೋದರು.

ತಾನು ಎರಡು ತಪ್ಪು ಮಾಡಿದ್ದೆನೆಂಬುದನ್ನು ಆರ್ಕಿ ಅರಿತಿರಲಿಲ್ಲ. ಬೋಬಿಗೆ ಅಷ್ಟೊಂದು ಬಾರಿ ಚೂರಿಯಿಂದ ಇರಿದಿದ್ದನಾದರೂ ಆತ ಸತ್ತಿರಲಿಲ್ಲ. ಇದನ್ನು ಆತ ಗಮನಿಸದಿದ್ದುದು ಒಂದು ತಪ್ಪು, ಇನ್ನೊಂದು ತಪ್ಪೆಂದರೆ, ಆ ಘಟನೆ ನಡೆಯುವುದಕ್ಕಿಂತ ಕೆಲವು ದಿವಸ ಮೊದಲು ರೋಬರ್ಟ್ ತನ್ನ ಕೆರವಾನ್‌ನಲ್ಲಿ ದೂರವಾಣಿ ಅಳವಡಿಸಿದ್ದ. ಇದನ್ನು ಆತ ತಿಳಿದಿರಲಿಲ್ಲ. ಆರ್ಕಿ ಹೊರಟು ಹೋದೊಡನೆ ಬೋಬಿ ಕಷ್ಟದಿಂದ ತೆವಳುತ್ತಾ ಹೋಗಿ ದೂರವಾಣಿಯ ಮೂಲಕ ಪೊಲೀಸರನ್ನು ಕರೆದಿದ್ದ.

ದೂರವಾಣಿಯ ಕರೆ ಬಂದು ನಾಲ್ಕು ಮಿನಿಟು ಕಳೆಯುವುದಕ್ಕೆ ಮೊದಲೇ ಸಾರಾ ಕ್ಲೈಟನ್ ಮತ್ತು ಆಕೆಯ ಸಹಾಯಕ ಡಾಕ್ಟರರು ರೋಬರ್ಟ್‌ನ ಕೆರವಾನಿಗೆ ಬಂದು ತಲಪಿದ್ದರು. ಅಲ್ಲಿಯ ದೃಶ್ಯ ನೋಡಲು ಭಯಾನಕವಾಗಿತ್ತು. ಗೋಡೆಯ ಮೇಲೆ, ನೆಲದಲ್ಲಿ, ಹಾಸಿಗೆಯ ಮೇಲೆ, ಕುರ್ಚಿ-ಮೇಜುಗಳ ಮೇಲೆ, ಹೀಗೆ ಎಲ್ಲಾ ಕಡೆಯಲ್ಲೂ ರಕ್ತ ಚೆಲ್ಲಿತ್ತು. ಸಾರಾ ಕ್ಲೈಟನ್ ಬೋಬಿಗೆ ಆಕ್ಸಿಜನ್ ಕೊಟ್ಟು ಅವನ ಕುತ್ತಿಗೆಯ ಗಾಯವನ್ನು ಮೆಲ್ಲನೆ ಮುಚ್ಚಿದಳು. ಅನಂತರ ಅವರು ಅವನನ್ನು ೩೦ ಕಿಲೋಮೀಟರ್ ದೂರದಲ್ಲಿರುವ ಆಸ್ಪತ್ರೆಗೆ ಕರೆದುಕೊಂಡು ಹೋದರು. ಬೆಳಗ್ಗೆ ೭ ಗಂಟೆಗೂ ಮೊದಲು ಅವರು ಆಸ್ಪತ್ರೆಯ ಎಮರ್ಜೆನ್ಸಿ ವಾರ್ಡಿಗೆ ತಲಪಿದ್ದರು.

ರೋಬರ್ಟ್ ತನ್ನ ಮಗನನ್ನು ನೋಡಿ ಇನ್ನಿವನು ಬದುಕಲಾರನೆಂದು ಭಾವಿಸುತ್ತಿದ್ದಂತೆ ಅವನು ಕಣ್ಣುತೆರೆದು "ಅಪ್ಪಾ" ಎಂದು ತನ್ನ ಕ್ಷೀಣವಾದ ಸ್ವರದಲ್ಲಿ ಕರೆದ.

ಹನ್ನೆರಡು ಗಂಟೆಗಳ ನಂತರ, ಪೊಲೀಸ್ ನಾಯಿಗಳು ಏಮಿಯ ಶವವನ್ನು ಪತ್ತೆಹಚ್ಚಿದುವು. ಪೊಲೀಸ್ ನಾಯಿಗಳಿಗೆ ಆಕೆಯ ವಾಸನೆ ಗೊತ್ತಾಗುವಂತೆ ಅವರು ಅವಳ ಹೊಸಾ ಪುಸ್ತಕದ ಚೀಲವನ್ನು ತೋರಿಸಿದ್ದರು.

ವಿಚಾರಣೆ

೧೯೯೬ನೇ ಇಸವಿ ಮೇ ೨೨ರಂದು ನ್ಯಾಯಾಲಯದಲ್ಲಿ ವಿಚಾರಣೆ ಸುರುವಾಯಿತು. ಏಮಿಯ ಕೊಲೆಯಾಗಿ ಹೆಚ್ಚು ಕಡಿಮೆ ಒಂದು ವರ್ಷವೇ ಕಳೆದಿತ್ತು. ಅನಿರೀಕ್ಷಿತವಾಗಿ ಆ ದಿನ ಬೋಬಿಯ ಹುಟ್ಟುಹಬ್ಬವಾಗಿತ್ತು.

ಮಾರನೆಯ ದಿನ ಸರಕಾರೀ ವಕೀಲರು ಬೋಬಿಯನ್ನು ಸಾಕ್ಷಿ ಹೇಳಲು ಕರೆದರು. ಪ್ರಮಾಣ ವಚನ ಸ್ವೀಕರಿಸುವಾಗ ಆತನ ಕುತ್ತಿಗೆಯಲ್ಲಿ ಗಾಯದ ಕಲೆ ಎದ್ದು ಕಾಣಿಸುತ್ತಿತ್ತು. ಅವನಿಂದ ೩೦ ಮೀಟರ್ ದೂರದಲ್ಲಿ ಆರ್ಕಿ ಬಿಲ್ಲಿಂಗ್ಸ್ ಕುಳಿತಿದ್ದ. ಅವನೊಂದಿಗೆ ಅವನ ಇಬ್ಬರು ವಕೀಲರಿದ್ದರು. ಅವರಿಗೆ ಸಹಾಯ ಮಾಡಲು ಬೇರೆ ಕೆಲವು ಜನರೂ ಇದ್ದರು. ಇವರಿಗೆಲ್ಲ ಸರಕಾರವೇ ಹಣ ಖರ್ಚು ಮಾಡುತ್ತಿತ್ತು. ಆ ದಿನ ಕೋರ್ಟಿಗೆ ರೋಬರ್ಟ್ ಮತ್ತು ಅವನ ಪತ್ನಿ ಶಾನಾ ಬಂದಿದ್ದರು. ಶಾನಾ ಈಗ ರೋಬರ್ಟ್‌ನೊಂದಿಗೆ ರಾಜಿ ಮಾಡಿಕೊಂಡಿದ್ದಳು. ಅವರ ಪಕ್ಕದಲ್ಲಿ ಶೂಮೇಕರ್ ಮತ್ತು ಇತರ ನೆರೆಹೊರೆಯವರು ಕುಳಿತಿದ್ದರು.

ಹಿಂದಿನ ದಿವಸ ಸರಕಾರೀ ವಕೀಲ ಜೋಲ್ ಬ್ರೂವರ್ ಕೊಲೆ ಹೇಗಾಯಿತೆಂಬುದನ್ನು ವಿವರವಾಗಿ ತಿಳಿಸಿ ಹೇಳಿದ್ದ. ಅವನು ಕೊಟ್ಟ ಸಾಕ್ಷ್ಯಗಳಲ್ಲಿ ಅತಿ ಪ್ರಬಲವಾದುದೆಂದರೆ, ಬೋಬಿ ಪೊಲೀಸರಿಗೆ ಮಾಡಿದ ದೂರವಾಣಿಯ ಕರೆ. ಅದನ್ನು ರೆಕಾರ್ಡ್ ಮಾಡಲಾಗಿತ್ತು. ಕೋರ್ಟಿನಲ್ಲಿ ಆ ರೆಕಾರ್ಡನ್ನು ಎಲ್ಲರಿಗೂ ಕೇಳಿಸುವಂತೆ ಹಾಕಿದರು. ಹುಡುಗನೊಬ್ಬ ಮೆದುವಾದ ಸ್ವರದಲ್ಲಿ ಹೇಳುವುದು ಕೇಳಿಸಿತು. ''ಒಬ್ಬ ಮನುಷ್ಯ ಇಲ್ಲಿಗೆ ಬಂದ... ಅವನ ಕೈಯಲ್ಲಿ ಚೂರಿಯಿತ್ತು.. ಅವನ ಹೆಸರು ಆರ್ಕಿ,'' ಅನಂತರ ಜೋರಾಗಿ ಉಸಿರು ಬಿಡುವ ಸದ್ದು ಕೇಳಿಸಿತು. ಅಲ್ಲದೆ ಹುಡುಗನ ಸ್ವರ ತುಂಬಾ ದುರ್ಬಲವಾಗಿ ಪೂರ್ತಿ ವಿಷಯ ತಿಳಿಸಲು ಅವನಿಗೆ ಆಗುವುದೋ ಇಲ್ಲವೋ ಎಂಬಂತಿತ್ತು. ರೆಕಾರ್ಡಿನಲ್ಲಿ ಇನ್ನೊಬ್ಬ ಆ ಹುಡುಗನನ್ನು ಸಮಾಧಾನ ಪಡಿಸುವುದು ಕೇಳಿಸಿತು. ಅದು ಪೊಲೀಸ್ ಆಫೀಸರ್ ಡೇವಿಡ್ ವರ್ನಾನ್‌ನ ಸ್ವರವಾಗಿತ್ತು.

''ಅವನು ನನ್ನ ತಂಗಿಯನ್ನು ಓಡಿಸಿಕೊಂಡು ಹೋಗಿದ್ದಾನೆ. ನನ್ನ ತಂದೆ ಡೈರಿಯಲ್ಲಿ ಇದ್ದಾನೆ...''

ಆ ರೆಕಾರ್ಡನ್ನು ಕೇಳಿ ಇಡೀ ಕೋರ್ಟು ನಿಃಶಬ್ದವಾಯಿತು. ಶಾನಾ ಅಳತೊಡಗಿದ್ದಳು. ಇತರರು ತಮ್ಮ ಕಣ್ಣೀರನ್ನು ಒರಸಿಕೊಳ್ಳುತ್ತಿದ್ದರು. ಆರ್ಕಿ ಸ್ವಲ್ಪ ಬಿಳಿಚಿದಂತಾಗಿ ಕೆಳಗೆ ನೋಡುತ್ತ ಕುಳಿತಿದ್ದ.

ಈಗ, ಸಾಕ್ಷಿ ಹೇಳುವ ಕುರ್ಚಿಯಲ್ಲಿ ಧೈರ್ಯದಿಂದ ಕುಳಿತುಕೊಂಡು ಬೋಬಿ ಆರ್ಕಿಯ ಕಡೆಗೆ ಕೈತೋರಿಸಿ, ''ಅವನೇ ನನ್ನನ್ನು ಚೂರಿಯಿಂದ ಇರಿದದ್ದು ಮತ್ತು ನನ್ನ ತಂಗಿಯನ್ನು ಅಟ್ಟಿಸಿಕೊಂಡು ಹೋದದ್ದು'' ಎಂದು ಹೇಳಿದ. ಆರ್ಕಿ ಅವನನ್ನೊಮ್ಮೆ ನೋಡಿ ಅನಂತರ ಬೇರೆ ಕಡೆಗೆ ತನ್ನ ಮುಖ ತಿರುಗಿಸಿದ. ಅವನ ಮುಖದಲ್ಲಿ ಯಾವ ಪ್ರತಿಕ್ರಿಯೆಯೂ ಇರಲಿಲ್ಲ.

ಬ್ರೂವರ್ ಅದೆಷ್ಟು ಚನ್ನಾಗಿ ವಾದಿಸಿದ್ದನೆಂದರೆ, ಆರ್ಕಿಯ ವಕೀಲರಿಗೆ ಅದರಲ್ಲಿ ಯಾವ ಭಾಗವನ್ನೂ ತಪ್ಪೆಂದು ತೋರಿಸಿಕೊಡಲು ಸಾಧ್ಯವಾಗಲಿಲ್ಲ. ಅಷ್ಟೊಂದು ಪುರಾವೆಗಳನ್ನು ಆತ ಕೋರ್ಟಿನ ಮುಂದೆ ಇರಿಸಿದ್ದ. ಹಾಗಾಗಿ ಅವರು ಆರ್ಕಿ ಕೊಲೆ ಮಾಡಿಲ್ಲವೆಂದು ವಾದಿಸಲು ಹೋಗದೆ ಆತನ ಮನಸ್ಸು ಸರಿಯಿಲ್ಲದುದರಿಂದ ಹಾಗಾಯಿತೆಂದು ವಾದಿಸಿದರು. ಆತ ಆವತ್ತು ಬಹಳ ಕುಡಿದಿದ್ದ, ಮತ್ತು ಮರಿಜುವಾನಾ ಸೇದಿದ್ದ. ಇದಲ್ಲದೆ ಬಾಲ್ಯದಲ್ಲಿ ಸರಿಯಾಗಿ ದಾರಿತೋರಿಸುವವರಿಲ್ಲದೆ ಅವನು ಕೆಟ್ಟ ಹಾದಿ ಹಿಡಿಯುವಂತಾಯಿತು ಎಂದು ವಾದಿಸಿದರು.

ಈ ವಾದವನ್ನು ವಿರೋಧಿಸುತ್ತ ಬ್ರೂವರ್ ಹೇಳಿದ: ''ತಂದೆಯಿಲ್ಲವೆಂದ ಮಾತ್ರಕ್ಕೆ ಬೇರೆ ಮಕ್ಕಳನ್ನು ರೇಪ್ ಮಾಡಲು ಮತ್ತು ಚೂರಿಯಿಂದ ಇರಿದು ಕೊಲ್ಲಲು ಬಿಡಬಹುದೇ? ಎಮಿಗೆ ತನ್ನ ಬಾಲ್ಯವನ್ನೂ ಕಳೆಯಲು ಸಾಧ್ಯವಾಗಿಲ್ಲವಲ್ಲ? ''

ಕೋರ್ಟಿನಲ್ಲಿ ಆರ್ಕಿ ತಪ್ಪಿತಸ್ಥನೆಂದು ತೀರ್ಮಾನವಾಯಿತು. ಮತ್ತು ಅವನಿಗೆ ಮರಣದಂಡನೆ ವಿಧಿಸಲಾಯಿತು.

ಮರಣ ದಂಡನೆ

ಜೈಲಿನಲ್ಲಿ ಆರ್ಕಿಯ ಹತ್ತಿರ ನಿನಗೆ ಯಾವ ರೀತಿಯ ಸಾವು ಬೇಕು ಎಂದು ಅಲ್ಲಿನ ಆಫೀಸರ್ ಕೇಳಿದ. ಮರಣದಂಡನೆಯಾದವರಿಗೆ ಎರಡು ರೀತಿಯ ಸಾವುಗಳಲ್ಲಿ ಒಂದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿತ್ತು. ಗೇಸ್‌ನಿಂದ ಸಾಯುವುದು ಇಲ್ಲವೇ ವಿಷದ ಇಂಜಕ್ಷನ್‌ನಿಂದ ಸಾಯುವುದು.

ಸೂಜಿಯಿಂದ ಚುಚ್ಚಿಸಿಕೊಳ್ಳುವುದೆಂದರೆ ಆರ್ಕಿಗೆ ಬಹಳ ಭಯ. ಇದಕ್ಕೆ ಕಾರಣವೂ ಇತ್ತು. ೧೩ ವರ್ಷದವನಿದ್ದಾಗ ಆತ ಒಂದು ಸೂಜಿಯನ್ನೂ ಮತ್ತು ಸ್ವಲ್ಪ ನೀಲಿಬಣ್ಣದ ಶಾಯಿಯನ್ನೂ ಬಳಸಿ ತನ್ನ ತೋಳಿನಲ್ಲಿ ಒಂದು ಚಿಕ್ಕ ಚಿತ್ರ ಬಿಡಿಸಿಕೊಂಡಿದ್ದ. ಅದು ಅವನಿಗೆ

ಎಷ್ಟು ನೋವನ್ನು ಕೊಟ್ಟಿತ್ತೆಂದರೆ ಅನಂತರ ಆತ ಸೂಜಿಯನ್ನೇ ಮುಟ್ಟುತ್ತಿರಲಿಲ್ಲ. ಆದರೆ ಸದ್ಯಕ್ಕೆ ಸೂಜಿಯನ್ನು ಬಿಟ್ಟರೆ ಬೇರೆ ದಾರಿಯಿರಲಿಲ್ಲ. ಗೇಸಿನ ಮುಸುಕು ಹಾಕಿದರೆ ಸಾಯಲು ೧೮ ಮಿನಿಟುಗಳಷ್ಟು ಕಾಲ ಬೇಕಾಗುತ್ತದೆಂದು ಅಲ್ಲಿದ್ದ ಇತರರು ಹೇಳಿದುದನ್ನು ಆತ ಕೇಳಿದ್ದ. ಅಷ್ಟು ಸಮಯ ಒದ್ದಾಡುತ್ತಿರುವುದು ಅವನಿಗೆ ಬೇಕಿರಲಿಲ್ಲ.

ಮರಣದಂಡನೆಗೆ ಸ್ವಲ್ಪ ಮೊದಲು ಆರ್ಕಿಯನ್ನು ವಾರ್ತಾ ಪತ್ರಿಕೆಯವರು ಮಾತನಾಡಿಸಿದ್ದರು. ''ಜೀವನದಲ್ಲಿ ಇಷ್ಟು ದಿನವೂ ನ್ಯಾಯ ನಿನಗೇನನ್ನೂ ಮಾಡಲಿಲ್ಲ. ನೀನು ಅದನ್ನು ನೋಡಿ ನಗುತ್ತಿದ್ದೆ. ಈಗ ಮಾಡಿದುದಕ್ಕೆಲ್ಲದಕ್ಕೂ ಒಟ್ಟಿಗೆ ಪರಿಹಾರ ಕೇಳುತ್ತಿದೆ. ಇದು ನಿನಗೆ ಹೇಗನಿಸುತ್ತಿದೆ?'' ಎಂದೊಬ್ಬ ಕೇಳಿದ.

ಕೈಯಲ್ಲಿದ್ದ ಪೆನ್ಸಿಲಿನ ತುಂಡನ್ನು ತಿರುಗಿಸುತ್ತಾ ಆರ್ಕಿ ಹೇಳಿದ, ''ನಾನು ಯಾವಾಗಲೂ ಅದೃಷ್ಟಶಾಲಿಯಾಗಿದ್ದೆ. ನನಗೆ ಯಾರೂ ಏನೂ ಮಾಡಿರಲಿಲ್ಲ. ಆದರೆ ನಿಜಕ್ಕೂ ಮೊದಲಿಗೇ ನನಗೆ ಸರಿಯಾದ ಶಿಕ್ಷೆ ದೊರೆತಿದ್ದರೆ ಈ ಸ್ಥಿತಿಗೆ ಬರುತ್ತಿರಲಿಲ್ಲ''.

ರೋಬರ್ಟ್‌ನ ಜೇಕ್ಸನ್‌ನ ಮಕ್ಕಳ ವಿಷಯ ಕೇಳಿದಾಗ ಆತ ಹೇಳಿದ, ''ಬೋಬಿ ಒಳ್ಳೆಯ ಹುಡುಗ. ಅವನಷ್ಟಕ್ಕೆ ಯಾವಾಗಲೂ ಸಂತೋಷದಿಂದ ಇರುತ್ತಾನೆ. ಏಮಿ ಕೂಡ ಹಾಗೆಯೇ. ಯಾವಾಗಲೂ ಸಂತೋಷದಿಂದ ಇದ್ದಳು. ನನಗವರು ಸ್ವಲ್ಪವೂ ತೊಂದರೆ ಕೊಟ್ಟಿರಲಿಲ್ಲ. ನಿಜಕ್ಕೂ ಆವತ್ತು ನಡೆದ ಘಟನೆಗೆ ಬೇರಾರೂ ಕಾರಣರಲ್ಲ, ನಾನೇ ಕಾರಣ.''

ವಕೀಲರ ಸಹಾಯದಿಂದ ತನ್ನ ಮರಣದಂಡನೆಯನ್ನು ಇನ್ನೂ ಹತ್ತು ಹದಿನೈದು ವರ್ಷ ಮುಂದೂಡಬಹುದೆಂದು ಆರ್ಕಿಗೆ ಗೊತ್ತಿತ್ತು. ಆದರೆ ಹಾಗೆ ಮುಂದೂಡುವುದು ಆತನಿಗೆ ಬೇಕಿರಲಿಲ್ಲ. ''ನಾನು ಯಾವಾಗಲೂ ಮರಣದ ವಿಷಯ ವನ್ನೇ ಆಲೋಚಿಸುತ್ತಿರುತ್ತೇನೆ. ಸೂಜಿಯನ್ನು ನನಗೆ ಕಂಡರಾಗುವುದಿಲ್ಲ. ಹಾಗಿದ್ದರೂ ಅದಲ್ಲದೆ ಬೇರೆ ಉಪಾಯವಿಲ್ಲ. ೧೮ ಮಿನಿಟು ಗೇಸಿನಲ್ಲಿ ಚಡಪಡಿಸುವುದು ನನಗೆ ಬೇಕಿಲ್ಲ.'' ಎಂದು ಆತ ಹೇಳಿದ. ಅನಂತರ ಹೇಳಿದ, ''ನಿಜಕ್ಕೂ ನನ್ನ ದಾರಿ ಸುಲಭದ್ದು. ಏಮಿಗೆ ದೊರೆತದ್ದು ಇದಕ್ಕಿಂತ ಎಷ್ಟೋ ಪಾಲು ಹೆಚ್ಚು ನೋವಿನದ್ದು. ಬಹುಶಃ ಏಮಿ ಮತ್ತು ಬೋಬಿಗೆ ದೊರೆತಂತಹ ನೋವು ನನಗೂ ಸಿಗಬೇಕು.''

ಕೊನೆಗೂ ಶಾಂತಿ ಸಿಕ್ಕಿತು

ಈಗ ಮೂರು ವರ್ಷಗಳಿಂದ ಯಾನ್ ವಿಲ್ಲಾದ ಡೈರಿಯಲ್ಲಿ ಜನರು ನೆಮ್ಮದಿಯಿಂದ ಜೀವಿಸುತ್ತಿದ್ದಾರೆ. ಬೋಬಿ ಸಂತೋಷದಿಂದ ಹೊಸಾ ಕರುಗಳಿಗೆ ಹಾಲು ಕುಡಿಸುತ್ತಿದ್ದಾನೆ. ಆದರೆ ಆತನಿಗೆ ಒಬ್ಬ ಪೋಲೀಸ್ ಆಫೀಸರನಾಗಬೇಕೆಂಬ ಆಸೆ. ಆತನ ತಾಯಿ ಮತ್ತು ತಂದೆ ಈಗ ತಿರುಗಿ ಒಂದಾಗಿ ಬಾಳುತ್ತಿದ್ದಾರೆ. ಅಲ್ಲದೆ ಅವರಿಗೆ ಒಬ್ಬಳು ಹುಡುಗಿಯೂ ಹುಟ್ಟಿದ್ದಾಳೆ. ''ದೇವರೇ ಈ ಪುಟ್ಟ ತಂಗಿಯನ್ನು ನನಗೆ ಕಳುಹಿಸಿಕೊಟ್ಟಿದ್ದಾನೆ'' ಎನ್ನುತ್ತಾನೆ ಬೋಬಿ.

ಆರ್ಕಿಯ ಅಣ್ಣ ಕೀತ್ ಹೇಳುತ್ತಾನೆ, ''ಆತ ನನ್ನ ಮೇಲೆ ಗುಂಡು ಹಾಕಿದ್ದಾಗ ನಾನು ಪೋಲೀಸರಿಗೆ ದೂರು ಕೊಡದೆ ತಪ್ಪು ಮಾಡಿದೆ. ಆಗ ಅವನಿಗೆ ಸರಿಯಾದ ಶಿಕ್ಷೆಯಾಗಿದ್ದರೆ ಬಹುಶಃ ಇಂತಹ ಕೃತ್ಯಕ್ಕೆ ಇಳಿಯುತ್ತಿರಲಿಲ್ಲ''.

ಆ ಊರಿನವರು ಬೋಬಿಯ ಧೈರ್ಯ ಮತ್ತು ಸಾಹಸಗಳನ್ನು ಮೆಚ್ಚಿ ಅವನ ಮನೆಯವರಿಗಾಗಿ ಎರಡು ಲಕ್ಷ ರುಪಾಯಿಗಳ ಒಂದು ನಿಧಿಯನ್ನು ಕೂಡಿಹಾಕಿದರು. ಅದರಿಂದ ಬೋಬಿಗೆ ಒಂದು ಕಂಪ್ಯೂಟರ್ ತೆಗೆದುಕೊಳ್ಳಲು ಸಾಧ್ಯವಾಯಿತು.

ಪುಸ್ತಕ ವಿಮರ್ಶೆ

ಕಳವು ಕಲಿಸುವ ದೇವರು, ಲೇಖಕರು: ಡಾ. ಸ. ಜ. ನಾಗಲೋಟಿ ಮಠ, ಬೆಲೆ: ೨೨ ರೂಪಾಯಿ, ಪುಟಗಳು: ೭೨, ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು

ಡಾ. ಸ. ಜ. ನಾಗಲೋಟಿ ಮಠರವರು ವೃತ್ತಿಯಲ್ಲಿ ವೈದ್ಯರಾದರೂ ಅಭಿವೃತ್ತಿಯಲ್ಲಿ ಒಬ್ಬರು ಉತ್ತಮ ಸಾಹಿತಿಗಳು ಎಂಬುದು ಅವರ ಚೊಚ್ಚಲ ಕಥಾ ಸಂಕಲನವಾದ 'ಕಳವು ಕಲಿಸುವ ದೇವರು '' ಎಂಬ ಕೃತಿಯು -ಓದುಗರ ಮನಗೆಲ್ಲುವಲ್ಲಿ ಸಾಫಲ್ಯತೆಯನ್ನು ಹೊಂದಿದೆ. ಕೃತಿ ಆರಂಭದಲ್ಲಿ ಮುನ್ನುಡಿಯನ್ನು ಬರೆಯುತ್ತಾ 'ಮಿಸುನಿಗೆ ಮುನ್ನುಡಿಯ ಮೆರುಗೇಕೆ' ಎಂಬ ಮೆಚ್ಚುಗೆಯ ಮಾತನ್ನು ದೇಜಗೌ ಆಡಿರುವುದು ಸಹಜವಾದದ್ದು. ಈ ಕೃತಿಯನ್ನು ಓದುಗ ಒಳಹೊಕ್ಕಾಗ ಸತ್ಯವೆನಿಸಿದೆ ಇರಲಾರದು.

ಕೃತಿಯ ಆರಂಭದಲ್ಲಿ ಮೂಡಿ ಬಂದಿರುವ ''ಮಾಸ್ತರನ ಶಿಸ್ತು'' ಒಂದು ಘಟನೆ ಎನಿಸಿದರು, ಅಲ್ಲಿ ಮೂಡಿಬಂದಿರುವ ವಿದ್ಯಾರ್ಥಿಯ ಕೌಟುಂಬಿಕ ಹಿನ್ನೆಲೆ ಅರಿಯದ ಮಾಸ್ತರ ಅದನ್ನು ಅರಿತಾಗ ಅವನ, ಅಂತರಂಗದಲ್ಲಿ ಎಲ್ಲೋ ಅಡಗಿ ಕುಳಿತ ಮಾನವೀಯ ಚೈತನ್ಯ ಹೊರಹೊಮ್ಮಿ ಗುರುಶಿಷ್ಯರ ಸಂಬಂಧ ಬಿಡಿಸಲಾಗದ ಅಂಶವಾಗಿ ಅರಳಿ ನಿಂತಿದೆ. ಅದಲ್ಲದೆ ಓದುಗರ ಮಾನವೀಯ ಪ್ರಜ್ಞೆ ಅರಳುವಂತೆ ಆ ಕ್ಷಣ ಮನದಲ್ಲಿ ಉಳಿಯುತ್ತದೆ. ಹಿಂದೂಸ್ತಾನ ಹಿಂದುಳಿಯಲು ನಮ್ಮ ಆಡಳಿತ ಯಂತ್ರದಲ್ಲಿನ ಅವ್ಯವಸ್ಥೆಯೇ ಔಚಿತ್ಯ ಪ್ರಜ್ಞೆಯ ಶೂನ್ಯತೆಯೇ ಕಾರಣ ಎಂಬ ವಿಚಾರವನ್ನು 'ಹಿಂದುಳಿದ ಹಿಂದುಸ್ಥಾನದಲ್ಲಿ ಪರಿಚಯಿಸುತ್ತಾರೆ. ಅಂದು-ಇಂದು, ಶ್ವಾನವಿಹಾರ, ಖಾನಾವಳಿ ಗಂಗಪ್ಪ, ಅತ್ತ ದರಿ ಇತ್ತ ಪುಲಿ, ಸರ್ವಧರ್ಮ ಸಮ್ಮೇಳನ, ಆತ್ಮೀಯ ಸ್ನೇಹಿತರು, ನಿಯಮ ಉಲ್ಲಂಘನೆ, ಕಳವು ಕಲಿಸುವ ದೇವರು, ಚೀನಾದೇಶದಲ್ಲಿ ಮರ ಗಿಡಗಳು ಈ ಹಲವಾರು ಭಾಗಗಳಲ್ಲಿ ಲೇಖಕರು ಮಾನವೀಯತೆ, ಶಿಸ್ತು, ಸಂಯಮ, ಸಾಮಾಜಿಕ ಅಂಕುಡೊಂಕುಗಳನ್ನು ತುಂಬಾ ಸ್ವಾರಸ್ಯವಾಗಿ ಬಿಚ್ಚಿಟ್ಟಿದ್ದಾರೆ. ಆ ಕ್ಷಣದಲ್ಲಾದರೂ ಓದುಗರಲ್ಲಿ ಪ್ರಜ್ಞಾಜ್ಯೋತಿ ಹಚ್ಚುವುದರಲ್ಲಿ ಸಫಲತೆಯನ್ನು ಈ ಕೃತಿ ಪಡೆದಿದೆ. ಸುಲಭ- ಶುಭಗ ಶೈಲಿಯ ಬರವಣಿಗೆ ಜನಸಾಮಾನ್ಯರನ್ನು ಆಕರ್ಷಿಸುವುದರಲ್ಲಿ ಎರಡು ಮಾತಿಲ್ಲ. ಒಂದೆರಡು ಘಂಟೆಗಳಲ್ಲಿ ಕುಳಿತು ಓದಿ ಮುಗಿಸಬಹುದಾದ ರಸವತ್ತಾದ ಕೃತಿ. ಈ ರೀತಿಯ ಸಾಹಿತ್ಯ ಸೃಷ್ಟಿ ಈ ಲೇಖಕರಿಂದ ಇನ್ನೂ ಹೊರ ಬರಲೆಂದು ಆಶಿಸುವೆ.

ಗಣಪತಿ: ತೆಲಗು ಮೂಲ ಲೇಖಕ: ಪುರಾಣಂ ಸುಬ್ರಹ್ಮಣ್ಯ ಶರ್ಮ, ಅನುವಾದ: ಸಿದ್ಧರಾಮರೆಡ್ಡಿ ಇಟಗಿ, ಪ್ರಕಾಶನ: ನವಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು. ಬೆಲೆ: ರೂ ೧೨, ಪುಟಗಳು: ೪೫.

'ಗಣಪತಿ' ಕೃತಿಯು ನಮ್ಮ ಹಿಂದೂ ಸಮಾಜದ ಪ್ರಥಮ ಪೂಜಾರ್ಹ ವಿಘ್ನ ವಿನಾಶಕ ಗಣಪತಿಯ ಬಗ್ಗೆ ವೈಚಾರಿಕ ವಿಶ್ಲೇಷಣೆಯ ಒಂದು ಪುಟ್ಟ ಸಂಶೋಧನಾತ್ಮಕ ಗ್ರಂಥ. ಇಂದಿನ ನಾಗರೀಕ ಪ್ರಪಂಚದಲ್ಲಿ ಭಾವೈಕ್ಯತೆಯ ರಾಷ್ಟ್ರೀಯ ಹಬ್ಬವನ್ನಾಗಲಿ ಮಹಾರಾಷ್ಟ್ರದಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಮೂಲತಃ ಇದು ನಮ್ಮ

ಭಾರತದ ಮೂಲ ನಿವಾಸಿಗಳಾದ ದ್ರಾವಿಡರ ಆರಾಧ್ಯ ದೈವ ಎಂಬ ಅಂಶವನ್ನು ಪರಿಚಯಿಸುತ್ತಾ ಎಳೆ ಎಳೆಯಾಗಿ ಸಂಶೋಧನಾತ್ಮಕವಾಗಿ ಬರೆದಿದ್ದಾರೆ. ಕೃತಿಯ ಹಿನ್ನುಡಿಯಲ್ಲಿ ಪ್ರಸ್ತಾಪಿಸಿದಂತೆ ನಾವು ಪ್ರತೀವರ್ಷ ವಿನಾಯಕ ಚೌತಿಯ ಸಂದರ್ಭದಲ್ಲಿ ಲೌಕಿಕ ಅಲಂಕಾರ ಮಾಡಿ , ಪೂಜಿಸಿ ಭಕ್ತಿ ಭಾವವನ್ನು ತೋರುತ್ತೇವೆ. ಆದರೆ ಇಲ್ಲಿ ಎಲ್ಲರೂ ತಿಳಿದಿರುವಂತೆ ಪುರಾಣ ಪ್ರಸಂಗಕ್ಕೆ ಪ್ರತಿಯಾಗಿ ಇರಬಹುದಾದ ಇತರ ಸಾಧ್ಯತೆಗಳನ್ನು ಈ ಕೃತಿಯಲ್ಲಿ ಘನೀಕರಿಸಿದ್ದಾರೆ.'ಗಣಪತಿ' ಶಬ್ದದ ನಾನಾ ಕಲ್ಪನೆಗಳನ್ನು ಇಲ್ಲಿ ಪರಿಚಯಿಸುತ್ತಾ ಗಣಪತಿ ಒಬ್ಬನಲ್ಲ ಹಲವರಿರುವ ಬಗ್ಗೆ ಇಲ್ಲಿ ಪ್ರಸ್ತಾಪಿಸಲಾಗಿದೆ.

ಇಲ್ಲಿ ಅನುವಾದಕರು ಕೃತಿಯ ಮೂಲಕ ಕರ್ತೃವಿನ ಅಭಿಪ್ರಾಯಕ್ಕೆ ಚ್ಯುತಿ ಬಾರದ ಹಾಗೆ ತಮ್ಮ ಸ್ವಂತಿಕೆಯನ್ನು ಎಲ್ಲೂ ಸೇರಿಸಿಲ್ಲ ಎಂಬ ತಮ್ಮ ಪ್ರಾಮಾಣಿಕ ಪ್ರಯತ್ನವನ್ನೂ ಓದುಗರಲ್ಲಿ ನಿವೇದಿಸಿಕೊಂಡಿದ್ದಾರೆ. ಒಟ್ಟಿನಲ್ಲಿ ಎಲ್ಲರೂ ಓದಲೇ ಬೇಕಾದ ಒಂದು ಉತ್ತಮ ಕೃತಿ. ಕೃತಿಯ ವಿಚಾರಗಳು ಅದರ ಮೌಲ್ಯಕ್ಕಿಂತಲೂ ಬೆಲೆಯುಳ್ಳವು . ಓದುಗರ ಬುದ್ಧಿಭಾವಗಳಿಗೆ ಚಿಂತನೆಗೆ ಒಂದು ರೀತಿಯ ಟಾನಿಕ್ ಎಂದು ಹೇಳಬಹುದು. ವೈಚಾರಿಕ ಕೃತಿಗಳನ್ನು ನವಕರ್ನಾಟಕ ಪ್ರಕಾಶನದವರು ಇನ್ನೂ ಹೆಚ್ಚು ಹೆಚ್ಚು ತರುವಂತಾದರೆ ಉತ್ತಮ.

ಕೆ.ಎಂ.ಪಂಚಾಕ್ಷರಪ್ಪ
ಸಹಶಿಕ್ಷಕರು
ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ಪ್ರೌಢಶಾಲೆ
ತಾಯೂರು.

ಮೌನದಲ್ಲಿ ಮೂರು ಬಗೆ. ಮಾತಿನ ಮೌನ ಒಳ್ಳೆಯದು. ಕಾರಣ ಅಸಂಗತ ಮಾತುಗಳು ದುಷ್ಪರಿಣಾಮಕಾರಿ. ಆಶೆ ಆಕಾಂಕ್ಷೆಗಳ ಮೌನ ಇದಕ್ಕೂ ಒಳ್ಳೆಯದು. ಇಂಥ ಮೌನ ಆತ್ಮ ಶಾಂತಿ ತರುತ್ತದೆ. ಇದಕ್ಕೂ ಉತ್ತಮವಾದದ್ದು ಅನವಶ್ಯಕವಾದ ಹಾಗೂ ನೆಲೆಯಿಲ್ಲದಾಲೋಚನೆಗಳ ಮೌನ. ಈ ಮೌನ ಆಧ್ಯಾತ್ಮಿಕ ಸ್ಮರಣೆಗೆ ಅತ್ಯಗತ್ಯ .

-ಮೇಡಂ ಡೆಯನ್

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಹೆಚ್. ಭಾಸ್ಕರ್, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮು

ಎಚ್. ಎಸ್. ನಂಜಪ್ಪ

ಎಸ್. ಮಂಚಯ್ಯ

ಕೆ. ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು-೫೭೦ ೦೦೬
ದೂರವಾಣಿ ಸಂಖ್ಯೆ : ೫೫ ೧೮೭೫

ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು....

ಶರಣ ಚರಿತಾಮೃತ

ಸಣ್ಣ ಕತೆಗಳು ೧೩೮ :(ಸತ್ಯಕ್ಕೆ ಬೆಲೆ ಕೊಟ್ಟ ಗೆಳೆಯರು)

ನಾಗರಿಕತೆಯ ಇತಿಹಾಸ

ಸಂಪಾದಕೀಯ ಸಂಕಲನ

ಕಾರಂತ ದರ್ಶನ

ಸ್ವಾಮಿ ವಿವೇಕಾನಂದ

ನನ್ನೂರು

ನಳಚರಿತ್ರೆ ಸಂಗ್ರಹ

ಯುದ್ಧ ಮತ್ತು ಶಾಂತಿ : ಭಾಗ ೧, ೨, ಮತ್ತು ೩

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಪ್ರಥಮ ಚಿಕಿತ್ಸೆ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು ತರಿಸಿ ಓದಿರಿ